
ಮಂಗಳವಾರ, ಮಾರ್ಚ್ 10, 2026 | ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸ್ವಿಸ್ ಕಣದಲ್ಲಿ ಶ್ರೀಕಾಂತ್

ಭಾರತದ ಬ್ಯಾಡ್ಮಿಂಟನ್ ಆಟಗಾರ ಕೆ. ಶ್ರೀಕಾಂತ್ ಅವರು ಬಾಸೆಲ್ ಮಾರ್‌ನಲ್ಲಿ ಮಂಗಳವಾರ ಆರಂಭವಾಗಲಿರುವ ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಆಡಲಿದ್ದಾರೆ





ಬಿಡುಗಡೆಗೆ ಆಗ್ರಹ

ಚೀನಾ ವಶದಲ್ಲಿರುವ ರಾಜಕೀಯ ಬಂದಿಗಳ ಬಿಡುಗಡೆಗೆ ಆಗ್ರಹಿಸಿ ಟಿಬೆಟಿಯನ್ ಧರ್ಮೀಯರು ಮೈಸೂರಿನಲ್ಲಿ ಪ್ರತಿಭಟನೆ ನಡೆಸಿದರು

prajavani.net prajavani | ಮಂಗಳವಾರ, ಮಾರ್ಚ್ 10, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 69 | ಪುಟ 18 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ



ಪ್ರತಿಭಟನೆಯಲ್ಲಿ ದೀದಿ... ಎಸ್‌ಐಆರ್ ವಿರೋಧಿಸಿ ಕೋಲ್ಕತ್ತದಲ್ಲಿ ಸೋಮವಾರ ನಡೆದ ಪ್ರತಿಭಟನೆಯಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ

ಸೆನ್ಸೆಕ್ಸ್ 77,566 | ನಿಫ್ಟಿ 24,028 | $/₹ 92.21 | ಚಿನ್ನ (Std. 10g) ₹1,66,500 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,80,700 (ಬೆಂಗಳೂರು)

ತೈಲ ಮಾರುಕಟ್ಟೆಯಲ್ಲಿ ತಲ್ಲಣ

ಹೊರ್ಮುಜ್ ಜಲಸಂಧಿಯಲ್ಲಿ ಸಾಗಾಟ ಸ್ಥಗಿತ
ತೈಲ ಬೆಲೆ ಭಾರಿ ಜಿಗಿತ ● ಜಿ7 ದೇಶಗಳ ಮಧ್ಯಪ್ರವೇಶ

ಷಿಕಾಗೊ/ಪ್ಯಾರಿಸ್ (ಎಪಿ/ಎಎಫ್‌ಪಿ): ಅಮೆರಿಕ ಮತ್ತು ಇಸ್ರೇಲ್ ದೇಶಗಳು ಇರಾನ್ ವಿರುದ್ಧ ಸಾರಿರುವ ಸಮರವು ತೀವ್ರಗೊಂಡಿರುವ ಪರಿಣಾಮವಾಗಿ ಕಚ್ಚಾ ತೈಲದ ಬೆಲೆಯು ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರಿ ಜಿಗಿತ ಕಂಡಿದೆ. ಸೋಮವಾರ ಒಮ್ಮೆಗೇ ಸರಿಸುಮಾರು ಶೇಕಡ 30ರವರೆಗೆ ಏರಿಕೆ ಕಂಡಿದ್ದ ತೈಲ ಬೆಲೆಯು ನಂತರದಲ್ಲಿ ಒಂದಿಷ್ಟು ತಗ್ಗಿದೆ.

ಜಗತ್ತಿನ ವಿವಿಧ ದೇಶಗಳಿಗೆ ಕಚ್ಚಾ ತೈಲ ರವಾನೆಯಲ್ಲಿ ಪ್ರಮುಖ ಪಾತ್ರ ವಹಿಸುವ ಹೊರ್ಮುಜ್ ಜಲಸಂಧಿಯ ಮೂಲಕ ಸಾಗಲು ಹಡಗುಗಳಿಗೆ ಸಾಧ್ಯವಾಗದೆ ಇರುವುದು, ದಾಳಿಯ ಪರಿಣಾಮವಾಗಿ ಸೌದಿ ಅರೇಬಿಯಾ ಸೇರಿದಂತೆ ವಿವಿಧ ಕೊಲ್ಲಿ ರಾಷ್ಟ್ರಗಳು ಕಚ್ಚಾ ತೈಲ ಉತ್ಪಾದನೆ ತಗ್ಗಿಸಿರುವುದು ಈ ಏರಿಕೆಗೆ ಕಾರಣ. ಶನಿವಾರದ ವಹಿವಾಟಿನ ಕೊನೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ಯಾರೆಲ್‌ಗೆ 93 ಡಾಲರ್ ನಷ್ಟಿತ್ತು. ಆದರೆ, ಸೋಮವಾರ ವಹಿವಾಟು ಆರಂಭವಾಗುತ್ತಿದ್ದಂತೆ ಬೆಲೆಯು ಪ್ರತಿ ಬ್ಯಾರೆಲ್‌ಗೆ 119.50 ಡಾಲರ್ ಸನಿಹಕ್ಕೆ ತಲುಪಿತ್ತು. 2022ರ ಮಧ್ಯಭಾಗದ ನಂತರದಲ್ಲಿ ಕಚ್ಚಾ ತೈಲದ ಬೆಲೆಯ ಗರಿಷ್ಠ ಮಟ್ಟ ಇದಾಗಿತ್ತು.



ಕಚ್ಚಾ ತೈಲ ಉತ್ಪಾದನೆಯಲ್ಲಿ ಜಗತ್ತಿನ ಅತಿದೊಡ್ಡ ಕಂಪನಿಯಾದ ಸೌದಿ ಅರೇಬಿಯಾದ ಆರಾಮ್ಕೊ ಉತ್ಪಾದನೆಯನ್ನು ಕಡಿಮೆ ಮಾಡುತ್ತಿದೆ ಎಂದು ಮೂಲಗಳು ತಿಳಿಸಿವೆ. ತೈಲ ಪೂರೈಕೆ ವಿಚಾರವಾಗಿ ತಾನು ಮಾಡಿಕೊಂಡಿರುವ ಗುತ್ತಿಗೆ ಒಪ್ಪಂದಗಳಿಗೆ ಅನುಗುಣವಾಗಿ ನಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಬಹರೇನ್‌ನ ಬಾಪ್ಕೊ ಎನರ್ಜಿಸ್ ಹೇಳಿದೆ. ಈ ಕಂಪನಿಯ ಸಂಸ್ಕರಣಾಗಾರದ ಮೇಲೆ ದಾಳಿ ಆಗಿದೆ.

ಕಳೆದ ವಾರದ ಅಂತ್ಯದಲ್ಲಿ ಇರಾಕ್ ದೇಶವು ಕಚ್ಚಾ ತೈಲ ಉತ್ಪಾದನೆಯನ್ನು ಕಡಿಮೆ ಮಾಡಿದೆ. ಕುವೈತ್ ಪೆಟ್ರೋಲಿಯಂ ಕಾರ್ಪೊರೇಷನ್ ಕೂಡ ಉತ್ಪಾದನೆ ಕಡಿಮೆ ಮಾಡುತ್ತಿದೆ. ಹೊರ್ಮುಜ್ ಜಲಸಂಧಿಯ ಮೂಲಕ ಪ್ರತಿನಿತ್ಯ ಸರಿಸುಮಾರು 1.5 ಕೋಟಿ ಬ್ಯಾರೆಲ್‌ನಷ್ಟು ಕಚ್ಚಾ ತೈಲವನ್ನು ಸಾಗಿಸಲಾಗುತ್ತಿತ್ತು. ಇದು ವಿಶ್ವದ ತೈಲ ಬಳಕೆಯ ಶೇ 20ರಷ್ಟಕ್ಕೆ ಸಮ. ಈಗ ಯುದ್ಧದ ಕಾರಣದಿಂದಾಗಿ, ಇರಾನ್ ಕಡೆಯಿಂದ ದಾಳಿ ಆಗಬಹುದು ಎಂಬ ಭೀತಿಯಿಂದಾಗಿ ಹೊರ್ಮುಜ್ ಜಲಸಂಧಿ ಬಂದ್ ಆಗಿದೆ. ಜಲಸಂಧಿಯ ಮೂಲಕ ಹಡಗು ಸಂಚಾರ ಸ್ಥಗಿತಗೊಂಡಿದೆ.

10

ಷೇರುಪೇಟೆ: ನಿಲ್ಲದ ಕುಸಿತ



ಮುಂಬೈ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಭಾರಿ ಪ್ರಮಾಣದಲ್ಲಿ ಏರಿಕೆ ಕಂಡಿದ್ದರಿಂದ ದೇಶದ ಷೇರುಪೇಟೆಗಳಲ್ಲಿ ಸೋಮವಾರ ಭೀತಿ ಸೃಷ್ಟಿಯಾಯಿತು. ಈ ಭೀತಿಯು ‘ಕರಡಿ ಕುಣಿತ’ಕ್ಕೆ ಅನುವು ಮಾಡಿಕೊಟ್ಟಿತು. ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಹೆಚ್ಚು ಗಮನ ನೀಡಿದ ಕಾರಣದಿಂದಾಗಿ ಸೆನ್ಸೆಕ್ಸ್ ಮತ್ತು ನಿಫ್ಟಿ ಶೇ 1.7ರಷ್ಟು ಕುಸಿದವು.

ವಿವರ ಪುಟ 10

ವಾಣಿಜ್ಯ ಬಳಕೆಯ ಅಡುಗೆ ಅನಿಲ ಸರಬರಾಜು ಸ್ಥಗಿತ

‘ಇಂದಿನಿಂದ ಹೋಟೆಲ್ ಬಂದ್’

ಬೆಂಗಳೂರು: ವಾಣಿಜ್ಯ ಬಳಕೆಯ ಅಡುಗೆ ಅನಿಲ ಸಿಲಿಂಡರ್‌ಗಳ ಸರಬರಾಜು ಸ್ಥಗಿತವಾಗಿರುವ ಕಾರಣ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಹಲವೆಡೆ ಕೆಲ ಹೋಟೆಲ್‌ಗಳನ್ನು ಮಂಗಳವಾರದಿಂದ (ಮಾ.10) ಬಂದ್ ಆಗುವ ಸಾಧ್ಯತೆ ಇದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬೆಂಗಳೂರು ಹೋಟೆಲ್‌ಗಳ ಸಂಘದ ಗೌರವಾಧ್ಯಕ್ಷ ಪಿ.ಸಿ. ರಾವ್ ಹಾಗೂ ರಾಜ್ಯ ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷ ಜಿ.ಕೆ. ಶೆಟ್ಟಿ ಅವರು ಈ ಮಾಹಿತಿ ನೀಡಿದರು.

‘ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದಾಗಿ ಅಡುಗೆ ಅನಿಲ ಸಿಲಿಂಡರ್‌ಗಳ ಸರಬರಾಜಿನಲ್ಲಿ ವ್ಯತ್ಯಯವಾಗಿದೆ. ಕೇಂದ್ರ ಸರ್ಕಾರ ಈಚೆಗೆ ಸಿಲಿಂಡರ್ ದರ ಹೆಚ್ಚಳ ಮಾಡಿದೆ. ಈಗ ದಿಢೀರನೇ ಸರಬರಾಜು ಮಾಡುವುದನ್ನೇ ನಿಲ್ಲಿಸಿರುವುದರಿಂದ ಹೋಟೆಲ್‌ಗಳನ್ನು ನಡೆಸುವುದೇ ಕಷ್ಟವಾಗಿದೆ. ಹೀಗಾಗಿ ಬಂದ್ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ’ ಎಂದು ಅವರು ತಿಳಿಸಿದರು.

‘ಹೋಟೆಲ್‌ಗಳಲ್ಲಿ ಸದ್ಯ ಇರುವ ಅಡುಗೆ ಅನಿಲ ಬಳಸಿಕೊಂಡು ಸಾರ್ವಜನಿಕರಿಗೆ ತಿಂಡಿ–ತಿನಿಸುಗಳನ್ನು ಪೂರೈಕೆ ಮಾಡಲಾಗುವುದು. ಅಡುಗೆ ಅನಿಲ ಸಿಲಿಂಡರ್ ಮುಗಿದ ನಂತರ ಹೋಟೆಲ್‌ಗಳನ್ನು ಬಂದ್ ಮಾಡಲಾಗುವುದು. ಹೋಟೆಲ್ ಉದ್ಯಮ ಅಗತ್ಯ ಸೇವೆಯ ಅಡಿಯಲ್ಲಿ ಬರುವುದರಿಂದ ಇದನ್ನೇ ಅವಲಂಬಿಸಿರುವ ಜನಸಾಮಾನ್ಯರು, ಹಿರಿಯ ನಾಗರಿಕರು ವಿದ್ಯಾರ್ಥಿಗಳು, ವೈದ್ಯಕೀಯ ಹಾಗೂ ಇನ್ನಿತರ ಸೇವೆಯಲ್ಲಿರುವ ಹೆಚ್ಚಿನ ಜನರಿಗೆ ತಮ್ಮ ದಿನನಿತ್ಯದ ತಿಂಡಿ-ತಿನಿಸುಗಳಿಗೆ ತೊಂದರೆಯಾಗಲಿದೆ’ ಎಂದು ಅವರು ವಿವರಿಸಿದರು.

7

ಎಲ್‌ಪಿಜಿ ನಿಯಮ ಬದಲು

ಒಬ್ಬ ಗ್ರಾಹಕರು ಒಂದು ಬಾರಿ ಎಲ್‌ಪಿಜಿ ಖರೀದಿ ಮಾಡಿದ ನಂತರ, ಇನ್ನೊಂದು ಎಲ್‌ಪಿಜಿ ಸಿಲಿಂಡರ್ ಖರೀದಿ ಮಾಡಲು 25 ದಿನ ಕಾಯಬೇಕು ಎಂಬ ನಿಯಮವನ್ನು ಸರ್ಕಾರ ಜಾರಿಗೆ ತಂದಿದೆ ಎಂದು ಮೂಲಗಳು ಹೇಳಿವೆ.

ವಿವರ ಪುಟ 10

ಇರಾನ್‌ನ 3 ನೌಕೆಗಳ ನಿಲುಗಡೆಗೆ ಅನುಮತಿ ನೀಡಿದ್ದೇವೆ: ಜೈಶಂಕರ್

ನವದೆಹಲಿ (ಪಿಟಿಐ): ‘ಭಾರತದ ಬಂದರುಗಳಲ್ಲಿ ತನ್ನ ಮೂರು ನೌಕೆಗಳನ್ನು ನಿಲ್ಲಿಸಲು ಇರಾನ್ ಅನುಮತಿ ಕೋರಿತ್ತು. ಮರುದಿನವೇ ಭಾರತ ಅನುಮೋದನೆ ನೀಡಿದೆ’ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಸೋಮವಾರ ಹೇಳಿದ್ದಾರೆ.



ಜೈಶಂಕರ್

‘ಐಆರ್‌ಐಎಸ್ ಲವನ್’ ಹೆಸರಿನ ಇರಾನ್‌ನ ನೌಕೆ ಮಾರ್ಚ್ 4ರಂದಲೂ ಕೊಚ್ಚಿ ಬಂದರಿನಲ್ಲಿ ಲಂಗರು ಹಾಕಿದೆ’ ಎಂದು ಸೋಮವಾರ ಸಂಸತ್ತಿಗೆ ತಿಳಿಸಿದ್ದಾರೆ. ಭಾರತದ ಬಂದರುಗಳಲ್ಲಿ ತನ್ನ ನೌಕೆಗಳನ್ನು ನಿಲ್ಲಿಸಲು ಇರಾನ್ ವಿನಂತಿಸಿದ್ದ ವಿಚಾರವನ್ನು ಸರ್ಕಾರದ ಹಿರಿಯ ಸಚಿವರೊಬ್ಬರು ಖಚಿತಪಡಿಸಿರುವುದು ಇದೇ ಮೊದಲು.

‘ಭಾರತದ ಜಲ ಪ್ರದೇಶದಲ್ಲಿದ್ದ ತನ್ನ ಮೂರು ನೌಕೆಗಳನ್ನು ನಮ್ಮ ಬಂದರುಗಳಲ್ಲಿ ನಿಲ್ಲಿಸಲು ಇರಾನ್ ಫೆಬ್ರುವರಿ 28ರಂದು ಅನುಮತಿ ಕೋರಿದೆ. ಮಾರ್ಚ್ 1ರಂದು ಅನುಮತಿ ನೀಡಲಾಗಿದೆ. ‘ಐಆರ್‌ಐಎಸ್ ಲವನ್’ ಹೆಸರಿನ ನೌಕೆ ಮಾರ್ಚ್ 4ರಿಂದ ಕೊಚ್ಚಿಯಲ್ಲಿ ನಿಂತಿದೆ. ಅದರಲ್ಲಿರುವ ಸಿಬ್ಬಂದಿ ಪ್ರಸ್ತುತ ಭಾರತೀಯ ನೌಕಾಪಡೆಯ ಸೌಲಭ್ಯಗಳಲ್ಲಿ ತಂಗಿದ್ದಾರೆ’ ಎಂದು ಹೇಳಿದ್ದಾರೆ.

‘ನೌಕೆಗಳ ನಿಲುಗಡೆಗೆ ಅನುಮತಿಸಿರುವುದು ಸರಿಯಾದ ನಿರ್ಧಾರ ಎಂದು ನಾವು ನಂಬುತ್ತೇವೆ. ಇರಾನ್ ವಿದೇಶಾಂಗ ಸಚಿವರು ಈ ಮಾನವೀಯ ಕಾರ್ಯಕ್ಕಾಗಿ ಕೃತಜ್ಞತೆ ಸಲ್ಲಿಸಿದ್ದಾರೆ’ ಎಂದಿದ್ದಾರೆ.


ಅಮೆರಿಕದ ಜಲಾಂತರ್ಗಾಮಿ ನೌಕೆಯು ಮಾರ್ಚ್ 4ರಂದು ಶ್ರೀಲಂಕಾ ಕರಾವಳಿಯಲ್ಲಿ ಇರಾನ್‌ನ ಯುದ್ಧನೌಕೆ ‘ಐಆರ್‌ಐಎಸ್ ಡೆನಾ’ವನ್ನು ಮುಳುಗಿಸಿತ್ತು. ವಿಶಾಖಪಟ್ಟಣದಲ್ಲಿ ನಡೆದಿದ್ದ ‘ಮಿಲನ್ 2026’ ಹೆಸರಿನ ಸೇನಾ ಸಮರಾಭ್ಯಾಸ ಮುಗಿಸಿ ಹಿಂದಿರುಗುತ್ತಿದ್ದ ನೌಕೆಯ ಮೇಲೆ ನಡೆದ ದಾಳಿಯಲ್ಲಿ ಇರಾನ್ ನೌಕಾಪಡೆಯ 87 ಮಂದಿ ಮೃತಪಟ್ಟಿದ್ದಾರೆ.

ಈ ಬೆಳವಣಿಗೆಯಿಂದ ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು ಹಿಂದೂ ಮಹಾಸಾಗರ ಪ್ರದೇಶಕ್ಕೆ ವಿಸ್ತರಿಸುವ ಆತಂಕ ಎದುರಾಗಿತ್ತು.

ಇದೇ ಸಮರಾಭ್ಯಾಸದಲ್ಲಿ ಪಾಲ್ಗೊಂಡಿದ್ದ ಇರಾನ್‌ನ ಇನ್ನೊಂದು ನೌಕೆ, ‘ಐಆರ್‌ಐಎನ್‌ಎಸ್ ಬುಶೇರ್’ ಪ್ರಸ್ತುತ ಶ್ರೀಲಂಕಾ ಬಂದರಿನಲ್ಲಿ ನಿಂತಿದೆ. ಎಂಜಿನ್‌ನಲ್ಲಿ ದೋಷ ಕಂಡುಬಂದಿರುವುದರಿಂದ ನೌಕೆಗೆ ಶ್ರೀಲಂಕಾ ಜಲ ಪ್ರದೇಶವನ್ನು ಪ್ರವೇಶಿಸಲು ಇರಾನ್ ಮಾಡಿದ್ದ ಮನವಿಗೆ ದ್ವೀಪರಾಷ್ಟ್ರವು ಸಕಾರಾತ್ಮಕವಾಗಿ ಸ್ಪಂದಿಸಿತ್ತು.

7

ಮೊಜ್ತಬಾ ಪರಮೋಚ್ಚ ನಾಯಕ



ಮೊಜ್ತಬಾ ಖಮೇನಿ

ದುಬೈ (ಎಪಿ/ ಎಎಫ್‌ಪಿ): ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ದಾಳಿಯಲ್ಲಿ ಹತರಾದ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಸ್ಥಾನಕ್ಕೆ ಅವರ ಪುತ್ರ ಮೊಜ್ತಬಾ ಖಮೇನಿ (56) ನೇಮಕಗೊಂಡಿದ್ದಾರೆ ಎಂದು ಇರಾನ್ ಸೋಮವಾರ ಘೋಷಿಸಿದೆ. ಇದರ ಬೆನ್ನಲ್ಲೇ ಇಸ್ರೇಲ್ ಮತ್ತು ಗಲ್ಫ್ ರಾಷ್ಟ್ರಗಳ ಮೇಲಿನ ಪ್ರತಿದಾಳಿಯನ್ನು ಇರಾನ್ ತೀವ್ರಗೊಳಿಸಿದೆ.

ಅಮೆರಿಕ ಹಾಗೂ ಇಸ್ರೇಲ್‌ನ ಬೆದರಿಕೆಯನ್ನು ಲೆಕ್ಕಿಸದೆ ಇರಾನ್, ತನ್ನ ನೂತನ ಪರಮೋಚ್ಚ ನಾಯಕನನ್ನು ನೇಮಕ ಮಾಡಿದೆ. 56 ವರ್ಷದ ಮೊಜ್ತಬಾ ಅವರು ಮುಂದಿನ ನಾಯಕರಾಗಿ ಆಯ್ಕೆಯಾಗಿರುವುದನ್ನು ಇರಾನ್‌ನ ಸರ್ಕಾರಿ ಸ್ವಾಮ್ಯದ ಸುದ್ದಿವಾಹಿನಿ ಸೋಮವಾರ ಬೆಳಿಗ್ಗೆ ಪ್ರಕಟಿಸಿತು.

ಮೊಜ್ತಬಾ ಅವರು 1979ರ ಇಸ್ಲಾಮಿಕ್ ಕ್ರಾಂತಿಯ ಬಳಿಕ ನೇಮಕಗೊಂಡ ಇರಾನ್‌ನ ಮೂರನೇ ಪರಮೋಚ್ಚ ನಾಯಕ ಎನಿಸಿಕೊಂಡಿದ್ದಾರೆ. ‘88 ಸದಸ್ಯರ ತಜ್ಞರ ಮಂಡಳಿಯು ಮೊಜ್ತಬಾ ಅವರನ್ನು ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್‌ನ ಪರಮೋಚ್ಚ ನಾಯಕರನ್ನಾಗಿ ಒಮ್ಮತದಿಂದ ನೇಮಕ ಮಾಡಿದೆ’ ಎಂದು ಪ್ರಕಟಿಸಲಾಯಿತು.

10

ಪೊಲೀಸ್ ಭದ್ರತೆಯಲ್ಲಿ ತೆರಳಿ ಪೂಜೆ ಸಲ್ಲಿಸಿದ ಪರಿಶಿಷ್ಟರು

ದೇಗುಲ ಪ್ರವೇಶ: ದಲಿತರಿಗೆ ಅಡ್ಡಿ

ಪ್ರಜಾವಾಣಿ ವಾರ್ತೆ

ಗೌರಿಬಿದನೂರು: ತಾಲ್ಲೂಕಿನ ಉಚ್ಚೋದನಹಳ್ಳಿಯ ಜೀರ್ಣೋದ್ಧಾರಗೊಂಡ ಸಲ್ಲಾಪುರದಮ್ಮ ದೇವಸ್ಥಾನವನ್ನು ಪರಿಶಿಷ್ಟ ಜಾತಿಯವರು ಭಾನುವಾರ ಪ್ರವೇಶಿಸಿದ್ದು, ಗ್ರಾಮದಲ್ಲಿ ಬಿಗುವಿನ ವಾತಾವರಣ ಸೃಷ್ಟಿಸಿದೆ.

ಗ್ರಾಮದಲ್ಲಿ 1,500 ಜನಸಂಖ್ಯೆ ಇದ್ದು, ಎಲ್ಲರಿಂದಲೂ ದೇಣಿಗೆ ಸಂಗ್ರಹಿಸಿ ಹಳೆಯ ದೇಗುಲವನ್ನು ಜೀರ್ಣೋದ್ಧಾರಗೊಳಿಸಲಾಗಿತ್ತು. ಭಾನುವಾರ ದೇಗುಲ ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ದೇಗುಲದ ಬಳಿ ಬಂದ ಪರಿಶಿಷ್ಟ ಜಾತಿಯ ಜನರನ್ನು ಒಳಗೆ ಪ್ರವೇಶಿಸದಂತೆ ಅರ್ಚಕರು ಹಾಗೂ ಗ್ರಾಮದ ಇತರ ಸಮುದಾಯದವರು ತಡೆದಿದ್ದಾರೆ. ಸಂಜೆ ಪರಿಶಿಷ್ಟ ಜಾತಿಯವರು ಪೊಲೀಸರನ್ನು ಕರೆ ತಂದಿದ್ದಾರೆ. ಪೊಲೀಸರ ಜೊತೆ ದೇಗುಲದ ಗರ್ಭಗುಡಿ ಪ್ರವೇಶಿಸಿ ಪೂಜೆ ಸಲ್ಲಿಸಿದ್ದಾರೆ. ಇದರಿಂದ ಇತರ ಸಮುದಾಯದವರು ಮತ್ತಷ್ಟು ಕೆರಳಿದ್ದಾರೆ. ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ.

ಡಿವೈಎಸ್‌ಪಿ ಪ್ರಕಾಶ್, ಸಿಪಿಐ ಅಂಜನ್ ಕುಮಾರ್, ತಹಶೀಲ್ದಾರ್ ಅರವಿಂದ್ ಕೆ.ಎಂ ಹಾಗೂ ಅಧಿಕಾರಿಗಳು ಸೋಮವಾರ ಗ್ರಾಮಕ್ಕೆ ಭೇಟಿ ನೀಡಿ ಶಾಂತಿ ಸಭೆ ನಡೆಸಿದರು.

7



ಗೌರಿಬಿದನೂರು ತಾಲ್ಲೂಕಿನ ಉಚ್ಚೋದನಹಳ್ಳಿ ಗ್ರಾಮದ ಸಲ್ಲಾಪುರದಮ್ಮ ದೇವಿ ದೇವಸ್ಥಾನ ಸುತ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ

‘ಕೆಎಸ್‌ಐಸಿ ಕಾರ್ಖಾನೆ ಮುಚ್ಚಲ್ಲ’

ಪ್ರಜಾವಾಣಿ ವಾರ್ತೆ



ಕೆ.ವೆಂಕಟೇಶ್

ಬೆಂಗಳೂರು: ‘ಟಿ.ನರಸೀಪುರದಲ್ಲಿರುವ ಕೆಎಸ್‌ಐಸಿ ಫಿಲೇಚರ್ ಕಾರ್ಖಾನೆ ಮುಚ್ಚುವುದಿಲ್ಲ. ಅಲ್ಲಿರುವ ಜಮೀನಿನಲ್ಲಿ ಕ್ರೀಡಾಂಗಣ ನಿರ್ಮಿಸುವ ಪ್ರಸ್ತಾವವನ್ನೂ ಕೈಬಿಡಲಾಗಿದೆ’ ಎಂದು ರೇಷ್ಮೆ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ವಿಧಾನಸಭೆಯಲ್ಲಿ ಸೋಮವಾರ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಟಿ.ಎಸ್. ಶ್ರೀವತ್ಸ ಪ್ರಶ್ನೆಗೆ ಅವರು ಈ ಉತ್ತರ ನೀಡಿದರು. ‘ಕ್ರೀಡಾಂಗಣ ನಿರ್ಮಿಸುವ ಕುರಿತು ಯಾರೊ ಕೆಲ ಅಧಿಕಾರಿಗಳು ಮುಖ್ಯಮಂತ್ರಿಯವರಿಗೆ ತಪ್ಪು ಮಾಹಿತಿ ನೀಡಿದ್ದರು. ಆ ಬಳಿಕ ವಾಸ್ತವ ಸ್ಥಿತಿ ಮನವರಿಕೆ ಆದ ಕಾರಣ ಅಲ್ಲಿ ಕ್ರೀಡಾಂಗಣ ನಿರ್ಮಿಸುವ ಯೋಜನೆ ಕೈಬಿಡಲು ಸೂಚಿಸಿದರು. ಇಲ್ಲಿ ಇನ್ನಷ್ಟು ಬಂಡವಾಳ ತೊಡಗಿಸಿ ಕಾರ್ಖಾನೆಯನ್ನು ಬಲಪಡಿಸಲಾಗುವುದು’ ಎಂದರು.

5

ಹುದ್ದೆ ತಪ್ಪುವ ಭಯ ತರಬೇತಿಗೆ ಚಕ್ಕರ್

ಬೆಂಗಳೂರು: ಕರ್ನಾಟಕ ಆಡಳಿತ ಸೇವೆಯಿಂದ (ಕೆಎಎಸ್) ಪದೋನ್ನತಿ ಪಡೆದಿದ್ದ ಐಎಎಸ್ (ಭಾರತೀಯ ಆಡಳಿತ ಸೇವೆ) ಅಧಿಕಾರಿಗಳು ತಾವಿರುವ ಹುದ್ದೆ ಬದಲಾಗಬಹುದು ಎನ್ನುವ ಆತಂಕದಿಂದ, ಉತ್ತರಾಖಂಡದ ಮಸೂರಿಯಲ್ಲಿ ನಡೆಯುತ್ತಿರುವ ತರಬೇತಿಗೆ ಗೈರಾಗಿದ್ದಾರೆ.

ವಿವರ ಪುಟ 7

ಜೂನ್ ಒಳಗೆ ಶಿಕ್ಷಕರ ವರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಗಿದ ತಕ್ಷಣ ಶಿಕ್ಷಕರ ವರ್ಗಾವಣೆಯ ಕೌನ್ಸೆಲಿಂಗ್ ಆರಂಭಿಸಲಾಗುವುದು. ಜೂನ್ ಒಳಗೆ ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ವಿಧಾನಪರಿಷತ್‌ನಲ್ಲಿ ಪ್ರಶ್ನೋತ್ತರ ಕಲಾಪದಲ್ಲಿ ಮಾತನಾಡಿದ ಅವರು, ಹೆಚ್ಚುವರಿ ಶಿಕ್ಷಕರಿಗೆ ಮೊದಲ ಆದ್ಯತೆ ನೀಡಲಾಗುವುದು. ನಂತರ ನಿಯಮದಂತೆ ಇತರೆ ಶಿಕ್ಷಕರನ್ನು ಆದ್ಯತೆಯ ಮೇಲೆ ಸ್ಥಳ ನಿಯೋಜನೆ ಮಾಡಲಾಗುವುದು ಎಂದರು. ಖಾಲಿ ಇರುವ 15 ಸಾವಿರ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆ ಅನುಮತಿ ನೀಡಿದೆ. ತ್ವರಿತ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುವುದು. ಕಳೆದ ಬಾರಿಯಂತೆ 2026–27ನೇ ಶೈಕ್ಷಣಿಕ ವರ್ಷ ಆರಂಭಕ್ಕೂ ಮೊದಲೇ ಅತಿಥಿ ಶಿಕ್ಷಕರನ್ನು ನೇಮಕ ಮಾಡಲಾಗುವುದು. ಪದವಿಪೂರ್ವ ಕಾಲೇಜಿನ 247 ಪ್ರಾಂಶುಪಾಲರ ಹುದ್ದೆಗಳಿಗೆ ಸ್ಪರ್ಧಾ ಪರೀಕ್ಷೆಯ ಮೂಲಕ ಸೇವಾನಿರತ ಉಪನ್ಯಾಸಕರನ್ನು ನೇಮಕ ಮಾಡಲಾಗುವುದು ಎಂದರು.

ಇತಿಹಾಸಕಾರ ಕೆ.ಎನ್.ಪಣಿಕ್ಕರ್ ನಿಧನ

ತಿರುವನಂತಪುರ: ಪ್ರಸಿದ್ಧ ಇತಿಹಾಸಕಾರ, ಚಿಂತಕ ಕೆ.ಎನ್. ಪಣಿಕ್ಕರ್ (89) ಅವರು ವಯೋಸಹಜ ಆರೋಗ್ಯ ಸಮಸ್ಯೆಗಳಿಂದ ಸೋಮವಾರ ನಿಧನರಾದರು. ಅವರಿಗೆ ಪುತ್ರಿಯರಾದ ರಾಗಿಣಿ ಮತ್ತು ಶಾಲಿನಿ ಇದ್ದಾರೆ.

ದೇಶದ ಪ್ರಮುಖ ಮಾರ್ಕ್ಸ್‌ವಾದಿ ಇತಿಹಾಸಕಾರರಾಗಿದ್ದ ಪಣಿಕ್ಕರ್ ಅವರು ಆಧುನಿಕ ಭಾರತೀಯ ಇತಿಹಾಸದ ಬರವಣಿಗೆಗೆ ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ವಸಾಹತುಶಾಹಿ ಸಮಾಜ, ಸಾಮಾಜಿಕ ಚಳವಳಿಗಳು, ಸಂಸ್ಕೃತಿ, ಧರ್ಮ ಮತ್ತು ರಾಜಕೀಯದ ನಡುವಿನ ಸಂಬಂಧಗಳ ಕುರಿತು ಬೆಳಕು ಚೆಲ್ಲಿದ್ದಾರೆ.

ಕೇರಳದ ಗುರುವಾಯೂರ್‌ನಲ್ಲಿ ಕೃಷ್ಣನ್ ನಾಯರ್ ಮತ್ತು ಇಚ್ಚುಕುಟ್ಟಿ ಅಮ್ಮ ದಂಪತಿಗೆ 1936ರ ಏಪ್ರಿಲ್ 26ರಂದು ಜನಿಸಿದ ಅವರು, ಶಾಲಾ ಶಿಕ್ಷಣವನ್ನು ಚಾವಕ್ಕಾಡ್‌ನಲ್ಲಿ, ಕಾಲೇಜು ಶಿಕ್ಷಣವನ್ನು ಪಾಲಕ್ಕಾಡಿನಲ್ಲಿ ಪೂರ್ಣಗೊಳಿಸಿದರು. ಜೈಪುರದ ರಾಜಸ್ಥಾನ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಅಧ್ಯಯನ ಪೂರ್ಣಗೊಳಿಸಿ, ಪಿಎಚ್‌.ಡಿ ಪದವಿ ಪಡೆದರು.

7

ಚಿನಕುರುಳಿ ಪ್ರಕಾಶ್ ಶೆಟ್ಟಿ



ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆ.ಐ.ಎ.ಡಿ.ಬಿ. ಕೇಂದ್ರ ಕಛೇರಿ,
ನಂ.14/3, ಸಿ.ಎಫ್.ಸಿ. ಕಟ್ಟಡ, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ: ಕೆಐಎಡಿಬಿ/ವಿ.ಭೂ.ಅ/2059/2025-26 ದಿನಾಂಕ: 09.03.2026

ಸಾರ್ವಜನಿಕ ನೋಟೀಸ್

ಈ ಮೂಲಕ ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟ ಜಮೀನಿನ ಖಾತೆದಾರರು/ ಅನುಭವದಾರರು/ ಹಿತಾಸಕ್ತದಾರರಿಗೆ ತಿಳಿಸುವುದೇನೆಂದರೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೆಂಚನಪುರ ಗ್ರಾಮದಲ್ಲಿ ಒಟ್ಟು 196-04 ಎ/ಗು ವಿಸ್ತೀರ್ಣದ ಕೆಳಕಂಡ ಸರ್ವೆ ನಂಬರ್‌ಗಳ ಜಮೀನಿಗೆ ಕೈಗಾರಿಕಾ ಪ್ರದೇಶದ ಸ್ಥಾಪನೆಗಾಗಿ ಪ್ರಾರಂಭಿಕ ಅಧಿಸೂಚನೆ ಸಂಖ್ಯೆ: ಸಿಐ 56 ಎಸ್‌ಪಿಕ್ಯೂ 2009 ದಿನಾಂಕ:10.12.2009ರಂತೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಚುರಪಡಿಸಿರುತ್ತದೆ. ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿನಗಳ ಒಳಗಾಗಿ ಈ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಗಳ ಕೇಂದ್ರ ಕಛೇರಿ (ಕೆಐಎಡಿಬಿ) ನಂ.14/3, ಸಿ.ಎಫ್.ಸಿ. ಕಟ್ಟಡ, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು-560001 ಇವರ ಕಛೇರಿಗೆ ಆಕ್ಷೇಪಣೆಯನ್ನು ಲಿಖಿತ ಮೂಲಕ ಖುದ್ದು ಅಥವಾ ಅಧಿಕಾರ ಪಡೆದವರ ಮುಖೇನ ಸಲ್ಲಿಸಬಹುದಾಗಿರುತ್ತದೆ ಹಾಗೂ ಭೂಸ್ವಾಧೀನಕ್ಕೆ ಒಳಪಟ್ಟ ಜಮೀನುಗಳ ವಿವರ ಕೆಳಕಂಡಂತೆ ಇರುತ್ತದೆ.

ಕ್ರ. ಸಂ	ಖಾತೆದಾರರು/ ಅನುಭವದಾರರ ಹೆಸರು	ಸರ್ವೆ ನಂ	ಭೂಸ್ವಾಧೀನಕ್ಕೊಳಪಟ್ಟ ವಿಸ್ತೀರ್ಣ: ಐನು (ಎ/ಗು)	ಖರಾಬು (ಎ/ಗು)	ಬಾಕಿ (ಎ/ಗು)
1	2	3	4	5	6
	ಗ್ರಾಮ: ಕೆಂಚನಪುರ ಹೋಬಳಿ: ಕೆಂಗೇರಿ ತಾಲ್ಲೂಕು: ಬೆಂಗಳೂರು ದಕ್ಷಿಣ ಜಿಲ್ಲೆ: ಬೆಂಗಳೂರು				
1.	ದೊಂಡೋಜಿರಾವ್ ಎಲಿಜಬೆತ್ ಲೊಬೊ	1	0-20	0-05	0-15
2.	ಸಿ.ಚನ್ನರಾಮಯ್ಯ ಬಿನ್ ಚನ್ನರಾಯಪ್ಪ, ಸಿ.ಚನ್ನಬಸಪ್ಪ ಬಿನ್ ಚನ್ನರಾಯಪ್ಪ, ಸಿ.ಮರಿಚನ್ನಪ್ಪ ಬಿನ್ ಚನ್ನರಾಯಪ್ಪ	2/1	2-00	-	2-00
	ಗಿರಿಯಪ್ಪ ಬಿನ್ ಭೈರಲಿಂಗಪ್ಪ	2/2	2-00	-	2-00
	ನರಸಿಂಹಯ್ಯ, ಗಂಗಮ್ಮ	2/3	2-00	-	2-00
	ಗಂಗರಾಜು ಬಿನ್ ಲೇಟ್ ನಂಜತಿಮ್ಮಯ್ಯ	2/4	2-00	-	2-00
3	ನರಸಮ್ಮ ಕೋಂ ಹನುಮಯ್ಯ,	3/1, 3/2ರ ಪೈಕಿ,	2-30	0-20	2-10
	ಕೆ.ಬಿ.ಯಲ್ಲಪ್ಪ ಬಿನ್ ಭೈರಪ್ಪ, ಕೆ.ಬಿ.ಮುನಿರಾಜು ಬಿನ್ ಭೈರಪ್ಪ, ಲತಾ ಕೋಂ ರಾಜಣ್ಣ, ಎಂ.ನಾಗರತ್ನಮ್ಮ ಬಿನ್ ಲೇಟ್ ಮುನಿವೀರಪ್ಪ,	3/3, 3/4,			
	ಚಂದ್ರಕಲ ಬಿನ್ ಹನುಮಂತಯ್ಯ, ಕೆ.ಬಿ.ಮುನಿ ರಾಜು ಬಿನ್ ಭೈರಪ್ಪ	3/5, 3/6			
	ಮೂಗಣ್ಣ ಬಿನ್ ಯಲ್ಲಪ್ಪ, ಚಿಕ್ಕಭೈರಣ್ಣ ಬಿನ್ ಯಲ್ಲಪ್ಪ				
	ಕೆ.ಜಿ.ಹನುಮಂತಯ್ಯ, ದೊಡ್ಡತಿಮ್ಮರಾಯಪ್ಪ ಬಿನ್ ಗಾಳೀಹನುಮಯ್ಯ				
	ಕೆ.ಬಿ.ಯಲ್ಲಪ್ಪ ಬಿನ್ ಭೈರಪ್ಪ				
4.	ಹನುಮಂತಯ್ಯ, ವೆಂಕಟಹನುಮಯ್ಯ, ನಾಗಪ್ಪ, ಹನುಮಂತರಾಯಪ್ಪ, ಸೌಭಾಗ್ಯ, ಕೆ.ಸಿ.ಗಾಳಪ್ಪ	4ರ ಪೈಕಿ	0-07	-	0-07
5.	ಚನ್ನಮಾರೇಗೌಡ, ಭದ್ರಮ್ಮ ಕೋಂ ಚನ್ನಗಂಗಯ್ಯ	5/3ರ ಪೈಕಿ	0-36	0-01	0-35
6.	ಭೈರಮ್ಮ ಕೋಂ ವೆಂಕಟರಮಣಪ್ಪ, ಪುಟ್ಟಮಾರೇಗೌಡ ಬಿನ್ ಲೇಟ್ ವೆಂಕಟರಮಣಪ್ಪ, ಪುಟ್ಟಚನ್ನಪ್ಪ ಬಿನ್ ಲೇಟ್ ವೆಂಕಟರಮಣಪ್ಪ, ಮಾರೇಗೌಡ ಬಿನ್ ಲೇಟ್ ವೆಂಕಟರಮಣಪ್ಪ, ಕೆ.ವಿ.ನಾಗರಾಜ್ ಬಿನ್ ಲೇಟ್ ವೆಂಕಟರಮಣಪ್ಪ	5/4ರ ಪೈಕಿ	1-00	0-01	0-39
7.	ಮುನಿಯಪ್ಪ ಬಿನ್ ಚಲ್ಲಯ್ಯ, ಪಿ.ವಿ.ಶ್ರೀನಿವಾಸಯ್ಯ ಬಿನ್ ವೆಂಕಟಶೆಟ್ಟಿ, ಕೆ.ಜಿ.ವೆಂಕಟರಾಮಯ್ಯ ಬಿನ್ ಲೇಟ್ ಎನ್.ಗೋವಿಂದಪ್ಪ, ಕೆ.ವಿ.ಗೋವಿಂದರಾಜು ಬಿನ್ ಕೆ.ಜಿ.ವೆಂಕಟರಾಮಯ್ಯ, ಸಿದ್ದಗಂಗಮ್ಮ ಕೋಂ ಲೇಟ್ ಎನ್.ಗೋವಿಂದಪ್ಪ, ಕೆಂಪಮ್ಮ ಕೋಂ ಲೇಟ್ ವೆಂಕಟಮುನಿಯಪ್ಪ, ಕೆ.ವಿ.ವೆಂಕಟೇಶ್ ಮೂರ್ತಿ ಬಿನ್ ಲೇಟ್ ವೆಂಕಟಮುನಿಯಪ್ಪ, ಗಂಗರಾಜು ಬಿನ್ ಲೇಟ್ ನಂಜತಿಮ್ಮಯ್ಯ, ಎನ್.ದಾಸೇಗೌಡ ಬಿನ್ ಲೇಟ್ ನಂಜತಿಮ್ಮಯ್ಯ, ಎನ್.ಮುನಿಯಪ್ಪ ಬಿನ್ ಲೇಟ್ ನಂಜತಿಮ್ಮಯ್ಯ, ಆಂಜಿನಪ್ಪ ಬಿನ್ ಲೇಟ್ ಮೇಗಲಹಟ್ಟಿ ಮುನಿಯಪ್ಪ, ಕೆ.ಸಿ.ಮುನಿಯಪ್ಪ	6/1	1-12	0-01	1-11
8.	ದಾಸೇಗೌಡ ಬಿನ್ ಲೇಟ್ ಹನುಮನರಸಯ್ಯ	6/2	0-36	-	0-36
9.	ನಾಗರತ್ನಮ್ಮ ಬಿನ್ ಲೇಟ್ ಎನ್.ಗೋವಿಂದಪ್ಪ, ಸಿದ್ದಗಂಗಮ್ಮ ಕೋಂ ಲೇಟ್ ಎನ್.ಗೋವಿಂದಪ್ಪ, ಕೆಂಪಮ್ಮ ಕೋಂ ಲೇಟ್ ವೆಂಕಟಮುನಿಯಪ್ಪ, ಕೆ.ವಿ.ವೆಂಕಟೇಶ್ ಮೂರ್ತಿ ಬಿನ್ ಲೇಟ್ ವೆಂಕಟಮುನಿಯಪ್ಪ, ಗಂಗರಾಜು ಬಿನ್ ಲೇಟ್ ನಂಜತಿಮ್ಮಯ್ಯ, ಎನ್.ದಾಸೇಗೌಡ ಬಿನ್ ಲೇಟ್ ನಂಜತಿಮ್ಮಯ್ಯ, ಎನ್.ಮುನಿಯಪ್ಪ ಬಿನ್ ಲೇಟ್ ನಂಜತಿಮ್ಮಯ್ಯ, ಸಿ.ಕೃಷ್ಣ ಬಿನ್ ಲೇಟ್ ಕೆ.ಎಂ.ಚನ್ನಪ್ಪ, ಕೆ.ಸಿ.ರಾಜಣ್ಣ ಬಿನ್ ಲೇಟ್ ಕೆ.ಎಂ.ಚನ್ನಪ್ಪ, ನಾಗಪ್ಪ ಬಿನ್ ಲೇಟ್ ಕೆ.ಎಂ.ಚನ್ನಪ್ಪ, ಶ್ರೀನಿವಾಸ್ ಬಿನ್ ಲೇಟ್ ಕೆ.ಎಂ.ಚನ್ನಪ್ಪ, ಆಂಜಿನಪ್ಪ ಬಿನ್ ಲೇಟ್ ಮೇಗಲಹಟ್ಟಿ ಮುನಿಯಪ್ಪ.	6/3	0-30	-	0-30
10.	ಸಿ.ಚನ್ನಬಸಪ್ಪ ಬಿನ್ ಲೇಟ್ ಪಟೇಲ್ ಚನ್ನರಾಯಪ್ಪ, ಚನ್ನರಾಮಯ್ಯ ಬಿನ್ ಲೇಟ್ ಪಟೇಲ್ ಚನ್ನರಾಯಪ್ಪ, ಸಿ.ಮರಿಚನ್ನಯ್ಯ ಬಿನ್ ಲೇಟ್ ಪಟೇಲ್ ಚನ್ನರಾಯಪ್ಪ	7	1-12	-	1-12
11.	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿ.ಎಂ.ಟಿ.ಸಿ) ಬೆಂ. ರವರಿಗೆ ಬಸ್ ಡಿಪೋ, ಬಸ್ ನಿಲ್ದಾಣ, ವರ್ಕ್‌ಷಾಪ್ ಮತ್ತು ಸಿಬ್ಬಂದಿ ವಸತಿ ಸಂಕೀರ್ಣ ಸ್ಥಾಪಿಸುವ ಉದ್ದೇಶಕ್ಕಾಗಿ	8	0-14	-	0-14
12.	ಸರ್ಕಾರಿ ಖರಾಬು	9	0-28	0-28	-
13.	ಚನ್ನರಾಯಪ್ಪ, ಹೂಟ್ಟಪ್ಪ, ಚಿಕ್ಕಮುನಿರಾವ್, ನರಸಿಂಹಯ್ಯ, ಮಂಜುಳಾಬಾಯಿ ಬಿನ್ ವೆಂಕಟರಾವ್, ನರಸಿಂಹಯ್ಯ, ಗಂಗರಾಜು, ಅರಸಪ್ಪ, ಚನ್ನರಾಮಯ್ಯ ಬಿನ್ ಚನ್ನರಾಯಪ್ಪ, ಸಿ.ಚನ್ನಬಸಪ್ಪ ಬಿನ್ ಚನ್ನರಾಯಪ್ಪ, ಶಾರದಮ್ಮ ಕೋಂ ಪುಟ್ಟಚನ್ನಪ್ಪ, ಗಂಗರಾಜು ಬಿನ್ ರಂಗಣ್ಣ, ರಾಜಶೇಖರ ಬಿನ್ ಲೇಟ್ ಎಂ.ರಾಮಚಾರಿ, ವಿಜಯ ಕೋಂ ಕೆ.ವೆಂಕಟರೆಡ್ಡಿ, ಆನಂದ ಬಿನ್ ಲೇಟ್ ಮೃತ್ಯುಂಜಯಚಾರ್, ಮಂಜುಳಬಾಯಿ ಕೋಂ ಬಿ.ವೆಂಕಟೇಶ್, ಗಂಗರಾಜು ಬಿನ್ ಲೇಟ್ ನಂಜತಿಮ್ಮಯ್ಯ, ಆಂಜಿನಪ್ಪ ಬಿನ್ ಲೇಟ್ ಮೇಗಲಹಟ್ಟಿ ಮುನಿಯಪ್ಪ, ಆರ್.ಸುರೇಶ ಬಿನ್ ಲೇಟ್ ರಾಮಸ್ವಾಮಿ.	11	2-22	0-03	2-19
14.	ಎಸ್.ಎಸ್.ಸೆಟ್ಲೂರ್, ಜ್ಯೋತ್ಯೋಜಿರಾವ್, ದೊಡ್ಡನರಸಿಂಹಯ್ಯ, ಚಿಕ್ಕಮುನಿರಾವ್, ಮಂಜುಳಾಬಾಯಿ ಬಿನ್ ವೆಂಕಟರಾವ್, ಕೆ.ವಿ.ನಾಗರಾಜ್ ಬಿನ್ ಲೇಟ್ ವೆಂಕಟರಮಣಪ್ಪ, ಗಂಗರಾಜು ಬಿನ್ ರಂಗಣ್ಣ, ಚಿಕ್ಕನರಸಿಂಹಯ್ಯ ಬಿನ್ ಚನ್ನಮಹಿಮಯ್ಯ, ಗಂಗಮ್ಮ ಕೋಂ ಲೇಟ್ ಈರಪ್ಪ, ಮೂರ್ತಿ ಬಿನ್ ಲೇಟ್ಈರಪ್ಪ.	12	2-38	0-01	2-37
15.	ಗಂಗೂಭಾಯಿ ಕೋಂ ಲೇಟ್ ನಾಗೋಜಿರಾವ್, ಪ್ರಮೀಳಾ ಬಾಯಿ ಕೋಂ ಲೇಟ್ ಕೃಷ್ಣೋಜಿರಾವ್, ಅನಂತರಾವ್ ಬಿನ್ ದೊಂಡೋಜಿರಾವ್, ಶ್ರೀನಿವಾಸ ರಾವ್ ಬಿನ್ ದೊಂಡೋಜಿರಾವ್, ನರಸಿಂಗರಾವ್ ಬಿನ್ ದೊಂಡೋಜಿರಾವ್	13ರ ಪೈಕಿ	2-09	-	2-09
16.	ಎಸ್.ಎಸ್.ಸೆಟ್ಲೂರ್, ಹೊಟ್ಟೆಪ್ಪ, ಮರಿಚನ್ನಪ್ಪ, ಜಗ್ಗಯ್ಯ, ಜೋತೋಜಿರಾವ್, ದೊಡ್ಡನರಸಿಂಹಯ್ಯ, ನರಸಿಂಹಯ್ಯ, ಗಂಗರಾಜು, ಸಿ.ಮರಿಚನ್ನಪ್ಪ ಬಿನ್ ಚೆನ್ನರಾಯಪ್ಪ, ಕೆ.ವಿ.ನಾಗರಾಜ್ ಬಿನ್ ಲೇಟ್ ವೆಂಕಟರಮಣಪ್ಪ, ಶಾರದಮ್ಮ ಕೋಂ ಪುಟ್ಟಚನ್ನಪ್ಪ, ಶಾರದಮ್ಮ ಕೊಂ ಪುಟ್ಟಚನ್ನಪ್ಪ, ಗಂಗರಾಜು ಬಿನ್ ರಂಗಣ್ಣ, ಗಂಗಮ್ಮ ಕೋಂ ಲೇಟ್ ಈರಪ್ಪ, ಮೂರ್ತಿ ಬಿನ್ ಲೇಟ್ ಈರಪ್ಪ, ಕೆ.ಎಂ.ನಂಜೇಗೌಡ ಬಿನ್ ಮರಿಚನ್ನಪ್ಪ, ಮಂಜುಳಾ ಬಾಯಿ ಬಿನ್ ಲೇಟ್ ವೆಂಕಟರಾವ್.	14ರ ಪೈಕಿ	1-36	0-02	1-34
17.	ಪುಟ್ಟಮಾರೇಗೌಡ ಬಿನ್ ಲೇಟ್ ವೆಂಕಟರಮಣಪ್ಪ, ಪುಟ್ಟಚನ್ನಪ್ಪ ಬಿನ್ ಲೇಟ್ ವೆಂಕಟರಮಣಪ್ಪ	16/1ರ ಪೈಕಿ	1-27	-	1-27
18.	ಹನುಮನರಸಯ್ಯ ಬಿನ್ ಲೇಟ್ ನರಸಯ್ಯ, ಗಾಳಪ್ಪ ಬಿನ್ ಲೇಟ್ ಹನುಮಂತೇಗೌಡ ಉ॥ ಹನುಮಂತಯ್ಯ, ನಾಗಪ್ಪ ಬಿನ್ ಲೇಟ್ ಹನುಮಂತೇಗೌಡ ಉ॥ ಹನುಮಂತಯ್ಯ.	16/2ರ ಪೈಕಿ	3-37	0-01	3-36
19.	ಕೆ.ಜಿ.ಹನುಮಂತಯ್ಯ, ದೊಡ್ಡತಿಮ್ಮರಾಯಪ್ಪ, ಚಿಕ್ಕತಿಮ್ಮರಾಯಪ್ಪ	17ರ ಪೈಕಿ	3-30	0-15	3-15
20.	ಕೆ.ಹೆಚ್.ತಿಮ್ಮೇಗೌಡ ಬಿನ್ ಕೆ.ಜಿ.ಹನುಮಂತಯ್ಯ	19/1	2-24	-	2-24
21.	ನಂಜಮ್ಮ ಕೋಂ ಕೆ.ಜಿ.ಹನುಮಂತಯ್ಯ	19/2	2-17	-	2-17
22.	ಆಂಜಿನಪ್ಪ ಬಿನ್ ಲೇಟ್ ದೊಡ್ಡಗಾಳಪ್ಪ, ಗೋವಿಂದಪ್ಪ ಬಿನ್ ಲೇಟ್ ದೊಡ್ಡಗಾಳಪ್ಪ, ಗಾಳಪ್ಪ ಬಿನ್ ಲೇಟ್ ದೊಡ್ಡಗಾಳಪ್ಪ, ವೆಂಕಟೇಶ ಬಿನ್ ಲೇಟ್ ದೊಡ್ಡಗಾಳಪ್ಪ, ಆಂಜಿನಪ್ಪ ಬಿನ್ ಲೇಟ್ ಹನುಮಯ್ಯ ಉ॥ ಚಿಕ್ಕಗಾಳಪ್ಪ, ಉಮಾಪತಿ ಬಿನ್ ಲೇಟ್ ಹನುಮಯ್ಯ ಉ॥ ಚಿಕ್ಕಗಾಳಪ್ಪ	20/1	4-39	0-23	4-16
23.	ಕೆ.ಜಿ.ವೆಂಕಟರಾಮಯ್ಯ ಬಿನ್ ಲೇಟ್ ಎನ್.ಗೋವಿಂದಪ್ಪ, ಕೆ.ವಿ.ಗೋವಿಂದರಾಜು ಬಿನ್ ಕೆ.ಜಿ.ವೆಂಕಟರಾಮಯ್ಯ, ಸಿದ್ದಗಂಗಯ್ಯ ಕೋಂ ಲೇಟ್ ಎನ್.ಗೋವಿಂದಪ್ಪ, ಗಂಗರಾಜು ಬಿನ್ ಲೇಟ್ ನಂಜತಿಮ್ಮಯ್ಯ, ಎನ್.ದಾಸೇಗೌಡ ಬಿನ್ ಲೇಟ್ ನಂಜತಿಮ್ಮಯ್ಯ, ಎನ್.ಮುನಿಯಪ್ಪ ಬಿನ್ ಲೇಟ್ ನಂಜತಿಮ್ಮಯ್ಯ, ಶ್ರೀನಿವಾಸ ಬಿನ್ ಲೇಟ್ ಕೆ.ಎಂ.ಚನ್ನಪ್ಪ, ಆಂಜಿನಪ್ಪ ಬಿನ್ ಲೇಟ್ ಮೇಗಲಹಟ್ಟಿ ಮುನಿಯಪ್ಪ, ಎನ್.ದಾಸೇಗೌಡ ಬಿನ್ ಲೇಟ್ ನಂಜತಿಮ್ಮಯ್ಯ	20/2			
24.	ಕೆ.ವಿ.ನಾಗರಾಜು ಬಿನ್ ಲೇಟ್ ವೆಂಕಟರಮಣಪ್ಪ	21ರ ಪೈಕಿ	0-17	0-03	0-14
25.	ಗಿರಿಯಪ್ಪ ಬಿನ್ ಭೈರಲಿಂಗಪ್ಪ, ಎನ್.ಚಂದ್ರಶೇಖರ್ ಬಿನ್ ಜಿ.ನಾಗರಾಜು, ಎನ್.ಶ್ರೀನಿವಾಸಲು ಬಿನ್ ಜಿ.ನಾಗರಾಜು, ಎನ್.ರವಿ ಬಿನ್ ಜಿ.ನಾಗರಾಜು, ಎಸ್.ಯೋಗಾನಂದ ಬಿನ್ ಜಿ.ನಾಗರಾಜು	35	3-06	0-08	2-38
26.	ಲಕ್ಷ್ಮೀಬಾಯಿ ಕೋಂ ಲೇಟ್ ಜೋತೋಜಿರಾವ್, ವೆಂಕೂಬಾಯಿ ಕೋಂ ಲೇಟ್ ಜೋತೋಜಿರಾವ್, ಪುಟ್ಟಮಾರೇಗೌಡ ಬಿನ್ ಲೇಟ್ ವೆಂಕಟರಮಣಪ್ಪ, ಮಾರೇಗೌಡ ಬಿನ್ ಲೇಟ್ ವೆಂಕಟರಮಣಪ್ಪ, ಕೆ.ವಿ.ನಾಗರಾಜ್ ಬಿನ್ ಲೇಟ್ ವೆಂಕಟರಮಣಪ್ಪ	40	8-38	0-08	8-30
27.	ಕೆ.ಹೆಚ್.ತಿಮ್ಮೇಗೌಡ ಬಿನ್ ಕೆ.ಜಿ.ಹನುಮಂತಯ್ಯ, ಗಂಗರಾಜು ಬಿನ್ ಲೇಟ್ ನಂಜತಿಮ್ಮಯ್ಯ, ಸಿ.ಕೃಷ್ಣ ಬಿನ್ ಲೇಟ್ ಕೆ.ಎಂ.ಚನ್ನಪ್ಪ, ಕೆ.ಸಿ.ರಾಜಣ್ಣ ಬಿನ್ ಲೇಟ್ ಕೆ.ಎಂ.ಚನ್ನಪ್ಪ, ಶ್ರೀನಿವಾಸ ಬಿನ್ ಲೇಟ್ ಕೆ.ಎಂ.ಚನ್ನಪ್ಪ, ಆಂಜಿನಪ್ಪ ಬಿನ್ ಲೇಟ್ ಮೇಗಲಹಟ್ಟಿ ಮುನಿಯಪ್ಪ, ಕೆ.ಯತಿರಾಜ್ ಬಿನ್ ಲೇಟ್ ಕೃಷ್ಣಸ್ವಾಮಿ.ಕೆ, ಹೆಚ್.ತಿಮ್ಮಯ್ಯ ಬಿನ್ ಹನುಮಯ್ಯ	41	6-11	-	6-11
28.	ನರಸಿಂಹಯ್ಯ ಬಿನ್ ಚನ್ನಮಹಿಮಯ್ಯ, ಚಿಕ್ಕನರಸಿಂಹಯ್ಯ ಬಿನ್ ಚನ್ನಮಹಿಮಯ್ಯ	42	4-17	0-01	4-16
29.	ಆಂಜಿನಪ್ಪ, ಲಕ್ಕಮ್ಮ ಬಿನ್ ಲೇಟ್ ಬಿ.ವಿ.ಆಂಜಿನಪ್ಪ, ಕೆ.ಸಿ.ರಾಜಣ್ಣ ಬಿನ್ ಲೇಟ್ ಕೆ.ಎಂ.ಚನ್ನಪ್ಪ	43	2-16	-	2-16
30.	ಲಕ್ಕಮ್ಮ, ಶ್ರೀನಿವಾಸ ಬಿನ್ ಹನುಮಂತಪ್ಪ, ಸ್ವರ್ಣ ಕೋಂ ಎಂ.ಹೆಚ್.ರಾಜಶೇಖರಯ್ಯ	45ರ ಪೈಕಿ	2-01	-	2-01
31.	ದೊಂಡೋಜಿರಾವ್	47/1ರ ಪೈಕಿ	0-01	-	0-01
32.	ವೆಂಕಟಾಂಜನಪ್ಪ, ಬಾಬು ಬಿನ್ ಅಬ್ದುಲ್‌ಗಪೂರ್ ಉ॥ ಮಹಮದ್ ಸಾಬ್, ಗೋವಿಂದಪ್ಪ ಬಿನ್ ಲೇಟ್ ಚಿಕ್ಕಗಾಳಪ್ಪ	47/2ರ ಪೈಕಿ	0-26	-	0-26
33.	ನರಸಮ್ಮ ಕೋಂ ಚಿಕ್ಕಣ್ಣ	48	2-01	-	2-01
34.	ದಾಸೇಗೌಡ ಬಿನ್ ಲೇಟ್ ಹನುಮನರಸಯ್ಯ	49	5-05	-	5-05
35.	ನರಸಮ್ಮ ಕೋಂ ಚಿಕ್ಕಣ್ಣ, ಹನುಮಯ್ಯ, ನರಸಮ್ಮ ಕೋಂ ತಿಮ್ಮಯ್ಯ	50/1	4-06	-	4-06
36.	ಸಾಬ್‌ಜಾನ್ ಬಿನ್ ಷೇಕ್‌ಹುಸೇನ್ ಸಾಬ್	50/2	1-03	-	1-03
37.	ಹನುಮಯ್ಯ ಬಿನ್ ತಿಮ್ಮಯ್ಯ, ನರಸಮ್ಮ ಕೋಂ ಚಿಕ್ಕಣ್ಣ, ನರಸಮ್ಮ ಕೋಂ ತಿಮ್ಮಯ್ಯ	50/3	2-05	-	2-05
38.	ನಾಗಪ್ಪ ಬಿನ್ ಲೇಟ್ ಕೆ.ಎಂ.ಚನ್ನಪ್ಪ, ಆಂಜಿನಪ್ಪ ಬಿನ್ ಲೇಟ್ ಮೇಗಲಹಟ್ಟಿ ಮುನಿಯಪ್ಪ	52/1	2-05	-	2-05
39.	ವೆಂಕೋಬರಾವ್, ಕೃಷ್ಣೋಜಿರಾವ್, ನಾರಾಯಣರಾವ್, ಜ್ಯೋತೋಜಿರಾವ್, ಆರ್.ಕುಮಾರ್ ಬಿನ್ ರಾಮುಸ, ಆರ್,ಕೃಷ್ಣ ಬಿನ್ ರಾಮುಸ.	52/2	3-03	-	3-03
40.	ಸಿ.ಕೃಷ್ಣ ಬಿನ್ ಲೇಟ್ ಕೆ.ಎಂ.ಚನ್ನಪ್ಪ, ಕೆ.ಸಿ.ರಾಜಣ್ಣ ಬಿನ್ ಲೇಟ್ ಕೆ.ಎಂ.ಚನ್ನಪ್ಪ, ಆಂಜಿನಪ್ಪ ಬಿನ್ ಲೇಟ್ ಮೇಗಲಹಟ್ಟಿ ಮುನಿಯಪ್ಪ.	53	4-24	-	4-24
41.	ಮಾಣಬಾಯಿ, ವೆಂಕೋಬರಾವ್ ಬಿನ್ ಲೇಟ್ ನಾಗೋಜಿರಾವ್ ಬಿನ್ ಲೇಟ್ ರಾಮೋಜಿರಾವ್, ಸರೋಜಬಾಯಿ ಕೋಂ ಲೇಟ್ ರಾಮೋಜಿರಾವ್	54	3-34	-	3-34
42.	ದಾಸೇಗೌಡ ಬಿನ್ ಲೇಟ್ ಹನುಮನರಸಯ್ಯ, ಗೋವಿಂದಪ್ಪ ಬಿನ್ ಲೇಟ್ ಹನುಮನರಸಯ್ಯ	55ರ ಪೈಕಿ	3-35	0-01	3-34
43	ನಂಜಮ್ಮ ಕೋಂ ನಾರಾಯಣಸ್ವಾಮಿ, ಬಿ.ಕೆ.ಸತೀಶ್ ಬಿನ್ ಕೃಷ್ಣೇಗೌಡ, ಸಿ.ಎಸ್.ನಂಜಪ್ಪ ಬಿನ್ ಸಿ.ಸಿ.ಸುಬ್ಬಯ್ಯ	57/1ರ ಪೈಕಿ	2-01	0-33	1-08
	ಸಿ.ಗೌರಮ್ಮ ಕೋಂ ಚನ್ನೇಗೌಡ.ಎಂ	57/2			
	ಸಿ.ಚನ್ನರಾಮಯ್ಯ	57/3			
44.	ರೇವೋಜಿರಾವ್, ಮುದ್ದಹನುಮಕ್ಕ ಕೋಂ ಗೋವಿಂದಪ್ಪ, ಹನುಮಕ್ಕ ಕೋಂ ಲೇಟ್ ಗಂಗಣ್ಣ, ಹನುಮಂತರಾಜು ಮೈನರ್ ಗಾರ್ಡಿಯನ್ ಅಜ್ಜಿ ದೊಡ್ಡಹನುಮಕ್ಕ ಬಿನ್ ಲೇಟ್ ಗಂಗಣ್ಣ	61	6-15	-	6-15
45.	ಜೈಮುನಿರಾವ್, ಮುನಿರಾವ್, ಮುನಿಸ್ವಾಮಿರಾವ್ ಬಿನ್ ಲೇಟ್ ಮುನಿಸ್ವಾಮಿರಾವ್, ರಾಜು ಬಿನ್ ರುದ್ರಯ್ಯ	62	3-01	-	3-01
46.	ನಾಗೂಬಾಯಿ ಬಿನ್ ವೆಂಕಟರಾವ್, ಮಂಜುಳಾಬಾಯಿ ಬಿನ್ ವೆಂಕಟರಾವ್, ಕೃಷ್ಣೋಜಿರಾವ್ ಬಿನ್ ಲೇಟ್ ಚಿಕ್ಕಮುನಿಯೋಜಿರಾವ್, ರಾಮರಾವ್ ಬಿನ್ ಲೇಟ್ ಮುನೋಜಿರಾವ್ ಉ॥ ದೊಡ್ಡಮನೋಜಿರಾವ್, ನಾರಾಯಣರಾವ್ ಬಿನ್ ಲೇಟ್ ಮನೋಜಿರಾವ್ ಉ॥ ದೊಡ್ಡಮನೋಜಿರಾವ್, ಆನಂತರಾವ್ ಬಿನ್ ಲೇಟ್ ಮುನೋಜಿರಾವ್ ಉ॥ ದೊಡ್ಡಮುನೋಜಿರಾವ್, ಶ್ರೀನಿವಾಸ್‌ರಾವ್ ಬಿನ್ ಲೇಟ್ ಮುನೋಜಿರಾವ್ ಉ॥ ದೊಡ್ಡಮುನೋಜಿರಾವ್	64	5-00	-	5-00
47.	ಪ್ರಮೀಳಾ ಭಾಯಿ ಕೋಂ ಲೇಟ್ ಕೃಷ್ಣೋಜಿರಾವ್	65/1	1-18	-	1-18
48.	ಎಂ.ಗುಂಡಪ್ಪ ಬಿನ್ ಲೇಟ್ ಮುದ್ದಯ್ಯ	65/2	3-11	-	3-11
49.	ಗೋವಿಂದಪ್ಪ ಬಿನ್ ಲೇಟ್ ಹನುಮನರಸಯ್ಯ	65/3	4-20	-	4-20
50.	ಗಂಗೂಬಾಯಿ ಕೋಂ ಲೇಟ್ ನಾಗೋಜಿರಾವ್, ಅನಂತರಾವ್ ಬಿನ್ ದೊಂಡೀಜಿರಾವ್, ನರಸಿಂಗರಾವ್ ಬಿನ್ ದೊಂಡೋಜಿರಾವ್, ಶ್ರೀನಿವಾಸರಾವ್ ಬಿನ್ ದೊಂಡೋಜಿರಾವ್	66	3-31	0-02	3-29
51.	ಸಿ.ಗೋವಿಂದರಾಜು ಬಿನ್ ಚನ್ನಪ್ಪ, ಗೌರಮ್ಮ ಕೋಂ ಸಿ.ಗೋವಿಂದರಾಜು, ಎಂ.ಕೃಷ್ಣಪ್ಪ ಬಿನ್ ಲೇಟ್ ಮುನಿಯಪ್ಪ, ಸಿ.ಗೋವಿಂದರಾಜು ಬಿನ್ ಚನ್ನಪ್ಪ, ಎಂ.ಎಸ್.ರಾಜಣ್ಣ ಬಿನ್ ಎಂ.ನಾಗರಾಜರಾವ್, ಅಕ್ಕಯ್ಯಮ್ಮ ಕೋಂ ಲೇಟ್ ಗೋವಿಂದಪ್ಪ, ಜಿ.ನಾಗರಾಜು ಬಿನ್ ಲೇಟ್ ಗೋವಿಂದಪ್ಪ, ಚನ್ನಪ್ಪ ಬಿನ್ ಲೇಟ್ ತಮ್ಮಯ್ಯ	67	8-21	-	8-21
52.	ಕೆ.ಆರ್.ವೆಂಕಟೇಶ್ ಬಿನ್ ರಾಮಕೃಷ್ಣಯ್ಯ	68/1	2-07	-	2-07
53.	ವೆಂಕಟಪ್ಪ, ಮುನಿಯಪ್ಪ, ತಿಮ್ಮೇಗೌಡ ಬಿನ್ ವೆಂಕಟಪ್ಪ, ಅಕ್ಕಯ್ಯಮ್ಮ ಕೋಂ ಲೇಟ್ ಗೋವಿಂದಪ್ಪ, ಜಿ.ನಾಗರಾಜು ಬಿನ್ ಲೇಟ್ ಗೋವಿಂದಪ್ಪ, ಎಂ.ಕೃಷ್ಣಪ್ಪ ಬಿನ್ ಲೇಟ್ ಮುನಿಯಪ್ಪ, ಕೆ.ಎಂ.ನಾರಾಯಣ್ ಬಿನ್ ಮುದ್ದುಕೃಷ್ಣಪ್ಪ	68/2	2-26	-	2-26
54.	ಸುಬ್ಬಯ್ಯ ಬಿನ್ ಭೈರಪ್ಪ	69/1	3-14	0-01	3-13
55.	ಕೆ.ಬಿ.ಯಲ್ಲಪ್ಪ ಬಿನ್ ಭೈರಪ್ಪ	69/2	1-09	-	1-09
56.	ಬಿ.ಅರಸಮ್ಮ ಕೋಂ ರಂಗಸ್ವಾಮಿ	69/3	2-02	-	2-02
57.	ಡಾ॥ ಕೆ.ಅನ್ನದಾನಿ ಬಿನ್ ಕೆಂಚಯ್ಯ	70/1	2-02	0-04	1-38
58.	ಕೆ.ಬಿ.ಯಲ್ಲಪ್ಪ ಬಿನ್ ಭೈರಪ್ಪ	70/2	2-29	0-05	2-24
59.	ನರಸಿಂಹಯ್ಯ ಬಿನ್ ಚನ್ನಮಹಿಮಯ್ಯ	71/2	2-12	-	2-12
60.	ಅನಂತರಾವ್ ಬಿನ್ ಲೇಟ್ ರಾಮರಾವ್	71/3	2-03	0-02	2-01
61.	ಕೆಂಚಯ್ಯ, ಸಾಕಮ್ಮ, ಗಂಗಮ್ಮ ಕೋಂ ಲೇಟ್ ಕಾಳಪ್ಪ, ಹುಚ್ಚಹನುಮಯ್ಯ ಬಿನ್ ಕೆಂಚಹನುಮಯ್ಯ, ಗಾಳಪ್ಪ ಬಿನ್ ಕೆಂಚಹನುಮಯ್ಯ, ಕೆಂಚಯ್ಯ ಬಿನ್ ಕೆಂಚಹನುಮಯ್ಯ, ಕರಿಯಪ್ಪ ಬಿನ್ ಕೆಂಚಹನುಮಯ್ಯ	71/4	0-15	-	0-15
62	ನರಸಿಂಹಯ್ಯ ಬಿನ್ ಚನ್ನಮಹಿಮಯ್ಯ, ಚಿಕ್ಕನರಸಿಂಹಯ್ಯ ಬಿನ್ ಚನ್ನಮಹಿಮಯ್ಯ	73/1	4-20	0-02	4-18
	ಸಾಕಮ್ಮ ಕೋಂ ಲೇಟ್‌ಗಂಗಯ್ಯ, ಕೆಂಚಯ್ಯ, ಗಂಗಮ್ಮ ಕೋಂ ಲೇಟ್ ಕಾಳಪ್ಪ, ಸಾಕಮ್ಮ ಕೋಂ ಲೇಟ್ ಗಾಳಪ್ಪ, ಹುಚ್ಚಹನುಮಯ್ಯ, ಗಾಳಪ್ಪ, ಕೆಂಚಯ್ಯ ಬಿನ್ ಕೆಂಚಹನುಮಯ್ಯ, ಕರಿಯಪ್ಪ ಬಿನ್ ಕೆಂಚಹನುಮಯ್ಯ	73/2			
	ಹುಚ್ಚಹನುಮಯ್ಯ, ಗಾಳಪ್ಪ, ಕೆಂಚಪ್ಪ, ಕರಿಯಪ್ಪ.	73/3			
63.	ತಮ್ಮಯ್ಯ ಬಿನ್ ನರಸಯ್ಯ, ಟಿ.ನರಸಿಂಹಯ್ಯ, ದೊಡ್ಡಹನುಮಂತಯ್ಯ, ಚನ್ನಯ್ಯ, ಅಂಬುಜಮ್ಮ ಕೋಂ ಲೇಟ್ ವೆಂಕಟೇಶ್	74/1	7-00	-	7-00
	ಚಿಕ್ಕಹನುಮಂತಯ್ಯ, ನರಸಿಂಹಯ್ಯ, ನಾಗಮ್ಮ ಕೋಂ ವೀರಪ್ಪ, ನರಸಯ್ಯ ಉ॥ ರೆಡ್ಡಪ್ಪ, ಚನ್ನಯ್ಯ, ಮುನಿಸ್ವಾಮಯ್ಯ, ಅಂಬುಜಮ್ಮ ಕೋಂ ಲೇಟ್ ವೆಂಕಟೇಶ್	74/2			
	ನರಸಮ್ಮ ಕೋಂ ಚಿಕ್ಕಣ್ಣ, ಹನುಮಯ್ಯ, ನರಸಮ್ಮ ಕೋಂ ತಿಮ್ಮಯ್ಯ	74/3			
	ನರಸಮ್ಮ	74/4			
	ನರಸಮ್ಮ ಕೋಂ ಲೇಟ್ ಚಿಕ್ಕಣ್ಣ	74/5			
	ನರಸಮ್ಮ ಕೋಂ ಹನುಮಂತಪ್ಪ	74/6			
64.	ಸುಭದ್ರಾಬಾಯಮ್ಮ, ಗಂಗೂಬಾಯಿ ಬಿನ್ ವೆಂಕಟರಾವ್, ನಾಗೂಬಾಯಿ ಬಿನ್ ವೆಂಕಟರಾವ್, ಮಂಜುಳಾಬಾಯಿ ಬಿನ್ ವೆಂಕಟರಾವ್, ವೆಂಕೋಬರಾವ್, ಕೃಷ್ಣೋಜಿರಾವ್, ನಾಗೋಜಿರಾವ್, ಜ್ಯೋತೋಜಿರಾವ್, ನಾರಾಯಣರಾವ್	75ರ ಪೈಕಿ	1-20	0-01	1-19
65.	ಚೆನ್ನಮ್ಮ ಕೋಂ ಲೇಟ್ ಪುಟ್ಟಯ್ಯ, ಎಂ.ನರಸಿಂಹಸ್ವಾಮಿ ಬಿನ್ ಮುನಿಯಪ್ಪ, ಚಂದ್ರಪ್ಪ ಬಿನ್ ಲೇಟ್ ಕೃಷ್ಣಪ್ಪ, ಸಿ.ಗೌರಮ್ಮ ಕೋಂ ಎಂ.ಚನ್ನೇಗೌಡ.	77ರ ಪೈಕಿ	1-16	0-02	1-14
66.	ಗಂಗೂಬಾಯಿ ಬಿನ್ ವೆಂಕಟರಾವ್, ನಾಗೂಬಾಯಿ ಬಿನ್ ವೆಂಕಟರಾವ್, ಮಂಜುಳಾ ಬಾಯಿ ಬಿನ್ ವೆಂಕಟರಾವ್, ವೆಂಕೋಬರಾವ್, ಕೃಷ್ಣೋಜಿರಾವ್, ನಾಗೋಜಿರಾವ್, ಜ್ಯೋತೋಜಿರಾವ್, ನಾರಾಯಣರಾವ್, ರಾಮರಾವ್ ಬಿನ್ ಲೇಟ್ ಮುನೋಜಿರಾವ್ ಉ॥ ದೊಡ್ಡಮುನೋಜಿರಾವ್, ನಾರಾಯಣರಾವ್ ಬಿನ್ ಲೇಟ್ ಮನೋಜಿರಾವ್ ಉ॥ ದೊಡ್ಡಮುನೋಜಿರಾವ್, ಆನಂದರಾವ್ ಬಿನ್ ಲೇಟ್ ಮುನೋಜಿರಾವ್ ಉ॥ ದೊಡ್ಡಮುನೋಜಿರಾವ್, ಶ್ರೀನಿವಾಸ್‌ರಾವ್ ಬಿನ್ ಲೇಟ್ ಮುನೋಜಿರಾವ್ ಉ॥ ದೊಡ್ಡಮುನೋಜಿರಾವ್.	80	5-20	0-02	5-18
67.	ಗಂಗೂಬಾಯಿ ಬಿನ್ ವೆಂಕಟರಾವ್, ನಾಗೂಬಾಯಿ ಬಿನ್ ವೆಂಕಟರಾವ್, ವೆಂಕೋಬರಾವ್, ಕೃಷ್ಣೋಜಿರಾವ್, ನಾಗೋಜಿರಾವ್, ನಾಗೂಬಾಯಿ ಬಿನ್ ಲೇಟ್ ವೆಂಕಟರಾವ್, ರಾಮರಾವ್ ಬಿನ್ ಲೇಟ್ ಮುನೋಜಿರಾವ್ ಉ॥ ದೊಡ್ಡಮುನೋಜಿರಾವ್, ನಾರಾಯಣರಾವ್ ಬಿನ್ ಲೇಟ್ ಮನೋಜಿರಾವ್ ಉ॥ ದೊಡ್ಡಮುನೋಜಿರಾವ್, ಆನಂದರಾವ್ ಬಿನ್ ಲೇಟ್ ಮುನೋಜಿರಾವ್ ಉ॥ ದೊಡ್ಡಮುನೋಜಿರಾವ್, ಶ್ರೀನಿವಾಸ್‌ರಾವ್ ಬಿನ್ ಲೇಟ್ ಮುನೋಜಿರಾವ್ ಉ॥ ದೊಡ್ಡಮುನೋಜಿರಾವ್, ಮಂಜುಳಾ ಬಾಯಿ ಕೋಂ ಬಿ.ವೆಂಕಟೇಶ್	81	6-26	-	6-26
68.	ನಾಗುಬಾಯಿ ಕೋಂ ಲೇಟ್ ಬಾಬುರಾವ್, ಪರಶುರಾಮ್ ಬಿನ್ ಲೇಟ್ ಪೂಜಪ್ಪ, ಎಂ.ನಾಗರಾಜು ಬಿನ್ ಲೇಟ್ ಮಾರಸಪ್ಪ, ಶ್ರೀರಾಮ ಬಿನ್ ಲೇಟ್ ಮಾರಸಪ್ಪ, ಎಂ.ವಸಂತಕುಮಾರ್ ಬಿನ್ ಲೇಟ್ ಮಾರಸಪ್ಪ	82	4-03	0-02	4-01
69.	ವೆಂಕೋಬರಾವ್ ಬಿನ್ ಲೇಟ್ ರಾಮೋಜಿರಾವ್	83	0-35	0-01	0-34
70.	ವೆಂಕೋಬರಾವ್ ಬಿನ್ ಲೇಟ್ ರಾಮೋಜಿರಾವ್ ಲಕ್ಷ್ಮೀಬಾಯಿ ಕೋಂ ಲೇಟ್ ಜೋತೋಜಿರಾವ್, ವೆಂಕೊಬಾಯಿ ಕೋಂ ಲೇಟ್ ಜೋತೋಜಿರಾವ್. ನಾಗುಬಾಯಿ ಕೋಂ ಚಂದ್ರೋಜಿರಾವ್, ಸಾವಿತ್ರಿ ಬಾಯಿ ಕೋಂ ಬೈರೋಜಿರಾವ್, ಶಾಂತಾಬಾಯಿ ಕೋಂ ಕೃಷ್ಣೋಜಿರಾವ್, ಶಾರದಾಬಾಯಿ ಕೋಂ ರಮೇಶ್‌ರಾವ್	84	3-29	-	3-29

-::ಘೋಷ್ವಾರೆ ::-

ಕ್ರ.ಸಂ.	ಗ್ರಾಮದ ಹೆಸರು	ಭೂಸ್ವಾಧೀನಕ್ಕೆ ಒಳಪಟ್ಟ ವಿಸ್ತೀರ್ಣ: ಐನು ಎ-ಗು	ಖರಾಬು ಎ-ಗು	ಬಾಕಿ ಎ-ಗು
2	ಕೆಂಚನಪುರ	196-04	4-19	191-25
	ಒಟ್ಟು	**196-04**	**4-19**	**191-25**

ಈ ಮೇಲ್ಕಂಡ ಜಮೀನಿನ ಖಾತೆದಾರರು / ಅನುಭದಾರರು / ಹಿತಾಸಕ್ತರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕರ್ನಾಟಕ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(2)ರ ಮೇರೆಗೆ ಅಧಿಸೂಚಿತ ಖಾತೆದಾರರಿಗೆ/ಅನುಭವದಾರರಿಗೆ ತಿಳುವಳಿಕೆ ನೋಟೀಸುಗಳನ್ನು ಹೊರಡಿಸಿ ಜಾರಿ ಮಾಡಲಾಗಿದೆ ಹಾಗೂ ನೋಂದಾಯಿತ ಅಂಚೆ ಮೂಲಕ ರವಾನಿಸಲಾಗಿತ್ತು. ಕೆಲವು ಭೂಮಾಲೀಕರ ವಿಳಾಸ ತಿಳಿದುಬಂದಿಲ್ಲವಾದ್ದರಿಂದ ಅಂಚೆ ಲಕೋಟೆಗಳ ಮೇಲೆ ಅಂಚೆ ಇಲಾಖೆಯವರು ಷರಾ ಬರೆದು ಈ ಕಛೇರಿಗೆ ಹಿಂದಿರುಗಿಸಿರುತ್ತಾರೆ. ಮೇಲ್ಕಂಡ ಜಮೀನಿನ ಖಾತೆದಾರರು / ಹಕ್ಕದಾರರುಗಳು ಈ ಪ್ರಕಟಣೆಯನ್ನು ಕೆ.ಐ.ಎ.ಡಿ. ಕಾಯ್ದೆ 1966ರ ವಿಧಿ 28(2)ರ ಮೇರೆಗೆ ತಿಳುವಳಿಕೆ ನೋಟೀಸು ಎಂದು ಪರಿಗಣಿಸತಕ್ಕದ್ದು.

ಪ್ರಸ್ತುತ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಭೂಮಾಲೀಕರು / ಹಿತಾಸಕ್ತಿ ಉಳ್ಳವರು ತಮ್ಮ ಆಕ್ಷೇಪಣೆಗಳನ್ನು ರಾಜ್ಯ ಪತ್ರದಲ್ಲಿ ಈ ಪ್ರಕಟಣೆಗೊಂಡ **30 ದಿನಗಳೊಳಗಾಗಿ** ಅಗತ್ಯ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ಅವರ ಪರವಾಗಿ ಅಧಿಕಾರ ಪಡೆದವರು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಅವಧಿ ಮೀರಿ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂಬುದಾಗಿ ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗಿದೆ. ಮೇಲ್ಕಂಡ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ **ಕೆಂಚನಪುರ ಗ್ರಾಮದ ವಿಚಾರಣೆಯನ್ನು ದಿನಾಂಕ:12.03.2026 ರಂದು ಬೆಳಿಗ್ಗೆ 11.30 ಗಂಟೆಗೆ ನಿಗದಿಪಡಿಸಲಾಗಿದೆ**. ಸದರಿ ದಿನಾಂಕದಂದು ದಾಖಲಾತಿಗಳೊಂದಿಗೆ ಲಿಖಿತವಾಗಿ ಅಥವಾ ಖುದ್ದಾಗಿ ಹಾಜರಾಗಿ ಸಲ್ಲಿಸಲು ಸೂಚಿಸಿದೆ.

ಸಹಿ/- ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ (ಕೇಂದ್ರ ಕಛೇರಿ)

ವಾಸಾಸಂಇ/ಉನಿ-ಸಿ.ಪಿ/6105/ಕೆಎಸ್‌ಎಂಸಿಎ/2025-26

ಪ್ರಯಾಣಿಕರ ಮನೆಯಲ್ಲಿ ಕಳವು: ಚಾಲಕ ಸೆರೆ

₹25 ಲಕ್ಷ ಮೌಲ್ಯದ ಚಿನ್ನಾಭರಣ ಕಳ್ಳತನ
ಹಲವು ಪ್ರಕರಣಗಳಲ್ಲಿ ಭಾಗಿಯಾಗಿ ಜೈಲು ಸೇರಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಯಾಣಿಕರ ಮನೆಯಲ್ಲಿ ₹25 ಲಕ್ಷ ಮೌಲ್ಯದ ಚಿನ್ನಾಭರಣ ಕಳ್ಳತನ ಮಾಡಿದ್ದ ಕ್ಯಾಬ್ ಚಾಲಕನನ್ನು ಹೆಬ್ಬಾಳ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಅಪರಾಧ ಸುದ್ದಿ

ಅಬ್ದುಲ್ ರೆಹಮಾನ್ ಬಂಧಿತ ಆರೋಪಿ.

ಹೆಬ್ಬಾಳದ ಬಸವೇಶ್ವರ ನಗರದ 5ನೇ ಮುಖ್ಯರಸ್ತೆಯ ನಿವಾಸಿ ಸೈಯದ್ ಅಕ್ರಂ ಅವರು ನೀಡಿದ ದೂರಿನ ಮೇಲೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಸೈಯದ್ ಅಕ್ರಂ ಅವರು ಪುತ್ರ ಸೈಯದ್ ಸಲ್ಮಾನ್ ಹಾಗೂ ಸೊಸೆ ಶಾದಿಯಾ ಅವರ ಜತೆಗೆ ಹೆಬ್ಬಾಳದ ಬಸವೇಶ್ವರನಗರದ ಮನೆಯಲ್ಲಿ ನೆಲಸಿದ್ದಾರೆ. ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಬ್ಯಾಂಗಲ್ ಸ್ಟೋರ್ ನಡೆಸುತ್ತಿದ್ದಾರೆ. ಫೆ.11ರಂದು ಮನೆಗೆ ಬೀಗ ಹಾಕಿಕೊಂಡು ಶಾಪಿಂಗ್‌ಗಾಗಿ ಬಾಂಬೆಗೆ ಹೊರಟಿದ್ದರು. ಹೆಬ್ಬಾಳದಿಂದ ಯಶವಂತಪುರಕ್ಕೆ ಕ್ಯಾಬ್ ಬುಕ್ ಮಾಡಿದ್ದರು. ಈ ವೇಳೆ ಸೈಯದ್ ಸಲ್ಮಾನ್ ಅವರು ಪತ್ನಿಗೆ 'ಮನೆಯಲ್ಲಿ ಚಿನ್ನಾಭರಣ ಇರುವ ಕಪಾಟು ಲಾಕ್ ಮಾಡಿದ್ದೀಯಾ' ಎಂದು ಕೇಳಿದ್ದರು. ಅಲ್ಲದೇ 'ಮೂರು ದಿನಗಳ ಕಾಲ ಮನೆಗೆ ವಾಪಸ್ ಬರಲ್ಲ' ಎಂದೂ ಮಾರ್ಗದ ಮಧ್ಯೆ ಮಾತನಾಡಿಕೊಂಡಿದ್ದರು. ಕಾರಿನಲ್ಲಿದ್ದವರು ಮಾತನಾಡಿಕೊಂಡಿದ್ದನ್ನು ಚಾಲಕ ಕೇಳಿಸಿಕೊಂಡಿದ್ದರು. ಸೈಯದ್ ಸಲ್ಮಾನ್ ಕುಟುಂಬವನ್ನು ಯಶವಂತಪುರಕ್ಕೆ ಬಿಟ್ಟು ಬಳಿಕ ಹೆಬ್ಬಾಳಕ್ಕೆ ಬಂದಿದ್ದ ಅಬ್ದುಲ್ ರೆಹಮಾನ್, ಸೈಯದ್ ಅವರ ಮನೆಯಲ್ಲಿದ್ದ 190 ಗ್ರಾಂ ಚಿನ್ನದ ಆಭರಣ ಕಳ್ಳತನ ಮಾಡಿದ್ದರು ಎಂದು ಪೊಲೀಸರು ಹೇಳಿದರು.

ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಿದಾಗ ಕ್ಯಾಬ್ ಚಾಲಕ ಮನೆಯ ಬಳಿಗೆ ಬಂದು ಹೋಗಿರುವುದು ಪತ್ತೆಯಾಗಿತ್ತು. ಅಬ್ದುಲ್ ರೆಹಮಾನ್ ಇರುವ ಸ್ಥಳವನ್ನು ಪತ್ತೆಹಚ್ಚಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ವಿಚಾರಣೆ ವೇಳೆ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಅಬ್ದುಲ್ ರೆಹಮಾನ್ ಅವರು ಈ ಹಿಂದೆ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿ ಜೈಲು ಸೇರಿದ್ದರು. ಜಾಮೀನಿನ ಮೇಲೆ ಜೈಲಿನಿಂದ ಹೊರಬಂದ ಮೇಲೆ ಕ್ಯಾಬ್ ಚಾಲನೆ ಮಾಡುತ್ತಿದ್ದರು. ಕ್ಯಾಬ್ ಚಾಲನೆ ಮಾಡುವ ವೇಳೆ ಬೀಗ ಹಾಕಿರುವ ಮನೆಗಳನ್ನು ಗುರುತಿಸುತ್ತಿದ್ದರು. ರಾತ್ರಿ ವೇಳೆ ಬಂದು ಕಳ್ಳತನ ಮಾಡಿಕೊಂಡು ಪರಾರಿ ಆಗುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಸಿಗರೇಟ್‌ನಲ್ಲಿ ಗಾಂಜಾ ತುಂಬಿ ಸೇದುತ್ತಿದ್ದ ಇಬ್ಬರ ಸೆರೆ

ಬೆಂಗಳೂರು: ಕಬ್ಬನ್‌ಪಾರ್ಕ್‌ನಲ್ಲಿರುವ ಶೌಚಾಲಯದ ಸಮೀಪ ಸಿಗರೇಟ್‌ಗೆ ಗಾಂಜಾ ತುಂಬಿಸಿ ಸೇದುತ್ತಿದ್ದ ಇಬ್ಬರನ್ನು ಕಬ್ಬನ್‌ಪಾರ್ಕ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಫೋಟೊಗ್ರಾಫರ್‌ಗಳಾದ ವಿ. ಸಚಿನ್(21) ಹಾಗೂ ಪವನ್ ಕಲ್ಯಾಣ್(22) ಬಂಧಿತರು.

'ಫೋಟೊ ತೆಗೆಯುವ ಉದ್ದೇಶದಿಂದ ಕಬ್ಬನ್‌ಪಾರ್ಕ್‌ಗೆ ಇಬ್ಬರೂ ಬಂದಿದ್ದರು. ಅಲ್ಲಿ ಸಿಗರೇಟ್‌ಗೆ ಗಾಂಜಾ ತುಂಬಿಸಿ ಸೇದುತ್ತಿದ್ದರು. ಅದನ್ನು ಗಮನಿಸಿದ್ದ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು ಆರೋಪಿಗಳನ್ನು ವಶಕ್ಕೆ ಪಡೆದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ್ದರು. ಪರೀಕ್ಷೆಯ ವೇಳೆ ಗಾಂಜಾ ಸೇವನೆ ಮಾಡಿರುವುದು ದೃಢ ಪಟ್ಟಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿಗಳ ವಿರುದ್ಧ ಮಾದಕ ವಸ್ತು ಮತ್ತು ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆ (ಎನ್‌ಡಿಪಿಎಸ್) ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಸಚಿನ್ ಹಾಗೂ ಪವನ್ ಕಲ್ಯಾಣ್ ಅವರಿಗೆ ಯಾರು ಗಾಂಜಾ ತಂದುಕೊಟ್ಟಿದ್ದರು ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ವಂಚನೆ ಪ್ರಕರಣ: 4 ವರ್ಷದ ಬಳಿಕ ಆರೋಪಿ ಬಂಧನ

ಬೆಂಗಳೂರು: ವಿದೇಶ ಪ್ರವಾಸಕ್ಕೆ ಕರೆದೊಯ್ಯುವುದಾಗಿ ನಂಬಿಸಿ, ಹಣ ಪಡೆದು ವಂಚಿಸಿದ್ದ ಆರೋಪಿಯನ್ನು ನಾಲ್ಕು ವರ್ಷಗಳ ಬಳಿಕ ಕಮರ್ಷಿಯಲ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಸುರೇಶ್ ಚಂದ್ರ(42) ಬಂಧಿತ ಆರೋಪಿ.

ವಂಚನೆಗೆ ಒಳಗಾದವರು ನಾಲ್ಕು ವರ್ಷಗಳ ಹಿಂದೆ ದೂರು ನೀಡಿದ್ದರು. ದೂರು ಆಧರಿಸಿ, ತನಿಖೆ ನಡೆಸುತ್ತಿದ್ದರೂ ಆರೋಪಿಯ ಸುಳಿವು ಸಿಕ್ಕಿರಲಿಲ್ಲ. ಈಗ ಖಚಿತ ಮಾಹಿತಿ ಆಧರಿಸಿ ಆರೋಪಿಯಿದ್ದ ಸ್ಥಳವನ್ನು ಪತ್ತೆಹಚ್ಚಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಇಸ್ರೇಲ್, ಈಜಿಪ್ಟ್ ಸೇರಿದಂತೆ ವಿದೇಶಗಳಿಗೆ ಪ್ರವಾಸ ಕರೆದೊಯ್ಯುವುದಾಗಿ ಆರೋಪಿ ನಂಬಿಸಿದ್ದರು. ಕಮರ್ಷಿಯಲ್ ಸ್ಟ್ರೀಟ್ ವ್ಯಾಪ್ತಿಯ 20ಕ್ಕೂ ಹೆಚ್ಚು ಜನರಿಗೆ ಒಟ್ಟು ₹18 ಲಕ್ಷ ಪಡೆದು ವಂಚಿಸಿದ್ದರು ಎಂದು ಪೊಲೀಸರು ಹೇಳಿದರು.

'ಬೆಂಗಳೂರು ಅಲ್ಲದೇ ಬೇರೆ ಬೇರೆ ಜಿಲ್ಲೆಗಳ ಜನರಿಗೂ ಆರೋಪಿ ಸುರೇಶ್ ಚಂದ್ರ ವಂಚಿಸಿದ್ದರು. ಆರೋಪಿಯ ವಿರುದ್ಧ ಬೆಂಗಳೂರು, ಚಿತ್ರದುರ್ಗ, ಮೈಸೂರು, ಮಂಡ್ಯ, ಬೀದರ್, ಚಿಕ್ಕಮಗಳೂರಿನ ಪೊಲೀಸ್ ಠಾಣೆಗಳಲ್ಲಿ 11 ಪ್ರಕರಣಗಳು ದಾಖಲಾಗಿದ್ದವು. ಆರೋಪಿಯ ಬಂಧನಕ್ಕೆ ವಾರಂಟ್ ಸಹ ಹೊರಡಿಸಲಾಗಿತ್ತು' ಎಂದು ಪೊಲೀಸರು ಹೇಳಿದರು.

ವಾರಸುದಾರರಿಗೆ 107 ಮೊಬೈಲ್ ಫೋನ್ ಹಸ್ತಾಂತರ

ಬೆಂಗಳೂರು: ಉತ್ತರ ವಿಭಾಗದ 13 ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ, ಆರೋಪಿಗಳಿಂದ ₹21.4 ಲಕ್ಷ ಮೌಲ್ಯದ 107 ಮೊಬೈಲ್ ಫೋನ್ ಜಪ್ತಿ ಮಾಡಿಕೊಳ್ಳುವಲ್ಲಿ ಯಶಸ್ವಿ ಆಗಿದ್ದಾರೆ.

ಕಳ್ಳತನವಾದ ಮೊಬೈಲ್‌ಗಳ ಮಾಹಿತಿಯನ್ನು 'ಇ-ಲಾಸ್ಟ್' ಆ್ಯಪ್ ಮತ್ತು ಕೇಂದ್ರ ಸರ್ಕಾರ ರೂಪಿಸಿರುವ 'ಸೆಂಟ್ರಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್' (ಸಿಇಐಆರ್) ಜಾಲತಾಣದಲ್ಲಿ ದಾಖಲು ಮಾಡಲಾಗುತ್ತದೆ. ತಾಂತ್ರಿಕ ಸುಳಿವು ಆಧರಿಸಿ, ಪೊಲೀಸರು ತನಿಖೆ ನಡೆಸಿ ಮೊಬೈಲ್ ಪತ್ತೆ ಮಾಡಿ ಜಪ್ತಿ ಮಾಡಿಕೊಳ್ಳುವಲ್ಲಿ ಯಶಸ್ವಿ ಆಗಿದ್ದಾರೆ.

ಫೆಬ್ರುವರಿ 1ರಿಂದ ಮಾರ್ಚ್ 8ರ ತನಕ ಕಾರ್ಯಾಚರಣೆ ನಡೆಸಲಾಯಿತು ಎಂದು ಪೊಲೀಸರು ಹೇಳಿದರು.

ಪತ್ತೆ ಮಾಡಿದ ಮೊಬೈಲ್ ಫೋನ್‌ಗಳ ವಿವರ: ಆರ್.ಟಿ. ನಗರ ಠಾಣೆಯ ಪೊಲೀಸರು 21, ಜಾಲಹಳ್ಳಿ 14, ಜೆ.ಸಿ ನಗರ 12, ಮಹಾಲಕ್ಷ್ಮಿ ಲೇಔಟ್ 8, ಸಂಜಯನಗರ 8, ರಾಜಾಜಿನಗರ 7, ಸುಬ್ರಹ್ಮಣ್ಯನಗರ 6, ನಂದಿನಿ ಲೇಔಟ್ 6, ಮಲ್ಲೇಶ್ವರ 6, ಹೆಬ್ಬಾಳ 6, ಯಶವಂತಪುರ 5, ಆರ್‌ಎಂಸಿ ಯಾರ್ಡ್ 4, ಶ್ರೀರಾಮಪುರ 4 ಸೇರಿದಂತೆ ಒಟ್ಟು 107 ಮೊಬೈಲ್ ಫೋನ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಉತ್ತರ ವಿಭಾಗದ ಡಿಸಿಪಿ ಬಿ.ಎಸ್.ನೇಮಗೌಡ ಅವರ ನೇತೃತ್ವದಲ್ಲಿ 13 ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿದ್ದರು.

ಪ್ರತ್ಯೇಕ ಪ್ರಕರಣ: ಇಬ್ಬರು ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರದಕ್ಷಿಣೆ ಕಿರುಕುಳ ಹಾಗೂ ಕೌಟುಂಬಿಕ ಕಲಹದಿಂದ ಬೇಸತ್ತು ಮಹಿಳೆಯೊಬ್ಬರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹೆಣ್ಣೂರು ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಹೊರಮಾವಿನಲ್ಲಿ ನೆಲಸಿದ್ದ ಸುಪ್ರೀತಾ(28) ಆತ್ಮಹತ್ಯೆ ಮಾಡಿಕೊಂಡ ಗೃಹಿಣಿ. ಸುಪ್ರೀತಾ ಅವರ ಪತಿ ಕಿರಣ್ ಕುಮಾರ್ ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆಗೆ ಶೋಧ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

'ಚಿಕ್ಕಬಳ್ಳಾಪುರದ ಸುಪ್ರಿತಾ ಅವರು ಐದು ವರ್ಷಗಳ ಹಿಂದೆ ಕಿರಣ್ ಕುಮಾರ್ ಅವರನ್ನು ಮದುವೆ ಆಗಿದ್ದರು. ಕಿರಣ್ ಅವರು ಖಾಸಗಿ ಸಂಸ್ಥೆಯೊಂದರಲ್ಲಿ ಮಾರಾಟ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದರು. ಆರಂಭದಲ್ಲಿ ದಂಪತಿ ಉತ್ತಮವಾಗಿ ಜೀವನ ಸಾಗಿಸುತ್ತಿದ್ದರು. ಆದರೆ, ಇತ್ತೀಚೆಗೆ ಸುಪ್ರಿತಾಗೆ ಆರೋಪಿ ಕಿರಣ್ ಕುಮಾರ್ ಮತ್ತು ಆತನ ಕುಟುಂಬದವರು ವರದಕ್ಷಿಣೆ ಕಿರುಕುಳ ನೀಡಲು ಆರಂಭಿಸಿದ್ದರು. ಇದರಿಂದ ಬೇಸತ್ತಿದ್ದ ಸುಪ್ರಿತಾ ಅವರು ಸೋಮವಾರ ಬೆಳಿಗ್ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂಬ ದೂರು ಆಧರಿಸಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ.

'ಹೊಸ ಬೈಕ್ ಖರೀದಿಸಲು ಹಣ ತರುವಂತೆ ಕಿರಣ್ ನಿರಂತರವಾಗಿ ಪೀಡಿಸುತ್ತಿದ್ದರು. ಸುಪ್ರಿತಾ ತವರು ಮನೆಗೆ ಹೋಗಿದ್ದರು. ಅಲ್ಲಿಗೂ ಹೋಗಿ ಸುಪ್ರಿತಾ ಅವರಿಗೆ ಆರೋಪಿ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡುತ್ತಿದ್ದರು. ವರದಕ್ಷಿಣೆ ಆಸೆಗಾಗಿ ಮಗಳನ್ನು ಆತನೇ ಕೊಲೆ ಮಾಡಿ ಈಗ ನಾಟಕವಾಡುತ್ತಿದ್ದಾನೆ' ಎಂದು ಸುಪ್ರಿತಾ ಅವರ ಕುಟುಂಬಸ್ಥರು ದೂರು ನೀಡಿದ್ದಾರೆ.

ಹೆಣ್ಣೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಷೇರು ಮಾರುಕಟ್ಟೆಯಲ್ಲಿ ನಷ್ಟ- ವ್ಯಕ್ತಿ ಆತ್ಮಹತ್ಯೆ: ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದ ಹಣ ಕಳೆದುಕೊಂಡಿದ್ದ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಹೆಬ್ಬಾಳದಲ್ಲಿ ನಡೆದಿದೆ.

ವೆಂಕಟೇಶ್ (50) ಆತ್ಮಹತ್ಯೆ ಮಾಡಿಕೊಂಡವರು.

ವೆಂಕಟೇಶ್ ಅವರು ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿ ನಷ್ಟಕ್ಕೆ ಒಳಗಾಗಿದ್ದರು. ಬೇರೆ ಬೇರೆ ಕಡೆಗಳಲ್ಲಿ ಸಾಲ ಮಾಡಿದ್ದರು. ಸಾಲ ನೀಡಿದವರ ಒತ್ತಡ ಹೆಚ್ಚಾಗಿತ್ತು. ಜತೆಗೆ, ವೆಂಕಟೇಶ್ ಅವರು ತೀವ್ರ ಅನಾರೋಗ್ಯದಿಂದಲೂ ಬಳಲುತ್ತಿದ್ದರು. ವೆಂಕಟೇಶ್ ಅವರು ಮರಣ ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಕೇಬಲ್ ಕಾರ್ಖಾನೆಯಲ್ಲಿ ಬೆಂಕಿ ಅವಘಡ

ದೊಡ್ಡಬಳ್ಳಾಪುರ: ಇಲ್ಲಿನ ಬಾಶೆಟ್ಟಿಹಳ್ಳಿ ಕೈಗಾರಿಕಾ ಪ್ರದೇಶದ ಅಡ್ವಾನ್ಸ್ ಕೇಬಲ್ ಕಾರ್ಖಾನೆಯಲ್ಲಿ ಸೋಮವಾರ ಸಂಜೆ 5ಕ್ಕೆ ಬೆಂಕಿ ಕಾಣಿಸಿಕೊಂಡಿತ್ತು.

ಬೆಂಗಳೂರಿನಿಂದ ಬಂದಿದ್ದ ಎನ್‌ಡಿಆರ್‌ಎಫ್ ಸಿಬ್ಬಂದಿ ಮತ್ತು ಹತ್ತು ಅಗ್ನಿಶಾಮಕ ವಾಹನಗಳು ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದ್ದರೂ ಬೆಂಕಿಯ ಕೆನ್ನಾಲಿಗೆ ವ್ಯಾಪಿಸುತ್ತಲೇ ಇತ್ತು. ಕೈಗಾರಿಕಾ ಪ್ರದೇಶದಲ್ಲಿ ದಟ್ಟವಾದ ಹೊಗೆ ಆವರಿಸಿಕೊಂಡಿತ್ತು. ಪ್ರಾಥಮಿಕ ವರದಿಗಳ ಪ್ರಕಾರ ಘಟನೆಯಲ್ಲಿ ಪ್ರಾಣಹಾನಿಯಾದ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ. ಬೆಂಕಿ ಕಾಣಿಸಿಕೊಳ್ಳುತ್ತಲೇ ಕಾರ್ಮಿಕರು ಹೊರಗೆ ಓಡಿ ಬಂದಿದ್ದಾರೆ.

ಬೆಂಕಿ ಅವಘಡಕ್ಕೆ ನಿಖರ ಕಾರಣ ತಿಳಿದು ಬಂದಿಲ್ಲ. ಕೇಬಲ್ ತಯಾರಿಕಾ ಕಂಪನಿಗೆ ಕೋಟ್ಯಂತರ ರೂಪಾಯಿ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಬೆಂಗಳೂರು ರಾಜ್ಯ ಹೆದ್ದಾರಿಗೆ ಸಮೀಪವೇ ಕಾರ್ಖಾನೆ ಇರುವುದರಿಂದ ರಸ್ತೆಯಲ್ಲಿ ವಾಹನ ದಟ್ಟಣೆ ಉಂಟಾಗಿತ್ತು. ಘಟನಾ ಸ್ಥಳದಲ್ಲಿ ಗ್ರಾಮಾಂತರ ಠಾಣೆ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದರು. ಘಟನಾ ಸ್ಥಳಕ್ಕೆ ತಹಶೀಲ್ದಾರ್ ಮಲ್ಲಪ್ಪ ಕೆ.ಯಗೋಳ ಭೇಟಿ ನೀಡಿ ಮಾಹಿತಿ ಪಡೆದರು.


ದೊಡ್ಡಬಳ್ಳಾಪುರ ಬಾಶೆಟ್ಟಿಹಳ್ಳಿ ಕೈಗಾರಿಕಾ ಪ್ರದೇಶದ ಅಡ್ವಾನ್ಸ್ ಕೇಬಲ್ ಟೆಕ್ನಾಲಜಿ ಯೂನಿಟ್ 2ರಲ್ಲಿ ದಟ್ಟವಾದ ಹೊಗೆ ಆವರಿಸಿಕೊಂಡಿತ್ತು

ಅಪಹರಣವಾಗಿದ್ದ ರಿಯಲ್ ಎಸ್ಟೇಟ್ ಉದ್ಯಮಿ ಶವ ಪತ್ತೆ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಕರ್ಪೂರು ಬಳಿ ಭಾನುವಾರ ಅಪಹರಣವಾಗಿದ್ದ ರಿಯಲ್ ಎಸ್ಟೇಟ್ ಉದ್ಯಮಿ ಡೆಂಕಣಿಕೋಟೆ ಪೊಲೀಸ್ ಠಾಣೆ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ಶವವಾಗಿ ಪತ್ತೆಯಾಗಿದ್ದಾರೆ. ಕೊಲೆಗೆ ಸುಪಾರಿ ನೀಡಿದ್ದ ಆರೋಪಿಯನ್ನು ಆನೇಕಲ್ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಸುರಗಜಕ್ಕನಹಳ್ಳಿ ಗ್ರಾಮ ಪಂಚಾಯಿತಿಯ ಹೊನ್ನಕಲಶಾಪುರದ ರಿಯಲ್ ಎಸ್ಟೇಟ್ ಉದ್ಯಮಿ ಗೋಪಿ (38) ಅವರನ್ನು ಭಾನುವಾರ ಸಂಜೆ 5ರ ಹೊತ್ತಿಗೆ ಅಪಹರಿಸಲಾಗಿತ್ತು.

ಅತ್ತಿಬೆಲೆಯಿಂದ ಆನೇಕಲ್‌ನತ್ತ ಬರುತ್ತಿದ್ದ ಗೋಪಿ ಮುಖಕ್ಕೆ ಸ್ಪ್ರೇ ಹಾಕಿ ಅಪಹರಿಸಿ ಕೊಲೆ ಮಾಡಿ ಅರಣ್ಯ ಪ್ರದೇಶದಲ್ಲಿ ಎಸೆಯಲಾಗಿದೆ. ಭಾನುವಾರ ರಾತ್ರಿಯೇ ಶವಪತ್ತೆಯಾಗಿತ್ತು. ಆದರೆ ಗುರುತು ಪತ್ತೆಯಾಗಿರಲಿಲ್ಲ.

ಡೆಂಕಣಿಕೋಟೆ ಪೊಲೀಸರು ನೀಡಿದ ಮಾಹಿತಿ ಆಧರಿಸಿ ಗೋಪಿ ಶವವನ್ನು ಪತ್ತೆ ಹಚ್ಚಲಾಯಿತು ಎಂದು ತಿಳಿಸಿದ್ದಾರೆ. ಗೋಪಿ ಕೊಲೆಗೆ ಸುಪಾರಿ ನೀಡಿದ್ದ ಆರೋಪದ ಮೇಲೆ ಅದೇ ಗ್ರಾಮದ ರಿಯಲ್ ಎಸ್ಟೇಟ್ ಉದ್ಯಮಿ ಮೋಹನ್ ಬಾಬು ಎಂಬಾತನನ್ನು ಬಂಧಿಸಲಾಗಿದೆ.

ಇನ್ನುಳಿದ ಆರೋಪಿಗಳ ಬಂಧನಕ್ಕೆ ಏಳು ತಂಡ ರಚಿಸಲಾಗಿದೆ. ಆರೋಪಿಗಳು ಶಿವಮೊಗ್ಗದಲ್ಲಿರುವ ಬಗ್ಗೆ ಮಾಹಿತಿ ದೊರೆತಿದೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ವಿ.ಚಂದ್ರಕಾಂತ್ ತಿಳಿಸಿದ್ದಾರೆ.

ಆರೋಪಿ ಮನೆಗೆ ಕಲ್ಲು ತೂರಾಟ

ಆರೋಪಿ ಮೋಹನ್ ಬಾಬು ಮನೆಗೆ ಕೆಲ ಯುವಕರು ಕಲ್ಲು ತೂರಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಘಟನೆಯಿಂದ ಹೊನ್ನಕಲಶಾಪುರ ಗ್ರಾಮದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.

10 ವರ್ಷದ ವೈಷಮ್ಯ

ಕೆಲ ವರ್ಷಗಳ ಹಿಂದೆ ಗೋಪಿ ಅವರು ಮೋಹನ್ ಬಾಬು ಅವರ ಬಳಿ ಕೆಲಸ ಬಿಟ್ಟು ಸ್ವಂತವಾಗಿ ರಿಯಲ್ ಎಸ್ಟೇಟ್ ಉದ್ಯಮ ಆರಂಭಿಸಿದ್ದರು. ಇದರಿಂದ ಮೋಹನ್ ಬಾಬು ಗ್ರಾಹಕರೆಲ್ಲ ಗೋಪಿಯತ್ತ ತಿರುಗಿದ್ದರು. ಇದರಿಂದ ಮೋಹನ್ ಬಾಬು ಅಸಮಾಧಾನಗೊಂಡಿದ್ದರು. ಇದರಿಂದ ಕಳೆದ 10 ವರ್ಷಗಳಿಂದಲೂ ಇಬ್ಬರ ನಡುವೆ ವೈಷಮ್ಯ ಬೆಳೆದಿತ್ತು. ಹಳೆಯ ವೈಷಮ್ಯದಿಂದ ಅಪರಿಚಿತರಿಗೆ ಸುಪಾರಿ ನೀಡಿ ಕೊಲೆ ಮಾಡಿಸಿದ್ದಾನೆ ಎಂಬುದು ಗೋಪಿ ಅವರ ಸಂಬಂಧಿಕರ ಆರೋಪ.

ಮೂರು ತಿಂಗಳ ಹಿಂದೆಯೂ ಆನೇಕಲ್ ತಾಲ್ಲೂಕಿನ ಹುಸ್ಕೂರು ಸಮೀಪ ಗೋಪಿ ಅವರನ್ನು ಅಪಹರಿಸಿ ತಮಿಳುನಾಡಿಗೆ ಕರೆದೊಯ್ದು ಕೊಲೆ ಯತ್ನ ಮಾಡಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಹವಾಮಾನ ಮುನ್ಸೂಚನೆ: ಶುಭ್ರ ಆಗಸ ಇರಲಿದೆ

ಕೈದಿಗಳ ಭೇಟಿಗೆ ಹೊಸ ನಿಯಮ ಜಾರಿ

ಕಾರಾಗೃಹ: ಅಕ್ರಮ ಚಟುವಟಿಕೆಗೆ ಕಡಿವಾಣ ಹಾಕಲು ಕ್ರಮ

ಪ್ರಜಾವಾಣಿ ವಾರ್ತೆ



ಅಲೋಕ್ ಕುಮಾರ್

ಬೆಂಗಳೂರು: ರಾಜ್ಯದ ಬೇರೆ ಬೇರೆ ಕಾರಾಗೃಹಗಳಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು, ಕಾರಾಗೃಹದಲ್ಲಿ ಸುಧಾರಣೆ ತರಲು ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯು ಹೊಸ ಮಾರ್ಗಸೂಚಿಗಳನ್ನು ಸೋಮವಾರ ಪ್ರಕಟಿಸಿದೆ.

ಹೊಸ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಇಲಾಖೆಯ ಡಿಜಿಪಿ ಅಲೋಕ್ ಕುಮಾರ್ ಅವರು ಜೈಲಿನ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಅಲ್ಲದೇ, ಮಾರ್ಗಸೂಚಿ ಪಾಲನೆ ಮಾಡದ ಅಧಿಕಾರಿಗಳು ಹಾಗೂ ಸಿಬ್ಬಂದಿಯ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಜೈಲಿನಲ್ಲಿ ಇರುವ ಕೈದಿಗಳಿಗೆ ನೀಡುತ್ತಿರುವ ಊಟದಲ್ಲೂ ಮಹತ್ವದ ಬದಲಾವಣೆ ತರಲಾಗಿದೆ. ವಿಚಾರಣಾಧೀನ ಕೈದಿಗಳು, ಸಜಾಬಂದಿಗಳ ಭೇಟಿಗೂ ಹೊಸ ನಿಯಮ ಜಾರಿಗೆ ತರಲಾಗಿದೆ. ಕೈದಿಗಳಿಗೆ ಗಂಭೀರ ಅನಾರೋಗ್ಯವಿದ್ದರೆ ಅಥವಾ ಗಾಯದಿಂದ ನಡೆಯಲು ಆಗದಿರುವ ಸಂದರ್ಭದಲ್ಲಿ ತಿಂಗಳಿಗೆ ಒಮ್ಮೆ ಕುಟುಂಬದವರ ಭೇಟಿ ಮಾಡುವುದಕ್ಕೆ ಅವಕಾಶ ಕಲ್ಪಿಸಿ ಆದೇಶಿಸಲಾಗಿದೆ.

ಕೈದಿಗಳ ಭೇಟಿಗೆ ಹೊಸ ನಿಯಮಗಳು: 'ಕುಟುಂಬದಲ್ಲಿ ಯಾರಾದರೂ ಮೃತಪಟ್ಟಿದ್ದರೆ ಅಥವಾ ತುರ್ತು ವೈದ್ಯಕೀಯ ಪರಿಸ್ಥಿತಿಯಿದ್ದರೆ ಅಂತಹ ಸಂದರ್ಭದಲ್ಲಿ ಕೈದಿಯನ್ನು ಭೇಟಿ ಮಾಡಿ ಮಾಹಿತಿ ನೀಡಲು ಕುಟುಂಬದವರಿಗೆ ಅವಕಾಶ ಕಲ್ಪಿಸಲಾಗಿದೆ. ಅಲ್ಲದೇ, ಕೈದಿ ಸಜೆ ಮುಗಿದಿದ್ದು ಮುಂದಿನ ಜೀವನದ ಬಗ್ಗೆ ಚರ್ಚೆ ನಡೆಸುವುದಕ್ಕೂ ಭೇಟಿಗೆ ಅವಕಾಶ ಕಲ್ಪಿಸಲಾಗಿದೆ. ಉದ್ಯೋಗ, ವಾಸಸ್ಥಳ, ಸಂಬಂಧಿಕರ ಜೊತೆಗಿನ ವ್ಯವಸ್ಥೆಗಳ ಸಂದರ್ಭಗಳಲ್ಲಿ ಅವಕಾಶ ಇದೆ' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪಾಲಿಸಬೇಕಾದ ನಿಯಮಗಳು

ಕೈದಿಗಳನ್ನು ಭೇಟಿ ಮಾಡಲು ಆಯಾ ಜೈಲು ಮುಖ್ಯಸ್ಥರಿಂದ ಲಿಖಿತ ಅನುಮತಿ ಪಡೆಯುವುದು ಕಡ್ಡಾಯ. ಜೈಲು ಭದ್ರತಾ ಕಾರಣಕ್ಕೆ ಸಿಬ್ಬಂದಿ ತಪಾಸಣೆಗೆ ಸಹಕಾರ ನೀಡಬೇಕು. ನಿಗದಿತ ಸಂದರ್ಶನ ಕೊಠಡಿಯಲ್ಲಿ ಮಾತ್ರವೇ ಕೈದಿಗಳನ್ನು ಭೇಟಿ ಮಾಡಬಹುದು. 30 ನಿಮಿಷ ಮಾತ್ರ ಕಾಲಾವಕಾಶ ನೀಡಬೇಕು' ಎಂದು ಮಾರ್ಗಸೂಚಿ ಪ್ರಕಟಿಸಲಾಗಿದೆ. '5 ಮಂದಿಗೂ ಮೀರಿ ಭೇಟಿಗೆ ಅವಕಾಶ ಇಲ್ಲ. ಜೈಲು ಅಧಿಕಾರಿಯ ಮೇಲ್ವಿಚಾರಣೆ ಇರಬೇಕು. ಭೇಟಿಗೂ ಎರಡು ದಿನ ಮೊದಲು ಅರ್ಜಿ ಸಲ್ಲಿಸಬೇಕು. ತುರ್ತು ಕಾರಣವಿದ್ದರೆ ಕಾರಾಗೃಹ ಹಾಗೂ ಸುಧಾರಣಾ ಸೇವಾ ಇಲಾಖೆಯ ಡಿಜಿಪಿ ಅವರನ್ನು ಭೇಟಿ ಮಾಡಿ ಅನುಮತಿ ಪಡೆದುಕೊಳ್ಳಬೇಕು' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಸಿಬ್ಬಂದಿ ವರ್ಗಾವಣೆ

ಹಲವು ವರ್ಷದಿಂದ ಒಂದೇ ಕಾರಾಗೃಹದಲ್ಲಿ ಕೆಲಸ ಮಾಡುತ್ತಿದ್ದ ಅಂತಹವರ ವರ್ಗಾವಣೆ ಮಾಡಲು ಚಿಂತನೆ ನಡೆದಿದೆ. ಒಂದೇ ಜಾಗದಲ್ಲಿ ಸಿಬ್ಬಂದಿ ಹಲವು ವರ್ಷದಿಂದ ಕೆಲಸ ಮಾಡುತ್ತಿದ್ದರೆ, ಕೈದಿಗಳ ಜತೆಗೆ ಆತ್ಮೀಯತೆ ಬೆಳೆದು ಅಕ್ರಮ ಚಟುವಟಿಕೆಗೆ ಸಹಕಾರ ನೀಡುವ ಸಾಧ್ಯತೆ ಇರುತ್ತದೆ. ಆದೇ ಕಾರಣಕ್ಕೆ ವರ್ಗಾವಣೆಗೂ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯ ಮೂಲಗಳು ತಿಳಿಸಿವೆ.

15ರಂದು ಅಪ್ಪು ಉತ್ಸವ

ಬೆಂಗಳೂರು: 'ಇದು ನಿಮ್ಮ ವಾಹಿನಿ ಕಲಾ ವೇದಿಕೆ'ಯಿಂದ ಮಾರ್ಚ್ 15ರಂದು ರಾಮಮಂದಿರ ನಗರದ ನಾಟ್ಯಶ್ರೀ ಆಡಿಟೋರಿಯಂನಲ್ಲಿ 'ಅಪ್ಪು ಉತ್ಸವ' ಹಮ್ಮಿಕೊಳ್ಳಲಾಗಿದೆ.

ವೇದಿಕೆಯ ಪ್ರಧಾನ ಕಾರ್ಯದರ್ಶಿ ಕಿಶೋರ್ ಕುಮಾರ್ ಕೆ.ಎಸ್. ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಈ ಉತ್ಸವಕ್ಕೆ ಚಲನಚಿತ್ರ ಕಲಾವಿದ 'ನೆನಪಿರಲಿ ಪ್ರೇಮ್' ರಾಯಭಾರಿಯಾಗಲಿದ್ದಾರೆ. ಸಂಘದ ಗೌರವಾಧ್ಯಕ್ಷ ಗಂಡಸಿ ಸದಾನಂದಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

ಬೆಳಿಗ್ಗೆ 9ರಿಂದ ರಾತ್ರಿ 9ರವರೆಗೆ ಕಾರ್ಯಕ್ರಮ ನಡೆಯಲಿದ್ದು, 500ಕ್ಕೂ ಹೆಚ್ಚು ಕಲಾವಿದರು ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ವೇದಿಕೆಯ ಗಂಡಸಿ ಸದಾನಂದಸ್ವಾಮಿ, ಲಿಖಿತ್, ಭರಣಿ ರಾಜು ಉಪಸ್ಥಿತರಿದ್ದರು.

ಲಂಚ: ಪಿಎಸ್‌ಐ, ಎಎಸ್‌ಐ ಜಾಮೀನು ರದ್ದು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಪ್ರಕರಣವೊಂದರಲ್ಲಿ 'ಬಿ' ರಿಪೋರ್ಟ್ ಹಾಕಲು ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರು ಬಂಧಿಸಿದ್ದ ಚಿಕ್ಕಬಳ್ಳಾಪುರ ಗ್ರಾಮಾಂತರ ಠಾಣೆ ಪಿಎಸ್‌ಐ ಶರಣಪ್ಪ ಮತ್ತು ಎಎಸ್‌ಐ ಟಿ.ವೆಂಕಟೇಶ್ ಅವರಿಗೆ ನೀಡಲಾಗಿದ್ದ ಜಾಮೀನನ್ನು ಜಿಲ್ಲಾ ಮೂರನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ ಸೋಮವಾರ ರದ್ದುಗೊಳಿಸಿದೆ.

ನಗರದ ಕನ್ನಡ ಭವನದ ಬಳಿ ಮಂಗಳವಾರ (ಮಾರ್ಚ್ 3) ಸಂಜೆ ₹70 ಸಾವಿರ ಲಂಚ ಪಡೆಯುವಾಗ ಎಎಸ್‌ಐ ವೆಂಕಟೇಶಪ್ಪ ಮತ್ತು ನಗರ ಹೊರವಲಯದ ಚಿಕ್ಕಾವಲ ಪ್ರದೇಶದ ಬಳಿ ಪಿಎಸ್‌ಐ ಶರಣಪ್ಪ ಅವರನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದಿದ್ದರು. ರಾತ್ರಿ ವಿಚಾರಣೆ ನಡೆಸಿ ಬುಧವಾರ (ಮಾರ್ಚ್ 4) ಬೆಳಿಗ್ಗೆ ನ್ಯಾಯಾಧೀಶರ ಎದುರು ಹಾಜರುಪಡಿಸಿದ್ದರು.

ನ್ಯಾಯಾಧೀಶೆ ಲತಾ ಕುಮಾರಿ ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿದ್ದರು. ಕೆಲವೇ ತಾಸಿನಲ್ಲಿ ಆರೋಪಿಗಳಿಗೆ ಜಾಮೀನು ದೊರೆತದ್ದು ನ್ಯಾಯಾಂಗ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿತ್ತು. ಆರೋಪಿಗಳಿಗೆ ಜಾಮೀನು ನೀಡಿದ್ದಕ್ಕೆ ಲೋಕಾಯುಕ್ತ ಪೊಲೀಸರು ಸಹ ಆಕ್ಷೇಪ ವ್ಯಕ್ತಪಡಿಸಿದ್ದರು.

ಶನಿವಾರ (ಮಾರ್ಚ್ 7) ಮತ್ತೆ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶೆ ಶಾರದಾ, ಸೋಮವಾರ ತೀರ್ಪು ನೀಡುವುದಾಗಿ ಪ್ರಕಟಿಸಿದ್ದರು. ಸೋಮವಾರ ಜಾಮೀನು ರದ್ದುಗೊಳಿಸಿದರು. ತೀರ್ಪು ಪ್ರಕಟವಾದ ವೇಳೆ ಆರೋಪಿಗಳು ನ್ಯಾಯಾಲಯದಲ್ಲಿ ಹಾಜರಿರಲಿಲ್ಲ. ಪಿಎಸ್‌ಐ ಮತ್ತು ಎಎಸ್‌ಐ ಇಬ್ಬರನ್ನೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ ಅಮಾನತುಗೊಳಿಸಿದ್ದಾರೆ.



ಬೆಂಗಳೂರು ವಕೀಲರ ಸಂಘದ (ಎಎಬಿ) ವತಿಯಿಂದ ನ್ಯಾ.ಎಂ.ಜಿ.ಉಮಾ ಅವರಿಗೆ ಬೀಳ್ಕೊಡುಗೆ ನೀಡಲಾಯಿತು. (ಎಡದಿಂದ ಬಲಕ್ಕೆ) ಸಂಘದ ಪದಾಧಿಕಾರಿ ಅರವಿಂದ ಕಾಮತ್, ಚಂದ್ರಕಾಂತ ಪಾಟೀಲ್, ಅಡ್ವೊಕೇಟ್ ವಿವೇಕ್ ರೆಡ್ಡಿ, ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣ್ ಗೌಡ, ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು, ಹೆಚ್ಚುವರಿ ಸಾಲಿಸಿಟರ್ ಜನರಲ್ ಅರವಿಂದ ಕಾಮತ್, ಜಂಟಿ ಕಾರ್ಯದರ್ಶಿ ಹರೀಶ ಮತ್ತು ಉಪಾಧ್ಯಕ್ಷ ಗಿರೀಶ್ ಕುಮಾರ್ ಸತ್ಕರಿಸಿದರು

'ನ್ಯಾಯಮೂರ್ತಿ ಹುದ್ದೆ ಹೂವಿನ ಹಾಸಿಗೆಯಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವುದೂ ಶಾಶ್ವತವಲ್ಲ, ನಾವೆಲ್ಲರೂ ಇಲ್ಲಿ ಸೀಮಿತ ಅವಧಿಗೆ ಮಾತ್ರವೇ ಇರುತ್ತೇವೆ. ಆದ್ದರಿಂದ, ಈ ಮಹಾನ್ ಸಂಸ್ಥೆಯ ಘನತೆಯನ್ನು ಎತ್ತಿಹಿಡಿಯಲು ನಮ್ಮ ಕೈಲಾದಷ್ಟು ಪ್ರಯತ್ನಿಸಬೇಕು' ಎಂದು ಹೈಕೋರ್ಟ್‌ನ ನ್ಯಾಯಮೂರ್ತಿ ಎಂ.ಜಿ.ಉಮಾ ಹೇಳಿದರು.

ಹೈಕೋರ್ಟ್ ನ್ಯಾಯಮೂರ್ತಿ ಹುದ್ದೆಯಿಂದ ಮಂಗಳವಾರ ಸೇವಾ ನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ವಕೀಲರ ಪರಿಷತ್ (ಕೆಎಸ್‌ಬಿಸಿ) ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆಯಾಗಿ ನನ್ನ ವೃತ್ತಿ ಬದುಕು ಆರಂಭವಾಯಿತು. ಈ ವೃತ್ತಿ ಹೂವಿನ ಹಾಸಿಗೆಯಲ್ಲ. ಹಗ್ಗದ ಮೇಲಿನ ನಡಿಗೆ. ಮೈಸೂರು, ಬಳ್ಳಾರಿ, ಮಂಗಳೂರು, ರಾಮನಗರದಲ್ಲಿ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆಯಾಗಿ ನಂತರ ಹೈಕೋರ್ಟ್‌ಗೆ ಪದೋನ್ನತಿ ಹೊಂದಿ ನ್ಯಾಯಮೂರ್ತಿಯಾಗಿ ನಾನು ಮಾಡಿರುವ ಕೆಲಸ ನನಗೆ ಸಮಾಧಾನ ಮತ್ತು ಸ್ಫೂರ್ತಿ ತುಂಬಿದೆ' ಎಂದು ಸ್ಮರಿಸಿದರು.

'ನ್ಯಾಯಾಧೀಶರು ಮತ್ತು ನ್ಯಾಯಮೂರ್ತಿಗಳ ಹುದ್ದೆ ಹೆಚ್ಚಿನ ಶ್ರಮ ಬೇಡುತ್ತದೆ. ಯಾವುದೇ ಭಯ ಅಥವಾ ಪಕ್ಷಪಾತವಿಲ್ಲದೇ ನ್ಯಾಯದಾನ ಮಾಡಲು ಮತ್ತು ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿಹಿಡಿಯಲು ಧೈರ್ಯ ಮತ್ತು ಶಕ್ತಿ ಬೇಕು' ಎಂದು ಅವರು ಅಭಿಪ್ರಾಯಪಟ್ಟರು.

'ಮಹಿಳೆಯಾಗಿ ಅತ್ಯಂತ ಸಣ್ಣ ಪ್ರದೇಶದಿಂದ ಬಂದ ನನಗೆ ವಕೀಲಿಕೆ ಮಾಡುವ ಸ್ಥಳವನ್ನು ಆಗಾಗ್ಗೆ ಬದಲಾಯಿಸುವಂತಹ ಅನಿವಾರ್ಯತೆಯಿತ್ತು. ವೃತ್ತಿಯಲ್ಲಿ ಉಳಿಯಲು ಸಾಕಷ್ಟು ಶ್ರಮಪಟ್ಟಿದ್ದೇನೆ. ಕಠಿಣ ಪರಿಶ್ರಮ, ಬದ್ಧತೆಯಿಂದ ಇಲ್ಲಿಗೆ ತಲುಪಿದ್ದೇನೆ' ಎಂದರು. ಕೆಎಸ್‌ಬಿಸಿ ಅಧ್ಯಕ್ಷ ವಿ.ಡಿ.ಕಾಮರೆಡ್ಡಿ ಅಭಿನಂದನೆ ಪತ್ರವನ್ನು ಓದಿದರು.

ಸೂರ್ಯಘರ್ ಯೋಜನೆ ಅಪಾರ್ಟ್‌ಮೆಂಟ್‌ಗಳಲ್ಲಿ ಸಭೆ

ಬೆಂಗಳೂರು: 'ನಗರದಲ್ಲಿನ ಅಪಾರ್ಟ್‌ಮೆಂಟ್ ನಿವಾಸಿಗಳು ಪಿ.ಎಂ ಸೂರ್ಯಘರ್ ಯೋಜನೆಯಡಿ ಚಾವಣಿಯಲ್ಲಿ ಸೌರ ವಿದ್ಯುತ್ ಉತ್ಪಾದನೆಗೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಜತೆ ಕೈ ಜೋಡಿಸಬೇಕು' ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್.ಶಿವಶಂಕರ್ ಹೇಳಿದರು.



ಪಿ.ಎಂ ಸೂರ್ಯಘರ್ ಯೋಜನೆ ಅನುಷ್ಠಾನ ಕುರಿತು ನಿಗಮದ ಕಚೇರಿಯಲ್ಲಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಅಪಾರ್ಟ್‌ಮೆಂಟ್ ನಿವಾಸಿಗಳ ಜತೆ ಅವರು ಚರ್ಚೆ ನಡೆಸಿದರು.

'ಬೆಸ್ಕಾಂ ಕ್ಷೇತ್ರಾಧಿಕಾರಿಗಳು ಮುಂದಿನ ದಿನಗಳಲ್ಲಿ ಅಪಾರ್ಟ್‌ಮೆಂಟ್ ಸಂಘದ ಪದಾಧಿಕಾರಿಗಳನ್ನು ಸಂಪರ್ಕಿಸಿ ಯೋಜನೆ ಅನುಷ್ಠಾನಕ್ಕೆ ಅವರ ಮನವೊಲಿಸಲಿದ್ದಾರೆ. ಗ್ರಾಹಕರು ಚಾವಣಿ ಸೌರ ಘಟಕ ಅಳವಡಿಸಿಕೊಳ್ಳಲು ಅಗತ್ಯ ಸಹಾಯ ನೀಡಲು ಬೆಸ್ಕಾಂ ಸದಾ ಸಿದ್ಧವಿದೆ' ಎಂದರು.

ಯೋಜನೆಗೆ ಕೇಂದ್ರ ಸರ್ಕಾರದಿಂದ ದೊರೆಯುವ ಆರ್ಥಿಕ ಸಹಾಯ, ರಾಷ್ಟ್ರೀಯ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸುವ ವಿಧಾನ, ವಿದ್ಯುತ್ ಬಿಲ್ ಉಳಿತಾಯ, ಪರಿಸರ ಸಂರಕ್ಷಣೆಗೆ ನೀಡುವ ಕೊಡುಗೆ ಕುರಿತು ಮಾಹಿತಿ ನೀಡಲಾಯಿತು.

ಚಾವಣಿ ಸೌರ ಘಟಕಗಳಿಗೆ ಗ್ರಿಡ್ ಸಂಪರ್ಕ ಹಾಗೂ ನೆಟ್ ಮೀಟರಿಂಗ್ ವ್ಯವಸ್ಥೆ ಒದಗಿಸುವಲ್ಲಿ ವಿದ್ಯುತ್ ವಿತರಣೆ ಸಂಸ್ಥೆಗಳ ಪಾತ್ರವನ್ನೂ ವಿವರಿಸಲಾಯಿತು. ಅಪಾರ್ಟ್‌ಮೆಂಟ್‌ಗಳ ಸಾಮೂಹಿಕ ಪ್ರದೇಶಗಳಾದ ಲಿಫ್ಟ್, ನೀರಿನ ಪಂಪ್, ಬೆಳಕಿನ ವ್ಯವಸ್ಥೆಗಳಿಗೆ ಸೌರ ವಿದ್ಯುತ್ ಬಳಕೆ ಮಾಡಿದರೆ ವಿದ್ಯುತ್ ವೆಚ್ಚವನ್ನು ಗಮನಾರ್ಹವಾಗಿ ಕಡಿಮೆ ಮಾಡಬಹುದು ಎಂದು ಸಭೆಯಲ್ಲಿ ತಿಳಿಸಲಾಯಿತು.

137 ಅರ್ಜಿ ಸ್ವೀಕಾರ: ಈ ಯೋಜನೆಯಡಿ ಬೆಸ್ಕಾಂ ವ್ಯಾಪ್ತಿಯಲ್ಲಿ 4.87 ಮೆಗಾವಾಟ್ ಸಾಮರ್ಥ್ಯದ ಛಾವಣಿ ಸೌರ ವಿದ್ಯುತ್ ಘಟಕಗಳು ಅಳವಡಿಕೆಯಾಗಿದ್ದು, ಇದುವರೆಗೆ 137 ಅರ್ಜಿಗಳು ಬಂದಿವೆ' ಎಂದು ಮಾಹಿತಿ ನೀಡಿದರು.

ನಿರ್ಭೀತಿಯಿಂದ ಓಡಾಡುವಂತಾದ 'ಮೆಜೆಸ್ಟಿಕ್'




ಉಪ್ಪಾರಪೇಟೆ ಪೊಲೀಸರು ಇನ್‌ಸ್ಪೆಕ್ಟರ್ ಟಿ. ಸತೀಶ್ ಕುಮಾರ್ ನೇತೃತ್ವದಲ್ಲಿ ಮೆಜೆಸ್ಟಿಕ್ ಪಾದಚಾರಿ ಮೇಲ್ಸೇತುವೆ, ಬಿಎಂಟಿಸಿ ಬಸ್ ನಿಲ್ದಾಣ, ಸುತ್ತಮುತ್ತ ಪ್ರತಿ ದಿನ ಎರಡು ಬಾರಿ ಪಥ ಸಂಚಲನ ಮಾಡಿ ಅನೈತಿಕ ಚಟುವಟಿಕೆಗಳನ್ನು ನಿಯಂತ್ರಿಸುತ್ತಿದ್ದಾರೆ (ಎಡಚಿತ್ರ). ಮೆಜೆಸ್ಟಿಕ್ ಪಾದಚಾರಿ ಮೇಲ್ಸೇತುವೆಯಲ್ಲಿ ಅನಧಿಕೃತ ವ್ಯಾಪಾರ, ಅನೈತಿಕ ಚಟುವಟಿಕೆ ಇಲ್ಲದೇ ಸ್ವಚ್ಛಂದವಾಗಿ ಕಂಡಿತು – ಪ್ರಜಾವಾಣಿ ಚಿತ್ರಗಳು: ರಂಜು ಪಿ.

'ಬಂದೋಬಸ್ತ್ ಮುಂದುವರಿಯಲಿ'



ನವೀನ ಮಳವಳ್ಳಿ

'ನಾನು ಬಹಳ ಸಮಯದಿಂದ ಬಸ್, ರೈಲ್ವೆ ಸ್ಟೇಷನ್‌ಗೆ ಊರಿಗೆ ಹೋಗಲು ಪಾದಚಾರಿ ಮೇಲ್ಸೇತುವೆಯನ್ನು ಬಳಸುತ್ತಿದ್ದೇನೆ. ಮರ್ಯಾದಸ್ಥರು ಓಡಾಡಲು ಸಾಧ್ಯವೇ ಇಲ್ಲದ ಪರಿಸ್ಥಿತಿ ಇತ್ತು. ಆದರೂ ಅನಿವಾರ್ಯವಾಗಿ ಜನರು ಸಂಚರಿಸುತ್ತಿದ್ದರು. ಕೆಲವು ದಿನಗಳಿಂದ ಈಚೆಗೆ ಪೊಲೀಸರ ಬಂದೋಬಸ್ತ್‌ನಿಂದಾಗಿ ಕುಟುಂಬ ಸಮೇತ ಎಲ್ಲರೂ ಓಡಾಡುವ ಸ್ಥಿತಿಗೆ ಮರಳಿದೆ' ಎಂದು ಪ್ರಯಾಣಿಕ ನವೀನ ಮಳವಳ್ಳಿ ತಿಳಿಸಿದರು.

ಪೊಲೀಸರು ನಿಗಾ ವಹಿಸಿರುವುದರಿಂದ ಸಾರ್ವಜನಿಕರಿಗೆ ಒಳ್ಳೆಯದಾಗಿದೆ. ಇದನ್ನು ನಾಲ್ಕು ದಿನ ಮಾಡಿ ನಿಲ್ಲಿಸಬಾರದು. ಬಂದೋಬಸ್ತ್ ಮುಂದುವರಿಯಬೇಕು. ವೇಶ್ಯಾವಾಟಿಕೆ, ಸುಲಿಗೆ, ಕಳ್ಳತನ ಪ್ರಕರಣಗಳು ಮರುಕಳಿಸಬಾರದು ಎಂದು ಅವರು ಆಗ್ರಹಿಸಿದರು.

ನಿತ್ಯ ಪಥಸಂಚಲನ ನಡೆಸಿ, ಬಂದೋಬಸ್ತ್ ಕೈಗೊಳ್ಳುತ್ತಿರುವ ಪೊಲೀಸರು

ವರದಿ ಪರಿಣಾಮ

• ಬಾಲಕೃಷ್ಣಪಿ.ಎಚ್.

ಬೆಂಗಳೂರು: ಸುಲಿಗೆಕೋರರ, ಕಳ್ಳಕಾಕರ, ವೇಶ್ಯಾವಾಟಿಕೆಯ ಹಾವಳಿಗೆ ಈಡಾಗಿದ್ದ 'ಮೆಜೆಸ್ಟಿಕ್'ನಲ್ಲಿ ಕಳೆದ ಒಂದು ತಿಂಗಳಿನಿಂದ ಪರಿಸ್ಥಿತಿ ಬದಲಾಗಿದೆ. ಪೊಲೀಸರು ಪ್ರತಿದಿನ ಎರಡು ಬಾರಿ ಪಥ ಸಂಚಲನ ಮಾಡುತ್ತಿದ್ದಾರೆ. ಜನರು ನಿರ್ಭೀತಿಯಿಂದ ಓಡಾಡುವಂತಾಗಿದೆ.

ಬಿಎಂಟಿಸಿ ಬಸ್ ನಿಲ್ದಾಣ, ಗುಬ್ಬಿ ತೋಟದಪ್ಪ ರಸ್ತೆ, ಧನ್ವಂತರಿ ರಸ್ತೆ ಸಂಪರ್ಕ ಕಲ್ಪಿಸುವ ಪಾದಚಾರಿ ಮೇಲ್ಸೇತುವೆ, ರೈಲು ನಿಲ್ದಾಣದ ಕಡೆಗೆ ಸಾಗುವ ಅಂಡರ್ ಪಾಸ್‌ಗಳು ಅಪಾಯಕಾರಿ ಸ್ಥಳಗಳಾಗಿ ಪರಿವರ್ತನೆಗೊಂಡಿದ್ದವು. ರಾತ್ರಿ ಹೊತ್ತಿಗೆ ಒಂಟಿಯಾಗಿ ಸಂಚರಿಸುವುದೇ ಕಷ್ಟವಾಗಿತ್ತು. ಹೆಣ್ಣು ಮಕ್ಕಳು ಹೋಗುತ್ತಿದ್ದರೆ 'ಬೆಲೆವೆಣ್ಣು'ಗಳೆಂದು ತಿಳಿದು ಕರೆಯುವುದು ಒಂದು ಕಡೆಯಾದರೆ, ಪುರುಷರು ಒಂಟಿಯಾಗಿ ಹೋದರೆ ಸುಲಿಗೆ ಮಾಡಲಾಗುತ್ತಿತ್ತು. ಪಾದಚಾರಿ ಮೇಲ್ಸೇತುವೆಯು ಲೈಂಗಿಕ ಕಾರ್ಯಕರ್ತೆಯರ, ಲಿಂಗತ್ವ ಅಲ್ಪಸಂಖ್ಯಾತರ ತಾಣವಾಗಿತ್ತು.

ಈ ಸಮಸ್ಯೆಗಳ ಬಗ್ಗೆ 'ಮೆಜೆಸ್ಟಿಕ್ ಅಕ್ರಮಗಳ ಹಾವಳಿ' ಎಂಬ ವರದಿ ಮೂಲಕ 'ಪ್ರಜಾವಾಣಿ' ಬೆಳಕು ಚೆಲ್ಲಿತ್ತು. ಪೊಲೀಸ್ ಇಲಾಖೆ ಎಚ್ಚೆತ್ತುಕೊಂಡು ಸಮಸ್ಯೆ ಬಗೆಹರಿಸುವಂತೆ ಸ್ಥಳೀಯ ಪೊಲೀಸ್ ಠಾಣೆಗೆ ಅಧಿಕಾರಿಗಳು ಸೂಚನೆ ನೀಡಿದ್ದರು. ಈ ನಡುವೆ ಯುವತಿಯರ ಮೊಬೈಲ್ ಕಿತ್ತುಕೊಂಡು ಓಡಿದ ಕಿಡಿಗೇಡಿಯನ್ನು ಹಿಡಿದು ಸ್ಥಳೀಯರು ಥಳಿಸಿದ್ದರು. ಪೊಲೀಸರ ನಿಷ್ಕ್ರಿಯತೆ ಬಗ್ಗೆ ಮತ್ತೆ 'ಪ್ರಜಾವಾಣಿ'ಯಲ್ಲಿ ವರದಿ ಬಂದ ಬಳಿಕ ಕಟ್ಟುನಿಟ್ಟಿನ ಕ್ರಮ ಜಾರಿಯಾಗಿದೆ.

ಉಪ್ಪಾರಪೇಟೆ ಪೊಲೀಸರು ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಪಥಸಂಚಲನ ಮಾಡುತ್ತಿದ್ದಾರೆ. ಉಳಿದ ಸಮಯದಲ್ಲಿ ಅಲ್ಲಲ್ಲಿ ಪೊಲೀಸರನ್ನು ನಿಯೋಜಿಸಲಾಗಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಅವರಿಗೆ ನೀಡಲಾಗಿದೆ.

'ಕೆಲವರು ಮಾಡುವ ಅನುಚಿತ ವರ್ತನೆಯಿಂದಾಗಿ ನಗರದ ಪ್ರತಿಷ್ಠೆ ಹಾಳಾಗುತ್ತಿತ್ತು. ಬಸ್ ನಿಲ್ದಾಣದ ಹೆಸರೂ ಹಾಳಾಗಿತ್ತು. ಪೊಲೀಸ್ ಇಲಾಖೆಗೂ ಕೆಟ್ಟ ಹೆಸರು ತಂದಿತ್ತು. ಬೇರೆ ಬೇರೆ ಪೊಲೀಸ್ ಠಾಣೆಗಳ 15ಕ್ಕೂ ಅಧಿಕ ಪೊಲೀಸರನ್ನು ನಿಯೋಜಿಸಿರುವುದರಿಂದ ಸಮಸ್ಯೆ ನಿಯಂತ್ರಣಕ್ಕೆ ಬಂದಿದೆ. ಮೇಲ್ಸೇತುವೆ ಮೇಲೆ ಲೈಂಗಿಕ ಕಾರ್ಯಕರ್ತೆಯರನ್ನು, ಲಿಂಗತ್ವ ಅಲ್ಪಸಂಖ್ಯಾತರನ್ನು ಪ್ರವೇಶಿಸಲು ಬಿಡುತ್ತಿಲ್ಲ' ಎಂದು ಪೊಲೀಸರೊಬ್ಬರು ತಿಳಿಸಿದರು.

'ಪಾದಚಾರಿ ಮೇಲ್ಸೇತುವೆಯಲ್ಲಿ ಈಗ ವೇಶ್ಯಾವಾಟಿಕೆಗೆ ಗ್ರಾಹಕರನ್ನು ಕಾದು ಕುಳಿತುಕೊಳ್ಳುವ ಲೈಂಗಿಕ ಕಾರ್ಯಕರ್ತೆಯರು, ಲಿಂಗತ್ವ ಅಲ್ಪಸಂಖ್ಯಾತರು ಕಾಣುತ್ತಿಲ್ಲ. ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ರೈಲು ನಿಲ್ದಾಣಗಳಿಗೆ ಜನರು ಯಾವುದೇ ಅಳುಕು ಇಲ್ಲದೇ ಸಂಚರಿಸುತ್ತಿದ್ದಾರೆ' ಎಂದು ಬಿಎಂಟಿಸಿ ನೌಕರರು ಮಾಹಿತಿ ನೀಡಿದರು.

ಲಾಂಛನ, ಟ್ಯಾಗ್ ಲೈನ್ ಸ್ಪರ್ಧೆ

ಬೆಂಗಳೂರು: ಭವಿಷ್ಯದ ಬೆಂಗಳೂರು ನಗರ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಹೊಸ ಬಡಾವಣೆ, ವಸತಿ ಸಂಕೀರ್ಣ ನಿರ್ಮಾಣ ಮತ್ತು ಮೂಲಭೂತ ಸೌಕರ್ಯ ಒದಗಿಸುವಲ್ಲಿ ಮುಂಚೂಣಿಯಲ್ಲಿದೆ. ಈ ನಿಟ್ಟಿನಲ್ಲಿ ಹೊಸ ಲಾಂಛನ ವಿನ್ಯಾಸ ಮತ್ತು ಟ್ಯಾಗ್ ಲೈನ್ ಸ್ಪರ್ಧೆ ಏರ್ಪಡಿಸಿದೆ.

ಬಿಡಿಎ ಲೇಔಟ್, ವಸತಿ ಸಂಕೀರ್ಣ, ವೆಬ್‌ಸೈಟ್, ನಾಮಫಲಕ ಮತ್ತು ಅಧಿಕೃತ ಕಾಗದ ಪತ್ರಗಳಲ್ಲಿ ಈ ವಿಜೇತ ಲಾಂಛನ, ಟ್ಯಾಗ್‌ಲೈನ್ ರಾರಾಜಿಸಲಿದೆ.

ಅತ್ಯುತ್ತಮ ಲಾಂಛನ ವಿನ್ಯಾಸ ಮತ್ತು ಟ್ಯಾಗ್ ಲೈನ್ ವಿಜೇತರು ₹1 ಲಕ್ಷ ನಗದು ಬಹುಮಾನ ಪಡೆಯಲಿದ್ದು (ಟಿಡಿಎಸ್ ಷರತ್ತಿಗೆ ಒಳಪಟ್ಟು), 18 ವರ್ಷ ಮೇಲ್ಪಟ್ಟ ಕನ್ನಡಿಗರು ಇದರಲ್ಲಿ ಭಾಗವಹಿಸಬಹುದು. ಒಬ್ಬರು ಒಂದು ಲಾಂಛನ, ಒಂದು ಟ್ಯಾಗ್ ಲೈನ್ ಮಾತ್ರ ಸಲ್ಲಿಸಬಹುದು. ಕನ್ನಡ, ಇಂಗ್ಲಿಷ್ ಅಥವಾ ಎರಡೂ ಭಾಷೆಗಳಲ್ಲಿ ಟ್ಯಾಗ್ ಲೈನ್‌ಗಳಿರಬಹುದು.

ಅತ್ಯುನ್ನತ ಗುಣಮಟ್ಟದ ಜೆಪಿಇಜಿ, ಪಿಎನ್‌ಜಿ, ಪಿಡಿಎಫ್‌ನಲ್ಲಿ ಲಾಂಛನ ಸಲ್ಲಿಸಬೇಕು. ಲಾಂಛನ ಯಾವುದೇ ಟ್ರೇಡ್ ಮಾರ್ಕ್, ಕೃತಿ ಸ್ವಾಮ್ಯತೆಯನ್ನು ಉಲ್ಲಂಘಿಸಬಾರದು.

ಟ್ಯಾಗ್ ಲೈನ್‌ಗಳು ಬಿಡಿಎ ಗುರಿ ಮತ್ತು ಉದ್ದೇಶವನ್ನು ಚಿಕ್ಕದಾಗಿ, ಸ್ಪಷ್ಟವಾಗಿ ಪ್ರತಿಬಿಂಬಿಸಬೇಕು. ಸ್ವಂತಿಕೆಯನ್ನು ಹೊಂದಿರಬೇಕು. ಟ್ಯಾಗ್ ಲೈನ್‌ಗಳು ಓದಲು ಸುಲಭವಾಗಿದ್ದು, 8 ಪದಗಳನ್ನು ಮೀರದಂತೆ ಸಾರ್ವಜನಿಕ ಸಂವಹನಕ್ಕಾಗಿ ಸೂಕ್ತವಾಗಿಬೇಕು. ಎಐ ಮುಖಾಂತರ ಸೃಷ್ಟಿಸಿದ್ದು ಮತ್ತು ನಕಲು ಮಾಡಿರುವುದು ಸ್ಪರ್ಧೆಗೆ ಅನರ್ಹವಾಗಿರುತ್ತವೆ.

https://bdakarnataka.in/ ವೆಬ್‌ಸೈಟ್‌ನಲ್ಲಿ ಪ್ರವೇಶ ಪತ್ರ ಸಲ್ಲಿಸಬೇಕಾಗಿದ್ದು, ಪ್ರವೇಶಪತ್ರ ಸಲ್ಲಿಸಲು ಮಾರ್ಚ್ 24 ಕೊನೆಯ ದಿನ. ಮಾಹಿತಿಗೆ ಇ ಮೇಲ್- bdacontests@gmail.com, ಸಹಾಯವಾಣಿ 94831 66622 (24x7), ವಾಟ್ಸ್‌ಆ್ಯಪ್ -94831 66622 ಸಂಪರ್ಕಿಸಬಹುದಾಗಿದೆ.

ಹಣ ಅಕ್ರಮ ವರ್ಗಾವಣೆ ಕಾಯ್ದೆ ಅಡಿ ದಾಖಲಾಗಿದ್ದ ಪ್ರಕರಣ

ಮುಡಾ: ದಿನೇಶ್ ವಿರುದ್ಧದ ವಿಚಾರಣೆಗೆ ತಡೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಹಂಚಿಕೆಯಲ್ಲಿ ಅಕ್ರಮ ಎಸಗಿದ ಆರೋಪಕ್ಕೆ ಸಂಬಂಧಿಸಿದಂತೆ ಹಿಂದಿನ ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ವಿರುದ್ಧದ ಹಣ ಅಕ್ರಮ ವರ್ಗಾವಣೆ ಕಾಯ್ದೆ (ಪಿಎಂಎಲ್‌ಎ) ಅಡಿ ದಾಖಲಿಸಿರುವ ಪ್ರಕರಣದ ವಿಚಾರಣೆ ನಡೆಸದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಹೈಕೋರ್ಟ್ ನಿರ್ಬಂಧಿಸಿದೆ.

ಈ ಕುರಿತಂತೆ ದಿನೇಶ್ ಕುಮಾರ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಅರ್ಜಿದಾರ ದಿನೇಶ್ ಕುಮಾರ್ ಪರ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ. ಚೌಟ ಹಾಗೂ ಜಾರಿ ನಿರ್ದೇಶನಾಲಯ (ಇ.ಡಿ) ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್ ಅವರ ವಾದ-ಪ್ರತಿವಾದವನ್ನು ಆಲಿಸಿದ ನ್ಯಾಯಪೀಠ, ವಿಚಾರಣೆಯನ್ನು ಇದೇ 26ಕ್ಕೆ ಮುಂದೂಡಿತು.

'ಈ ಪ್ರಕರಣದ ವಿಚಾರಣೆಯನ್ನು ಪಿಎಂಎಲ್‌ಎ ಅಡಿ ಸ್ಥಾಪಿತವಾಗಿರುವ ವಿಶೇಷ ನ್ಯಾಯಾಲಯ ನಡೆಸಬೇಕೇ ವಿನಾ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಅಲ್ಲ' ಎಂದು ಆಕ್ಷೇಪಿಸಿ, ದಿನೇಶ್ ಕುಮಾರ್ ಆಕ್ಷೇಪಿಸಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಪ್ರಕರಣ: 'ದಿನೇಶ್ ಕುಮಾರ್ ಮುಡಾ ಆಯುಕ್ತರಾಗಿದ್ದ ಅವಧಿಯಲ್ಲಿ ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡು ಅನರ್ಹರಿಗೆ ಅಕ್ರಮವಾಗಿ ನಿವೇಶನ ಹಂಚಿಕೆ ಮಾಡಿದ್ದಾರೆ' ಎಂಬ ಆರೋಪ ಎದುರಿಸುತ್ತಿದ್ದಾರೆ.

ಈ ಸಂಬಂಧ ಪಿಎಂಎಲ್‌ಎ ಅಡಿ ಪ್ರಕರಣ ದಾಖಲಿಸಿಕೊಂಡಿದ್ದ ಇ.ಡಿ, ದಿನೇಶ್ ಅವರನ್ನು 2025ರ ಸೆಪ್ಟೆಂಬರ್ 17ರಂದು ಬಂಧಿಸಿತ್ತು. ಅಕ್ಟೋಬರ್ 5ರಂದು ಅವರಿಗೆ ಸೇರಿದ ₹40 ಕೋಟಿ ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿತು. 2025ರ ನವೆಂಬರ್ 19ರಂದು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿತು.

'ಅನರ್ಹರಿಗೆ ಒಟ್ಟು ₹450 ಕೋಟಿಗೂ ಅಧಿಕ ಬೆಲೆ ಬಾಳುವ 283 ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿದ್ದಾರೆ' ಎಂದು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಆರ್.ಡಿ.ಪಾಟೀಲ ಜಾಮೀನು ಅರ್ಜಿ ತಿರಸ್ಕೃತ

'ಪಿಎಸ್‌ಐ ಸೇರಿದಂತೆ ಹಲವು ನೇಮಕಾತಿ ಅಕ್ರಮಗಳ ಹಿಂದಿನ ರೂವಾರಿ ಎನ್ನಲಾದ ಆರ್.ಡಿ.ಪಾಟೀಲ್ ಎಂದು ಹೆಸರಾದ ರುದ್ರಗೌಡ ಪಾಟೀಲ್‌ಗೆ ಅಕ್ರಮ ಎಸಗುವುದೇ ಚಟವಾಗಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, ಜಾಮೀನು ನೀಡಲು ನಿರಾಕರಿಸಿದೆ.

ಈ ಸಂಬಂಧ ರುದ್ರಗೌಡ ಪಾಟೀಲ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ರಾಜೇಶ್ ಕೆ. ರೈ ಅವರಿದ್ದ ಏಕಸದಸ್ಯ ನ್ಯಾಯಪೀಠ (ಕಲಬುರಗಿ) ಜಾಮೀನು ಮಂಜೂರು ಮಾಡಲು ನಿರಾಕರಿಸಿ ಆದೇಶಿಸಿದೆ.

'ನೇಮಕಾತಿ ಪರೀಕ್ಷೆಗಳಲ್ಲಿ ಅಕ್ರಮ ಎಸಗುವ ಮತ್ತು ಕ್ರಿಮಿನಲ್ ಪಿತೂರಿಗಳಲ್ಲಿ ಪಾಟೀಲ ವಹಿಸಿರುವ ಪಾತ್ರವನ್ನು ಪ್ರಾಥಮಿಕ ಸಾಕ್ಷ್ಯದಲ್ಲಿ ಪ್ರಾಸಿಕ್ಯೂಷನ್ ದೃಢಪಡಿಸಿದೆ. ಪಾಟೀಲ ಖರೀದಿಸಿದ ಮೊಬೈಲ್ ಫೋನ್‌ಗಳು ಮತ್ತು ಸಿಮ್ ಕಾರ್ಡ್‌ಗಳನ್ನು ತನಿಖಾಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಅರ್ಜಿದಾರರು ಮೇಲ್ನೋಟಕ್ಕೆ ಹಲವು ನೇಮಕಾತಿ ಅಕ್ರಮಗಳಲ್ಲಿ ಭಾಗಿಯಾಗಿರುವುದು ಕಂಡುಬಂದಿದೆ' ಎಂದು ನ್ಯಾಯಪೀಠ ಹೇಳಿದೆ. ಕೋಕಾ (ಕರ್ನಾಟಕ ರಾಜ್ಯ ಸಂಘಟಿತ ಅಪರಾಧಗಳ ನಿಯಂತ್ರಣ ಕಾಯ್ದೆ-2000) ಕಾಯ್ದೆ ಅಡಿಯಲ್ಲಿ ರುದ್ರಗೌಡ ಪಾಟೀಲ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ.

₹6 ಸಾವಿರ ಲಂಚ ವೈದ್ಯೆ ಲೋಕಾಯುಕ್ತ ಬಲೆಗೆ

ತುಮಕೂರು: ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಿ ಲೆನ್ಸ್ ಅಳವಡಿಸಲು ₹6 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಜಿಲ್ಲಾ ಆಸ್ಪತ್ರೆ ವೈದ್ಯೆ ಸವಿತಾ, ಸಹಾಯಕ ಹೊರಗುತ್ತಿಗೆ ನೌಕರ ಮನೋಜ್ ಆಸ್ಪತ್ರೆಯಲ್ಲಿ ಸೋಮವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ನಗರದ ಉಪ್ಪಾರಹಳ್ಳಿಯ ಆಟೊ ಚಾಲಕ ಅವಿನಾಶ್ ತಮ್ಮ ತಾಯಿ ಮಂಗಳಮ್ಮ ಅವರನ್ನು ಕಣ್ಣಿನ ಶಸ್ತ್ರ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ತಜ್ಞ ವೈದ್ಯೆ ಸವಿತಾ ಕಣ್ಣು ಪರೀಕ್ಷಿಸಿದ್ದರು. ಪೊರೆ ಬೆಳೆದಿದೆ, ಶಸ್ತ್ರಚಿಕಿತ್ಸೆ ಮಾಡಬೇಕು. ಶಸ್ತ್ರಚಿಕಿತ್ಸೆಯ ಲೆನ್ಸ್‌ಗೆ ₹6 ಸಾವಿರ ಕೊಡಬೇಕು ಎಂದು ಬೇಡಿಕೆ ಇಟ್ಟಿದ್ದರು.

ಈ ಬಗ್ಗೆ ಅವಿನಾಶ್ ಸೋಮವಾರ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಜಿಲ್ಲಾ ಆಸ್ಪತ್ರೆಯಲ್ಲಿ ಸವಿತಾ ಸೂಚನೆ ಮೇರೆಗೆ ಮನೋಜ್ ಹಣ ತೆಗೆದುಕೊಳ್ಳುವಾಗ ಅಧಿಕಾರಿಗಳು ದಾಳಿ ನಡೆಸಿದ್ದರು.

ಲೋಕಾಯುಕ್ತ ಇನ್‌ಸ್ಪೆಕ್ಟರ್ ಟಿ.ರಾಜು ಹಣದ ಸಮೇತ ಮನೋಜ್‌ರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಸವಿತಾ ಹೆಸರು ಹೇಳಿದ್ದಾರೆ. ನಂತರ ಇಬ್ಬರನ್ನು ಬಂಧಿಸಲಾಯಿತು.

ಡಾನ್ಲಾ ಟೆಕ್ನಾಲಜೀಸ್ ಇಂಡಿಯಾಗೆ ಪ್ರಶಸ್ತಿ

ಬೆಂಗಳೂರು: ವಾಹನ ಸುರಕ್ಷತೆಯಲ್ಲಿ ವಿ2ಎಕ್ಸ್ ಆವಿಷ್ಕಾರಕ್ಕಾಗಿ ಡಾನ್ಲಾ ಟೆಕ್ನಾಲಜೀಸ್ ಇಂಡಿಯಾ ಲಿಮಿಟೆಡ್ ರಾಷ್ಟ್ರೀಯ ಪ್ರಶಸ್ತಿ ಪಡೆದಿದೆ ಎಂದು ಡಾನ್ಲಾ ಗ್ರೂಪ್ ಅಧ್ಯಕ್ಷ ರಾಜು ದಂಡು ತಿಳಿಸಿದರು.

ವಿ2ಎಕ್ಸ್ ಗ್ರೀನ್ ಕಾರಿಡಾರ್ ಪ್ರಾಜೆಕ್ಟ್ ಫಾರ್ ಪ್ರಯಾರಿಟಿ ಆ್ಯಂಡ್ ಎಮರ್ಜೆನ್ಸಿ ಮೊಬಿಲಿಟಿ ಯೋಜನೆಗಾಗಿ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಪ್ರಶಸ್ತಿ ಪ್ರದಾನ ಮಾಡಿದರು ಎಂದು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಡಾನ್ಲಾ ಸಂಸ್ಥೆಯ ನೆಕ್ಸ್ಟ್ ಜನರೇಷನ್ ಸಿಕ್ಯೂರ್ ವಿ2ಎಕ್ಸ್ ಪ್ಲ್ಯಾಟ್‌ಫಾರ್ಮ್ ಹಾಗೂ ವೆಹಿಕಲ್ ಟು ವೆಹಿಕಲ್ (ವಿಟುವಿ) ಸಂವಹನ ವ್ಯವಸ್ಥೆಯ ಮೂಲಕ ಆಂಬುಲೆನ್ಸ್ ಮುಂತಾದ ತುರ್ತು ವಾಹನಗಳಿಗೆ ಟ್ರಾಫಿಕ್ ಜಂಕ್ಷನ್‌ಗಳಲ್ಲಿ ಸಿಗ್ನಲ್ ಆದ್ಯತೆಯನ್ನು ಒದಗಿಸುವ ಮೂಲಕ ಈ ವಾಹನಗಳು ಆಸ್ಪತ್ರೆಗೆ ವೇಗವಾಗಿ ತಲುಪಲು ಸಹಾಯ ಮಾಡುವ ತಂತ್ರಜ್ಞಾನ ಇದಾಗಿದೆ. ಸಾರಿಗೆ ವ್ಯವಸ್ಥೆಗಳ ಅಭಿವೃದ್ಧಿಗೆ ಮಹತ್ವದ ಕೊಡುಗೆಯಾಗಿದೆ' ಎಂದು ತಿಳಿಸಿದರು.

ಚಿಟಿಕೆ ಸುದ್ದಿ

‘ಇಂಧನ ದಕ್ಷ ಎಲ್‌ಇಡಿ’ ಬೀದಿ ದೀಪ ಅಳವಡಿಕೆ

ಬೆಂಗಳೂರು: ಎಲ್ಲ ವಾರ್ಡ್‌ಗಳಲ್ಲಿ ವಿದ್ಯುತ್ ಉಳಿತಾಯ ಮಾಡುವ ಉದ್ದೇಶದಿಂದ ‘ಇಂಧನ ದಕ್ಷ ಎಲ್‌ಇಡಿ’ ಬೀದಿ ದೀಪಗಳನ್ನು ಅಳವಡಿಸುವ ಯೋಜನೆಯನ್ನು ಉತ್ತರ ನಗರ ಪಾಲಿಕೆಯಲ್ಲಿ ಜಾರಿಗೆ ತರಲಾಗಿದೆ.

ಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಕಾರ್ಯಾದೇಶ ನೀಡಲಾಗಿದೆ. ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಮೂರು ವಾರ್ಡ್‌ಗಳು ಹಾಗೂ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಐದು ಹೊಸ ವಾರ್ಡ್‌ಗಳಲ್ಲಿ ಎಲ್‌ಇಡಿ ಬೀದಿ ದೀಪಗಳನ್ನು ಅಳವಡಿಸಲಾಗುತ್ತದೆ.

ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 1,24,591 ಬೀದಿ ದೀಪಗಳಿದ್ದು, ಅದರಲ್ಲಿ 64,898 ಬೀದಿ ದೀಪಗಳಲ್ಲಿ ಎಲ್‌ಇಡಿ ಇಲ್ಲ. ಈಗಾಗಲೇ ಚಾಲ್ತಿಯಲ್ಲಿರುವ ದೀಪಗಳನ್ನು ‘ಇಂಧನ ದಕ್ಷ ಎಲ್‌ಇಡಿ’ ದೀಪಗಳಾಗಿ ಬದಲಾಯಿಸುವ ಕಾರ್ಯ ನಡೆಯುತ್ತಿದ್ದು, 37,257 ಎಲ್‌ಇಡಿ ಬೀದಿ ದೀಪ ಅಳವಡಿಸಲಾಗಿದೆ. ಈ ಯೋಜನೆಯ ಮೂಲಕ ವಿದ್ಯುತ್ ಬಳಕೆ ಕಡಿಮೆಯಾಗುವ ಜೊತೆಗೆ ಬೀದಿಗಳಲ್ಲಿ ಉತ್ತಮ ಬೆಳಕು ಒದಗಿಸುವುದಕ್ಕೂ ಸಹಕಾರಿಯಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

‘ಒಗ್ಗಟ್ಟಿನಿಂದ ಧ್ವನಿ ಎತ್ತಲು ನಿರ್ಧಾರ’

ಬೆಂಗಳೂರು: ಬಜೆಟ್‌ನಲ್ಲಿನ ಜನವಿರೋಧಿ ನೀತಿಗಳು ಮತ್ತು ಅನುದಾನ ಹಂಚಿಕೆಯಲ್ಲಿನ ತಾರತಮ್ಯದ ವಿರುದ್ಧ ಒಗ್ಗಟ್ಟಿನಿಂದ ಧ್ವನಿ ಎತ್ತಲು ಬಿಜೆಪಿ ಮತ್ತು ಜೆಡಿಎಸ್ ಶಾಸಕರ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕರ ಕೊಠಡಿಯಲ್ಲಿ ಸೋಮವಾರ ಮಧ್ಯಾಹ್ನ ನಡೆದ ಸಭೆಯಲ್ಲಿ ಬಜೆಟ್‌ನಲ್ಲಿನ ತಾಂತ್ರಿಕ ಅಂಶಗಳು ಮತ್ತು ಸಾರ್ವಜನಿಕ ಹಿತಾಸಕ್ತಿಯ ವಿಚಾರಗಳನ್ನು ಸದನದಲ್ಲಿ ಹೇಗೆ ಪ್ರಸ್ತಾಪಿಸಬೇಕು ಎಂಬ ಬಗ್ಗೆ ಶಾಸಕರಿಗೆ ಮಾರ್ಗದರ್ಶನ ನೀಡಲಾಯಿತು.

2026-27ನೇ ಸಾಲಿನ ಬಜೆಟ್‌ನ ಲೋಪದೋಷಗಳನ್ನು ಎತ್ತಿ ತೋರಿಸಲು ಮತ್ತು ಸದನದಲ್ಲಿ ಪರಿಣಾಮಕಾರಿಯಾಗಿ ಚರ್ಚೆ ನಡೆಸುವ ಉದ್ದೇಶದಿಂದ ವಿಧಾನ ಪರಿಷತ್‌ನ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಸಭೆ ನಡೆಸಿ ಚರ್ಚಿಸಿದರು. ಉಭಯ ಪಕ್ಷಗಳ ಪ್ರಮುಖ ನಾಯಕರು ಉಪಸ್ಥಿತರಿದ್ದರು.

ಮತದಾರರ ಪರಿಷ್ಕೃತ ಕರಡು ಪಟ್ಟಿ ಪ್ರಕಟ

5 ನಗರ ಪಾಲಿಕೆಗಳ ವಾರ್ಡ್‌ವಾರು ಪಟ್ಟಿ ಆಕ್ಷೇಪಣೆ ಸಲ್ಲಿಸಲು 16ರವರೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳ ವಾರ್ಡ್‌ವಾರು ಮತದಾರರ ಪರಿಷ್ಕೃತ ಕರಡು ಪಟ್ಟಿಯನ್ನು ಸೋಮವಾರ ಪ್ರಕಟಿಸಲಾಗಿದ್ದು, ಕರಡು ಪಟ್ಟಿಯಲ್ಲಿದ್ದ ಮತದಾರರ ಸಂಖ್ಯೆಗಿಂತ ಸುಮಾರು ಒಂದು ಸಾವಿರದಷ್ಟು ಮತದಾರರು ಕಡಿಮೆಯಾಗಿದ್ದಾರೆ

2026ರ ಜನವರಿ 19ರಂದು ಐದು ನಗರ ಪಾಲಿಕೆ ವಾರ್ಡ್‌ಗಳ ಮತದಾರರ ಕರಡು ಪಟ್ಟಿ ಪ್ರಕಟಿಸಲಾಗಿತ್ತು. ರಾಜಕೀಯ ಪಕ್ಷಗಳು ಹಾಗೂ ನಾಗರಿಕರಿಂದ ಹಲವು ದೂರುಗಳು ಬಂದ ಹಿನ್ನೆಲೆಯಲ್ಲಿ ರಾಜ್ಯ ಚುನಾವಣಾ ಆಯೋಗ ಪರಿಷ್ಕೃತ ಕರಡು ಪಟ್ಟಿಯನ್ನು ಪ್ರಕಟಿಸಿದೆ.

‘ಕರಡು ಪಟ್ಟಿಯಲ್ಲಿ ಹಲವು ಮತದಾರರ ಹೆಸರು ಎರಡು ವಾರ್ಡ್‌ಗಳಲ್ಲಿತ್ತು. ಮ್ಯಾಟ್ರಿಕ್ಸ್‌ನಲ್ಲಿ ಸಮಸ್ಯೆ ಇತ್ತು ಎಂದು ರಾಜಕೀಯ ಪಕ್ಷಗಳ ಏಜೆಂಟರು ದೂರಿದ್ದರು. ಹೀಗಾಗಿ, ಅದರಲ್ಲಿದ್ದ ಲೋಪದೋಷಗಳನ್ನು ಸರಿಪಡಿಸಿ, ಮಾರ್ಪಾಡು ಮಾಡಿ ಮತದಾರರ ಪರಿಷ್ಕೃತ ಕರಡು ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ’ ಎಂದು ಜಿಲ್ಲಾ ಚುನಾವಣಾಧಿಕಾರಿ ಮಹೇಶ್ವರ್ ರಾವ್ ಅವರು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ತಿಳಿಸಿದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ವಾರ್ಡ್ ಸಂಖ್ಯೆ 51-ಸುಬ್ರಹ್ಮಣ್ಯಪುರದಲ್ಲಿ ಅತಿಹೆಚ್ಚು (54,026) ಮತದಾರರಿದ್ದಾರೆ. ಬೆಂಗಳೂರು ಪೂರ್ವ ನಗರಪಾಲಿಕೆಯ ವಾರ್ಡ್ ಸಂಖ್ಯೆ 16-ಕೊತ್ತೂರು ಅತಿ ಕಡಿಮೆ (10,940) ಮತದಾರರಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ವಾರ್ಡ್‌ವಾರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಆನ್‌ಲೈನ್‌ನಲ್ಲಿ (https://gba.karnataka.gov.in/home) ಎಪಿಕ್ ಸಂಖ್ಯೆ ಅಥವಾ ಅವರ ಹೆಸರಿನ ಮೂಲಕ ಹುಡುಕಬಹುದಾಗಿದೆ. ಸಾರ್ವಜನಿಕರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾದ ಬಗ್ಗೆ ಪರಿಶೀಲಿಸಿಕೊಂಡು ಖಚಿತಪಡಿಸಿಕೊಳ್ಳಬಹುದಾಗಿದೆ. ಒಂದು ವೇಳೆ ಪರಿಷ್ಕೃತ ಪಟ್ಟಿಯಲ್ಲಿ ಹೆಸರು ಇಲ್ಲವಾಗಿದ್ದಲ್ಲಿ ಅಥವಾ ಮತ್ತೊಂದು ವಾರ್ಡ್ ವ್ಯಾಪ್ತಿಯಲ್ಲಿ ಹೆಸರು ಪ್ರಕಟವಾಗಿದ್ದಲ್ಲಿ ಮಾರ್ಚ್ 16ರೊಳಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ಏಪ್ರಿಲ್ 6ರಂದು ಮತದಾರರ ಅಂತಿಮ ಪಟ್ಟಿ ಪ್ರಕಟವಾಗಲಿದೆ ಎಂದರು.

ನೋಂದಾಯಿತ ಮತ್ತು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಪ್ರತಿ ವಾರ್ಡಿನ ಪ್ರತಿ ಮತಗಟ್ಟೆಗೆ ಒಬ್ಬರಂತೆ ಬೂತ್ ಲೆವೆಲ್ ಏಜೆಂಟ್ (ಬಿಎಲ್‌ಎ) ನೇಮಕಾತಿ ಮಾಡಿ ಮತಗಟ್ಟೆ ಅಧಿಕಾರಿಗಳಿಗೆ ಎಲ್ಲಾ ಅರ್ಹ ಮತದಾರರ ನೋಂದಣಿ ಕಾರ್ಯದಲ್ಲಿ ಸಹಕಾರ ನೀಡಲು ಕೋರಲಾಗಿದೆ. ಘನತ್ಯಾಜ್ಯ ನಿಗಮದ ವತಿಯಿಂದ ಮನೆ ಕಸ ಸಂಗ್ರಹಣೆ ಮಾಡುವ ಆಟೋಗಳಲ್ಲಿನ ಧ್ವನಿವರ್ಧಕಗಳ ಮೂಲಕ ಪರಿಷ್ಕೃತ ಕರಡು ಪಟ್ಟಿ ಪ್ರಚಾರ ಮಾಡಲಾಗುವುದು. ಅದರ ಜೊತೆಗೆ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್ ಮತ್ತು ಎಕ್ಸ್ ಖಾತೆಗಳಲ್ಲಿಯೂ ಪ್ರಚಾರ ನೀಡಲಾಗುವುದು ಎಂದು ಹೇಳಿದರು.

‘ಸರ್ಕಾರದ ತೀರ್ಮಾನದಂತೆ ಮೀಸಲಾತಿ’

‘ಐದು ನಗರ ಪಾಲಿಕೆಗಳ ವಾರ್ಡ್‌ಗಳ ಮೀಸಲಾತಿಯನ್ನು ಸರ್ಕಾರದ ತೀರ್ಮಾನದಂತೆ ಪ್ರಕಟಿಸಲಾಗಿದೆ. ಬಂದಿರುವ ಎಲ್ಲ ಆಕ್ಷೇಪಣೆಗಳನ್ನು ಪರಿಗಣಿಸಿ, ಸರ್ಕಾರ ತನ್ನದೇ ತೀರ್ಮಾನವನ್ನು ತೆಗೆದುಕೊಂಡಿದೆ. ಮೀಸಲಾತಿ ನಿಗದಿಪಡಿಸುವ ಬಗ್ಗೆ ಅದರದ್ದೇ ಆದ ಮಾನದಂಡಗಳಿವೆ’ ಎಂದು ಮಹೇಶ್ವರ್ ರಾವ್ ತಿಳಿಸಿದರು.

‘ಜಿಬಿಎ ವ್ಯಾಪ್ತಿಯಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸುವ ಬಗ್ಗೆ ನಮಗೆ ಯಾವುದೇ ಮಾಹಿತಿ ಬಂದಿಲ್ಲ’ ಎಂದು ಅವರು ಹೇಳಿದರು.

ಅಂಕಿ ಅಂಶಗಳು

369 ಐದು ನಗರ ಪಾಲಿಕೆಯಲ್ಲಿರುವ ವಾರ್ಡ್‌ಗಳು

88,92,528 ಐದು ನಗರ ಪಾಲಿಕೆಯಲ್ಲಿರುವ ಒಟ್ಟು ಮತದಾರರು

45,69,752 ಪುರುಷರು

43,21,143 ಮಹಿಳೆಯರು

1,635 ಇತರೆ

8,024 ಮತಗಟ್ಟೆಗಳು

ನಗರ ಪಾಲಿಕೆವಾರು ಮತದಾರರ ಸಂಖ್ಯೆ

ನಗರ ಪಾಲಿಕೆ	ಒಟ್ಟು ವಾರ್ಡ್	ಒಟ್ಟು ಮತಗಟ್ಟೆ	ಮತದಾರರು			
			ಪುರುಷ	ಮಹಿಳೆ	ಇತರೆ	ಒಟ್ಟು
ಬೆಂ. ಪಶ್ಚಿಮ	112	2,482	13,96,470	13,29,635	468	27,26,573
ಬೆಂ. ಉತ್ತರ	72	1,706	9,94,319	9,59,572	381	19,54,272
ಬೆಂ. ದಕ್ಷಿಣ	72	1,614	9,03,348	8,41,040	223	17,44,611
ಬೆಂ. ಕೇಂದ್ರ	63	1,303	7,26,445	6,98,928	303	14,25,676
ಬೆಂ. ಪೂರ್ವ	50	919	5,49,170	4,91,968	258	10,41,396

ಮತದಾರರ ಸಹಾಯವಾಣಿ

ಬೆಂ. ಕೇಂದ್ರ	080-22975803
ಬೆಂ. ಉತ್ತರ	080-22975936
ಬೆಂ. ದಕ್ಷಿಣ	9480685704
ಬೆಂ. ಪೂರ್ವ	9480685706
ಬೆಂ. ಪಶ್ಚಿಮ	9480685703

ಬೆಂಗಳೂರು ದಕ್ಷಿಣ ನಗರ ಪಾಲಿಕೆ

ವಾರ್ಡ್ ಸಂಖ್ಯೆ	ವಾರ್ಡ್ ಹೆಸರು	ಮೀಸಲಾತಿ
ಪದ್ಮನಾಭನಗರ ವಿಧಾನಸಭಾ ಕ್ಷೇತ್ರ		
ವಾರ್ಡ್ 1	ಪದ್ಮನಾಭನಗರ	ಸಾಮಾನ್ಯ (ಮಹಿಳೆ)
ವಾರ್ಡ್ 2	ಕದಿರೇನಹಳ್ಳಿ	ಸಾಮಾನ್ಯ
ವಾರ್ಡ್ 3	ಯಾರಬ್ ನಗರ	ಸಾಮಾನ್ಯ (ಮಹಿಳೆ)
ವಾರ್ಡ್ 4	ಬನಶಂಕರಿ ದೇವಸ್ಥಾನ ವಾರ್ಡ್	ಹಿಂದುಳಿದ ವರ್ಗ ಎ
ವಾರ್ಡ್ 5	ಕಾನೆ ಮುನೇಶ್ವರ ವಾರ್ಡ್	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 6	ಗೌಡನಪಾಳ್ಯ	ಸಾಮಾನ್ಯ (ಮಹಿಳೆ)
ಜಯನಗರ ವಿಧಾನಸಭಾ ಕ್ಷೇತ್ರ		
ವಾರ್ಡ್ 7	ಬೈರಸಂದ್ರ	ಹಿಂದುಳಿದ ವರ್ಗ ಬಿ (ಮಹಿಳೆ)
ವಾರ್ಡ್ 8	ತಿಲಕ್ ನಗರ	ಹಿಂದುಳಿದ ವರ್ಗ ಎ
ವಾರ್ಡ್ 9	ಎನ್.ಎ.ಎಲ್ ಲೇಔಟ್	ಹಿಂದುಳಿದ ವರ್ಗ ಎ
ವಾರ್ಡ್ 10	ಅಬ್ದುಲ್ ಕಲಾಂ ನಗರ	ಹಿಂದುಳಿದ ವರ್ಗ ಎ
ವಾರ್ಡ್ 11	ಜಯನಗರ ಪೂರ್ವ	ಹಿಂದುಳಿದ ವರ್ಗ ಎ
ವಾರ್ಡ್ 12	ಪಟ್ಟಾಭಿರಾಮ ನಗರ	ಹಿಂದುಳಿದ ವರ್ಗ ಬಿ
ವಾರ್ಡ್ 13	ಮಾರೇನಹಳ್ಳಿ ದಕ್ಷಿಣ	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 14	ಜೆ.ಪಿ. ನಗರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 15	ಶಾಕಂಬರಿನಗರ	ಹಿಂದುಳಿದ ವರ್ಗ ಬಿ
ವಾರ್ಡ್ 16	ಸಾರಕ್ಕಿ	ಸಾಮಾನ್ಯ
ಬಿ.ಟಿ.ಎಂ. ಲೇಔಟ್ ವಿಧಾನಸಭಾ ಕ್ಷೇತ್ರ		
ವಾರ್ಡ್ 17	ಎನ್.ಎಸ್. ಪಾಳ್ಯ	ಸಾಮಾನ್ಯ
ವಾರ್ಡ್ 18	ವಿಶ್ವಮಾನವ ಕುವೆಂಪು ವಾರ್ಡ್	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 19	ತಾವರೆಕೆರೆ	ಸಾಮಾನ್ಯ
ವಾರ್ಡ್ 20	ಮಡಿವಾಳ	ಸಾಮಾನ್ಯ
ವಾರ್ಡ್ 21	ಚಿಕ್ಕ ಅಡುಗೋಡಿ	ಹಿಂದುಳಿದ ವರ್ಗ ಎ
ವಾರ್ಡ್ 22	ಎಸ್.ಜಿ. ಪಾಳ್ಯ	ಸಾಮಾನ್ಯ
ವಾರ್ಡ್ 23	ಲಕ್ಕಸಂದ್ರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 24	ಎ. ಆಡುಗೋಡಿ	ಸಾಮಾನ್ಯ (ಮಹಿಳೆ)
ವಾರ್ಡ್ 25	ನ್ಯಾಷನಲ್ ಗೇಮ್ಸ್ ವಿಲೇಜ್	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 26	ಈಜಿಪುರ	ಪರಿಶಿಷ್ಟ ಜಾತಿ
ವಾರ್ಡ್ 27	ಶ್ರೀ ಲಕ್ಷ್ಮೀದೇವಿ ವಾರ್ಡ್	ಹಿಂದುಳಿದ ವರ್ಗ ಬಿ
ವಾರ್ಡ್ 28	ಕೋರಮಂಗಲ ಪೂರ್ವ	ಸಾಮಾನ್ಯ
ವಾರ್ಡ್ 29	ಕೋರಮಂಗಲ ಪಶ್ಚಿಮ	ಪರಿಶಿಷ್ಟ ಪಂಗಡ
ವಾರ್ಡ್ 30	ಜಕ್ಕಸಂದ್ರ	ಹಿಂದುಳಿದ ವರ್ಗ ಎ (ಮಹಿಳೆ)
ಮಹದೇವಪುರ ವಿಧಾನಸಭಾ ಕ್ಷೇತ್ರ		
ವಾರ್ಡ್ 31	ಕಸವನಹಳ್ಳಿ	ಸಾಮಾನ್ಯ (ಮಹಿಳೆ)
ಆನೇಕಲ್ ವಿಧಾನಸಭಾ ಕ್ಷೇತ್ರ		
ವಾರ್ಡ್ 32	ಕೂಡ್ಲು	ಸಾಮಾನ್ಯ
ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ		
ವಾರ್ಡ್ 33	ನಾಗನಾಥಪುರ	ಸಾಮಾನ್ಯ
ವಾರ್ಡ್ 34	ಚಿಕ್ಕತೋಗೂರು	ಸಾಮಾನ್ಯ
ವಾರ್ಡ್ 35	ವಿಶ್ವಪ್ರಿಯ ನಗರ	ಸಾಮಾನ್ಯ
ವಾರ್ಡ್ 36	ಬೇಗೂರು	ಸಾಮಾನ್ಯ
ವಾರ್ಡ್ 37	ಎಲೆನಹಳ್ಳಿ	ಸಾಮಾನ್ಯ (ಮಹಿಳೆ)
ವಾರ್ಡ್ 38	ದೊಡ್ಡಕಮ್ಮನಹಳ್ಳಿ	ಹಿಂದುಳಿದ ವರ್ಗ ಎ
ವಾರ್ಡ್ 39	ಗೊಟ್ಟಿಗೆರೆ	ಹಿಂದುಳಿದ ವರ್ಗ ಎ
ವಾರ್ಡ್ 40	ಅಂಜನಾಪುರ	ಸಾಮಾನ್ಯ (ಮಹಿಳೆ)
ವಾರ್ಡ್ 41	ಕೊತ್ತನೂರು	ಪರಿಶಿಷ್ಟ ಜಾತಿ
ವಾರ್ಡ್ 42	ಆರ್.ಬಿ.ಐ. ಲೇಔಟ್	ಸಾಮಾನ್ಯ (ಮಹಿಳೆ)
ವಾರ್ಡ್ 43	ಭೀರೇಶ್ವರ ನಗರ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 44	ಹರಿ ನಗರ	ಹಿಂದುಳಿದ ವರ್ಗ ಎ
ವಾರ್ಡ್ 45	ಕೋಣನಕುಂಟೆ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 46	ಯಲಚೇನಹಳ್ಳಿ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 47	ಚಂದ್ರನಗರ	ಸಾಮಾನ್ಯ
ವಾರ್ಡ್ 48	ವಸಂತಪುರ	ಸಾಮಾನ್ಯ (ಮಹಿಳೆ)
ವಾರ್ಡ್ 49	ಉತ್ತರಹಳ್ಳಿ	ಪರಿಶಿಷ್ಟ ಜಾತಿ (ಮಹಿಳೆ)
ವಾರ್ಡ್ 50	ಸಾರ್ವಭೌಮ ನಗರ	ಸಾಮಾನ್ಯ
ವಾರ್ಡ್ 51	ಸುಬ್ರಮಣ್ಯಪುರ	ಸಾಮಾನ್ಯ
ಯಶವಂತಪುರ ವಿಧಾನಸಭಾ ಕ್ಷೇತ್ರ		
ವಾರ್ಡ್ 52	ತಲಘಟ್ಟಪುರ	ಸಾಮಾನ್ಯ (ಮಹಿಳೆ)
ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ (175)		
ವಾರ್ಡ್ 53	ಜರಗನಹಳ್ಳಿ	ಸಾಮಾನ್ಯ
ವಾರ್ಡ್ 54	ಕೆಂಗಲ್ ಹನುಮಂತಯ್ಯ ದಕ್ಷಿಣ	ಸಾಮಾನ್ಯ (ಮಹಿಳೆ)
ವಾರ್ಡ್ 55	ಪುಟ್ಟೇನಹಳ್ಳಿ	ಸಾಮಾನ್ಯ (ಮಹಿಳೆ)
ವಾರ್ಡ್ 56	ದೊರೆಸಾನಿಪಾಳ್ಯ	ಸಾಮಾನ್ಯ (ಮಹಿಳೆ)
ವಾರ್ಡ್ 57	ಹುಳಿಮಾವು	ಸಾಮಾನ್ಯ (ಮಹಿಳೆ)
ವಾರ್ಡ್ 58	ಅರಕೆರೆ	ಸಾಮಾನ್ಯ
ವಾರ್ಡ್ 59	ವಿಜಯಾ ಬ್ಯಾಂಕ್ ಲೇಔಟ್	ಸಾಮಾನ್ಯ (ಮಹಿಳೆ)
ವಾರ್ಡ್ 60	ಬಿಳೇಕಹಳ್ಳಿ	ಸಾಮಾನ್ಯ
ವಾರ್ಡ್ 61	ಕೋಡಿ ಚಿಕ್ಕನಹಳ್ಳಿ	ಪರಿಶಿಷ್ಟ ಜಾತಿ
ವಾರ್ಡ್ 62	ದೇವರಚಿಕ್ಕನಹಳ್ಳಿ	ಹಿಂದುಳಿದ ವರ್ಗ ಬಿ (ಮಹಿಳೆ)
ವಾರ್ಡ್ 63	ಬೊಮ್ಮನಹಳ್ಳಿ	ಹಿಂದುಳಿದ ವರ್ಗ ಎ (ಮಹಿಳೆ)
ವಾರ್ಡ್ 64	ಹೊಂಗಸಂದ್ರ	ಸಾಮಾನ್ಯ (ಮಹಿಳೆ)
ವಾರ್ಡ್ 65	ಗಾರ್ವೇಬಾವಿ ಪಾಳ್ಯ	ಸಾಮಾನ್ಯ (ಮಹಿಳೆ)
ವಾರ್ಡ್ 66	ಸಿಂಗಸಂದ್ರ	ಸಾಮಾನ್ಯ (ಮಹಿಳೆ)
ವಾರ್ಡ್ 67	ಬಂಡೇಪಾಳ್ಯ	ಹಿಂದುಳಿದ ವರ್ಗ ಎ
ವಾರ್ಡ್ 68	ಮಂಗಮ್ಮನ ಪಾಳ್ಯ	ಸಾಮಾನ್ಯ
ವಾರ್ಡ್ 69	ಹೊಸಪಾಳ್ಯ	ಸಾಮಾನ್ಯ (ಮಹಿಳೆ)
ವಾರ್ಡ್ 70	ಇಬ್ಲೂರು	ಪರಿಶಿಷ್ಟ ಜಾತಿ
ವಾರ್ಡ್ 71	ಅಗರ	ಸಾಮಾನ್ಯ (ಮಹಿಳೆ)
ವಾರ್ಡ್ 72	ಎಚ್‌ಎಸ್‌ಆರ್ ಲೇಔಟ್	ಸಾಮಾನ್ಯ

ಜಪಾನ್ – ಭಾರತ ಮೊಬಿಲಿಟಿ ಶೃಂಗಸಭೆಯಲ್ಲಿ ವಿಸ್ತೃತ ಚರ್ಚೆ

‘ಇಂಧನ ಆಧಾರಿತ ಸ್ಮಾರ್ಟ್ ಸಾರಿಗೆಗೆ ಒತ್ತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಂದಿನ ಪೀಳಿಗೆಗೆ ಅತ್ಯಾಧುನಿಕ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ತಂತ್ರಜ್ಞಾನದ ಜತೆಗೆ ಹೈಡ್ರೋಜನ್ ಮೊಬಿಲಿಟಿ, ಇಂಧನ ಆಧಾರಿತ ಸ್ಮಾರ್ಟ್ ಸಾರಿಗೆ ವಲಯದಲ್ಲಿ ಭಾರತ ಹಾಗೂ ಜಪಾನ್ ಬಾಂಧವ್ಯ ವೃದ್ಧಿಗೆ ಒತ್ತು ನೀಡುತ್ತಿವೆ’ ಎಂದು ಕೇಂದ್ರ ನೀತಿ ಆಯೋಗದ ಸದಸ್ಯ ವಿ.ಕೆ.ಸಾರಸ್ವತ್ ತಿಳಿಸಿದರು.


ನೀತಿ ಆಯೋಗ ಹಾಗೂ ಜಪಾನ್ ಹಣಕಾಸು, ವ್ಯಾಪಾರ ಮತ್ತು ಕೈಗಾರಿಕಾ ಸಚಿವಾಲಯ ನಗರದಲ್ಲಿ ಸೋಮವಾರ ಆಯೋಜಿಸಿದ್ದ ಜಪಾನ್-ಭಾರತ ಮೊಬಿಲಿಟಿ ಶೃಂಗಸಭೆ-2026 ಉದ್ಘಾಟಿಸಿ ಅವರು ಮಾತನಾಡಿದರು.

‘ಉಭಯ ದೇಶಗಳು ಹಲವಾರು ವರ್ಷಗಳಿಂದ ವಿವಿಧ ಕ್ಷೇತ್ರಗಳಲ್ಲಿ ಬಾಂಧವ್ಯ ಮುಂದುವರಿಸಿಕೊಂಡು ಬಂದಿವೆ. ಆದರೆ, ಹೊಸ ತಲೆಮಾರಿನ ಆಶೋತ್ತರಗಳಿಗೆ ಪೂರಕವಾಗಿ ಯೋಜನೆ ರೂಪಿಸಲಾಗುತ್ತಿದೆ. ಭಾರತವು ಜಪಾನ್‌ಗೆ ಸಾಫ್ಟ್‌ವೇರ್ ಹಾಗೂ ಎಐ ವಲಯದಲ್ಲಿನ ಮಾರುಕಟ್ಟೆ ವಿಸ್ತರಣೆಗೆ ನೆರವಾದರೆ, ಜಪಾನ್ ಶುದ್ಧ ಇಂಧನ, ಮೊಬಿಲಿಟಿ ವಲಯದಲ್ಲಿ ಬಾಂಧವ್ಯ ವೃದ್ಧಿಗೆ ಒತ್ತು ನೀಡಲಿದೆ’ ಎಂದು ಹೇಳಿದರು.

‘ಸಾರಿಗೆ ರೂಪಾಂತರವು ಕೇವಲ ಒಂದು ವಲಯದ ಸುಧಾರಣೆಯಲ್ಲ; ಇದು ಇಂಧನ, ಮೂಲಸೌಕರ್ಯ, ದತ್ತಾಂಶ ಮತ್ತು ಉದ್ಯಮದ ರಚನಾತ್ಮಕ ಮರುವಿನ್ಯಾಸವಾಗಿದೆ. ಈಗ ಹೈಡ್ರೋಜನ್ ಮೊಬಿಲಿಟಿ ಬಳಸಿಕೊಂಡು ಶುದ್ಧ ಇಂಧನದ ಮೂಲಕ ಸ್ಮಾರ್ಟ್ ಸಾರಿಗೆ ವ್ಯವಸ್ಥೆ ಕಡೆಗೆ ಮುಂದಡಿ ಇಡುತ್ತಿದ್ದೇವೆ. ಭವಿಷ್ಯದ ಸುಧಾರಿತ ವಾಹನಗಳನ್ನು ಭಾರತಕ್ಕೆ ಒದಗಿಸಲು ಜಪಾನ್ ಸಿದ್ಧವಿದೆ. ಸಮಗ್ರ ಮೊಬಿಟಲಿ ವೇದಿಕೆಯನ್ನು ಭಾರತ ಸಿದ್ಧಪಡಿಸಿಕೊಳ್ಳಲು ಇದು ನೆರವಾಗಲಿದೆ’ ಎಂದರು.

ಜಪಾನ್‌ನ ಆಟೋಮೋಟಿವ್ ಇಂಟರ್‌ನ್ಯಾಷನಲ್ ಟ್ರೇಡ್ ಪಾಲಿಸಿ ನಿರ್ದೇಶಕ ಕೀಸುಕೆ ಹೊಸೊನುಮಾ ಮಾತನಾಡಿ, ‘ಸಾರಿಗೆ ಕ್ಷೇತ್ರದಲ್ಲಿ ಇಂಗಾಲದ ತಟಸ್ಥತೆಯ ಬದಲಾವಣೆಯು ಹಾದಿಯಷ್ಟೇ ಅಲ್ಲ. ಆಯಾ ಮಾರುಕಟ್ಟೆ ಆರ್ಥಿಕ ವಾಸ್ತವ, ನೀತಿ ಮತ್ತು ಗ್ರಾಹಕರ ಆದ್ಯತೆಗಳ ಆಧಾರದ ಮೇಲೆ ವಿಭಿನ್ನ ಪರಿಹಾರಗಳ ಅಗತ್ಯವಿರುತ್ತದೆ. ಈ ಪ್ರಯಾಣದಲ್ಲಿ ಭಾರತವು ನಿರ್ಣಾಯಕ ಪಾಲುದಾರನಾಗಿದ್ದು, ನಾವೀನ್ಯತೆ, ವಿಸ್ತರಣೆ ಮತ್ತು ಸುಸ್ಥಿರ ಸಾರಿಗೆ ಅಭಿವೃದ್ಧಿಗೆ ಅವಕಾಶ ನೀಡುತ್ತದೆ’ ಎಂದು ತಿಳಿಸಿದರು.

ಜಪಾನ್ ಆರ್ಥಿಕ, ವ್ಯಾಪಾರ ಹಾಗೂ ಕೈಗಾರಿಕಾ ಸಚಿವಾಲಯದ ಹಿರಿಯ ಅಧಿಕಾರಿ ನರಿತೋಶಿ ಟಕಾಯಾಮಾ. ಟೊಯೊಟಾ ಕಂಪನಿಯ ಗೀತಾಂಜಲಿ ಕಿರ್ಲೋಸ್ಕರ್, ಜಪಾನ್‌ನ ರಾಜತಾಂತ್ರಿಕ ಅಧಿಕಾರಿ ಯಮರುಚಿ ಉಪಸ್ಥಿತರಿದ್ದರು.



ಬೆಂಗಳೂರಿನಲ್ಲಿ ಸೋಮವಾರ ನಡೆದ ಜಪಾನ್ ಮತ್ತು ಭಾರತ ಮೊಬಿಲಿಟಿ ಶೃಂಗಸಭೆಯಲ್ಲಿ ಉದ್ಯಮಿ ಗೀತಾಂಜಲಿ ಕಿರ್ಲೋಸ್ಕರ್, ನೀತಿ ಆಯೋಗದ ಸದಸ್ಯ ವಿ.ಕೆ.ಸಾರಸ್ವತ್, ಕೈಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಜಪಾನ್ ತಜ್ಞರು ಭಾಗಿಯಾಗಿದ್ದರು.

‘₹50 ಸಾವಿರ ಕೋಟಿ ಹೂಡಿಕೆ ಆಕರ್ಷಣೆ’

ಕರ್ನಾಟಕ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಸೆಲ್ವಕುಮಾರ್ ಮಾತನಾಡಿ, ‘ಕರ್ನಾಟಕ ಸರ್ಕಾರವು ರೂಪಿಸಿರುವ ಕ್ಲೀನ್ ಮೊಬಿಲಿಟಿ ನೀತಿ 2025–30ರ ಅಡಿಯಲ್ಲಿ ₹50 ಸಾವಿರ ಕೋಟಿ ಹೂಡಿಕೆ ಆಕರ್ಷಣೆ, 1 ಲಕ್ಷ ಉದ್ಯೋಗ ಸೃಷ್ಟಿ ಗುರಿ ಹೊಂದಿದೆ’ ಎಂದು ತಿಳಿಸಿದರು.

‘ಜಪಾನ್‌ನ ಉದ್ಯಮ ವಲಯದೊಂದಿಗೆ ಕರ್ನಾಟಕದ ಸಂಬಂಧ ನಾಲ್ಕು ದಶಕಕ್ಕೂ ಹಿಂದಿನಿಂದ ಇದೆ. ಪ್ರಮುಖ ಕಂಪನಿಗಳು ಬೆಂಗಳೂರಿನಲ್ಲಿ ಘಟಕಗಳನ್ನು ಹೊಂದಿವೆ. ಶುದ್ಧ ಇಂಧನ, ಬ್ಯಾಟರಿ ತಂತ್ರಜ್ಞಾನ, ಸಾಫ್ಟ್‌ವೇರ್ ನಿರೂಪಿತ ವಾಹನಗಳು, ಬಹುಮಾರ್ಗದ ಮೊಬಿಲಿಟಿ ಮುಂದಿನ ಹೆಜ್ಜೆ. ಜಪಾನ್‌ನೊಂದಿಗೆ ಈ ನಿಟ್ಟಿನಲ್ಲಿ ಸಹಯೋಗ ಪಡೆಯಲು ಕರ್ನಾಟಕ ಸದಾ ಸಿದ್ಧವಿದೆ’ ಎಂದು ಹೇಳಿದರು.

‘ಸ್ವಚ್ಛ ಸರ್ವೇಕ್ಷಣಾ: ಅಗ್ರ ಶ್ರೇಣಿಗೆ ಶ್ರಮಿಸಿ’

ಬೆಂಗಳೂರು: ‘ಸ್ವಚ್ಛ ಸರ್ವೇಕ್ಷಣಾ–2026’ ಅಭಿಯಾನದಲ್ಲಿ ಬೆಂಗಳೂರಿಗೆ ಉನ್ನತ ಶ್ರೇಣಿ ಬರಲು ಶ್ರಮವಹಿಸಿ ಕಾರ್ಯನಿರ್ವಹಿಸಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ವತಿಯಿಂದ ‘ಸ್ವಚ್ಛ ಸರ್ವೇಕ್ಷಣಾ–2026’ ಕಾರ್ಯಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಗಣ್ಯರನ್ನು ರಾಯಭಾರಿಗಳಾಗಿ ಅಧಿಕೃತವಾಗಿ ಸೇರ್ಪಡೆಗೊಳಿಸುವ ಕಾರ್ಯಕ್ರಮಕ್ಕೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು.

‘ನಗರದಲ್ಲಿ ಉತ್ಪತ್ತಿಯಾಗುವ ಒಟ್ಟು ತ್ಯಾಜ್ಯದ ಶೇ 45–50ರಷ್ಟು ಭಾಗವನ್ನು ಈಗಾಗಲೇ ಮರುಬಳಕೆ ಮಾಡಲಾಗುತ್ತಿದೆ. ಈ ಸಂಬಂಧ ಮುಂದಿನ ಮೂರ್ನಾಲ್ಕು ವರ್ಷಗಳಲ್ಲಿ ತ್ಯಾಜ್ಯ ನಿರ್ವಹಣೆಯಲ್ಲಿ ಪರಿಣಾಮಕಾರಿ ಮಾರ್ಪಾಡುಗಳನ್ನು ತರಲಾಗುವುದು’ ಎಂದು ತಿಳಿಸಿದರು.

ಹಸಿ ತ್ಯಾಜ್ಯವನ್ನು ಮೂಲದಲ್ಲಿಯೇ ಗೊಬ್ಬರವಾಗಿಸುವುದು, ಪ್ಲಾಸ್ಟಿಕ್ ಅನ್ನು ವಿದ್ಯುತ್ ಘಟಕಗಳಿಗೆ ಕಳುಹಿಸುವುದು, ಕಡಿಮೆ ಮೌಲ್ಯದ ಪ್ಲಾಸ್ಟಿಕ್ ಅನ್ನು ಸಿಮೆಂಟ್ ಕಾರ್ಖಾನೆಗಳಿಗೆ ಕಳುಹಿಸುವ ಮೂಲಕ ಇಪಿಆರ್ ಕ್ರೆಡಿಟ್ ಪಡೆಯಲಾಗುತ್ತಿದೆ. ಭೂಭರ್ತಿಗೆ ಹೋಗುವ ಕಾಂಪ್ಯಾಕ್ಟರ್‌ಗಳ ಸಂಖ್ಯೆ 400ರಿಂದ 260ಕ್ಕೆ ಇಳಿಕೆಯಾಗಿದೆ ಎಂದರು.

‘ನಗರದಾದ್ಯಂತ ತ್ಯಾಜ್ಯದ ಸಮರ್ಪಕ ವಿಂಗಡಣೆ, ತ್ಯಾಜ್ಯ ಸಂಸ್ಕರಣೆ ಹಾಗೂ ಸಾರ್ವಜನಿಕ ಸ್ಥಳಗಳ ನೈರ್ಮಲ್ಯ ಕಾಪಾಡುವಿಕೆಗೆ ಹೆಚ್ಚಿನ ಆದ್ಯತೆ ನೀಡಿ ಕಾರ್ಯನಿರ್ವಹಿಸಲಾಗುತ್ತಿದೆ. ಈ ಬಾರಿಯ ಸ್ವಚ್ಛ ಸರ್ವೇಕ್ಷಣಾದಲ್ಲಿ ಸಾರ್ವಜನಿಕರ ಪ್ರತಿಕ್ರಿಯೆ ಹಾಗೂ ನೇರ ಭಾಗವಹಿಸುವಿಕೆಗೆ ಹೆಚ್ಚು ಒತ್ತು ನೀಡಲಾಗಿದೆ’ ಎಂದು ಬಿಎಸ್‌ಡಬ್ಲ್ಯುಎಂಎಲ್‌ನ ಸಿಇಒ ಕರೀಗೌಡ ಹೇಳಿದರು.

ಸ್ವಚ್ಛ ಸರ್ವೇಕ್ಷಣಾ ರಾಯಭಾರಿಗಳಾಗಿ ಪದ್ಮಶ್ರೀ ಪುರಸ್ಕೃತರಾದ ಮಂಜಮ್ಮ ಜೋಗತಿ, ಚಲನಚಿತ್ರ ನಟ ಅನಿರುದ್ಧ್ ಜಟ್ಕರ್, ಇಂಡಿಯಾ ರೈಸಿಂಗ್ ಟ್ರಸ್ಟ್‌ನ ಮುಖ್ಯಸ್ಥರಾದ ಅರುಣ್ ಪೈ, ಸಮಾಜ ಸೇವಕರಾದ ಕೆ.ಎಂ. ನಾಗರಾಜ್, ಲೆಟ್ಸ್ ಬಿ ದಿ ಚೇಂಜ್ ಸಂಸ್ಥೆಯ ಮುಖ್ಯಸ್ಥ ಅನಿರುದ್ಧ್ ದತ್ ಹಾಗೂ ಸಾಮಾಜಿಕ ಕಾರ್ಯಕರ್ತ ಅಭಿಲಾಷ್ ನಾಯರ್ ಅವರನ್ನು ರಾಯಭಾರಿಗಳಾಗಿ ನೇಮಿಸಲಾಯಿತು.

ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ನಾಗರಿಕರು, ಮೇಲ್ವಿಚಾರಕರು ಹಾಗೂ ಪೌರಕಾರ್ಮಿಕರು ಸೇರಿದಂತೆ 10 ಮಂದಿಯನ್ನು ‘ಸ್ವಚ್ಛತಾ ಚಾಂಪಿಯನ್’ ಆಗಿ ಸನ್ಮಾನಿಸಲಾಯಿತು.

ಮುಖ್ಯಾಂಶಗಳು
- ಕಾರ್ಯಯೋಜನೆ ಅನುಷ್ಠಾನಕ್ಕೆ ಗಣ್ಯರ ಸೇರ್ಪಡೆ
- ಮಂಜಮ್ಮ ಜೋಗತಿ, ಅನಿರುದ್ಧ್ ಜಟ್ಕರ್, ಅರುಣ್ ಪೈ ರಾಯಭಾರಿಗಳು

ಜಯಪ್ರದಾ, ಊರ್ವಶಿ, ಮಹಾಲಕ್ಷ್ಮಿ, ಪ್ರಮೀಳಾ ಜೋಷಾಯ್ , ಮಂಜುಳಾ ಗುರುರಾಜ್‌ಗೆ ಗೌರವ

‘ದಿಟ್ಟ ಮಹಿಳಾ ಪ್ರಶಸ್ತಿ’ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ-ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಚಿತ್ರ ನಟಿಯರಾದ ಜಯಪ್ರದಾ, ಊರ್ವಶಿ, ಮಹಾಲಕ್ಷ್ಮಿ, ಪ್ರಮೀಳಾ ಜೋಷಾಯ್, ಹಿನ್ನೆಲೆ ಗಾಯಕಿ ಮಂಜುಳಾ ಗುರುರಾಜ್ ಅವರಿಗೆ ‘ದಿಟ್ಟ ಮಹಿಳಾ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

ಜಿಬಿಎ ಕೇಂದ್ರ ಕಚೇರಿ ಆವರಣದಲ್ಲಿರುವ ಡಾ. ರಾಜ್‌ಕುಮಾರ್ ಗಾಜಿನ ಮನೆಯಲ್ಲಿ ಸೋಮವಾರ ಆಯೋಜಿಸಿದ್ದ, ವಿಶ್ವ ಮಹಿಳಾ ದಿನಾಚರಣೆ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕಿಯರಿಗೆ ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರರಾವ್ ಮಾತನಾಡಿ, ‘ಜಿಬಿಎ, ಪಾಲಿಕೆಯಲ್ಲಿ ಪೌರ ಕಾರ್ಮಿಕರಿಂದ ಹಿಡಿದು ಉನ್ನತ ಹುದ್ದೆಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿಶ್ವ ಮಹಿಳಾ ದಿನಾಚರಣೆಯಂದು ಟಿ–20 ವಿಶ್ವಕಪ್ ಅನ್ನು ಭಾರತ ಗೆದ್ದಿರುವುದು ದೇಶವೇ ಸಂತೋಷಪಡುವ ವಿಷಯವಾಗಿದೆ’ ಎಂದು ಹೇಳಿದರು.

ಜಯಪ್ರದಾ ಮಾತನಾಡಿ, ‘ತಾಯಿ, ತಂಗಿ, ಅಕ್ಕನಾಗಿ ಕುಟುಂಬದ ಜೊತೆಗೆ ಸಮಾಜದ ಅಭಿವೃದ್ಧಿಗೆ ಶ್ರಮಿಸುವಳು ಮಹಿಳೆ. ನಗರ ಪಾಲಿಕೆಯಲ್ಲೂ ಅನೇಕ ಮಹಿಳೆಯರು ಕಾರ್ಯನಿರ್ವಹಿಸುತ್ತಿದ್ದಾರೆ. ಅವರನ್ನೆಲ್ಲ ಗುರುತಿಸಿ ಪಾಲಿಕೆ ನೌಕರರ ಸಂಘದವರು ಉತ್ತಮ ಕಾರ್ಯ ಮಾಡುತ್ತಿದ್ದಾರೆ’ ಎಂದರು.

ಮಹಾಲಕ್ಷ್ಮಿ ಮಾತನಾಡಿ, ‘ಮಹಿಳೆಯರು ಸ್ವಾಭಿಮಾನಿ, ಸ್ವಾವಲಂಬಿಯಾಗಿ ಬದುಕಬೇಕು. ಮಹಿಳೆಯರ ಧ್ವನಿ ಗಟ್ಟಿಯಾಗಿ ಇರಬೇಕು. ಮಹಿಳೆಯರ ಸಾಧನೆಗಳು ಎಲ್ಲರಿಗೂ ಸ್ಫೂರ್ತಿಯಾಗಿವೆ’ ಎಂದರು.

ವಿವಿಧ ಕ್ಷೇತ್ರಗಳ ಸಾಧಕಿಯರಾದ ಡಾ.ಇಂದಿರಾ ಕಬಾಡೆ, ರೇಣುಕಾ, ಶುಭಾ, ಚೈತ್ರಾ ಅಂಚನ್, ವೀಣಾ ಪೂಜಾರಿ, ಡಾ.ಪ್ರಿಯದರ್ಶಿನಿ, ಶೈಲಜಾ, ಲಕ್ಷ್ಮಿದೇವಿ, ವಾಣಿಶ್ರೀ, ಸಂಧ್ಯಾ ಪ್ರಭು, ಚೈತ್ರಾ ಪೂರ್ಣಿಮಾ, ಆರತಿ ಪ್ರಸಾದ್, ಪೂನಂ ಬೆಳ್ಳಿಯಪ್ಪ, ಶ್ರೀಮತಿ ಲಕ್ಷ್ಮಿ, ದಿವ್ಯ, ವರಲಕ್ಷ್ಮಿ, ವಿಜಯಲಕ್ಷ್ಮಿ, ತನುಜಾ, ಕೃತಿಕಾ ವರಲಕ್ಷ್ಮಿ, ಶಿಲ್ಪಾ, ಪದ್ಮಜಾ ನಾಯಕ್, ಶುಭಮಂಗಳಾ, ಅನಿತಾ ಗ್ರೇಸಿ, ಚಂದ್ರಕಲಾ ಗಂಗಮ್ಮ, ಲತಾ, ತೇಜಾವತಿ ಅವರಿಗೆ ‘ದಿಟ್ಟ ಮಹಿಳಾ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

ಜಿಬಿಎ-ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ.ಅಮೃತ್‌ರಾಜ್, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಷಡಾಕ್ಷರಿ, ಸಚಿವಾಲಯ ನೌಕರರ ಸಂಘದ ಅಧ್ಯಕ್ಷರಾದ ರಮೇಶ ಸಂಗಾ ಉಪಸ್ಥಿತರಿದ್ದರು.



ಮಂಜುಳಾ ಗುರುರಾಜ್, ಪ್ರಮೀಳಾ ಜೋಷಾಯ್, ಊರ್ವಶಿ, ಮಹಾಲಕ್ಷ್ಮಿ, ಜಯಪ್ರದಾ ಅವರಿಗೆ ‘ದಿಟ್ಟ ಮಹಿಳಾ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ವಿನಯಾ ಪ್ರಸಾದ್, ಎ. ಅಮೃತ್‌ರಾಜ್, ಸಿ.ಎಸ್. ಷಡಾಕ್ಷರಿ, ಮಹೇಶ್ವರ್ ರಾವ್, ರಮೇಶ್ ಸಂಗಾ ಉಪಸ್ಥಿತರಿದ್ದರು
ಪ್ರಜಾವಾಣಿ ಚಿತ್ರ

ಐತಿಹಾಸಿಕ ಹಲಸೂರು ಕೆರೆಗೆ ಕಾಯಕಲ್ಪ

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ
•ಅತ್ಯುತ್ತಮ ಮನರಂಜನೆ ತಾಣವಾಗಿಸಲು ಹಲವು ಯೋಜನೆ

ಬ್ರ್ಯಾಂಡ್ ಬೆಂಗಳೂರು

• ಖಲೀಲಅಹ್ಮದ ಶೇಖ

106 ಎಕರೆ ಕೆರೆಯ ವಿಸ್ತೀರ್ಣ

₹24 ಕೋಟಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಒದಗಿಸಿರುವ ಅನುದಾನ

ಬೆಂಗಳೂರು: ನಗರದ ಹೃದಯ ಭಾಗದಲ್ಲಿರುವ ಐತಿಹಾಸಿಕ ಹಲಸೂರು ಕೆರೆಗೆ ಆಧುನಿಕ ಸ್ಪರ್ಶ ನೀಡಲಾಗುತ್ತಿದೆ. ಕೆರೆಯಲ್ಲಿ ದೋಣಿ ವಿಹಾರ, ಉದ್ಯಾನ ಅಭಿವೃದ್ಧಿ, ನಡಿಗೆ ಪಥಗಳ ನಿರ್ಮಾಣ ಹಾಗೂ ಕೆರೆಯ ಸೌಂದರ್ಯೀಕರಣದ ಕಾಮಗಾರಿಗಳು ಭರದಿಂದ ನಡೆಯುತ್ತಿವೆ. ಕೆರೆಯ ಹೂಳು ತೆಗೆಯುವ ಕಾಮಗಾರಿಗೆ ವೇಗ ನೀಡಲಾಗಿದೆ.

ಹಲಸೂರು ಕೆರೆ ಕಾಯಕಲ್ಪ ನೀಡಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮುಂದಾಗಿದೆ. ಅಂದಾಜು 106 ಎಕರೆ ಪ್ರದೇಶದಲ್ಲಿ ಹರಡಿಕೊಂಡಿರುವ ಈ ಕೆರೆಯ ನಡುವೆ ಅಲ್ಲಲ್ಲಿ ನಡುಗಡ್ಡೆಗಳಿವೆ. ಅಲ್ಲಿ ಈಗಾಗಲೇ ಹಸಿರು ತುಂಬಿದ ಮರಗಳಿವೆ. ಇನ್ನಷ್ಟು ವಿಶಿಷ್ಟ ಪ್ರಭೇದದ ಗಿಡಗಳನ್ನು ನೆಡುವ ಮೂಲಕ ಪಕ್ಷಿಗಳನ್ನು ಸೆಳೆಯಲಾಗುತ್ತಿದೆ. ಇದಕ್ಕಾಗಿ ತಜ್ಞರ ನೇತೃತ್ವದಲ್ಲಿ ಯೋಜನೆಯೊಂದನ್ನು ರೂಪಿಸಲಾಗುತ್ತಿದೆ. ಇವು ಕೆರೆಯ ಆಕರ್ಷಣೆಯನ್ನು ಮತ್ತಷ್ಟು ಹೆಚ್ಚಿಸಲಿವೆ. ಬೆಂಗಳೂರು ಪೂರ್ವ ಭಾಗದ ಜನರಿಗೆ ಅತ್ಯುತ್ತಮ ಮನರಂಜನೆ ತಾಣವಾಗಿಸುವ ಪ್ರಯತ್ನ ನಡೆದಿದೆ.

ಸಣ್ಣ ನೀರಾವರಿ ಇಲಾಖೆ ಹಾಗೂ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಎಂಎಫ್) ಅಡಿಯಲ್ಲಿ ₹24 ಕೋಟಿ ಅನುದಾನದಲ್ಲಿ ಕೆರೆಯ ಸಂಪೂರ್ಣ ಹೂಳನ್ನು ತೆಗೆದು (ಡಿಸಿಲ್ಟಿಂಗ್) ಮಾಡುವುದು ಮತ್ತು ಇತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಈಗಾಗಲೇ ಕಾಮಗಾರಿಗೆ ಚಾಲನೆ ನೀಡಿದ್ದು, ಕೆರೆಯ ಕಾಲುದಾರಿಯ ಅಭಿವೃದ್ಧಿ, ಕೆರೆಯ ಸುತ್ತಲೂ ಗ್ರಿಲ್ ಅಳವಡಿಸುವ ಕಾಮಗಾರಿ, ಗೆಬಿಯಾನ್ ಗೋಡೆ ನಿರ್ಮಾಣದ ಕೆಲಸಗಳು ನಡೆಯುತ್ತಿವೆ. ಕೆರೆಯಲ್ಲಿ ತುಂಬಿರುವ ಹೂಳನ್ನು ತೆಗೆಯುವ ಕೆಲಸ ನಡೆಯುತ್ತಿದೆ' ಎಂದು ಜಿಬಿಎ ಕೆರೆ ವಿಭಾಗದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಈಗಾಗಲೇ ಗುಣಮಟ್ಟದ ನಡಿಗೆ ಪಥಗಳನ್ನು ನಿರ್ಮಿಸಲಾಗುತ್ತಿದೆ. ಕೆರೆಯ ನಡುವೆ ಆಕರ್ಷಕ ಕಾರಂಜಿಗಳ ಅಳವಡಿಕೆಗೂ ವ್ಯವಸ್ಥೆ ಮಾಡಲಾಗುತ್ತಿದೆ. ನಗರದ ಜನರ ವಿಹಾರಕ್ಕೆ ಪ್ರಶಸ್ತವಾದ ನೆಲೆಯನ್ನಾಗಿ ಅಭಿವೃದ್ಧಿ ಮಾಡಲಾಗುತ್ತಿದೆ. ಹಲಸೂರು ಕೆರೆಯಲ್ಲಿನ ಹೂಳು ತೆಗೆಯುವುದು, ದ್ವಿಪಥ ಪಾದಚಾರಿ ಮಾರ್ಗ ನಿರ್ಮಾಣ, ಕೆರೆಯ ಸುತ್ತಲೂ ತಡೆ ಗೋಡೆಯನ್ನು ನಿರ್ಮಿಸುವುದು ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕ ರಿಜ್ವಾನ್ ಅರ್ಷದ್ ಅವರು ಚಾಲನೆ ನೀಡಿದ್ದಾರೆ' ಎಂದು ವಿವರಿಸಿದರು.

'ಗಣೇಶ ಮೂರ್ತಿಗಳನ್ನು ವಿಸರ್ಜಿಸುವ ಕಲ್ಯಾಣಿಯ ಹಿಂಭಾಗದಲ್ಲಿರುವ ಒಳಚರಂಡಿಯ ಮೂಲಕ ಕಲುಷಿತ ನೀರು ಕೆರೆಯ ಒಡಲು ಸೇರದಂತೆ ತಡೆಗೋಡೆ ನಿರ್ಮಿಸಲಾಗುತ್ತಿದೆ. ಈಗಾಗಲೇ ಕೆರೆ ಸೇರದಂತೆ ಈ ಭಾಗದಲ್ಲಿ ಹೂಳು ತೆಗೆಯುವ ಕಾಮಗಾರಿ ಪ್ರಾರಂಭಿಸಲಾಗಿದೆ. ಕೆರೆ ಸುತ್ತಲೂ ಇರುವ ತಡೆಗೋಡೆ ಶಿಥಿಲಗೊಂಡಿದ್ದು, ಅದನ್ನು ದುರಸ್ತಿಗೊಳಿಸಿ, ಗ್ರಿಲ್‌ಗಳನ್ನು ಅಳವಡಿಕೆ ಮಾಡಲಾಗುತ್ತಿದೆ' ಎಂದು ಹೇಳಿದರು.

'ಈ ಕೆರೆಯನ್ನು ಅಭಿವೃದ್ಧಿಗೊಳಿಸಿ, ಪ್ರವಾಸಿ ತಾಣವನ್ನಾಗಿ ಮಾಡುವ ಯೋಜನೆ ಹಮ್ಮಿಕೊಳ್ಳಲಾಗಿದೆ. ಕೆರೆಯ ದಡದಲ್ಲಿ ಉದ್ಯಾನ ಜತೆಗೆ ಮಕ್ಕಳ ಮನರಂಜನೆಗಾಗಿ ಆಟಿಕೆಗಳನ್ನು ಅಳವಡಿಕೆ ಮಾಡಲಾಗುತ್ತದೆ. ಇದಕ್ಕಾಗಿ ಡ್ರಾಪ್ ಆಫ್ ಪಾಯಿಂಟ್ ಅನ್ನು ನಿರ್ಮಿಸಲಾಗುತ್ತಿದೆ. ಕೆರೆಯನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಲು ರೂಪುರೇಷೆಗಳನ್ನು ತಯಾರಿಸಲಾಗಿದೆ. ಪಾದಚಾರಿ ಮಾರ್ಗದ ಕಾಮಗಾರಿ ಈಗಾಗಲೇ ಮುಕ್ತಾಯ ಹಂತಕ್ಕೆ ಬಂದಿದೆ' ಎಂದರು.

ಕೆರೆ ಅಭಿವೃದ್ಧಿಗೆ ಪಣ

ಬ್ರ್ಯಾಂಡ್ ಬೆಂಗಳೂರು ಯೋಜನೆ ಅಡಿಯಲ್ಲಿ ಹಲಸೂರು ಕೆರೆ ಅಭಿವೃದ್ಧಿಪಡಿಸಲು ಅನುದಾನ ನೀಡಲಾಗಿದೆ. ದ್ವಿಪಥ ಪಾದಚಾರಿ ಮಾರ್ಗ, ಗ್ರಿಲ್ ಅಳವಡಿಕೆ, ಹೂಳು ತೆಗೆಯುವ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಇದರ ಜೊತೆಗೆ ಕಲ್ಯಾಣಿಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಕೆರೆಯ ಆವರಣಕ್ಕೆ ಪ್ರವೇಶಿಸಲು ಜಾಗ ಇರಲಿಲ್ಲ. ಆದ್ದರಿಂದ ಉದ್ಯಾನ ಸೇರಿದಂತೆ ಎಲ್ಲ ಕಡೆಗೂ ಓಡಾಡಲು ರಸ್ತೆ ಸಂಪರ್ಕ ಕಲ್ಪಿಸಲಾಗುತ್ತಿದೆ. ಕೆರೆಯ ದಡದಲ್ಲಿ ಇರುವ ಉದ್ಯಾನದಲ್ಲಿ ಸಾರ್ವಜನಿಕರು ಕುಳಿತುಕೊಳ್ಳಲು ಬೆಂಚ್‌ಗಳನ್ನು ಹಾಕಲಾಗುತ್ತದೆ' ಎಂದು ಜಿಬಿಎ ಕೆರೆ ವಿಭಾಗದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು. ಕೆಎಸ್‌ಟಿಡಿಸಿ ವತಿಯಿಂದ ಹಲಸೂರು ಕೆರೆಯಲ್ಲಿ ದೋಣಿ ವಿಹಾರ ನಡೆಸುವ ಚಿಂತನೆ ಇದೆ. ಕೆರೆ ತುಂಬಿದ ನಂತರ ದೋಣಿ ವಿಹಾರಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದರು.

'ಹಲಸೂರು ಕೆರೆಯ ಗತವೈಭವ ಮರುಸ್ಥಾಪಿಸಿ'

'ಕೆರೆಯ ನಡುಗಡ್ಡೆಗಳ ತಡೆಗೋಡೆ ಹಾಳಾಗಿದೆ. ಅವುಗಳನ್ನು ಪುನರ್ ನಿರ್ಮಿಸಬೇಕು. ಈ ನಡುಗಡ್ಡೆಗಳಿಗೆ ಹಿಂದೆ ದೇಶ-ವಿದೇಶಗಳ ಹಕ್ಕಿಗಳು ಬರುತ್ತಿದ್ದವು. ಆದರೆ ಈಗ ಬರುತ್ತಿಲ್ಲ. ಅದ್ದರಿಂದ ಈ ಹಕ್ಕಿಗಳನ್ನು ಆಕರ್ಷಿಸಲು ವಿವಿಧ ಬಗೆಯ ಗಿಡಗಳನ್ನು ನೆಟ್ಟು ಬೆಳೆಸಬೇಕು. ಈ ಮೂಲಕ ಕೆರೆಯ ಗತವೈಭವವನ್ನು ಮರುಸ್ಥಾಪಿಸಬೇಕು' ಎಂದು ಹಲಸೂರಿನ ದೇವರಾಜ್ ತಿಳಿಸಿದರು.



ಹಲಸೂರು ಕೆರೆಯಲ್ಲಿ ಜೆಸಿಬಿಯಿಂದ ಹೂಳು ತೆಗೆಯುತ್ತಿದ್ದ ದೃಶ್ಯ — ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಸೋಂಪುರ, ಕಗ್ಗದಾಸಪುರ ಕೆರೆಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ

ಕೆರೆಗಳ ಅವ್ಯವಸ್ಥೆಗೆ ಲೋಕಾಯುಕ್ತರ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್, ಉಪಲೋಕಾಯುಕ್ತ ನ್ಯಾಯಮೂರ್ತಿಗಳಾದ ಕೆ.ಎನ್. ಫಣೀಂದ್ರ ಹಾಗೂ ಬಿ. ವೀರಪ್ಪ ಅವರು ಸೋಂಪುರ, ಕಗ್ಗದಾಸಪುರ ಕೆರೆಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಅಲ್ಲಿನ ಸ್ಥಿತಿ ಕಂಡು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಬಿ.ಎಸ್.ಪಾಟೀಲ್ ಅವರು, ಬನಶಂಕರಿ 6ನೇ ಹಂತದಲ್ಲಿರುವ ಸೋಂಪುರ ಕೆರೆ ಹಾಗೂ ಕೆರೆಯ ಪಕ್ಕದಲ್ಲಿರುವ ಅಂಗಧೀರನಹಳ್ಳಿ ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೆರೆಗೆ ಯಾವುದೇ ನೀರು ಹರಿಯದಂತೆ ಕ್ರಮವಹಿಸಬೇಕು ಹಾಗೂ ಈ ಬಗ್ಗೆ ಕಾಲಕಾಲಕ್ಕೆ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಪರಿಶೀಲಿಸಿದ್ದು, ಕಾರ್ಯಾದೇಶದ ಪ್ರಕಾರ ಅಭಿವೃದ್ಧಿ ಕಾರ್ಯ ಕೈಗೊಂಡು ವರದಿ ಸಲ್ಲಿಸುವಂತೆ ತಿಳಿಸಿದರು.

ಕೆರೆಯ ಒಳಭಾಗಕ್ಕೆ ಬೇಲಿಯನ್ನು ಅಳವಡಿಸುವಂತೆ ಸಂಬಂಧಪಟ್ಟ ಜಿ.ಬಿ.ಎ. ಅಧಿಕಾರಿಗಳಿಗೆ ನಿರ್ದೇಶಿಸುವಂತೆ ಸ್ಥಳದಲ್ಲಿ ಹಾಜರಿದ್ದ ದೂರುದಾರರು ಕೋರಿದರು. ಸ್ಥಳದಲ್ಲಿದ್ದ ಮುಖ್ಯ ಎಂಜಿನಿಯರ್‌ಗೆ ಈ ಬಗ್ಗೆ ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ ಲೋಕಾಯುಕ್ತರು ಸೂಚಿಸಿದರು.

ಬನಶಂಕರಿ 6ನೇ ಹಂತದಲ್ಲಿರುವ ಅಂಗಧೀರನಹಳ್ಳಿ ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಘಟಕದಲ್ಲಿ ದುರ್ವಾಸನೆ, ನೊಣಗಳ ಕಾಟ, ಲಿಚೆಟ್ ಸಮಸ್ಯೆಯನ್ನು ಕಂಡು ಲೋಕಾಯುಕ್ತರು, ಜಲಮಂಡಳಿ ಹಾಗೂ ಜಿ.ಬಿ.ಎ. ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಈ ಎಲ್ಲಾ ಸಮಸ್ಯೆಯನ್ನು ಪರಿಹರಿಸಿ, ವರದಿ ಸಲ್ಲಿಸುವಂತೆ ತಿಳಿಸಿದರು.

ರಸ್ತೆ ಬದಿಗಳಲ್ಲಿ ಕಸ ಹಾಕಿರುವುದನ್ನು ಗಮನಿಸಿದ ಲೋಕಾಯುಕ್ತರು ಕಸವನ್ನು ತೆರವುಗೊಳಿಸಿ, ಈ ಬಗ್ಗೆ ತೆಗೆದುಕೊಂಡ ಕ್ರಮದ ಬಗ್ಗೆ ಮೂರು ದಿನದೊಳಗೆ ವರದಿಯನ್ನು ಸಲ್ಲಿಸುವಂತೆ ಜಿ.ಬಿ.ಎ ಅಧಿಕಾರಿಗಳಿಗೆ ಸೂಚಿಸಿದರು.

ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಸಿ.ವಿ. ರಾಮನಗರದ ಕಗ್ಗದಾಸಪುರ ಕೆರೆಗೆ ಭೇಟಿ ನೀಡಿದರು. ಕೆರೆ ಸುತ್ತಲೂ ಬಫರ್ ವಲಯ ಬಿಟ್ಟಿರಲಿಲ್ಲ. ಕೆರೆಯ ಆವರಣದಲ್ಲಿ ನಿರ್ಮಿಸುತ್ತಿರುವ ಎಸ್.ಟಿ.ಪಿ. ಸಹ ಬಫರ್ ವಲಯದಲ್ಲಿದೆ. ಕೆರೆಯಲ್ಲಿ ಹೂಳು ತೆಗೆಯಲು ₹3 ಕೋಟಿ ವ್ಯಯಿಸಿದ್ದರೂ ಗಿಡಗಂಟಿಗಳು, ಪ್ಲಾಸ್ಟಿಕ್ ವಸ್ತುಗಳು ಇರುವುದು ಕಂಡು ಬಂತು. ಕೆರೆಯ ಆವರಣದಲ್ಲಿ ನಾಯಿಗಳ ಹಾವಳಿ ಹೆಚ್ಚಿದ್ದು, ವಾಯು ವಿಹಾರ ಮಾಡಲು ಬರುವ ಸಾರ್ವಜನಿಕರಿಗೆ ತೊಂದರೆ ಉಂಟಾಗಿದೆ. ಈ ಸಮಸ್ಯೆ ಬಗೆಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಮಲ್ಲೇಶ್ ಪಾಳ್ಯ, ಬಿಇಎಂಎಲ್, ಎಚ್‌ಎಎಲ್ ಆವರಣದ ಗೋಡೆಗಳ ಎರಡೂ ಬದಿ ಹಾಗೂ ಸಾವಿತ್ರಿ ಬಾಪುಲೆ ಕೌಸಲ್ಯ ಭವನದ ಎದುರು ರಸ್ತೆಯ ಎರಡೂ ಬದಿಗಳಲ್ಲಿ ಕಸ ವಿಲೇವಾರಿ ಮಾಡುವಂತೆ ಸಂಬಂಧಪಟ್ಟವರಿಗೆ ಸೂಚನೆ ನೀಡಿದರು.

ಆಸ್ಟಿನ್ ಟೌನ್‌ನಲ್ಲಿರುವ ಕೆಎಸ್‌ಆರ್‌ಟಿಸಿ, ಪೊಲೀಸ್ ವಸತಿ ಗೃಹ ಬಳಿ ಇರುವ ರಾಜಕಾಲುವೆಯಲ್ಲಿ ನೀರು ಸರಾಗವಾಗಿ ಹರಿಯಲು ಕಸ ತೆರವುಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಡಾ.ಸುಶೀಲಾದೇವಿ ದೇಹದಾನ

ಬೈಲಹೊಂಗಲ (ಬೆಳಗಾವಿ ಜಿಲ್ಲೆ): ಇಲ್ಲಿನ ರಾಮಣ್ಣವರ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷೆ, ಆಯುರ್ವೇದ ವೈದ್ಯೆ ಸುಶೀಲಾದೇವಿ ಬಸವಣ್ಣಪ್ಪ ರಾಮಣ್ಣವರ (101) ಅವರು ಸೋಮವಾರ ನಿಧನರಾದರು.



ಅವರ ಅಂತಿಮ ಇಚ್ಛೆಯಂತೆ ತಮ್ಮದೇ ಟ್ರಸ್ಟ್ ಮುಖಾಂತರ ಕೆಎಲ್‌ಇ ಸಂಸ್ಥೆಯ ಬಿ.ಎಂ. ಕಂಕಣವಾಡಿ ಆಯುರ್ವೇದ ಮಹಾವಿದ್ಯಾಲಯಕ್ಕೆ ಮಂಗಳವಾರ ದೇಹದಾನ ಮಾಡಲಾಗುವುದು.

ಸ್ವಾತಂತ್ರ್ಯ ಹೋರಾಟಗಾರ, ವೈದ್ಯರಾಗಿದ್ದ ಪತಿ ಬಿ.ಎಸ್.ರಾಮಣ್ಣವರ ಅವರು 18 ವರ್ಷಗಳ ಹಿಂದೆ ನಿಧನರಾಗಿದ್ದಾರೆ. ತಮ್ಮ ದೇಹವನ್ನು ತಮ್ಮ ಪುತ್ರನೇ ಛೇದನ ಮಾಡಿ ವೈದ್ಯ ವಿದ್ಯಾರ್ಥಿಗಳಿಗೆ ಪಾಠ ಮಾಡಬೇಕು ಎಂದು ಅವರು ಉಯಿಲು ಬರೆದಿದ್ದರು. ಅದರ ಪ್ರಕಾರ, ಪುತ್ರ ಡಾ.ಮಹಾಂತೇಶ ರಾಮಣ್ಣವರ ಅವರು ತಂದೆಯ ದೇಹ ಛೇದಿಸಿ ಪಾಠ ಮಾಡಿದ್ದರು. ಇದು ರಾಷ್ಟ್ರದಾದ್ಯಂತ ಗಮನ ಸೆಳೆದಿತ್ತು. ತಾಯಿ ಸುಶೀಲಾದೇವಿ ಕೂಡ ಅದೇ ರೀತಿಯ ಉಯಿಲು ಬರೆದಿದ್ದಾರೆ.

ಸೋಂಪುರ ಕೆರೆ ರಕ್ಷಣೆಗೆ ಪಂಪಿಂಗ್ ಸ್ಟೇಷನ್

ಜಲಮಂಡಳಿ ಪ್ರಯತ್ನ; ವಿವಿಧ ಇಲಾಖೆಗಳ ಸಹಭಾಗಿತ್ವಕ್ಕೆ ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಂಪುರ ಕೆರೆಯ ಉಳಿವು, ಅಂತರ್ಜಲ ಸಂರಕ್ಷಣೆ, ನೀರು ಶುದ್ಧೀಕರಣದ ಭಾಗವಾಗಿ ಬೆಂಗಳೂರು ಜಲಮಂಡಳಿಯು ನಿರ್ಮಿಸುತ್ತಿರುವ 8 ಎಂಎಲ್‌ಡಿ ಸಾಮರ್ಥ್ಯದ ಒಳಚರಂಡಿ ನೀರು ಪಂಪಿಂಗ್ ಸ್ಟೇಷನ್ ಕಾಮಗಾರಿಗೆ ಚಾಲನೆ ನೀಡಲಾಯಿತು.



ನಗರದ ಸೋಂಪುರ ಕೆರೆ ಒಳಚರಂಡಿ ನೀರು ಪಂಪಿಂಗ್ ಸ್ಟೇಷನ್ ಕಾಮಗಾರಿ ಚಾಲನೆ ಸಮಾರಂಭದಲ್ಲಿ ಲೋಕಾಯುಕ್ತ ಬಿ.ಎಸ್ ಪಾಟೀಲ್, ಜಲಮಂಡಳಿ ಅಧ್ಯಕ್ಷ ಡಾ.ರಾಮಪ್ರಸಾತ್ ಮನೋಹರ್ ಉಪಸ್ಥಿತರಿದ್ದರು.

ಲೋಕಾಯುಕ್ತ ಬಿ.ಎಸ್.ಪಾಟೀಲ್ ಅವರು 'ಮಧ್ಯಂತರ ಒಳಚರಂಡಿ ನೀರು ಪಂಪಿಂಗ್ ಸ್ಟೇಷನ್'(ಐಎಸ್‌ಪಿಎಸ್) ಕಾಮಗಾರಿಗೆ ಸೋಮವಾರ ಚಾಲನೆ ನೀಡಿ, 'ಜಲಮಂಡಳಿ ಕೈಗೊಂಡಿರುವ ಈ ಕ್ರಮ ಕೆರೆ ಸಂರಕ್ಷಣೆಯ ಐತಿಹಾಸಿಕ ಹೆಜ್ಜೆ' ಎಂದು ಮೆಚ್ಚುಗೆ ಸೂಚಿಸಿದರು.

'ಕಲುಷಿತ ನೀರನ್ನು ತಡೆದು ಸಂಸ್ಕರಣಾ ಘಟಕಕ್ಕೆ ಪಂಪ್ ಮಾಡುವ ಮೂಲಕ ತ್ಯಾಜ್ಯ ನೀರು ಸೋಂಪುರ ಕೆರೆಗೆ ಸೇರುವುದನ್ನು ತಪ್ಪಿಸಲಾಗುತ್ತದೆ. ಇದರಿಂದ ಕೆರೆಯ ಅಂತರ್ಜಲ ಮಟ್ಟ ಸುಧಾರಿಸಿ ಸುತ್ತಮುತ್ತಲ ಜನರಿಗೆ ಸುಸ್ಥಿರ ನೀರಿನ ಮೂಲವನ್ನು ಒದಗಿಸುತ್ತದೆ. ಒಳಚರಂಡಿ ನಿರ್ವಹಣೆಯಿಂದಾಗಿ ಲಿಂಗಧೀರನಹಳ್ಳಿ ಮತ್ತು ಸೋಂಪುರ ಪ್ರದೇಶಗಳಲ್ಲಿ ರೋಗಗಳ ಹರಡುವಿಕೆ ಕಡಿಮೆಯಾಗಲಿದೆ' ಎಂದು ಅವರು ಹೇಳಿದರು.

'ಕೆರೆಯ ಉಳಿವಿಗೆ ಪೂರಕವಾಗಿ ಈ ಯೋಜನೆಗೆ ಕಂದಾಯ ಇಲಾಖೆ ಅಗತ್ಯ ಭೂಮಿ ಹಸ್ತಾಂತರಿಸಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ 'ಠೇವಣಿ ಕೊಡುಗೆ ನಿಧಿ' ಒದಗಿಸಿದೆ. ಸಾರ್ವಜನಿಕರ ಹಿತದೃಷ್ಟಿ, ಪರಿಸರ ಸಂರಕ್ಷಣೆ ಯೋಜನೆಯನ್ನು ವಿವಿಧ ಇಲಾಖೆಗಳ ಸಮನ್ವಯದಿಂದ ತ್ವರಿತವಾಗಿ ಕೈಗೆತ್ತಿಕೊಳ್ಳಲಾಗಿದೆ. ಸರ್ಕಾರಿ ಇಲಾಖೆಗಳು ಒಟ್ಟಾಗಿ ಕೆಲಸ ಮಾಡಿದರೆ ಒಳ್ಳೆಯದನ್ನು ಮಾಡಬಹುದು ಎಂಬುದಕ್ಕೆ ಈ ಯೋಜನೆ ಅತ್ಯುತ್ತಮ ಉದಾಹರಣೆಯಾಗಿದೆ' ಎಂದರು.

ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ಮಾತನಾಡಿ, 'ಪರಿಸರ ಸಂರಕ್ಷಣೆ ಮತ್ತು ಆಡಳಿತಾತ್ಮಕ ಹೊಣೆಗಾರಿಕೆ ನಿಟ್ಟಿನಲ್ಲಿ ಲೋಕಾಯುಕ್ತರ ನಿರ್ದೇಶನದಂತೆ ಈ ಕಾಮಗಾರಿಗೆ ಚಾಲನೆ ದೊರೆತಿದೆ. ಲೋಕಾಯುಕ್ತರ ಮುತುವರ್ಜಿಯಿಂದ ಯೋಜನೆಗೆ ವೇಗ ಸಿಗಲಿದೆ' ಎಂದರು.

ಮುಖ್ಯ ಎಂಜಿನಿಯರ್ ರಾಜೀವ್, ಉಪ ಮುಖ್ಯ ಎಂಜಿನಿಯರ್ ಸುಧೀರ್, ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ನಿಧನ ವಾರ್ತೆ

ಇ. ಜಯಪ್ರಕಾಶ್




ಚಿತ್ರದುರ್ಗ: ಮಾಜಿ ಸಚಿವ ಎಚ್. ಏಕಾಂತಯ್ಯ ಅವರ ಪುತ್ರ, ನಗರದ ಜೆಸಿಆರ್ ಬಡಾವಣೆ ನಿವಾಸಿ ಇ.ಜಯ ಪ್ರಕಾಶ್ (67) ಅವರು ಬೆಂಗಳೂರಿನ ಆಸ್ಪತ್ರೆಯಲ್ಲಿ ಸೋಮವಾರ ನಿಧನರಾದರು. ಇವರು ಸಾಮಾಜಿಕ ಜಾಲತಾಣಗಳಲ್ಲಿ 'ಜಹಾಂಪನಾ' ಹೆಸರಿನಲ್ಲಿ ಚುಟುಕು ಬರೆಯುತ್ತಿದ್ದರು.

ಇವರಿಗೆ ತಂದೆ, ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಹಿರಿಯೂರು ತಾಲ್ಲೂಕು ಬಬ್ಬೂರಿನ ತೋಟದಲ್ಲಿ ಮಂಗಳವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೇಗುಲಗಳ 20 ಸಾವಿರ ಆಸ್ತಿ ಇಂಡೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದೂ ಧಾರ್ಮಿಕ ಹಾಗೂ ಧರ್ಮಾದಾಯ ದತ್ತಿಗಳ ಇಲಾಖೆಯ (ಮುಜರಾಯಿ) ಅಡಿಯಲ್ಲಿ ರುವ ದೇವಾಲಯಗಳ ಒಟ್ಟು ಆಸ್ತಿ 40 ಸಾವಿರ ಇದ್ದು, ಅದರಲ್ಲಿ 20 ಸಾವಿರ ಆಸ್ತಿಗಳನ್ನು ಇಂಡೀಕರಣ ಮಾಡಲಾಗಿದೆ ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.



ರಾಮಲಿಂಗಾ ರೆಡ್ಡಿ

ವಿಷನ್ ಗ್ರೂಪ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'2023ರವರೆಗೆ ಕೇವಲ 3,500 ಆಸ್ತಿಗಳನ್ನು ಇಂಡೀಕರಿಸ ಲಾಗಿತ್ತು. ಇಲ್ಲಿವರೆಗೆ 20 ಸಾವಿರ ಆಸ್ತಿಗಳನ್ನು ಇಂಡೀಕರಿಸಲಾಗಿದೆ. ಉಳಿದಿರುವ 20 ಸಾವಿರ ಆಸ್ತಿಗಳನ್ನು ತಿಂಗಳ ಗುರಿಯನ್ನು ದ್ವಿಗುಣಗೊಳಿಸಿ ಇಂಡೀಕರಣ ಪೂರ್ಣಗೊಳಿಸಲು ತೀರ್ಮಾನಿಸಲಾಗಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ದುರಸ್ತಿ ಅವಶ್ಯ ಇರುವ ದೇವಾಲಯಗಳನ್ನು ಗುರುತಿಸಿ ದತ್ತು ನೀಡಿ ಅಭಿವೃದ್ಧಿ ಪಡಿಸಬೇಕು. ಅದಕ್ಕಾಗಿ ಸರಳವಾದ ಮಾರ್ಗಸೂಚಿ ರಚಿಸಬೇಕು. ದತ್ತು ಪಡೆಯಲು ಮುಂದೆ ಬರುವ ಅನಿವಾಸಿ ಭಾರತೀಯರಿಗೆ ಆದ್ಯತೆ ನೀಡಲು ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಎಲ್ಲ ದೇವಾಲಯಗಳ ಆಸ್ತಿಯನ್ನು ಜಿಯೊ ಫೆನ್ಸಿಂಗ್ ಮಾಡಲು ಬೇಕಾದ ಹಣವನ್ನು ಸಾಮಾನ್ಯ ಸಂಗ್ರಹಣಾ ನಿಧಿಯಿಂದ ಒದಗಿಸುವ ಬಗ್ಗೆಯೂ ನಿರ್ಣಯ ಕೈಗೊಳ್ಳಲಾಯಿತು ಎಂದಿದ್ದಾರೆ.

ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯಿಂದ ಸಿ ವರ್ಗದ ದೇವಾಲಯಗಳ ಕಲ್ಯಾಣಿಗಳ ಜೀರ್ಣೋದ್ಧಾರ ಹಾಗೂ ಶೌಚಾಲಯಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು ಎಂದು ವಿವರಿಸಿದ್ದಾರೆ.

'ಮತಾಂತರ ನಿಷೇಧ ಕಾಯ್ದೆ ವಾಪಸ್ ಪಡೆಯದ ಸರ್ಕಾರ'

ಬೆಂಗಳೂರು: ಅಧಿಕಾರಕ್ಕೆ ಬಂದರೆ ಮತಾಂತರ ನಿಷೇಧ ಕಾಯ್ದೆ ರದ್ದುಗೊಳಿಸಲಾಗುವುದು ಎಂದು ಕಾಂಗ್ರೆಸ್ ಭರವಸೆ ನೀಡಿತ್ತು. ಆದರೆ, ಇದುವರೆಗೂ ಕಾಯ್ದೆ ರದ್ದುಪಡಿಸಿಲ್ಲ. ಕಾಯ್ದೆ ದುರ್ಬಳಕೆ ಮಾಡಿಕೊಂಡು ಕ್ರೈಸ್ತರ ಮೇಲೆ ಎಫ್‌ಐಆರ್ ದಾಖಲಿಸಲಾಗುತ್ತಿದೆ ಎಂದು ಕರ್ನಾಟಕ ಕ್ರೈಸ್ತ ಸಂಘಟನೆ ಆರೋಪಿಸಿದೆ.

ಸಂಘಟನೆಯ ಅಧ್ಯಕ್ಷ ಸ್ಟ್ಯಾನ್ಲಿ ಪಿಂಟೊ, ವಕೀಲೆ ಸಲೋಮಿ ಶಿರಿನ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಹಾವೇರಿಯಲ್ಲಿ ಜಮೀನಿನ ವಿವಾದವನ್ನು ತಿರುಚಿ ಮತಾಂತರ ದೂರು ನೀಡಲಾಗಿದೆ. ಸ್ಥಳದಲ್ಲೇ ಇಲ್ಲದ ವೃದ್ಧರು, ಮಹಿಳೆಯರನ್ನೆಲ್ಲ ಸೇರಿಸಿ 20 ಜನರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ' ಎಂದು ತಿಳಿಸಿದರು.

ಮನೆಗಳಲ್ಲಿ, ಚರ್ಚ್‌ಗಳಲ್ಲಿ ಪ್ರಾರ್ಥನೆ ಮಾಡುತ್ತಿರುವಾಗ ಕೆಲವು ಸಂಘಟನೆಗಳು ದಾಳಿ ಮಾಡುತ್ತಿದ್ದಾರೆ. ಇದೆಲ್ಲ ಕಾಯ್ದೆಯ ದುರುಪಯೋಗವಾಗಿದೆ. ಹಾಗಾಗಿ ಮತಾಂತರ ನಿಷೇಧ ಕಾಯ್ದೆಯನ್ನು ಹಿಂಪಡೆಯಬೇಕು. ಇಲ್ಲದಿದ್ದರೆ ಧಾರ್ಮಿಕ ಹಕ್ಕುಗಳ ರಕ್ಷಣೆಗಾಗಿ ರಾಜ್ಯಮಟ್ಟದಲ್ಲಿ ಹೋರಾಟ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಹೈದರಾಬಾದ್ ರೇಸ್

ಚೆರಿ ಷೆವಾಲಿಯರ್ ಗೆಲ್ಲುವ ನಿರೀಕ್ಷೆ

ಕಾಮನ್‌ಲ್ಯಾಂಡ್ ಪ್ಲೇಟ್ ಮಂಗಳವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಚೆರಿ ಷೆವಾಲಿಯರ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 3:30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಕೆಳಕಂಡಂತಿವೆ:

1ನೇ ರೇಸ್: ಟೇಕ್ ಎ ಬ್ರೀತ್ 2, ಲೆಗೊ 3, ಅಶ್ಯೂರ್ಡ್ ಸಕ್ಸಸ್ 5
2ನೇ ರೇಸ್: ಶಾರಂಗ 1, ಲಾ ಕ್ವಿಂಟ 4, ಒಪೇರಾ ಕ್ವೀನ್ 11
3ನೇ ರೇಸ್: ಗ್ರೀಫ್ 9, ಕ್ಲಾರಿಟಿ 11, ಕಾಸ್ಮಿಕೊ 2
4ನೇ ರೇಸ್: ನಾರ್ಥರ್ನ್ ವೇವ್ಸ್ 2, ಕಾರ್ಟೆ ಮಡೇರಾ 5, ಎಮಿರಾಲ್ಡ್ ಟಚ್ 6
5ನೇ ರೇಸ್: ಟೊಶಿರೊ 6, ಡಾರ್ಡನಸ್ 2, ಮಾಸ್ಟರ್ ಕ್ಲಾಸ್ 3
6ನೇ ರೇಸ್: ಚೆರಿ ಷೆವಾಲಿಯರ್ 5, ವಾಕಿಂಗ್ ಥಂಡರ್ 12, ಪ್ಲೆಸಂಟ್ ಸ್ಟಾರ್ 8
7ನೇ ರೇಸ್: ಎಕ್ಸ್‌ಕ್ಲೂಸಿವ್ ಲಕ್ 1, ಗೋಲ್ಡನ್ ಯೂನಿಕಾರ್ನ್ 2, ಸ್ಟಾರ್ ಕ್ರ್ಯೂಯ್ 4

ಉತ್ತಮ ಬೆಟ್: ಶಾರಂಗ

ಜಾಕ್‌ಪಾಟ್	1ನೇ ಟ್ರಿಬಲ್	3ನೇ ಟ್ರಿಬಲ್
3,4,5,6,7	2,3,4	5,6,7

ನಗರದಲ್ಲಿ ಇಂದು

ಅಲೂಮನಿ ವೆಬ್‌ಸೈಟ್ ಹಾಗೂ ಕಚೇರಿಯ ಉದ್ಘಾಟನೆ: ಎಚ್.ಸಿ. ಬಾಲಕೃಷ್ಣ, ಅತಿಥಿಗಳು: ಆರ್. ರವೀಂದ್ರ, ಎ. ಹರೀಶ್, ಜಿ.ಕೆ. ಸತ್ಯಕೀರ್ತಿ, ಎಚ್.ಜಿ. ಬಾಲಗೋಪಾಲ್, ಆಯೋಜನೆ ಮತ್ತು ಸ್ಥಳ: ವಿವೇಕಾನಂದ ಪ್ರಥಮ ದರ್ಜೆ ಕಾಲೇಜು, ರಾಜಾಜಿನಗರ, ಬೆಳಿಗ್ಗೆ 10

ಭೀಮ ಗಾಯನ ವಿಶೇಷ ಸಂಗೀತ ಕಾರ್ಯಕ್ರಮ: ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಜಿ. ಪಲ್ಲವಿ, ಜಿ. ಜಗದೀಶ, ಜಿ. ರಮೇಶ್, ನವೀನ್ ಜೋಸೆಫ್, ಆಯೋಜನೆ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸ್ಥಳ: ಜ್ಞಾನ ಜ್ಯೋತಿ ಸಭಾಂಗಣ, ಡಾ. ಮನ ಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಳಿಗ್ಗೆ 10

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, 'ನಂದಿನಿ ಕುಮಾರಿ ಮಹಿಳಾ ಕೃಷಿ ಉದ್ಯಮಿ ಪ್ರಶಸ್ತಿ' ಪ್ರದಾನ: ಉದ್ಘಾಟನೆ: ಉಮಾ ಮಹದೇವನ್, ಅತಿಥಿಗಳು: ಸಿ.ಎನ್. ಶಿವಪ್ರಕಾಶ್, ವೆಂಕಟರಾಮರೆಡ್ಡಿ ಜೆ. ಪಾಟೀಲ, ಎಲಿಜಬೆಥ್ ಚೆರಿಯನ್, ರೂಪಾ ವಾಸುದೇವನ್, ಕೆ. ಅನ್ನಪೂರ್ಣ, ಸಿ. ಭುವನೇಶ್ವರಿ, ಅಧ್ಯಕ್ಷತೆ: ಎ.ಬಿ. ಪಾಟೀಲ, ಆಯೋಜನೆ ಮತ್ತು ಸ್ಥಳ: ಕೃಷಿ ತಂತ್ರಜ್ಞರ ಕಚೇರಿ, ಬೆಳಿಗ್ಗೆ 10.30

'ಕನ್ನಡ ಪ್ರಮುಖ ಸಣ್ಣ ಕತೆಗಾರರು' ವಿಚಾರಗೋಷ್ಠಿ: ಉದ್ಘಾಟನೆ: ಬಸವರಾಜ ಕಲ್ಗುಡಿ, ಅಧ್ಯಕ್ಷತೆ: ಎಜಾಜ್ ಅಹಮದ್ ಖಾನ್, ಆಯೋಜನೆ: ಕೇಂದ್ರ ಸಾಹಿತ್ಯ ಅಕಾಡೆಮಿ, ಸ್ಥಳ: ಸರ್ಕಾರಿ ಆರ್.ಸಿ. ಕಾಲೇಜು, ಅರಮನೆ ರಸ್ತೆ, ಬೆಳಿಗ್ಗೆ 10.30

ಯುವ ಬರಹಗಾರರ ಚೊಚ್ಚಲ ಕೃತಿಗಳ ಲೋಕಾರ್ಪಣೆ: ನಾಗತಿಹಳ್ಳಿ ಚಂದ್ರಶೇಖರ್, ಅತಿಥಿಗಳು: ಸತೀಶ್ ಕುಲಕರ್ಣಿ, ಬಿ.ಎಸ್. ಮಂಜುನಾಥಸ್ವಾಮಿ, ಅಧ್ಯಕ್ಷತೆ: ಮಾನಸ, ಆಯೋಜನೆ: ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ಲೋಗೊ ಮತ್ತು ಅಧಿಕೃತ ಸಾಮಾಜಿಕ ಜಾಲತಾಣಗಳ ಉದ್ಘಾಟನೆ: ಬಿ. ವೀರಪ್ಪ, ಅಧ್ಯಕ್ಷತೆ: ಜಿ.ಎಸ್. ಸಂಗ್ರೇಶಿ, ಅತಿಥಿಗಳು: ಸುರೇಶ ಕೆ. ವಂಟಿಗೋಡಿ, ಸದಾನಂದ ಎಚ್. ಹೊಸಗೌಡರ್, ಆಯೋಜನೆ ಮತ್ತು ಸ್ಥಳ: ರಾಜ್ಯ ಚುನಾವಣಾ ಆಯೋಗ, ಬಳ್ಳಾರಿ ರಸ್ತೆ, ಬೆಳಿಗ್ಗೆ 11.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ರಾಜ್ಯದಲ್ಲಿ ಕೃಷಿ ಸಾಲ ₹2.10 ಲಕ್ಷ ಕೋಟಿ

ನವದೆಹಲಿ: ನಬಾರ್ಡ್‌ನ ಇತ್ತೀಚಿನ ವರದಿಯ ಪ್ರಕಾರ, ಕರ್ನಾಟಕದಲ್ಲಿ ಕೃಷಿಕರು ಮಾಡಿರುವ ಸಾಲ ₹2.10 ಲಕ್ಷ ಕೋಟಿ ಆಗಿದೆ.

ಲೋಕಸಭೆಯಲ್ಲಿ ಡಿಎಂಕೆ ಸದಸ್ಯ ಎ. ರಾಜಾ ಅವರು ಪ್ರಶ್ನೋತ್ತರ ಅವಧಿಯಲ್ಲಿ ಸೋಮವಾರ ಕೇಳಿದ ಪ್ರಶ್ನೆಗೆ ಉತ್ತರ ನೀಡಿರುವ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ, 'ತಮಿಳುನಾಡಿನಲ್ಲಿ ಅತಿ ಹೆಚ್ಚು ರೈತರು ಕೃಷಿ ಸಾಲ ಪಡೆದಿದ್ದಾರೆ. ಕೃಷಿ ಸಾಲದಲ್ಲಿ ಕರ್ನಾಟಕ ಐದನೇ ಸ್ಥಾನದಲ್ಲಿದೆ' ಎಂದು ಮಾಹಿತಿ ನೀಡಿದ್ದಾರೆ.

ಕರ್ನಾಟಕದಲ್ಲಿ ರೈತರು ₹88,800 ಕೋಟಿ ಬೆಳೆ ಸಾಲ ಪಡೆದಿದ್ದರೆ, ₹ 1.21 ಲಕ್ಷ ಕೋಟಿ ಅವಧಿ ಸಾಲ ಪಡೆದಿದ್ದಾರೆ.

ಸರ್ಕಾರಿ ಶಾಲೆಗೇ ಪ್ರವೇಶ: ಮಧು ಪತ್ರ

'3 ವರ್ಷಗಳಲ್ಲಿ 800 ಸರ್ಕಾರಿ ಶಾಲೆಗಳು ಕೆಪಿಎಸ್‌ಗಳಾಗಿ ಮೇಲ್ದರ್ಜೆಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳಿಗೇ ತಮ್ಮ ಮಕ್ಕಳನ್ನು ಸೇರಿಸಲು ಪೋಷಕರ ಮನವೊಲಿಸುವಂತೆ ರಾಜ್ಯದ ಎಲ್ಲ ಶಾಸಕರು, ಎಸ್‌ಡಿಎಂಸಿ ಅಧ್ಯಕ್ಷರು-ಸದಸ್ಯರು, ಶಿಕ್ಷಕರು ಪ್ರಯತ್ನಿಸಬೇಕು ಎಂದು ಕೋರಿ ಪತ್ರ ಬರೆಯಲು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ನಿರ್ಧರಿಸಿದ್ದಾರೆ.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ಹಣಮಂತ ನಿರಾಣಿ ಸೇರಿದಂತೆ ಕೆಲ ಸದಸ್ಯರ ಪ್ರಶ್ನೆಗಳಿಗೆ ಉತ್ತರ ನೀಡಿದ ಅವರು, 'ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡುವಂತೆ ಸರ್ಕಾರಿ ಶಾಲೆಗಳನ್ನು ಸಜ್ಜುಗೊಳಿಸಲಾಗುತ್ತಿದೆ' ಎಂದರು.

'ಒಂದನೇ ತರಗತಿಗೆ ಮಕ್ಕಳ ದಾಖಲಾತಿ ಖಾತ್ರಿಪಡಿಸಲು 6,456 ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ತೆರೆಯಲಾಗಿದೆ. ಖಾಸಗಿ ಶಾಲೆಗಳ ದಾಖಲಾತಿ ಹೆಚ್ಚಳಕ್ಕೆ ಪೋಷಕರ ಇಂಗ್ಲಿಷ್ ಭಾಷಾ ಮೋಹವೇ ಕಾರಣ ಎನ್ನುವ ಅಂಶವನ್ನು ಮನಗಂಡು 2025-26ನೇ ಸಾಲಿನಲ್ಲಿ 9,522ಶಾಲೆಗಳಲ್ಲಿ 1ರಿಂದ 5ನೇ ತರಗತಿಯವರೆಗೆ ದ್ವಿಭಾಷಾ ಮಾಧ್ಯಮ ತರಗತಿಗಳನ್ನು ಆರಂಭಿಸಲಾಗಿದೆ' ಎಂದು ವಿವರಿಸಿದರು.

ಮಕ್ಕಳಿಗೆ ಪೂರ್ವ ಪ್ರಾಥಮಿಕದಿಂದ ದ್ವಿತೀಯ ಪಿಯುವರೆಗೂ ಶಿಕ್ಷಣವನ್ನು ಖಾತ್ರಿಗೊಳಿಸಲು ಒಂದೇ ಸೂರಿನ ಅಡಿ ಶಿಕ್ಷಣಕ್ಕಾಗಿ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ತೆರೆಯಲಾಗಿದೆ. ಪ್ರಸ್ತುತ ಇರುವ 309 ಕೆಪಿಎಸ್‌ಗಳಲ್ಲಿ 2,72,464 ವಿದ್ಯಾರ್ಥಿಗಳು ಇದ್ದಾರೆ. ಮೂರು ವರ್ಷಗಳಲ್ಲಿ 800 ಸರ್ಕಾರಿ ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಮೇಲ್ದರ್ಜೆಗೇರಿಸಲಾಗುತ್ತಿದೆ ಎಂದರು.



ವಿಧಾನಪರಿಷತ್ ಕಲಾಪದ ವೇಳೆ ಸಚಿವ ಮಧು ಬಂಗಾರಪ್ಪ ಮಾತನಾಡಿದರು. ಸಚಿವೆ ಲಕ್ಷ್ಮೀ ಹೆಬ್ಬಾಳಕರ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

'ಬಡವರು, ಪರಿಶಿಷ್ಟರು, ಹಿಂದುಳಿದ ವರ್ಗಗಳ ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿದ್ದು, ಅವರಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕು ಎನ್ನುವುದು ಸರ್ಕಾರದ ಉದ್ದೇಶ. ಅದಕ್ಕಾಗಿ ಕೆಪಿಎಸ್ ಬಲಪಡಿಸಲಾಗುತ್ತಿದೆ. ದೂರದ ಗ್ರಾಮಗಳಿಂದ ಬರುವ ಮಕ್ಕಳಿಗೆ ಬಿಸಿಯೂಟ, ಉಚಿತ ಪಠ್ಯ ಜತೆಗೆ ಬಸ್ ಸೌಕರ್ಯವನ್ನೂ ಕಲ್ಪಿಸಲಾಗುತ್ತಿದೆ. ಹಾಗಾಗಿ, ಶಾಸಕರು, ವಿಧಾನಪರಿಷತ್ ಸದಸ್ಯರು ಸೇರಿದಂತೆ ಎಲ್ಲ ಜನ ಪ್ರತಿನಿಧಿಗಳು ಪಕ್ಷಭೇದ ಮರೆತು ತಮ್ಮ ಕ್ಷೇತ್ರ ವ್ಯಾಪ್ತಿಯ ಜನರಿಗೆ ಸರ್ಕಾರಿ ಶಾಲೆಗಳ ಬಗ್ಗೆ ಮನವರಿಕೆ ಮಾಡಿಕೊಡಬೇಕು. ಪೋಷಕರ ಮನವೊಲಿಸಿ ಮಕ್ಕಳನ್ನು ಸೇರಿಸುವಂತೆ ಮನವೊಲಿಸಬೇಕು ಎಂದು ಮನವಿ ಮಾಡಲಾಗುವುದು. ಈ ಕುರಿತು ವಾರದ ಒಳಗೆ ಪತ್ರ ಬರೆಯಲಾಗುವುದು' ಎಂದರು.

'1 ನೇ ತರಗತಿಯಿಂದ ಕಂಪ್ಯೂಟರ್ ಶಿಕ್ಷಣ'

'1 ನೇ ತರಗತಿಯಿಂದಲೇ ಕಂಪ್ಯೂಟರ್ ಶಿಕ್ಷಣ ನೀಡಲಾಗುತ್ತಿದೆ. ಪ್ರೌಢಶಾಲಾ ಹಂತದಲ್ಲೇ ಕೌಶಲ ತರಬೇತಿ ಕಡ್ಡಾಯಗೊಳಿಸಲಾಗುತ್ತಿದೆ' ಎಂದು ಮಧು ಬಂಗಾರಪ್ಪ ಹೇಳಿದರು.

'2026-27ನೇ ಸಾಲಿನಿಂದ ಎಲ್ಲ ಕೆಪಿಎಸ್‌ಗಳಲ್ಲೂ ಎಲ್‌ಕೆಜಿಯಿಂದ 5ನೇ ತರಗತಿವರೆಗೆ ಏಕ ತರಗತಿ ಪಠ್ಯಪುಸ್ತಕ ಆಧಾರಿತ ದ್ವಿಭಾಷಾ ಮಾಧ್ಯಮ ಬೋಧನೆಯನ್ನು ಅಳವಡಿಸಲಾಗುತ್ತಿದೆ. 6ನೇ ತರಗತಿಯಿಂದ ಆಂಗ್ಲ ಮಾಧ್ಯಮ ಆರಂಭಿಸಲಾಗುತ್ತಿದೆ. ಕ್ರಿಯಾಶೀಲ ಬೋಧನಾ ಪದ್ಧತಿ ಅಳವಡಿಸಿಕೊಳ್ಳಲಾಗುತ್ತಿದೆ' ಎಂದರು.

ಸುದ್ದಿ 2 ನಿಮಿಷ

ಒಳಮೀಸಲು: ಮುನಿಯಪ್ಪ, ಪರಮೇಶ್ವರ ಚರ್ಚೆ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಹಂಚಿಕೆ ಕುರಿತ ಗೊಂದಲದ ಮಧ್ಯೆಯೇ, ಸಚಿವ ಕೆ.ಎಚ್. ಮುನಿಯಪ್ಪ ಅವರ ನಿವಾಸಕ್ಕೆ ತೆರಳಿ ಸಚಿವ ಜಿ. ಪರಮೇಶ್ವರ ಚರ್ಚೆ ನಡೆಸಿದ್ದಾರೆ.

ಮುನಿಯಪ್ಪ ಅವರಿಗೆ ಜನ್ಮದಿನದ ಶುಭಾಶಯ ತಿಳಿಸಲು ಸೋಮವಾರ ಅವರ ಮನೆಗೆ ಪರಮೇಶ್ವರ ತೆರಳಿದ್ದರು.

ಹಳೆ ಮೀಸಲಾತಿಯಲ್ಲಿ ಪರಿಶಿಷ್ಟ ಜಾತಿಗೆ ಲಭ್ಯವಿರುವ ಶೇ 15ರಷ್ಟು ಮೀಸಲಾತಿಯಲ್ಲಿಯೇ ಒಳ ಮೀಸಲಾತಿ ಕಲ್ಪಿಸಬೇಕೆಂದು ಎಡಗೈ ಸಮುದಾಯ ಪಟ್ಟು ಹಿಡಿದರೆ, ಗೊಂದಲ ಮುಗಿಯುವರೆಗೆ ಒಳಮೀಸಲಾತಿ ಹಂಚಿಕೆ ಮಾಡಬಾರದೆಂದು ಬಲಗೈ ಸಮುದಾಯದ ನಾಯಕರು ಸರ್ಕಾರದ ಮೇಲೆ ಒತ್ತಡ ಹೇರುತ್ತಿದ್ದಾರೆ. ಈ ವಿಷಯ ಕುರಿತು ಚರ್ಚಿಸಲು ಇತ್ತೀಚೆಗೆ ನಡೆದಿದ್ದ ಸಚಿವ ಸಂಪುಟ ಸಭೆಯೂ ಅಪೂರ್ಣವಾಗಿತ್ತು. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವ ಮುನಿಯಪ್ಪ ಮತ್ತು ಪರಮೇಶ್ವರ, ಸಮುದಾಯಕ್ಕೆ ಸಾಮಾಜಿಕ ನ್ಯಾಯ ಒದಗಿಸುವ ಅನಿವಾರ್ಯದ ಬಗ್ಗೆ ಚರ್ಚೆ ನಡೆಸಿದರು ಎಂದು ಗೊತ್ತಾಗಿದೆ.

ಭೇಟಿಯ ಬಳಿಕ ಮಾತನಾಡಿದ ಗೃಹ ಸಚಿವ ಜಿ. ಪರಮೇಶ್ವರ, 'ಮುನಿಯಪ್ಪ ಅವರ ಜೊತೆ ಕೆಲವು ವಿಷಯಗಳ ಕುರಿತು ಚರ್ಚೆ ನಡೆಸಿದ್ದೇನೆ. ಶೇ 56ರಷ್ಟು ಮೀಸಲಾತಿ ನೀಡುವ ಕುರಿತು ಚರ್ಚೆಗಳಾಗಿದ್ದರೂ, ಕೋರ್ಟ್ ಸೂಚನೆಯಂತೆ ಶೇ 50 ಮೀಸಲಾತಿ ಮುಂದುವರಿಸಲು ಯಾವುದೇ ಅಭ್ಯಂತರವಿಲ್ಲ. ಹಳೆ ಮೀಸಲಾತಿಯನ್ನು ಜಾರಿಗೊಳಿಸುವಾಗ ಎದುರಾಗಬಹುದಾದ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಮುಂದಾಗಿದೆ' ಎಂದು ಹೇಳಿದರು.



ಬಿಜೆಪಿ ಶಾಸಕರಿಂದ ಪಟ್ಟು

ಬೆಂಗಳೂರು: ವಿಧಾನಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ರಾಜ್ಯ ಮಟ್ಟದ ಮಹತ್ವದ ಪ್ರಶ್ನೆಗಳಿಗೆ ಅವಕಾಶ ಸಿಗುತ್ತಿಲ್ಲ ಎಂದು ಬಿಜೆಪಿ ಶಾಸಕರು ಆಕ್ಷೇಪ ವ್ಯಕ್ತಪಡಿಸಿದರು.

ವಿಷಯ ಪ್ರಸ್ತಾಪಿಸಿದ ಬಿಜೆಪಿಯ ವಿ. ಸುನಿಲ್‌ಕುಮಾರ್ ಅವರು, 'ಪ್ರತಿ ದಿನ ಪ್ರಶ್ನೋತ್ತರ ಅವಧಿಯಲ್ಲಿ ರಾಜ್ಯ ಮಟ್ಟದ ಪ್ರಶ್ನೆಗಳಿಗೆ ಆದ್ಯತೆ ಸಿಗುತ್ತಿಲ್ಲ. ಪ್ರಶ್ನೆ ಚೋರಿ ಆಗುತ್ತಿದೆಯೇ? ಈ ಹಿಂದಿನ ಅಧಿವೇಶನಗಳಲ್ಲೂ ಇದೇ ರೀತಿ ಆಗಿತ್ತು. ಕೇವಲ ಸ್ಥಳೀಯ ಮಟ್ಟದ ಪ್ರಶ್ನೆಗಳಿಗೆ ಅವಕಾಶ ನೀಡಲಾಗುತ್ತಿದೆ. ಇದರಿಂದ ಮಹತ್ವದ ಪ್ರಶ್ನೆಗಳಿಗೆ ಉತ್ತರವೇ ಸಿಗುತ್ತಿಲ್ಲ' ಎಂದು ಟೀಕಿಸಿದರು.

ರಾಜ್ಯ ಮಟ್ಟದ ಪ್ರಶ್ನೆಗೆ ಅವಕಾಶ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿ ಎಂದು ಅವರು ಸಭಾಧ್ಯಕ್ಷ ಯು.ಟಿ.ಖಾದರ್ ಅವರನ್ನು ಒತ್ತಾಯಿಸಿದರು.

'ಗಮನಸೆಳೆಯುವ ಸೂಚನೆ ಅಡಿ ವಿಷಯಗಳ ಪ್ರಸ್ತಾಪ ಮಾಡುವುದಕ್ಕೂ ಕಡಿವಾಣ ಹಾಕಲಾಗಿದೆ' ಎಂದು ಬಿಜೆಪಿಯ ಎಸ್.ಆರ್.ವಿಶ್ವನಾಥ್ ಅವರು ಟೀಕಿಸಿದರು.

'ಪ್ರಮುಖ ನಾಯಕರಿಗೆ ಎಲ್ಲ ಸಂದರ್ಭಗಳಲ್ಲೂ ಪ್ರಶ್ನೆ ಕೇಳುವುದಕ್ಕೆ ಅವಕಾಶ ಸಿಗುತ್ತದೆ. ನಮಗೆ ಆ ಅವಕಾಶ ಇಲ್ಲ. ಗಮನ ಸೆಳೆಯುವ ಸೂಚನೆಯಲ್ಲಿ ಮಾತ್ರ ನಮಗೆ ಅವಕಾಶ ಸಿಗುತ್ತದೆ. ಅದಕ್ಕೆ ಮಿತಿ ಹೇರಿರುವುದು ಸರಿಯಲ್ಲ' ಎಂದು ಅವರು ಹೇಳಿದರು. 'ಸದನದಲ್ಲಿ ರಾತ್ರಿ ಬಹಳ ಹೊತ್ತು ಕುಳಿತು ನಾವು ಪ್ರಶ್ನೆಗಳಿಗೆ ಉತ್ತರ ಪಡೆಯುತ್ತಿದ್ದೇವೆ' ಎಂದು ಬಿಜೆಪಿ ಇತರ ಶಾಸಕರು ಧ್ವನಿಗೂಡಿಸಿದರು. ಈ ಬಗ್ಗೆ ಪರಿಶೀಲಿಸುವುದಾಗಿ ಖಾದರ್ ಭರವಸೆ ನೀಡಿದರು.

ರಾಜ್ಯದಿಂದ 629 ಕಂಪನಿ ಸ್ಥಳಾಂತರ

ಪ್ರಜಾವಾಣಿ ವಾರ್ತೆ


ನವದೆಹಲಿ: ಕಳೆದ ಐದು ವರ್ಷಗಳಲ್ಲಿ 629 ಕಂಪನಿಗಳು ತಮ್ಮ ನೋಂದಾಯಿತ ಕಚೇರಿಯನ್ನು ಕರ್ನಾಟಕದಿಂದ ಬೇರೆ ರಾಜ್ಯಗಳಿಗೆ ಸ್ಥಳಾಂತರಿಸಿವೆ ಎಂದು ಕಾರ್ಪೊರೇಟ್ ವ್ಯವಹಾರಗಳ ರಾಜ್ಯ ಸಚಿವ ಹರ್ಷ್ ಮಲ್ಹೋತ್ರಾ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಸೋಮವಾರ ಪ್ರಶ್ನೋತ್ತರ ಅವಧಿಯಲ್ಲಿ ಚಿಕ್ಕಬಳ್ಳಾಪುರ ಸಂಸದ ಡಾ.ಕೆ. ಸುಧಾಕರ್ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, 'ಆಡಳಿತಾತ್ಮಕ ಹಾಗೂ ಕಾರ್ಯಾಚರಣೆಯ ಅನುಕೂಲಕ್ಕಾಗಿ, ವ್ಯವಹಾರ ಚಟುವಟಿಕೆಗಳನ್ನು ವಿಸ್ತರಿಸುವ ಉದ್ದೇಶದಿಂದ ಕಂಪನಿಗಳು ತಮ್ಮ ಕಚೇರಿಗಳನ್ನು ಸ್ಥಳಾಂತರಿಸಿವೆ' ಎಂದು ತಿಳಿಸಿದ್ದಾರೆ.

ಕಂಪನಿಗಳ ಸ್ಥಳಾಂತರ

2020-2021	129
2021-2022	126
2022-2023	88
2023-2024	119
2024-2025	167

'ಪಂಪ್ಡ್ ಸ್ಟೋರೇಜ್: ಅರಣ್ಯಕ್ಕೆ ಧಕ್ಕೆ ಇಲ್ಲ'



ಬೆಂಗಳೂರು: ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯಿಂದ ಅರಣ್ಯಕ್ಕೆ ಯಾವುದೇ ಧಕ್ಕೆ ಆಗುವುದಿಲ್ಲ. ನೆಲದಡಿ ಪೈಪ್‌ಗಳನ್ನು ಅಳವಡಿಸಿದ ನಂತರ ಈಗಿರುವಂತೆಯೇ ಮಣ್ಣುಮುಚ್ಚಿ ಸಮತಟ್ಟು ಮಾಡಲಾಗುತ್ತದೆ ಎಂದು ಜಾರ್ಜ್ ಹೇಳಿದರು.

ಜೆಡಿಎಸ್‌ನ ಟಿ.ಎನ್.ಜವರಾಯಿಗೌಡ ಪ್ರಶ್ನೆಗೆ ಉತ್ತರಿಸಿದ ಅವರು, ಯೋಜನೆಗೆ ಜನಪ್ರತಿನಿಧಿಗಳು ದನಿಗೂಡಿಸಬೇಕು. ಯೋಜನೆ ಅನುಷ್ಠಾನವಾದರೆ ಎರಡು ಸಾವಿರ ಮೆಗಾವಾಟ್ ವಿದ್ಯುತ್ ಶೇಖರಿಸಿಡಬಹುದು ಎಂದರು. 'ಹಿಂದೆ ನಾನು ಬೆಂಗಳೂರು ಅಭಿವೃದ್ಧಿ ಸಚಿವನಾಗಿದ್ದಾಗ, ಸಂಚಾರದಟ್ಟಣೆ ತಗ್ಗಿಸಲು ಉಕ್ಕಿನ ಸೇತುವೆ ನಿರ್ಮಾಣಕ್ಕೆ ಮುಂದಾಗಿದ್ದೆ. ಆಗಲೂ ವಿರೋಧ ವ್ಯಕ್ತವಾಯಿತು. ಈಗ ಶರಾವತಿ ಪಂಪ್ಡ್ ಸ್ಟೋರೇಜ್‌ಗೆ ವಿನಾಕಾರಣ ವಿರೋಧ ಮಾಡಲಾಗುತ್ತಿದೆ. ಯೋಜನೆಯಿಂದ ಅಲ್ಲಿನ ಪ್ರಾಣಿಗಳಿಗೂ ತೊಂದರೆ ಆಗುವುದಿಲ್ಲ' ಎಂದು ಹೇಳಿದರು.

ಪ್ರಶ್ನೋತ್ತರ ಅವಧಿಯಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಭರವಸೆ

ಮಾಜಿ ಸೈನಿಕರಿಗೆ ವರ್ಷಾಂತ್ಯಕ್ಕೆ ನಿವೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸೈನಿಕರ ಕೋಟಾದ ಅಡಿ ನಿವೇಶನ ಕೋರಿ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಅರ್ಜಿಗಳು ಬಾಕಿ ಇವೆ ಎಂಬುದನ್ನು ಪರಿಗಣಿಸಿ ಈ ವರ್ಷಾಂತ್ಯದೊಳಗೆ ಬಡಾವಣೆ ನಿರ್ಮಿಸಿ ನಿವೇಶನ ಮಂಜೂರು ಮಾಡುವುದಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಬಿ.ಪಿ.ಹರೀಶ್ ಅವರ ಪ್ರಶ್ನೆಗೆ ಈ ಆಶ್ವಾಸನೆ ನೀಡಿದರು.

ರಾಜ್ಯದಾದ್ಯಂತ ಎಲ್ಲಾ ಮಾಜಿ ಸೈನಿಕರಿಗೂ ಅರ್ಹತೆ ಆಧಾರದಲ್ಲಿ ನಿವೇಶನ ನೀಡಬೇಕು ಎಂಬುದು ಸರ್ಕಾರದ ಇಚ್ಛೆ. ಆದರೆ, ಈ ಯೋಜನೆಯ ಅನುಷ್ಠಾನಕ್ಕೆ ಜಮೀನಿನ ಅಗತ್ಯವಿದೆ. ವಾಸಯೋಗ್ಯ ಸ್ಥಳವನ್ನು ಗುರುತಿಸಿ ಬಡಾವಣೆ ನಿರ್ಮಿಸಲು ಅಧಿಕಾರಿಗಳಿಗೆ ಸೂಚಿಸಲಾಗುವುದು ಎಂದರು.

ಈಗ ಯಾವ ತಾಲ್ಲೂಕು, ಯಾವ ಜಿಲ್ಲೆಯಲ್ಲಿ ಎಷ್ಟು ಜನ ಮಾಜಿ ಸೈನಿಕರು ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ ಎಂಬ ದಾಖಲೆ ಬೆರಳ ತುದಿಯಲ್ಲಿದೆ. ಈ ಎಲ್ಲಾ ಅರ್ಜಿಗಳನ್ನೂ ಆನ್‌ಲೈನ್ ಮೂಲಕ ಡಿಜಿಟಲೀಕರಣ ಮಾಡಲಾಗಿದೆ. ಮೊದಲು ಈ ವ್ಯವಸ್ಥೆ ಇರಲಿಲ್ಲ. ನಿಖರ ದಾಖಲೆಗಳೂ ಲಭ್ಯ ಇರಲಿಲ್ಲ. ಯಾವ ತಾಲ್ಲೂಕಿನಲ್ಲಿ ಎಷ್ಟು ಅರ್ಜಿ ಇದೆ ಎಂದು ತಹಶೀಲ್ದಾರ್‌ಗೆ ಪತ್ರ ಬರೆಯಬೇಕಿತ್ತು. ಆದರೆ, ಪ್ರಸ್ತುತ ಎಲ್ಲವನ್ನೂ ಡಿಜಿಟಲೀಕರಣಗೊಳಿಸಲಾಗಿದೆ. ವರ್ಷಾಂತ್ಯದೊಳಗೆ ಮಾಜಿ ಸೈನಿಕರಿಗೆ ನಿವೇಶನ ನೀಡಲಾಗುವುದು ಎಂದರು.

ವಿಷಯ ಪ್ರಸ್ತಾಪಿಸಿದ ಹರೀಶ್ ಅವರು, ದಾವಣಗೆರೆ ಜಿಲ್ಲೆಯಲ್ಲಿ ಮಾಜಿ ಸೈನಿಕರಿಗೆ ತಾಲ್ಲೂಕು ಅಥವಾ ಜಿಲ್ಲಾ ಕೇಂದ್ರಗಳಲ್ಲಿ ನಿವೇಶನ ಕೊಡದೆ ಚಿರತೆ, ಕರಡಿಗಳು ಓಡಾಡುವ ಹಳ್ಳಿಗಾಡಿನ ಗುಡ್ಡ ಪ್ರದೇಶದಲ್ಲಿ ನಿವೇಶನ ನೀಡಿದ್ದಾರೆ. ಮಾಜಿ ಸೈನಿಕರನ್ನು ಈ ರೀತಿ ನಡೆಸಿಕೊಳ್ಳುವುದು ಸರಿಯಲ್ಲ ಎಂದು ಹೇಳಿದರು.

ಕಂದಾಯ ಗ್ರಾಮಗಳ ಪ್ರಸ್ತಾವಕ್ಕೆ ಮಾ. 16 ಗಡುವು

ನೂತನ ಕಂದಾಯ ಗ್ರಾಮ, ಉಪಗ್ರಾಮ ರಚನೆಗೆ ಪ್ರಸ್ತಾವ ನೀಡಲು ಅಧಿಕಾರಿಗಳಿಗೆ ಮಾ. 16ರವರೆಗೆ ಗಡುವು ನಿಗದಿಪಡಿಸಲಾಗಿದೆ ಎಂದು ಕೃಷ್ಣಬೈರೇಗೌಡ ತಿಳಿಸಿದರು.

ಜೆಡಿಎಸ್‌ನ ಎಚ್.ಟಿ.ಮಂಜು ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಕೆಲವು ಅಧಿಕಾರಿಗಳು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ದಾಖಲೆ ರಹಿತ ವಸತಿ ಪ್ರದೇಶಗಳನ್ನು ಗುರುತಿಸಿ ಲಕ್ಷಾಂತರ ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲು ಸಹಕರಿಸಿದ್ದಾರೆ. ಆದರೆ, ಕೆಲವು ಅಧಿಕಾರಿಗಳ ಅಸಡ್ಡೆಯಿಂದಾಗಿ ಅರ್ಹತೆ ಇದ್ದರೂ ಹಲವು ವಸತಿ ಪ್ರದೇಶಗಳಿಗೆ ದಾಖಲೆ ನೀಡಲು ಸಾಧ್ಯವಾಗಿಲ್ಲ. ಎಲ್ಲಾ ಅರ್ಹ ಕಂದಾಯ ಗ್ರಾಮ-ಉಪಗ್ರಾಮ ರಚನೆಗೆ ಪ್ರಸ್ತಾವ ನೀಡುವಂತೆ ಅಧಿಕಾರಿಗಳಿಗೆ ಗಡುವು ನೀಡಲಾಗಿದೆ ಎಂದು ವಿವರಿಸಿದರು.

ಕೃಷ್ಣ ಉತ್ತರಕ್ಕೆ ಜಯಚಂದ್ರ ಅಸಮಾಧಾನ

ಬಗರ್ ಹುಕುಂ ಯೋಜನೆಯಡಿ ಅರ್ಹ ರೈತರಿಗೆ ಜಮೀನು ಮಂಜೂರು ಮಾಡಬೇಕು ಎಂಬ ಸರ್ಕಾರದ ಉದ್ದೇಶದಲ್ಲಿ ಯಾವುದೇ ಬದಲಾವಣೆ ಇಲ್ಲ. ಕಾನೂನು ನಿಯಮಗಳನ್ನು ಮೀರಲೂ ಸಾಧ್ಯವಿಲ್ಲ ಎಂದು ಸಚಿವ ಕೃಷ್ಣ ಬೈರೇಗೌಡ ಸ್ಪಷ್ಟಪಡಿಸಿದರು.

ಕಾಂಗ್ರೆಸ್‌ನ ಟಿ.ಬಿ.ಜಯಚಂದ್ರ ಅವರ ಪ್ರಶ್ನೆಗೆ ಉತ್ತರಿದ ಅವರು, 'ಸೇಂದಿವನ ಪ್ರದೇಶವನ್ನು ಬಗರ್ ಹುಕುಂ ಯೋಜನೆ ಅಡಿ ರೈತರಿಗೆ ಮಂಜೂರು ಮಾಡಬೇಕು ಎಂಬ ಬೇಡಿಕೆ ಬಗ್ಗೆ ಸಹಾನುಭೂತಿ ಇದೆ. ಈ ಬಗ್ಗೆ ಸಕಾರಾತ್ಮಕವಾಗಿ ತೀರ್ಮಾನ ತೆಗೆದುಕೊಳ್ಳಬೇಕು ಎಂಬ ಉದ್ದೇಶವೂ ಇದೆ. ಆದರೆ, ಸೇಂದಿ ವನ ಜಮೀನನ್ನು ಅಬಕಾರಿ ಇಲಾಖೆಯಿಂದ ಕಂದಾಯ ಇಲಾಖೆಗೆ ವರ್ಗಾವಣೆ ಮಾಡುವಾಗ 2003 ರಲ್ಲಿ ಅಂದಿನ ಸರ್ಕಾರ ರೂಪಿಸಿದ ಐದು ನಿಯಮಗಳು ಇಂದು ತೊಡಕಾಗಿ ಪರಿಣಮಿಸಿವೆ' ಎಂದರು. ಸಚಿವರ ಉತ್ತರದಿಂದ ಸಮಾಧಾನಗೊಳ್ಳದ ಜಯಚಂದ್ರ ಅವರು, 'ಹಿಂದೆ ನಾನು ಸಚಿವನಾಗಿದ್ದಾಗಲೇ (2001), ಸೇಂದಿವನ ಭೂಮಿಯನ್ನು ಬಗರ್‌ಹುಕುಂ ಅಡಿ ಹಂಚಿಕೆ ಮಾಡಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಅದನ್ನು ಪರಿಶೀಲಿಸಬೇಕು' ಎಂದರು.

ಸಿ.ಎಂ ಆಗಮನ...



ವಿಧಾನಸಭೆ ಕಲಾಪದಲ್ಲಿ ಭಾಗವಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಆಗಮಿಸಿದ ಕ್ಷಣ...

'₹881 ಕೋಟಿ ಮೊತ್ತದ ಔಷಧ ಖರೀದಿ'

ಬೆಂಗಳೂರು: ಲೋಪಗಳನ್ನು ಸರಿಪಡಿಸಲು ಸುಧಾರಣೆ ಕೈಗೊಂಡ ಕಾರಣ ಔಷಧ ಪೂರೈಕೆಯಲ್ಲಿ ಸ್ವಲ್ಪ ಪ್ರಮಾಣದ ವ್ಯತ್ಯಯವಾಗಿತ್ತು. ಈಗಾಗಲೇ ₹880.68 ಕೋಟಿ ಮೊತ್ತದಲ್ಲಿ 890 ವಿಧಗಳ ಔಷಧಗಳನ್ನು ಖರೀದಿಸಲು ಅನುಮೋದನೆ ನೀಡಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗಂಡೂರಾವ್ ಹೇಳಿದರು.

ವಿಧಾನಪರಿಷತ್ತಿನಲ್ಲಿ ಬಿಜೆಪಿಯ ಧನಂಜಯ ಸರ್ಜಿ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, 534 ಔಷಧಗಳನ್ನು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದ ಮೂಲಕ, 356 ಔಷಧಗಳನ್ನು ಸ್ಥಳೀಯ ಖರೀದಿ ವಿಧಾನದ ಮೂಲಕ ಖರೀದಿಸಲಾಗುತ್ತಿದೆ ಎಂದರು.

ಭ್ರೂಣಹತ್ಯೆ ವಿರುದ್ಧ ಕ್ರಮ: ಕಾಂಗ್ರೆಸ್‌ನ ಉಮಾಶ್ರೀ ಪ್ರಶ್ನೆಗೆ ಉತ್ತರಿಸಿದ ದಿನೇಶ್ ಗುಂಡೂರಾವ್, 'ಭ್ರೂಣಹತ್ಯೆಯ 150 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿತ್ತು. 80 ಪ್ರಕರಣಗಳಲ್ಲಿ ದಂಡ ವಿಧಿಸಿ, ಕಾನೂನು ಕ್ರಮ ಕೈಗೊಳ್ಳಲಾಗಿದೆ' ಎಂದು ಹೇಳಿದರು.

ಪಂಪ್‌ಸೆಟ್ ಸಕ್ರಮ: ಮೂರು ತಿಂಗಳ ಗಡುವು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಇಂಧನ ಸಚಿವ ಕೆ.ಜೆ. ಜಾರ್ಜ್ ಎಚ್ಚರಿಕೆ
- ಪರಿವರ್ತಕಗಳ ದುರಸ್ತಿಯೇ ಸವಾಲು

ಬೆಂಗಳೂರು: ಮುಂದಿನ ಮೂರು ತಿಂಗಳ ಒಳಗೆ ಸಕ್ರಮ ಮಾಡಿಕೊಳ್ಳದ ಅಕ್ರಮ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

ಪರಿಷತ್ತಿನಲ್ಲಿ ಬಿಜೆಪಿಯ ಎನ್. ರವಿಕುಮಾರ್ ಪ್ರಶ್ನೆಗೆ ಉತ್ತರಿಸಿದ ಅವರು, 'ಒಂದು ವಿದ್ಯುತ್ ಪರಿವರ್ತಕಕ್ಕೆ 2ರಿಂದ 3 ಪಂಪ್‌ಸೆಟ್ ಹಾಕಬಹುದು. ಆದರೆ, ಹತ್ತಾರು ಅಕ್ರಮ ಪಂಪ್‌ಸೆಟ್ ಬಳಸುತ್ತಿದ್ದು, ಪರಿವರ್ತಕಗಳು ಸುಟ್ಟುಹೋಗುತ್ತಿವೆ. ಅವುಗಳ ದುರಸ್ತಿ ಮತ್ತು ಬದಲಾಯಿಸುವುದೇ ದೊಡ್ಡ ಸವಾಲಾಗಿ ಪರಿಗಣಮಿಸಿದೆ. ಹಾಗಾಗಿ, ಅಕ್ರಮ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಮೂರು ತಿಂಗಳ ಗಡುವು ನೀಡಲಾಗಿದೆ' ಎಂದರು.

ರಾಜ್ಯದಲ್ಲಿ 4.50 ಲಕ್ಷ ಕೃಷಿ ಪಂಪ್‌ಸೆಟ್‌ಗಳಿದ್ದು, 2.75 ಲಕ್ಷ ಸಕ್ರಮಗೊಳಿಸಲಾಗಿದೆ. ಮೂರು ತಿಂಗಳ ಒಳಗೆ ಅಗತ್ಯ ಶುಲ್ಕ ಪಾವತಿಸಿ ಸಕ್ರಮಗೊಳಿಸಿಕೊಳ್ಳಬೇಕು ಎಂದು ಹೇಳಿದರು.

ರವಿಕುಮಾರ್ ಮಾತನಾಡಿ, 'ಕರ್ನಾಟಕ ವಿದ್ಯುತ್ ಕಾರ್ಖಾನೆಯಲ್ಲಿ ಗುಣಮಟ್ಟದ ವಿದ್ಯುತ್ ಪರಿವರ್ತಕಗಳು ಲಭ್ಯ ಇವೆ. ಉತ್ತರ ಪ್ರದೇಶ, ಮಹಾರಾಷ್ಟ್ರ ಸೇರಿದಂತೆ ಬೇರೆ ರಾಜ್ಯಗಳಲ್ಲಿ ಕಡಿಮೆ ಬೆಲೆಗೆ ಪೂರೈಕೆ ಆಗಲಿವೆ. ಆದರೂ ಕೇರಳ ಎಲೆಕ್ಟ್ರಿಕಲ್ ಮತ್ತು ಅಲಾಯ್ಡ್ ಎಂಜಿನಿಯರಿಂಗ್‌ನಿಂದ (ಕೆಇಎಲ್) ಖರೀದಿಸಲು ಮುಂದಾಗಿರುವುದು ಎಷ್ಟು ಸರಿ? ಕೇರಳ ರಾಜ್ಯದ ಚುನಾವಣಾ ವೆಚ್ಚ ಸರಿದೂಗಿಸಲು ಅಲ್ಲಿನ ಸಂಸ್ಥೆಯಿಂದ ಖರೀದಿಸಲಾಗುತ್ತಿದೆಯೇ ಎಂದು ಪ್ರಶ್ನಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಜಾರ್ಜ್, 'ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ 2024-25ನೇ ಸಾಲಿನಲ್ಲಿ ಕೆಇಎಲ್‌ನಿಂದ ಯಾವುದೇ ಪರಿವರ್ತಕಗಳನ್ನು ಖರೀದಿಸಿಲ್ಲ. ಕರ್ನಾಟಕ ವಿದ್ಯುತ್ ಕಾರ್ಖಾನೆಯಲ್ಲಿ ಉತ್ಪಾದನಾ ಸಾಮರ್ಥ್ಯ ಇರುವುದು 30 ಸಾವಿರ. ಆದರೆ, ನಮಗೆ ಬೇಕಿರುವುದು 50 ಸಾವಿರ. ಹಾಗಾಗಿ, ಬೇರೆ ಸಂಸ್ಥೆಯಿಂದ ಪಡೆಯಲು ಚಿಂತನೆ ನಡೆದಿದೆ. ಬೇರೆ ರಾಜ್ಯಗಳಲ್ಲಿ ಕಡಿಮೆ ಮೊತ್ತದಲ್ಲಿ ಲಭ್ಯವಿದ್ದರೆ, ಪರಿಶೀಲಿಸಲಾಗುವುದು. ಆದರೆ, ಕೇರಳ ಚುನಾವಣೆ ವೆಚ್ಚ ಸರಿದೂಗಿಸಲು ಅಲ್ಲಿನ ಸಂಸ್ಥೆಯಿಂದ ಖರೀದಿಸಲಾಗುತ್ತಿದೆ ಎಂಬ ಆರೋಪ ಆಧಾರರಹಿತ' ಎಂದರು.

ಎತ್ತಿನಹೊಳೆ, ಮೇಕೆದಾಟು ವಿಳಂಬಕ್ಕೆ 'ಕೈ' ಕಾರಣ: ದೇವೇಗೌಡ ಕುಟುಕು

ಪ್ರಜಾವಾಣಿ ವಾರ್ತೆ



ದೇವೇಗೌಡ

ನವದೆಹಲಿ: ಕರ್ನಾಟಕದಲ್ಲಿ ನೀರಾವರಿ ಯೋಜನೆಗಳನ್ನು ಸಕಾಲಕ್ಕೆ ಕಾರ್ಯಗತ ಮಾಡಲಾಗದೇ ರಾಜ್ಯ ಕಾಂಗ್ರೆಸ್ ಸರ್ಕಾರವು ಕೇಂದ್ರ ಸರ್ಕಾರವನ್ನು ಅನಗತ್ಯವಾಗಿ ದೂರುತ್ತಿದೆ. ಸುಖಾಸುಮ್ಮನೆ ಅಪಪ್ರಚಾರ ಮಾಡುತ್ತಿದೆ ಎಂದು ರಾಜ್ಯಸಭಾ ಸದಸ್ಯ ಎಚ್.ಡಿ. ದೇವೇಗೌಡ ದೂರಿದರು.

ರಾಜ್ಯಸಭೆಯಲ್ಲಿ ಸೋಮವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಎತ್ತಿನಹೊಳೆ, ಮೇಕೆದಾಟು ಯೋಜನೆಗಳ ವಿಳಂಬಕ್ಕೆ ರಾಜ್ಯ ಸರ್ಕಾರವೇ ಕಾರಣ. ಅದನ್ನು ಮರೆಮಾಚಿಕೊಳ್ಳಲು ಕೇಂದ್ರವನ್ನು ದೂರುತ್ತಿದೆ. ಕರ್ನಾಟಕದಲ್ಲಿ ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ನಿರ್ಲಕ್ಷ್ಯದಿಂದ ಎತ್ತಿನಹೊಳೆ ಯೋಜನೆ ಆಮೆಗತಿಯಲ್ಲಿ ಸಾಗಿದೆ' ಎಂದರು.

ಎತ್ತಿನಹೊಳೆ ಯೋಜನೆ ಕಾರ್ಯಗತ ಮಾಡುವಲ್ಲಿ ಕಾಂಗ್ರೆಸ್ ಸರ್ಕಾರ ಅನೇಕ ತಪ್ಪುಗಳನ್ನು ಮಾಡಿದೆ. ಪರಿಸರಕ್ಕೆ ಧಕ್ಕೆ ತಂದಿದೆ ಹಾಗೂ ಅನೇಕ ಕಾನೂನು, ನಿಯಮಗಳನ್ನು ಉಲ್ಲಂಘನೆ ಮಾಡಿದೆ ಎಂದು ಆರೋಪ ಮಾಡಿದ ಅವರು, 'ಬಿಜೆಪಿ ಸರ್ಕಾರದ ಅವಧಿಯಲ್ಲಿ ಈ ಯೋಜನೆಗೆ ಶಂಕುಸ್ಥಾಪನೆ ಮಾಡಲಾಗಿತ್ತು. ಆಗ ಜಗದೀಶ ಶೆಟ್ಟರ್ ಅವರು ರಾಜ್ಯದ ಮುಖ್ಯಮಂತ್ರಿ ಆಗಿದ್ದರು, ಆಗ ಆ ಯೋಜನೆಯ ಅಂದಾಜು ವೆಚ್ಚ ₹8 ಸಾವಿರ ಕೋಟಿ. ಈಗ ಯೋಜನಾ ಮೊತ್ತ ₹33 ಸಾವಿರ ಕೋಟಿಗೆ ಏರಿದೆ. ಈವರೆಗೂ ಒಂದು ಹನಿ ನೀರು ಕೂಡ ಹರಿದಿಲ್ಲ. ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಜಿಲ್ಲೆಗಳಿಗೆ ತೊಟ್ಟು ನೀರು ಹೋಗಿಲ್ಲ. ಅಷ್ಟೇ ಅಲ್ಲದೆ, ಆ ಯೋಜನೆ ಕಾರ್ಯಕಗತ ಆಗುತ್ತಿರುವ ಹಾಸನ ಜಿಲ್ಲೆಯ ಸಕಲೇಶಪುರಕ್ಕೆ ಹತ್ತಿರದಲ್ಲಿರುವ ಅರಸೀಕರೆಗೇ ನೀರು ಬಂದಿಲ್ಲ. ಈ ಬಗ್ಗೆ ನಾನು ಸಂಪುಟಗಟ್ಟಲೆ ಮಾಹಿತಿ ಇಟ್ಟುಕೊಂಡು ಮಾತನಾಡಬಲ್ಲೆ' ಎಂದರು.

'ನಾನು ನೀರಾವರಿ ಸಚಿವನಾಗಿ, ಮುಖ್ಯಮಂತ್ರಿಯಾಗಿ ಹಾಗೂ ಪ್ರಧಾನಿಯಾಗಿ ಕೆಲಸ ಮಾಡಿದ್ದೇನೆ. ನನಗೆ ಈ ಬಗ್ಗೆ ಪೂರ್ಣ ಮಾಹಿತಿ, ಅನುಭವ ಇದೆ. ಮೇಕೆದಾಟು ಯೋಜನೆಗೂ ರಾಜ್ಯ ಸರ್ಕಾರವೇ ಅಡ್ಡಿಯಾಗಿದೆ. ಈ ಯೋಜನೆ ಕಾರ್ಯಗತವಾಗುವ ಪ್ರಸ್ತಾವಿತ ಜಾಗ ನನಗೆ ಗೊತ್ತು. ಒಂದು ಕಡೆ ಆನೆ ಕಾರಿಡಾರ್, ಮತ್ತೊಂಡೆ ಅರಣ್ಯ ಮತ್ತು ನವ್ಯಜೀವಿ ಸಂಪತ್ತು ಇದೆ. ಪ್ರತಿದಿನವೂ ನಡೆಯುತ್ತಿರುವ ಮಾನವ-ವನ್ಯಜೀವಿ ಸಂಘರ್ಷ ದಿಂದ ಅಮಾಯಕರು ಬಲಿ ಆಗುತ್ತಿದ್ದಾರೆ. ಇದನ್ನು ತಡೆಯಲು ರಾಜ್ಯ ಸರ್ಕಾರಕ್ಕೆ ಆಗಿಲ್ಲ' ಎಂದು ಅವರು ಟೀಕಿಸಿದರು.

'ಯಾವ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ನೀರು ಕೊಡಬೇಕು ಎಂದು ಸರ್ಕಾರವು ಎತ್ತಿಹೊಳೆ ಯೋಜನೆ ರೂಪಿಸಿತ್ತೋ, ಈಗ ಆ ಯೋಜನೆ ಕಾರ್ಯಗತವಾಗದೇ ಅದೇ ಜಿಲ್ಲೆಗಳಿಗೆ ಬೆಂಗಳೂರಿನ ಕೊಳಚೆ ನೀರನ್ನು ಮೂರು ಹಂತಗಳಲ್ಲಿ ಶುದ್ಧೀಕರಿಸದೆ ಮಲೀನ ನೀರನ್ನು ಹರಿಸುತ್ತಿದೆ. ಆ ನೀರು ಮಾನವ ಬಳಕೆ ಯೋಗ್ಯವಲ್ಲದ್ದು. ಇದರ ಪರಿಣಾಮವಾಗಿ ಆ ಭಾಗದಲ್ಲಿ ಬೆಳೆಯುತ್ತಿರುವ ಬೆಳೆಗಳು ಹಾಗೂ ತರಕಾರಿಗಳು ವಿಷಕಾರಿಯಾಗುತ್ತಿದ್ದು, ಅವು ಸೇವನೆಗೆ ಯೋಗ್ಯವಲ್ಲದ್ದಾಗಿವೆ. ಜನರ ಜೀವದ ಜತೆಗೆ ರಾಜ್ಯ ಸರ್ಕಾರ ಚೆಲ್ಲಾಟವಾಡುತ್ತಿದೆ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

'ಈ ಎರಡೂ ಜಿಲ್ಲೆಗಳು ಎದುರಿಸುತ್ತಿರುವ ಸಮಸ್ಯೆ ದಿನದಿಂದ ದಿನಕ್ಕೆ ಬಿಗಡಾಯಿಸುತ್ತಿದ್ದು, ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರದ ಅರಣ್ಯ ಸಚಿವ ಭೂಪೇಂದ್ರ ಯಾದವ್ ಕೂಡಲೇ ಮಧ್ಯಪ್ರವೇಶಿಸಿ ಸರಿಮಾಡಬೇಕು. ಇಲ್ಲವಾದರೆ ಈ ಜಿಲ್ಲೆಯ ಜನರು ವಿಪರೀತ ಬೆಲೆ ತೆರಲಿದ್ದಾರೆ' ಎಂದು ಎಚ್ಚರಿಸಿದರು.

ಕೇಂದ್ರದ ವಿರುದ್ಧ ಹೋರಾಟ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಕ್ಕೂಟ ವ್ಯವಸ್ಥೆಯಲ್ಲಿದ್ದರೂ ಕೇಂದ್ರದಿಂದ ರಾಜ್ಯಕ್ಕೆ ನಿರಂತರವಾಗಿ ಅನ್ಯಾಯವಾಗುತ್ತಿದೆ. ಹಾಗಾಗಿ ಕಾನೂನು ಹೋರಾಟ ನಡೆಸುವ ಕುರಿತು ಪರಿಶೀಲನೆ ನಡೆಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಸೋಮವಾರ ವಿಧಾನಮಂಡಲದ ಸದಸ್ಯರಿಗೆ ಆಯವ್ಯಯ ರಾಜಸ್ವ ಸಂಗ್ರಹಣೆ, ಅನುದಾನ ವರ್ಗೀಕರಣ ಮತ್ತು ಹಂಚಿಕೆ, ಆಯವ್ಯಯ ಅನುದಾನ ಬಳಕೆ ಮತ್ತು ನಿರ್ವಹಣೆ ವಿಷಯದ ಬಗ್ಗೆ ಏರ್ಪಡಿಸಿದ್ದ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಹಿಂದೆ ರಾಜ್ಯದಲ್ಲಿ ಬರಗಾಲ ಆವರಿಸಿದ್ದಾಗ ಕೇಂದ್ರ ಪರಿಹಾರ ನೀಡಿರಲಿಲ್ಲ. ಸುಪ್ರೀಂ ಕೋರ್ಟ್ ಮೊರೆಹೋದಾಗ ₹3 ಸಾವಿರ ಕೋಟಿ ಪರಿಹಾರ ಬಿಡುಗಡೆ ಮಾಡಲಾಯಿತು. ಜಿಎಸ್‌ಟಿ ಮಂಡಳಿಯಿಂದ ರಾಜ್ಯಕ್ಕೆ ನ್ಯಾಯ ಸಿಗುವ ಭರವಸೆ ಇಲ್ಲ. ರಾಜ್ಯಕ್ಕೆ ಬರಬೇಕಾದ ಹಣ ಬಂದಿಲ್ಲ. ಕಾನೂನು ಹೋರಾಟ ನಡೆಸುವ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದೆ ಎಂದರು.

'ರಾಜ್ಯದಿಂದ ಸಂಗ್ರಹವಾಗುವ ತೆರಿಗೆ ಮೊತ್ತದಲ್ಲಿ ₹4.50 ಲಕ್ಷ ಕೋಟಿ ಕೇಂದ್ರಕ್ಕೆ ಹೋಗಿದೆ. 2025-26ನೇ ಸಾಲಿನಲ್ಲಿ ರಾಜ್ಯಕ್ಕೆ ₹60 ಸಾವಿರ ಕೋಟಿ ವಾಪಸ್ ಬಂದಿದೆ. 2026-27ನೇ ಸಾಲಿಗೆ ₹73 ಸಾವಿರ ಕೋಟಿ ನೀಡಬಹುದು. ಅಂದರೆ 1 ರೂಪಾಯಿಗೆ 15 ಪೈಸೆ ಮಾತ್ರ ವಾಪಸ್ ಬರುತ್ತಿದೆ. ರಾಜಕೀಯ ಕಾರಣಕ್ಕೆ ಈ ಮಾತು ಹೇಳುತ್ತಿಲ್ಲ. ರಾಜ್ಯಕ್ಕೆ ಅನ್ಯಾಯವಾಗುತ್ತಿದ್ದರೂ ವಿರೋಧ ಪಕ್ಷಗಳು, ಗ್ಯಾರಂಟಿ ಯೋಜನೆಯಿಂದಾಗಿ ರಾಜ್ಯದ ಬೊಕ್ಕಸ ಖಾಲಿಯಾಗಿದೆ ಎಂದು ಸುಳ್ಳು ಅಪಪ್ರಚಾರ ಮಾಡುತ್ತಿವೆ' ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ ವೃದ್ಧಾಪ್ಯ, ವಿಧವಾ ವೇತನ ಸೇರಿ ಹಲವು ಪಿಂಚಣಿ ಯೋಜನೆಗಳಿಗೆ ₹11 ಸಾವಿರ ಕೋಟಿ ನೀಡುತ್ತಿದೆ. ಆದರೆ, ಕೇಂದ್ರ ನೀಡುತ್ತಿರುವುದು ₹550 ಕೋಟಿ. 'ನಮ್ಮ ಮೆಟ್ರೊ'ಗೆ ರಾಜ್ಯದ ಪಾಲು ಶೇ 88. ಕೇಂದ್ರದ ಪಾಲು ಶೇ 12. ಕೇಂದ್ರ ಪುರಸ್ಕೃತ ಯೋಜನೆಗಳಿಗೂ 50:50 ಅನುಪಾತ ಬಂದಿದೆ. ರೈಲ್ವೆ ಯೋಜನೆಗೆ ಭೂಮಿ ಹಾಗೂ ಯೋಜನಾ ವೆಚ್ಚ ಶೇ 50ರಷ್ಟು ರಾಜ್ಯ ಸರ್ಕಾರ ನೀಡಿದರೂ ಆದಾಯ ಮಾತ್ರ ಕೇಂದ್ರಕ್ಕೆ ಹೋಗುತ್ತಿದೆ ಎಂದರು.

ರಾಜ್ಯ ಸರ್ಕಾರ ಹೆಚ್ಚಿನ ಸಾಲ ಮಾಡಿದೆ ಎಂದು ವಿರೋಧ ಪಕ್ಷದವರು ಆರೋಪಿಸುತ್ತಿದ್ದಾರೆ. ಮುಂದಿನ ವರ್ಷ ₹1.32 ಲಕ್ಷ ಕೋಟಿ ಸಾಲ ಮಾಡುವುದಾಗಿ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಮುಂದಿನ ಆರ್ಥಿಕ ವರ್ಷಕ್ಕೆ ಸಾಲದ ಮೊತ್ತ ₹8.24 ಲಕ್ಷ ಕೋಟಿ ಆಗಲಿದೆ. ಕೇಂದ್ರ, ಆರ್‌ಬಿಐ ನಿಯಮಾನುಸಾರ ಸಾಲ ಮಾಡಲಾಗಿದೆ. ಕೇಂದ್ರ ಹಾಗೂ ಅನ್ಯ ರಾಜ್ಯಗಳಿಗೆ ಹೋಲಿಸಿದರೆ ರಾಜ್ಯದ ಹಣಕಾಸು ಸ್ಥಿತಿ ಸರಿಯಾಗಿದೆ ಎಂದು ಸಮರ್ಥಿಸಿಕೊಂಡರು.

ಯುಪಿಎ ಅವಧಿಯಲ್ಲಿ ಮನಮೋಹನ ಸಿಂಗ್ ಅವರು ಪ್ರಧಾನಿ ಹುದ್ದೆಯಿಂದ ಕೆಳಗಿಳಿದಾಗ ₹53.11 ಲಕ್ಷ ಕೋಟಿ ಸಾಲ ಇತ್ತು. ನರೇಂದ್ರ ಮೋದಿ ಅವರ 11 ವರ್ಷದ ಅವಧಿಯಲ್ಲಿ ₹165 ಲಕ್ಷ ಕೋಟಿ ಸಾಲ ಮಾಡಲಾಗಿದೆ. ರಾಜ್ಯದ ಬಗ್ಗೆ ಆರೋಪ ಮಾಡುವ ವಿಪಕ್ಷಗಳಿಗೆ ಕೇಂದ್ರ ಸರ್ಕಾರ ಸಾಲ ಮಾಡಿರುವುದು ಗೊತ್ತಿಲ್ಲವೇ ಎಂದು ಪ್ರಶ್ನಿಸಿದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಸಚಿವರಾದ ಜಿ.ಪರಮೇಶ್ವರ, ಎಚ್.ಕೆ.ಪಾಟೀಲ, ಎನ್.ಎಸ್. ಬೋಸರಾಜು ಪಾಲ್ಗೊಂಡಿದ್ದರು.

ಶಾಸಕರಿಗೆ ಮುಖ್ಯಮಂತ್ರಿ ಪಾಠ

ಸಂಪನ್ಮೂಲಗಳು ಹೇಗೆ ಸಂಗ್ರಹ ಆಗುತ್ತವೆ? ಅದನ್ನು ಖರ್ಚು ಮಾಡುವುದಕ್ಕೆ ಹೇಗೆ ಯೋಜನೆ ರೂಪಿಸಲಾಗುತ್ತದೆ? ಮುಖ್ಯವಾಗಿ, ನಾವು ಖರ್ಚು ಮಾಡಿದ ಹಣದಿಂದ ಜನರಿಗೆ ನಿಜವಾಗಲೂ ಅನುಕೂಲ ಆಗುತ್ತಿದೆಯೇ? ಎಂಬುದನ್ನು ಶಾಸಕರು ಅರ್ಥ ಮಾಡಿಕೊಳ್ಳಬೇಕು ಎಂದು ಸಿದ್ದರಾಮಯ್ಯ ಹೇಳಿದರು.

ಈ ಎಲ್ಲಾ ವಿಚಾರಗಳ ಬಗ್ಗೆ ತಿಳಿದುಕೊಂಡರೆ ಬಜೆಟ್ ಮೇಲಿನ ಚರ್ಚೆಯಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಸಾಧ್ಯ ಎಂದು ಸಲಹೆ ನೀಡಿದರು.

ಬಳ್ಳಾರಿಯ ಖಾಸಗಿ ವಸತಿ ಶಾಲೆಯಲ್ಲಿ ನಡೆದಿದ್ದ ಸಹಪಾಠಿ ಹತ್ಯೆ ಪ್ರಕರಣ

ಬಾಲಕ ಪೊಲೀಸರ ಸುಪರ್ದಿಗೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿಯ ಖಾಸಗಿ ವಸತಿ ಶಾಲೆಯಲ್ಲಿ ಸಹಪಾಠಿಗಳ ಮೇಲೆ ಹಲ್ಲೆ ನಡೆಸಿ, ಒಬ್ಬನ ಸಾವಿಗೆ ಕಾರಣವಾದ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನನ್ನು ಪೊಲೀಸರು ಸೋಮವಾರ ತಮ್ಮ ಸುಪರ್ದಿಗೆ ಪಡೆದಿದ್ದಾರೆ.

ಬಾಲಕನು ಹತಾಶೆಯಿಂದ ಈ ಕೃತ್ಯವೆಸಗಿರುವುದು ಗೊತ್ತಾಗಿದೆ. ಆತನನ್ನು ನಗರದ ಶ್ರೀರಾಮಪುರ ಕಾಲೊನಿಯ ರೂಪನಗುಡಿ ರಸ್ತೆಯಲ್ಲಿ ವಶಕ್ಕೆ ಪಡೆಯಲಾಯಿತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹಾಸ್ಟೆಲ್ ವಾತಾವರಣ ತನಗೆ ಸಹ್ಯವಾಗಿರಲಿಲ್ಲ ಎಂದು ಬಾಲಕ ಪ್ರಾಥಮಿಕ ವಿಚಾರಣೆ ವೇಳೆ ಹೇಳಿಕೊಂಡಿದ್ದಾನೆ ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

'ಬಾಲಕನ ವಿಚಾರಣೆಯನ್ನು ಅತ್ಯಂತ ಎಚ್ಚರಿಕೆಯಿಂದ ಮಾಡುತ್ತಿದ್ದೇವೆ. ಇದಕ್ಕಾಗಿ ವೈದ್ಯಕೀಯ ತಜ್ಞರು, ಅಧಿಕಾರಿಗಳ ತಂಡ ರಚನೆ ಮಾಡಿಕೊಳ್ಳುತ್ತಿದ್ದೇವೆ. ಇದರಲ್ಲಿ ಪೊಲೀಸರು, ಮಾನಸಿಕ ತಜ್ಞರು, ವೈದ್ಯರು, ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಇರಲಿದ್ದಾರೆ. ಈ ಬಗ್ಗೆ ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದ (ವಿಮ್ಸ್) ಜತೆಗೆ ಮಾತನಾಡಿದ್ದೇವೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಸುಮನ್ ಡಿ.ಪಿ ತಿಳಿಸಿದರು.

'ಘಟನೆಗೆ ಕಾರಣವೇನು ಎಂಬುದರ ತನಿಖೆ ನಡೆಯುತ್ತಿದೆ. ಶಾಲೆಯವರು ಹಾಸ್ಟೆಲ್‌ಗೆ ಅನುಮತಿ ಪಡೆದಿದ್ದರೇ ಎಂಬುದರ ಬಗ್ಗೆ ಪರಿಶೀಲಿಸಲು ಜಿಲ್ಲಾ ಪಂಚಾಯಿತಿ ಸಿಇಒ ಅವರಿಗೆ ಪತ್ರ ಬರೆಯಲಾಗಿದೆ. ಶಾಲೆಯ ವೈಫಲ್ಯದ ಬಗ್ಗೆಯೂ ತನಿಖೆ ಮಾಡುತ್ತೇವೆ' ಎಂದು ಹೇಳಿದರು.

ಘಟನೆ ಬಳಿಕ ಬಾಲಕ ಬಳ್ಳಾರಿ ನಗರದಲ್ಲೇ ಇದ್ದ. ದೇವಸ್ಥಾನಗಳಲ್ಲಿ ನೀಡುವ ಪ್ರಸಾದ ಸೇವಿಸುತ್ತಾ ಎರಡು ದಿನ ಕಳೆದಿದ್ದ ಎನ್ನಲಾಗಿದೆ. ಶನಿವಾರ ರಾತ್ರಿ ನಡೆದ ಘಟನೆಯಲ್ಲಿ ಹೇಮಂತ್ ಡಿ. ಎಂಬ ಬಾಲಕ ಮೃತಪಟ್ಟಿದ್ದ. 7 ಮಂದಿ ಗಾಯಗೊಂಡಿದ್ದರು.

ಕರ್ನೂಲ್ ಆಸ್ಪತ್ರೆಗೆ: ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಮತ್ತೊಬ್ಬ ಬಾಲಕನನ್ನು ಕರ್ನೂಲಿನ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಇನ್ನುಳಿದವರು ಆಸ್ಪತ್ರೆಯಿಂದ ಮನೆಗೆ ಮರಳಿದ್ದಾರೆ.

> ಶಾಲಾ, ಕಾಲೇಜುಗಳಿಗೆ ಸರ್ಕಾರ ಅನುಮತಿ ನೀಡುತ್ತದೆ. ನಿಯಂತ್ರಿಸುತ್ತದೆ. ಅದೇ ರೀತಿ ಖಾಸಗಿ ವಸತಿ ಶಾಲೆಗಳ ನಿಯಂತ್ರಣಕ್ಕೂ ನಿರ್ದಿಷ್ಟ ನಿಯಮಗಳನ್ನು ರೂಪಿಸಲಾಗುವುದು
>
> **ಮಧು ಬಂಗಾರಪ್ಪ**, ಶಾಲಾ ಶಿಕ್ಷಣ ಸಚಿವ

ಸಹಪಾಠಿಗಳ ರಕ್ಷಿಸಿದ ಬಾಲಕ

'ಘಟನೆ ನಡೆದ ದಿನ 15 ವರ್ಷದ ಬಾಲಕನೊಬ್ಬ, ಹಲ್ಲೆಯನ್ನು ಮೆಟ್ಟಿ ತನ್ನ ಇಬ್ಬರು ಸಹಪಾಠಿಗಳನ್ನು ರಕ್ಷಿಸಿದ ಸಂಗತಿ ಗೊತ್ತಾಗಿದೆ. ಮೊದಲ ಮಹಡಿಯಲ್ಲಿ ಹಲ್ಲೆ ಮಾಡಿದ್ದ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ, ಮೇಲಿನ ಮಹಡಿಗೆ ತೆರಳಿದ್ದ. ಅಲ್ಲಿಗೆ ಬಂದ ಮತ್ತೊಬ್ಬ ಬಾಲಕ ಹಲ್ಲೆ ನಡೆಸದಂತೆ ಆರೋಪಿ ಬಾಲಕನನ್ನು ಬಿಗಿಯಾಗಿ ಹಿಡಿದಿದ್ದ. ನಂತರ ಬಾಗಿಲವರೆಗೆ ಎಳೆದೊಯ್ದು, ಹೊರದಬ್ಬಿ ಬಾಗಿಲು ಹಾಕಿದ್ದ. ಇಲ್ಲದೇ ಹೋಗಿದಿದ್ದರೆ 12 ವರ್ಷ ವಯಸ್ಸಿನ ಇಬ್ಬರು ಬಾಲಕರ ಜೀವ ಅಪಾಯಕ್ಕೆ ಸಿಲುಕುವ ಸಾಧ್ಯತೆ ಇತ್ತು' ಎಂದು ಮೂಲಗಳು ತಿಳಿಸಿವೆ.

ಬೇಡಿಕೆ ಈಡೇರಿಸಲು ಆರೋಗ್ಯ ಇಲಾಖೆ ನೌಕರರ ಹಕ್ಕೊತ್ತಾಯ

ಒಪಿಡಿ ಬಂದ್: ನಾಳೆಯಿಂದ ಮುಷ್ಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಬುಧವಾರದಿಂದ (ಮಾ. 11) ಆರೋಗ್ಯ ಇಲಾಖೆಯ ಅಧಿಕಾರಿಗಳು, ವೈದ್ಯರು, ನೌಕರರು ಹೊರರೋಗಿಗಳ ವಿಭಾಗದ (ಒಪಿಡಿ) ಕರ್ತವ್ಯ ಸ್ಥಗಿತಗೊಳಿಸಿ ಮುಷ್ಕರ ಆರಂಭಿಸಲಿದ್ದಾರೆ.

'2 ವಾರದ ಹಿಂದೆಯೇ ಮುಷ್ಕರ ನಡೆಸುವ ನಿರ್ಧಾರವನ್ನು ಪ್ರಕಟಿಸಲಾಗಿತ್ತು, ಸರ್ಕಾರದಿಂದ ಈವರೆಗೂ ಯಾವುದೇ ಸ್ಪಂದನ ಸಿಕ್ಕಿಲ್ಲ. ಸೋಮವಾರ ಸಂಜೆವರೆಗೂ ಮಾತುಕತೆಗೆ ಯಾರೂ ಆಹ್ವಾನಿಸಿಲ್ಲ. ಮಂಗಳವಾರ ಆಹ್ವಾನ ಬಂದರೆ ಹೋಗುತ್ತೇವೆ. ಇಲ್ಲದೇ ಇದ್ದರೆ ಮುಷ್ಕರ ನಿಗದಿಯಂತೆ ಶುರುವಾಗಲಿದೆ' ಎಂದು ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷ ಡಾ.ರವೀಂದ್ರನಾಥ ಎಂ.ಮೇಟಿ ಪ್ರಜಾವಾಣಿಗೆ ತಿಳಿಸಿದರು.

'ನಮ್ಮ ಒತ್ತಾಯದ ನಂತರ ಜಂಟಿ ನಿರ್ದೇಶಕರ ಹುದ್ದೆಗೆ ಬಡ್ತಿ ನೀಡುವ ಪಟ್ಟಿ ಪ್ರಕಟಿಸಿದ್ದರೂ ಪ್ರಭಾರ ಜವಾಬ್ದಾರಿ ಮಾತ್ರ ನೀಡಲಾಗಿದೆ. ಉಳಿಕೆ ಬೇಡಿಕೆಗಳ ಕುರಿತು ಯಾವುದೇ ಕ್ರಮ ಆಗಿಲ್ಲ. ನಮ್ಮ ಮುಷ್ಕರಕ್ಕೆ ಸರ್ಕಾರಿ ನೌಕರರ ಸಂಘವೂ ಬೆಂಬಲ ಸೂಚಿಸಿದ್ದು, ಜಿಲ್ಲಾ, ತಾಲ್ಲೂಕು ಮಟ್ಟದಲ್ಲೂ ಮುಷ್ಕರ ನಡೆಯಲಿದೆ' ಎಂದು ಹೇಳಿದರು.

'ವೈದ್ಯರ, ಸಿಬ್ಬಂದಿಗೆ ವೈದ್ಯಕೀಯ ಶಿಕ್ಷಣ ಇಲಾಖೆ ಮಾದರಿಯಲ್ಲಿ ವೇತನ ನೀಡಬೇಕು, ಗುತ್ತಿಗೆ ವೈದ್ಯ, ನೌಕರರು, ಎನ್‌ಎಚ್‌ಎಂ ಗುತ್ತಿಗೆ ನೌಕರರಿಗೆ ಭದ್ರತೆ ನೀಡಿ, ವೇತನ ಹೆಚ್ಚಿಸಬೇಕು. ಕೇಂದ್ರ ಪುರಸ್ಕೃತ ಯೋಜನೆಯಡಿ ಅಡಿ 6,000 ನೌಕರರಿಗೆ ವೇತನ ಭತ್ಯೆ ಕೊಡಬೇಕು. ಖಾಲಿ ಇರುವ 39 ಸಾವಿರ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು' ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ ಮಾಡಿ, ಜ್ಯೇಷ್ಠತಾ ಪಟ್ಟಿ ಪ್ರಕಟಿಸಬೇಕು ಎನ್ನುವ ಬೇಡಿಕೆಯೊಂದಿಗೆ ಮುಷ್ಕರಕ್ಕೆ ಕರೆ ನೀಡಲಾಗಿದೆ.

ಮಾ.15ರವರೆಗೆ ವೈದ್ಯರು, ಸಿಬ್ಬಂದಿ ಕಪ್ಪು ಪಟ್ಟಿ ಧರಿಸಿ ತುರ್ತು ಕರ್ತವ್ಯದಲ್ಲಿ ಭಾಗಿಯಾಗುವರು. ಆನಂತರವೂ ಸರ್ಕಾರದಿಂದ ಯಾವುದೇ ಸ್ಪಂದನ ಸಿಗದೇ ಇದ್ದರೆ ಮಾ. 16ರಿಂದ ಸಂಪೂರ್ಣ ಕೆಲಸ ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಮುಷ್ಕರ ಮುಂದುವರೆಸಲು ನಿರ್ಧರಿಸಲಾಗಿದೆ.

ವಿದ್ಯುತ್ ಗುತ್ತಿಗೆದಾರರ ಸಂಘದ ಪ್ರತಿಭಟನೆ ನಾಳೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘವು ಬುಧವಾರ (ಮಾ.11) ಬೆಳಿಗ್ಗೆ 10.30ಕ್ಕೆ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಿದೆ.

'ನಿರ್ಮಾಣ ಹಂತದಲ್ಲಿರುವ ಅಥವಾ ಪೂರ್ಣಗೊಂಡಿರುವ ಕಟ್ಟಡಗಳಿಗೆ ಸ್ವಾಧೀನಾನುಭವ ಪತ್ರ (ಒ.ಸಿ) ನೀಡುವ ಬಗ್ಗೆ ಸ್ಪಷ್ಟತೆ ನೀಡುವುದು ಸೇರಿದಂತೆ ನಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಗುವುದು' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ.ರಮೇಶ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಸುಪ್ರೀಂ ಕೋರ್ಟ್ ಆದೇಶದ ಅನ್ವಯ 2025ರ ಏಪ್ರಿಲ್ ನಂತರ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿರುವ ಹಾಗೂ ವಿವಿಧ ಹಂತಗಳಲ್ಲಿ ನಿರ್ಮಾಣ ಹಂತದಲ್ಲಿರುವ, ಪೂರ್ಣಗೊಂಡಿರುವ ಕಟ್ಟಡಗಳಿಗೆ ಸ್ವಾಧೀನಾನುಭವ ಪತ್ರ (ಒ.ಸಿ) ನೀಡುವ ಕುರಿತು ಸ್ಪಷ್ಟ ಮಾರ್ಗಸೂಚಿಗಳನ್ನು ಹೊರಡಿಸಬೇಕು. ರಾಜ್ಯದಾದ್ಯಂತ ಲಕ್ಷಾಂತರ ಗ್ರಾಹಕರು ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದು ಕಟ್ಟಡ ನಿರ್ಮಾಣ ಮಾಡುತ್ತಿದ್ದಾರೆ. ನಿರ್ಮಾಣವಾಗಿರುವ ಕಟ್ಟಡಗಳಿಗೆ ಸೂಕ್ತ ವಿನಾಯಿತಿ ನೀಡಿ ಗೊಂದಲ ಬಗೆಹರಿಸಬೇಕು' ಎಂದು ಆಗ್ರಹಿಸಿದರು.

'ಯಾವ ಕಟ್ಟಡಗಳಿಗೆ ಸ್ವಾಧೀನಾನುಭವ ಪತ್ರ ಕಡ್ಡಾಯ ಎಂಬುದನ್ನು ಸ್ಪಷ್ಟಪಡಿಸಬೇಕು. ನಕ್ಷೆ ಅನುಮೋದನೆ ಪಡೆಯದೇ ನಿರ್ಮಾಣವಾಗಿರುವ ಕಟ್ಟಡಗಳಿಗೆ ವಿದ್ಯುತ್ ನೀಡುವ ಸಂಬಂಧ ಬಾಕಿ ಇರುವ ಲಕ್ಷಾಂತರ ಅರ್ಜಿಗಳ ವಿಲೇವಾರಿಗೆ ವಿಶೇಷ ಕಾನೂನು ರೂಪಿಸಬೇಕು' ಎಂದು ಪ್ರಧಾನ ಕಾರ್ಯದರ್ಶಿ ಎಚ್.ವಿ.ಚಂದ್ರಬಾಬು ಒತ್ತಾಯಿಸಿದರು.

'ಕೆಎಸ್‌ಐಸಿ ಕಾರ್ಖಾನೆ ಮುಚ್ಚಲ್ಲ'

ಒಂದನೇ ಪುಟದಿಂದ...

'ಇಲ್ಲಿ ಪ್ರತಿದಿನ 350ರಿಂದ 400 ಸೀರೆಗಳನ್ನು ತಯಾರಿಸಲಾಗುತ್ತಿದೆ. ಬೇಡಿಕೆ ಹೆಚ್ಚು ಇರುವ ಕಾರಣ ಪೂರೈಕೆ ಮಾಡಲು ಸಾಧ್ಯವಾಗುತ್ತಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ಸೀರೆಗಳನ್ನು ತಯಾರಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು. ಸೀರೆ ತಯಾರಿಕೆಗೆ ಗುಣಮಟ್ಟದ ರೇಷ್ಮೆ ಗೂಡುಗಳನ್ನು ಖರೀದಿಸಲಾಗುತ್ತಿದೆ. ಗುಣಮಟ್ಟ ಇರದ ಗೂಡುಗಳನ್ನು ಕೆಲವರು ಪೂರೈಸುವುದರಿಂದಾಗಿ, ಅತ್ಯುತ್ತಮ ಗೂಡುಗಳಿಗೆ ಆಂಧ್ರ ಮತ್ತು ತಮಿಳುನಾಡಿನಿಂದಲೂ ಅಪಾರ ಬೇಡಿಕೆ ಇದೆ. ಅದರ ಖರೀದಿಗಾಗಿ ಸರದಿಯಲ್ಲಿ ಬಂದು ನಿಲ್ಲುತ್ತಾರೆ' ಎಂದು ಹೇಳಿದರು.

'ಈವರೆಗೆ ಆನ್‌ಲೈನ್ ಮೂಲಕ ಸೀರೆಗಳ ಖರೀದಿಗೆ ಅವಕಾಶ ಇತ್ತು, ಸ್ಥಳೀಯವಾಗಿ ವಿಪರೀತ ಬೇಡಿಕೆ ಇರುವುದರಿಂದ ಮೊದಲಿಗೆ ಸ್ಥಳೀಯರಿಗೆ ಸೀರೆ ಅವಕಾಶ ನೀಡಲು ಆನ್‌ಲೈನ್ ಮೂಲಕ ಮಾರಾಟವನ್ನು ನಿಲ್ಲಿಸಲಾಗುವುದು' ಎಂದು ಹೇಳಿದರು.

ವಿಷಯ ಪ್ರಸ್ತಾಪಿಸಿದ ಶ್ರೀವತ್ಸ ಅವರು, 'ಮೈಸೂರು ಸಿಲ್ಕ್ ಸೀರೆಗಳಿಗೆ ವ್ಯಾಪಕ ಬೇಡಿಕೆ ಇರುವುದರಿಂದ ಜನರು ಮುಂಜಾನೆಯೇ ಸೀರೆ ಖರೀದಿಗೆ ಕೂಪನ್ ಪಡೆಯಲು 500ರಿಂದ 600 ಜನ ಸಾಲಿನಲ್ಲಿ ನಿಂತಿರುತ್ತಾರೆ. ಎಲ್ಲರಿಗೂ ಸೀರೆ ಸಿಗುತ್ತಿಲ್ಲ. ಜನರ ಬೇಡಿಕೆ ಪೂರೈಸಲು ಸೀರೆಗಳ ತಯಾರಿಕೆಯನ್ನು ಹೆಚ್ಚಿಸಬೇಕು. ಇದಕ್ಕಾಗಿ ಹೆಚ್ಚಿನ ಬಂಡವಾಳ ತೊಡಗಿಸಬೇಕು' ಎಂದರು.

ನಮ್ಮ ಹೋರಾಟಕ್ಕೆ ಸಂದ ಜಯ: ಅಶೋಕ



ಆರ್ ಅಶೋಕ

'ಕೆಎಸ್‌ಐಸಿ ಫಿಲೇಚರ್ ಕಾರ್ಖಾನೆಯ 5 ಎಕರೆ ಜಾಗದಲ್ಲಿ ಕ್ರೀಡಾಂಗಣ ನಿರ್ಮಿಸುವ ಪ್ರಸ್ತಾವವನ್ನು ಕೈಬಿಟ್ಟಿರುವುದಾಗಿ ಸಚಿವರು ಭರವಸೆ ನೀಡಿದ್ದಾರೆ. ಇದರಿಂದ ಮೈಸೂರು ಸಿಲ್ಕ್ ಉದ್ದಿಮೆಯನ್ನು ಉಳಿಸುವ ನಮ್ಮ ಹೋರಾಟಕ್ಕೆ ಜಯ ಸಿಕ್ಕಿದಂತಾಗಿದೆ' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

'ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1912ರಲ್ಲಿ ಸ್ಥಾಪಿಸಿದ ಈ ಕಾರ್ಖಾನೆಯ 5 ಎಕರೆ ಜಾಗದಲ್ಲಿ ಕ್ರೀಡಾಂಗಣ ನಿರ್ಮಿಸಲು 100 ವರ್ಷಗಳಿಗೂ ಹಳೆಯದಾದ 500 ಮರಗಳನ್ನು ಕಡಿದು, ಶತಮಾನದ ಹಳೆಯ ರೇಷ್ಮೆ ಉದ್ಯಮ ಹಾಗೂ ಅಪರೂಪದ ಜೀವ ವೈವಿಧ್ಯವನ್ನು ನಾಶ ಮಾಡಲು ಸರ್ಕಾರ ಮುಂದಾಗಿತ್ತು. ಇದರ ವಿರುದ್ಧ ಕಾರ್ಮಿಕರು ಹೋರಾಟದಲ್ಲಿ ತೊಡಗಿದ್ದರು. ಹೋರಾಟವನ್ನು ಬೆಂಬಲಿಸಿದ್ದೆವು' ಎಂದು ತಿಳಿಸಿದರು.

'ವರ್ಷಕ್ಕೆ ಸುಮಾರು ₹97 ಕೋಟಿ ಲಾಭ ಮಾಡುತ್ತಿದ್ದ ಈ ಪಾರಂಪರಿಕ ಸಾರ್ವಜನಿಕ ಉದ್ದಿಮೆಯನ್ನು ಮುಚ್ಚಲು ಹೊರಟಿದ್ದ ಕಾಂಗ್ರೆಸ್ ಸರ್ಕಾರಕ್ಕೆ ಕಡೆಗೂ ಜ್ಞಾನೋದಯವಾಗಿದೆ. ಇಲ್ಲಿನ ಕಾರ್ಮಿಕರಿಗೆ ಅತ್ಯಂತ ಕಡಿಮೆ ವೇತನ ನೀಡಲಾಗುತ್ತಿದೆ. ಸಂಬಳ ಹೆಚ್ಚಿಸಲು ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು' ಎಂದೂ ಆಗ್ರಹಿಸಿದರು.

ಕಾಂತಾವರ ಕನ್ನಡ ಸಂಘ: ಪ್ರಶಸ್ತಿ ಘೋಷಣೆ

ಪ್ರಜಾವಾಣಿ ವಾರ್ತೆ



ದಾಮೋದರ ಆಚಾರ್ಯ



ಶಕುಂತಳಾ ಭಟ್



ಶಂಕರ್ ಭಟ್



ಗಣಪತಿ ಭಟ್

ಮೂಡುಬಿದಿರೆ (ದಕ್ಷಿಣ ಕನ್ನಡ): ಕಾಂತಾವರ ಕನ್ನಡ ಸಂಘವು ವಿವಿಧ ದತ್ತಿನಿಧಿ ಪ್ರಶಸ್ತಿ ಹಾಗೂ ವಾರ್ಷಿಕ ಗೌರವ ಪ್ರಶಸ್ತಿ ಪ್ರಕಟಿಸಿದೆ.

ಗಮಕಿ ಸತೀಶ್ ಕುಮಾರ್ ಕೆಮ್ಮಣ್ಣು ಅವರು ಸ್ಥಾಪಿಸಿರುವ ದತ್ತಿನಿಧಿಯ 'ಗಮಕಕಲಾ ಪ್ರವಚನ' ಪ್ರಶಸ್ತಿಗೆ ಮುಳಿಯ ಶಂಕರ ಭಟ್ಟ, ಗಮಕಿ ಯಾಮಿನಿ ಭಟ್ ಉಡುಪಿ ಅವರ ದತ್ತಿನಿಧಿಯ 'ಗಮಕಕಲಾ ವಾಚನ' ಪ್ರಶಸ್ತಿಗೆ ಪದ್ಯಾಣ ಗಣಪತಿ ಭಟ್, ಕಾರ್ಕಳದ ಶಿಲ್ಪಿ ದಿ.ಕೆ.ಶ್ಯಾಮರಾಯ ಆಚಾರ್ಯ ಅವರ ದತ್ತಿನಿಧಿಯ 'ಶಿಲ್ಪಕಲಾ ಪ್ರಶಸ್ತಿ'ಗೆ ಪಿ.ದಾಮೋದರ ಆಚಾರ್ಯ ಕಾರ್ಕಳ ಅವರು ಆಯ್ಕೆಯಾಗಿದ್ದಾರೆ.

ಕನ್ನಡ ಸಂಘದ ಸುವರ್ಣ ಸಂಭ್ರಮದ ಸಂದರ್ಭದಲ್ಲಿ ಸಾಹಿತ್ಯ ಕ್ಷೇತ್ರದ ಜೀವಮಾನದ ಸಾಧನೆಗಾಗಿ ನೀಡಲಾಗುವ ವಾರ್ಷಿಕ ಗೌರವ ಪ್ರಶಸ್ತಿಗೆ ಶಕುಂತಳಾ ಭಟ್ ಹಳೆಯಂಗಡಿ ಅವರನ್ನು ಆಯ್ಕೆ ಮಾಡಲಾಗಿದೆ. ಮಾರ್ಚ್ 15ರಂದು ಕಾಂತಾವರದ 'ಕನ್ನಡ ಭವನ'ದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದ್ದು, ಪ್ರೊ.ಡಿ.ಎ. ಶಂಕರ್ ಮೈಸೂರು ಅವರಿಗೆ 2025ರ ಸಾಲಿನ ಮುದ್ದಣ ಕಾವ್ಯ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ದತ್ತಿನಿಧಿಯ ಪ್ರಶಸ್ತಿಗಳು ತಲಾ ₹10 ಸಾವಿರ ನಗದು ಹಾಗೂ ವಾರ್ಷಿಕ ಗೌರವ ಪ್ರಶಸ್ತಿಯು ₹5 ಸಾವಿರ ನಗದು ಒಳಗೊಂಡಿದೆ.

ಹರಿಕೃಷ್ಣ ಪುನರೂರು ಅಧ್ಯಕ್ಷತೆಯಲ್ಲಿ ನಡೆಯುವ ಸಮಾರಂಭದ ಉದ್ಘಾಟನೆಯನ್ನು ಕವಿ ಬೆಂಗಳೂರಿನ ಪ್ರೊ.ಟಿ.ಯಲ್ಲಪ್ಪ ನೆರವೇರಿಸುವರು. 'ನಾಡಿಗೆ ನಮಸ್ಕಾರ' ಗ್ರಂಥಮಾಲೆಯ 9 ಹೊಸ ಕೃತಿಗಳನ್ನು ಹಂಪಿ ವಿ.ವಿ.ಯ ನಿವೃತ್ತ ಪ್ರಾಧ್ಯಾಪಕ ಎ.ಸುಬ್ಬಣ್ಣ ರೈ ಬಿಡುಗಡೆ ಮಾಡಲಿದ್ದಾರೆ ಎಂದು ಕಾಂತಾವರ ಕನ್ನಡ ಸಂಘದ ಪ್ರಕಟಣೆ ತಿಳಿಸಿದೆ.



ಬಾತ್ರೂಮ್ ಕ್ಯಾಂಪಿಂಗ್!

• ಡಾ. ಕೆ.ಎಸ್. ಚೈತ್ರಾ

ನಿಮಗೆ ಮನೆಯಲ್ಲಿ ನಿಮಗೆ ಅತ್ಯಂತ ಇಷ್ಟವಾಗುವ ಸ್ಥಳ ಯಾವುದು? ಅಡುಗೆಮನೆ, ಬಾಲ್ಕನಿ, ಹಾಲ್, ಬೆಡ್ರೂಮ್ – ಯಾವುದೂ ಅಲ್ಲ; ಬದಲಿಗೆ ನಿತ್ಯಕರ್ಮಕ್ಕೆ ಬಳಸುವ 'ಬಾತ್ರೂಮ್'– ಶೌಚದ ಕೋಣೆ – ಎಂದರೆ ಆಶ್ಚರ್ಯವಾಗುವುದು ಸಹಜ. ಆದರೆ 'ಜನರೇಷನ್ ಜೆಡ್'ಗೆ(ಹದಿನಾರರಿಂದ ಇಪ್ಪತ್ತೆಂಟು ವರ್ಷ) ಬಾತ್ರೂಮ್ ಅಚ್ಚುಮೆಚ್ಚಿನ ಮಾತ್ರವಲ್ಲ, ರಿಲಾಕ್ಸ್ ಆಗಲು ಅತ್ಯುತ್ತಮ ಜಾಗ! ಸಾಮಾನ್ಯವಾಗಿ ಐದರಿಂದ ಹದಿನೈದು ನಿಮಿಷಗಳ ಕಾಲ ಸ್ನಾನ–ಶೌಚಾದಿಗಳನ್ನು ಮುಗಿಸಿ ಬಾತ್ರೂಮಿನಿಂದ ಹೊರಬರುವುದು ಸರಿ. ಆದರೆ ಇದ್ಯಾವ ಉದ್ದೇಶವೇ ಇಲ್ಲದೇ ಗಂಟೆಗಟ್ಟಲೆ ಅಲ್ಲಿಯೇ ಕುಳಿತು ರಿಲ್ಯಾಕ್ಸ್ ಆಗುವುದು, ಚಿಕ್ಕ ಬ್ರೇಕ್ ಪಡೆಯುವುದು ಯುವಜನರ ಹೊಸ ಟ್ರೆಂಡ್. ಇದನ್ನು 'ಬಾತ್ರೂಮ್ ಕ್ಯಾಂಪಿಂಗ್' ಎಂದು ಕರೆಯಲಾಗುತ್ತದೆ.

ಬಾತ್ರೂಮ್ ಕ್ಯಾಂಪಿಂಗ್ ಹೊಸ ಶಬ್ದವೇನಲ್ಲ; 'ಕ್ಯಾಂಪಿಂಗ್' ಎಂದರೆ ಮನೆಯಿಂದ ದೂರವಾಗಿ ಹೊರಾಂಗಣದಲ್ಲಿ ತಾತ್ಕಾಲಿಕವಾಗಿ ತಂಗುವ ಡೇರೆ ಅಥವಾ ಶಿಬಿರಗಳು. ಆರಂಭದಲ್ಲಿ ಬಾತ್ರೂಮ್‌ನಲ್ಲಿ ಹೆಚ್ಚು ಕಾಲ ಕಳೆಯುವುದನ್ನು ಸೂಚಿಸುವ ತಮಾಷೆಯ ಪದ ಇದಾಗಿತ್ತು. ಆದರೆ ಕೋವಿಡ್‌ನಿಂದಾಗಿ 2020ರಲ್ಲಿ ಮನೆಯಲ್ಲಿಯೇ ಎಲ್ಲರೂ ಇರುವ ಅನಿವಾರ್ಯ ಸಂದರ್ಭ ಎದುರಾಯಿತು. ಆಗ ಖಾಸಗಿಯಾಗಿ ಕೆಲವು ಕ್ಷಣ ಕಳೆಯಲು ಈ ಪ್ರವೃತ್ತಿ ಹೆಚ್ಚಾಯಿತು. ಇದೇ ಸಮಯದಲ್ಲಿ ಸ್ಮಾರ್ಟ್ ಫೋನ್‌ಗಳ ಬಳಕೆ ಹೆಚ್ಚಿತು. ಆನ್‌ಲೈನ್ ಕ್ಲಾಸ್, ಟಿಕ್‌ಟಾಕ್ ವೀಕ್ಷಣೆ, ವಾಟ್ಸ್‌ಆ್ಯಪ್ – ಹೀಗೆ ಎಲ್ಲವನ್ನೂ ತಮ್ಮಿಷ್ಟದಂತೆ ನೋಡಲು ಬಾತ್ರೂಮ್ ಉತ್ತಮ ಸ್ಥಳ ಎನಿಸಿತು. ಹಾಗೆ ಆರಂಭವಾದದ್ದು ಇದೀಗ ಟ್ರೆಂಡ್ ಆಗಿದೆ. 'ಕಾಲೇಜು, ಕೆಲಸ, ಓದು – ಹೀಗೆ ಬ್ಯುಸಿ ಬದುಕು ನಮ್ಮದು. ಅದರೊಂದಿಗೆ ಹಾಗೆ ಮಾಡು ಎನ್ನುವ ಸಲಹೆ, ಹೀಗೇಕೆ – ಎನ್ನುವ ಪ್ರಶ್ನೆಗಳಂತೂ ಸದಾ ಇದ್ದದ್ದೇ. ಬರೀ ಕಾಲೇಜು, ಆಫೀಸಿನಲ್ಲಿ ಮಾತ್ರವಲ್ಲ. ಮನೆಗೆ ಬಂದರೂ ಜವಾಬ್ದಾರಿ, ಕರೆಗಳು – ಹೀಗೆ ಒತ್ತಡ ಸದಾ ಇದ್ದದ್ದೇ! ಇವೆಲ್ಲದರಿಂದ ದೂರವಾಗಿ ಒಂದಷ್ಟು ಹೊತ್ತು ನಾವಾಗಿ ಇರಬಹುದಾದ ಜಾಗವೆಂದರೆ ಬಾತ್ರೂಮ್. ಇಲ್ಲಿ ಎಲ್ಲದರಿಂದ ತಪ್ಪಿಸಿಕೊಂಡು ಸುಮ್ಮನೇ ಇರಬಹುದು. ಕಾಲೇಜು, ಮನೆ ಮಾತ್ರವಲ್ಲ, ಎಷ್ಟೋ ಸಲ ಪಾರ್ಟಿ-ಫಂಕ್ಷನ್‌ಗಳಲ್ಲೂ ಹೀಗೆ ಬಾತ್ರೂಮ್‌ನಲ್ಲಿ ಸಮಯವನ್ನು ಕಳೆದಿದ್ದೇವೆ. ಒಂಥರಾ ರಿಚಾರ್ಜ್ ಆಗಲು ನಮ್ಮ ಸೇಫ್ ಸ್ಪೇಸ್ ಇದು' ಎನ್ನುವುದು ಯುವಜನರ ಅಭಿಪ್ರಾಯ.

ಬಾತ್ರೂಮ್ ಎನ್ನುವುದು ಯಾಕೆ ಇವರ ಆಯ್ಕೆಯಾಗಿದೆ ಎಂದರೆ ಸಾಮಾನ್ಯವಾಗಿ ಬಾಗಿಲನ್ನು ಮುಚ್ಚಿ ಭದ್ರವಾಗಿ ಇರಿಸಿದರೆ, ಯಾರಿಗೂ ಪ್ರವೇಶವಿಲ್ಲದ ಒಂದು ಪ್ರತ್ಯೇಕ ಸ್ಥಳ ಬಾತ್ರೂಮ್. ಮನೆ, ಕಾಲೇಜು, ಕೆಲಸದ ಸ್ಥಳ – ಹೀಗೆ ಎಲ್ಲಿಯೂ ಖಾಸಗಿಯಾಗಿ ಕೆಲವು ಕ್ಷಣಗಳನ್ನು ಕಳೆಯಬಹುದಾದಂತಹ ಈ ಸ್ಥಳ ಸುರಕ್ಷಿತವಾದದ್ದು. ಸುಮ್ಮನೆ ಕುಳಿತಿರುವುದು, ಮೊಬೈಲ್ ನೋಡು, ಡೈರಿ ಬರಿ, ಗೇಮ್ ಆಡು, ಚಾಟ್ ಮಾಡು, ಹಾಡು ಕೇಳು – ಹೀಗೆ ತಮಗೆ ಇಷ್ಟ ಬಂದಂತೆ ಯಾವ ಅಡ್ಡಿಯೂ ಇಲ್ಲದೆ ಗಂಟೆಗಟ್ಟಲೆ ಸಮಯ ಕಳೆಯಲು ಇದು ಅತ್ಯುತ್ತಮ ಜಾಗ!

ಈ ಬಾತ್ರೂಮ್ ಕ್ಯಾಂಪಿಂಗ್ ಮಾನಸಿಕ ಆರೋಗ್ಯದ ದೃಷ್ಟಿಯಿಂದ ಕೆಲಮಟ್ಟಿಗೆ ಸಹಕಾರಿ. ಸಾಮಾನ್ಯವಾಗಿ ಎಲ್ಲ ಕಡೆಯೂ ಇರುವ ಬಾತ್ರೂಮ್ ವಿಶೇಷವಾದ ಖರ್ಚಿಲ್ಲದೆ ಸುಲಭವಾಗಿ ಸಿಗುವ ಒಂದು ಖಾಸಗಿ ಸ್ಥಳ. ಹೊರಪ್ರಪಂಚದ ಸದ್ದು, ಮಾತುಕತೆ ಗದ್ದಲ, ಟಿ.ವಿ.-ಮೊಬೈಲಿನ ಹಾವಳಿ, ದೂರು-ಉಪದೇಶ – ಹೀಗೆ ಮನಸ್ಸು ಅಗತ್ಯಕ್ಕಿಂತ ಹೆಚ್ಚು ಪ್ರಚೋದನೆಗೊಂಡಾಗ ಇವೆಲ್ಲದರಿಂದ ದೂರವಾಗಿ ತನ್ನಷ್ಟಕ್ಕೆ ತಾನು ಬಾತ್ರೂಮಿನಲ್ಲಿ ಕಳೆಯುವ ಕೆಲವು ಕ್ಷಣಗಳು ಒತ್ತಡವನ್ನು ಕಡಿಮೆ ಮಾಡಬಲ್ಲದು. ಸ್ವಲ್ಪ ಹೊತ್ತಿನ ಏಕಾಂತದಲ್ಲಿ ದೀರ್ಘವಾಗಿ ಉಸಿರಾಡಿ, ನಿಧಾನವಾಗಿ ಯೋಚಿಸುವುದು, ಭಾವನೆಗಳನ್ನು ಹತೋಟಿಯಲ್ಲಿಡಲು ಖಂಡಿತವಾಗಿಯೂ ಸಹಾಯವನ್ನು ಮಾಡುತ್ತದೆ. ಅದೇ ರೀತಿ ಸಿಟ್ಟು, ದುಃಖ, ಅಸಹನೆಗಳಂಥವನ್ನು ಬೇರೆಯವರ ಎದುರು ಏಕಾಏಕಿ ಹೊರಹಾಕುವುದರ ಬದಲು ಒಬ್ಬರೇ ಕುಳಿತು ಅದರ ಬಗ್ಗೆ ಯೋಚಿಸಿ ಅದನ್ನು ಗುರುತಿಸಲು ಏಕಾಂತ ಒದಗಿಸಲು ಬಾತ್ರೂಮ್ ಒಳ್ಳೆಯ ಸ್ಥಳ. ಹಾಗೆಯೇ, ವಿದ್ಯಾರ್ಥಿಗಳಿಗೆ ಗುಂಪುಗಳಲ್ಲಿದ್ದಾಗ ಯಾವುದಾದರೂ ಅಹಿತಕರ ಘಟನೆ ಸಂದರ್ಭವನ್ನು ಮುಖಾಮುಖಿಯಾಗಿ ಎದುರಿಸುವುದರ ಬದಲು ಅದರಿಂದ ಹೊರಬಂದು, ಬದಲಿ ಮಾರ್ಗವನ್ನು ಯೋಚಿಸಲು ಬಾತ್ರೂಮ್ ಉತ್ತಮ ಸ್ಥಳ.

ಆದರೆ ಬಾತ್ರೂಮ್ ಎನ್ನುವುದು ನಿರ್ದಿಷ್ಟ ಉದ್ದೇಶಕ್ಕಾಗಿ ಬಳಸುವ ಸ್ಥಳ; ಅದಕ್ಕಾಗಿಯೇ ಬಳಕೆಯಾಗಬೇಕು. ಈಗಾಗಲೇ ಸಂವಹನ, ಪರಸ್ಪರ ಸಂಪರ್ಕಗಳು ಕಡಿಮೆಯಾಗಿ ಸಂಬಂಧಗಳೇ ದುರ್ಬಲವಾಗುತ್ತಿರುವ ಸಂದರ್ಭದಲ್ಲಿ ಹೀಗೆ ತಮ್ಮನ್ನು ತಾವು ಪ್ರತ್ಯೇಕಿಸಿಕೊಳ್ಳುವುದು ಸರಿಯೇ ಎನ್ನುವ ಪ್ರಶ್ನೆ ಮೂಡುತ್ತದೆ. ಅದರೊಂದಿಗೆ ಯುವಜನರಲ್ಲಿ ಮೊಬೈಲ್ ಚಟ ಜಾಗತಿಕವಾಗಿ ಗಂಭೀರ ಸಮಸ್ಯೆಯಾಗಿದೆ. ಹೀಗಿರುವಾಗ 'ಪ್ರೈವೆಸಿ' ಹೆಸರಿನಲ್ಲಿ ಬಾತ್ರೂಮಿನಲ್ಲಿ ಒಬ್ಬರೇ ಕುಳಿತು ಸಮಯ ಸಂದರ್ಭ ಮರೆತು, ನಿರಂತರ ಮೊಬೈಲ್ ವೀಕ್ಷಣೆ, ಅತ್ಯಂತ ಅಪಾಯಕಾರಿ. ಜೊತೆಗೆ ಬೆನ್ನು ಬಗ್ಗಿಸಿ-ತಲೆತಗ್ಗಿಸಿ, ತಪ್ಪಾದ ಭಂಗಿಯಲ್ಲಿ ಕುಳಿತು ಬೆನ್ನು-ಕತ್ತು-ಕಣ್ಣುನೋವು ನಿರೀಕ್ಷಿತವೇ. ತಾಸುಗಟ್ಟಲೇ ಕುಳಿತು ಕಾಲಿಗೆ ರಕ್ತಚಲನೆಯು ಕಡಿಮೆಯಾಗುತ್ತದೆ. ಬಾತ್ರೂಮಿನಲ್ಲಿ ಸ್ನಾನ-ಶೌಚಕ್ರಿಯೆಗಳು ನಡೆಯುವುದರಿಂದ ಅಲ್ಲಿನ ಗಾಳಿಯಲ್ಲಿ ಸಹಜವಾಗಿಯೇ ಸೂಕ್ಷ್ಮಾಣುಜೀವಿಗಳು ಹೆಚ್ಚಿರುತ್ತದೆ. ಅಗತ್ಯಕ್ಕಿಂತ ಹೆಚ್ಚು ಕಾಲ ಕಳೆದಲ್ಲಿ ಸೋಂಕು ಬರುವ ಸಾಧ್ಯತೆ ಖಂಡಿತವಾಗಿಯೂ ಇದೆ. ಹಾಗೆಯೇ ಕಾಲೇಜು ಅಥವಾ ಕಚೇರಿಗಳಲ್ಲಿ ಹೆಚ್ಚು ಸಮಯ ಬಾತ್ರೂಮ್ ಬಳಸಿದರೆ ನಿಜವಾಗಿಯೂ ಅಗತ್ಯವಿರುವವರಿಗೆ ತೊಂದರೆಯಾಗುತ್ತದೆ. ಪದೇ ಪದೇ ಈ ರೀತಿ ಬಾತ್ರೂಮಿಗೆ ಹೋಗುವ ಅಭ್ಯಾಸವಾದರೆ ಅದು ಸಮಸ್ಯೆಗೆ ಪರಿಹಾರ ಹುಡುಕುವ ಬದಲು ತಪ್ಪಿಸಿಕೊಳ್ಳುವ, ಜವಾಬ್ದಾರಿಯಿಂದ ಪಾರಾಗುವ ಮಾರ್ಗವಾಗುತ್ತದೆ. ಸುಮ್ಮನೆ ಹೀಗೆ ಹೊತ್ತು ಕಳೆಯುವುದರಿಂದ ದಿನಚರಿ, ಓದು, ಕೆಲಸ ಎಲ್ಲದರ ಮೇಲೂ ಪರಿಣಾಮವನ್ನು ಬೀರುತ್ತದೆ. ಇದರಿಂದ ಕುಟುಂಬದವರು, ಶಿಕ್ಷಕರು, ಸಹೋದ್ಯೋಗಿಗಳ ಸಂಶಯಕ್ಕೆ ಕಾರಣವಾಗಬಹುದು. ಎಲ್ಲಕ್ಕಿಂತ ಮುಖ್ಯವಾಗಿ, ಆತಂಕ- ಖಿನ್ನತೆ- ಕೀಳರಿಮೆ ಮುಂತಾದ ಮಾನಸಿಕ ಸಮಸ್ಯೆಗಳನ್ನು ಸೂಚಿಸುವ ನಡವಳಿಕೆಯು ಇದಾಗಿರಬಹುದು.

ಹೀಗಾಗಿ ಬಾತ್ರೂಮ್ ಕ್ಯಾಂಪಿಂಗ್ ಆಗಾಗ್ಗೆ ಕೆಲವು ನಿಮಿಷಗಳಿಗೆ ಸೀಮಿತವಾಗಿದ್ದರೆ ಮಾತ್ರ 'ಮಿ ಟೈಮ್' ಆಗಿ ಆ ಕ್ಷಣದ ಒತ್ತಡ ಪರಿಹಾರ ಮಾಡಬಲ್ಲದು. ಹಾಗೆಯೇ ಮುಂದುವರಿದರೆ ವೃತ್ತಿ ಮತ್ತು ಸಾಮಾಜಿಕ ಜೀವನದಲ್ಲಿ ಅನೇಕ ರೀತಿಯ ಸಮಸ್ಯೆಗಳಿಗೆ ಕಾರಣವಾಗುತ್ತದೆ.



ಬೇಸಿಗೆಯ ಬಿಸಿ ಮಕ್ಕಳಿಗೆ ಕಸಿವಿಸಿ

• ಡಾ. ವೀಣಾ ಎನ್. ಸುಳ್ಯ

ಪರೀಕ್ಷೆಯ ಬಿಸಿಯಲ್ಲಿ ಬೇಯುತ್ತಿದ್ದ ಮನಸ್ಸು ಹಗುರಾಗಬೇಕು ಎಂದು ಬಯಸಿದಾಗ ಪ್ರಕೃತಿಯ ಬೇಸಿಗೆಯ ಬಿಸಿ ಮಕ್ಕಳನ್ನು ಸತಾಯಿಸುತ್ತದೆ. ಋತುಮಾನಗಳ ವ್ಯತ್ಯಾಸ ಪ್ರಕೃತಿಯ ನಿಯಮವೇಯಾದರೂ ಅದಕ್ಕೆ ತಕ್ಕಂತೆ ಹೊಂದಿಕೊಳ್ಳುವುದು ಎಳೆಯ ಮಕ್ಕಳಿಗೆ ಕಷ್ಟವಾಗುತ್ತದೆ.

ಬೇಸಿಗೆಯ ತೊಂದರೆಗಳು

- **ಬಿಸಿಲಿನ ಬೇಗೆ:** ವಿಪರೀತ ಸೆಕೆ, ಬೆವರುವುದು, ಶರೀರದಲ್ಲಿ ನೀರಿನ ಅಂಶ ಕಡಿಮೆಯಾಗುವುದು
- ಬೇಸಿಗೆಯಲ್ಲಿ ಸೂರ್ಯನ 'ಯುವಿ' ಕಿರಣಗಳು ಅತ್ಯಂತ ಪ್ರಬಲವಾಗಿರುತ್ತವೆ. ಇದರಿಂದ ಮಕ್ಕಳ ಚರ್ಮಕ್ಕೆ ಹಾನಿಯಾಗುವ ಸಾಧ್ಯತೆ ಹೆಚ್ಚು. ಚರ್ಮವು ನೋವಿನೊಂದಿಗೆ ಕೆಂಪಾಗಾಗುವುದು, ಉರಿಯುವುದು, ಸಣ್ಣಸಣ್ಣ ಗುಳ್ಳೆಗಳು ಏಳುವುದು, ತುರಿಸುವುದು (ಸನ್ ಬರ್ನ್) ಉಂಟಾಗಬಹುದು. ಕೆಲವು ದಿನಗಳ ನಂತರ ಚರ್ಮ ಒಳಗೆ ಸಿಪ್ಪೆ ಸುಲಿಯಲು ಪ್ರಾರಂಭವಾಗಬಹುದು.
- ವಾತಾವರಣದಲ್ಲಿ ಶಾಖವು ಹೆಚ್ಚಾಗುವುದರಿಂದ, ಉಸಿರಾಡುವ ಗಾಳಿಯು ಬಿಸಿಯಾಗಿ ಮೂಗಿನ ರಕ್ತನಾಳಗಳು ಒಡೆದು, ಮೂಗಿನಿಂದ ರಕ್ತಸ್ರಾವವಾಗಬಹುದು (ಎಪಿಸ್ಟ್ಯಾಕ್ಸಿಸ್).
- ಬೆವರಿನ ಮೂಲಕ ಲವಣ ಮತ್ತು ನೀರು ಹೊರಹಾಕುವುದರಿಂದ ಅತಿಯಾದ ಬಾಯಾರಿಕೆ ಉಂಟಾಗಬಹುದು.
- ಕುತ್ತಿಗೆ ಭುಜ ಬೆನ್ನು ಇತ್ಯಾದಿ ಸ್ಥಳಗಳಲ್ಲಿ ಬೆವರು ನಿಂತು, ಸೆಕೆಬೊಕ್ಕೆಗಳು ಏಳಬಹುದು.
- ಬಿಸಿಲಿನ ದಾಹವನ್ನು ಕಡಿಮೆ ಮಾಡಲೆಂದು ತಂಪುನೀರನ್ನು ಕುಡಿಯುವುದರಿಂದ, ಗಂಟಲಿನಲ್ಲಿ ಸಹಜ ಉಷ್ಣತೆಗಿಂತ ಕಡಿಮೆಯಾದಾಗ ನಿಶ್ಚಲ ಸ್ಥಿತಿಯಲ್ಲಿದ್ದ ಬ್ಯಾಕ್ಟೀರಿಯಾಗಳು ತಕ್ಷಣ ಸಾವಿರಾರು ಸಂಖ್ಯೆಯಲ್ಲಿ ಬೆಳೆದು ಗಂಟಲಿನ ನಂಜಿಗೆ ಕಾರಣವಾಗಿ, ಗಂಟಲಿನಲ್ಲಿ ನಂಜು, ಶೀತ, ಕೆಮ್ಮು ಉಂಟಾಗಬಹುದು.
- ಸಿಕ್ಕ ಸಿಕ್ಕ ನೀರು / ಪಾನೀಯಗಳನ್ನು ಕುಡಿಯುವುದರಿಂದ ಬ್ಯಾಕ್ಟೀರಿಯಾ, ವೈರಾಣು, ಅಮೀಬಿಯಾಸಿಸ್ ಕಾಯಿಲೆಗಳಿಂದ ಹೊಟ್ಟೆನೋವು, ವಾಂತಿ–ಭೇದಿಗಳು ಕಾಡಬಹುದು.
- ತೀವ್ರವಾದ ಬಿಸಿಲಿನ ಕಾರಣದಿಂದ ಸುಸ್ತು ನಿಶ್ಶಕ್ತಿ ಕಾಣಿಸಿಕೊಳ್ಳುವುದರ ಜೊತೆಗೆ, ತಲೆ ತಿರುಗುವುದು, ಗೊಂದಲ, ಉಸಿರಾಟದಲ್ಲಿ ಏರುಪೇರು, ಹೃದಯಬಡಿತದಲ್ಲಿ ವ್ಯತ್ಯಾಸ, ವಾಕರಿಕೆ / ವಾಂತಿ, ಸ್ನಾಯುಸೆಳೆತ, ಪ್ರಜ್ಞೆ ತಪ್ಪುವಂತಹ ಸ್ಥಿತಿ ಉಂಟಾಗಬಹುದು (ಹೀಟ್ ಸ್ಟ್ರೋಕ್).
- ಹಳ್ಳಿಗಳಲ್ಲಿ ಬೇಸಿಗೆಯ ತಾಪಮಾನವನ್ನು ತಪ್ಪಿಸಿಕೊಳ್ಳಲು ಮಕ್ಕಳು ಕೆರೆ, ಕೊಳ್ಳ, ನದಿಗಳಲ್ಲಿ ಹೆಚ್ಚಿನ ಸಮಯವನ್ನು ಕಳೆಯಬಹುದು. ಆ ನೀರಿನಲ್ಲಿರುವ ಅಪಾಯಕಾರಿ ಬ್ಯಾಕ್ಟೀರಿಯಾ ಅಥವಾ ಇತರ ಸೂಕ್ಷ್ಮಾಣುಜೀವಿಗಳಿಂದ ತೊಂದರೆಗೆ ಒಳಗಾಗಬಹುದು.
- ಈಜು ತಿಳಿಯದವರು ನೀರಿನಲ್ಲಿ ಆಟವಾಡಲು ಹೋಗಿ ಅವಘಡಗಳು ಸಂಭವಿಸಬಹುದು.

ವಹಿಸಬೇಕಾದ ಜಾಗ್ರತೆಗಳು

- ಸಕ್ಕರೆ ಪಾನೀಯಗಳನ್ನು ಕೊಡದಿರುವುದು ಒಳ್ಳೆಯದು.
- ಎಣ್ಣೆಯಲ್ಲಿ ಹುರಿದ ತಿಂಡಿಗಳು, ಸಂಸ್ಕರಿಸಿ ಪ್ಯಾಕ್ ಮಾಡಿದ ತಿಂಡಿಗಳು ಆರೋಗ್ಯಕ್ಕೆ ಒಳ್ಳೆಯದಲ್ಲ.
- ಬೇಸಿಗೆಯಲ್ಲಿ ಆಹಾರ ಬೇಗ ಕೆಡುವುದರಿಂದ ಹೊಟ್ಟೆಕೆಡುವ ಸಾಧ್ಯತೆ ಹೆಚ್ಚು, ಉದಾಹರಣೆಗೆ ಜಂಕ್ ಫುಡ್.
- ಸರಿಯಾದ ತಾಪಮಾನದಲ್ಲಿ ಆಹಾರವನ್ನು ಸಂಗ್ರಹಿಸಿ ಇಡಬೇಕು. ಆದಷ್ಟು ಹೆಚ್ಚು ತಾಜಾ ಆಹಾರವನ್ನೇ ಸೇವಿಸುವುದು ಒಳ್ಳೆಯದು.
- ಕೈಗಳನ್ನು ಸರಿಯಾಗಿ ತೊಳೆದುಕೊಂಡು ನಂತರ ಆಹಾರ ಸೇವಿಸುವುದು ಎಲ್ಲಾ ಕಾಲಮಾನಕ್ಕೂ ಅಗತ್ಯ.
- ಹೀಟ್ ಸ್ಟ್ರೋಕಿನ ಲಕ್ಷಣಗಳನ್ನು ಆದಷ್ಟು ಬೇಗ ಗುರುತಿಸುವುದು ಬಹಳ ಮುಖ್ಯ.

ಪರಿಹಾರಗಳು

ಸೂರ್ಯನ ಶಾಖ ಹೆಚ್ಚಾಗಿರುವುದು ಸಾಮಾನ್ಯವಾಗಿ ಬೆಳಗಿನ ಹತ್ತರಿಂದ ಅಪರಾಹ್ನ ನಾಲ್ಕು ಗಂಟೆಯವರೆಗೆ. ಈ ಸಮಯದಲ್ಲಿ ಮಕ್ಕಳು ಆದಷ್ಟು ಮನೆಯಿಂದ ಹೊರಗೆ ಹೋಗದಂತೆ ನೋಡಿಕೊಳ್ಳಬೇಕು. ಒಳಾಂಗಣದ ಆಟಗಳನ್ನು ಆಡಲು ಪ್ರೇರೇಪಿಸುತ್ತ, ಯೋಗ–ವ್ಯಾಯಾಮ, ಹೆಚ್ಚು ಶ್ರಮದಾಯಕವಲ್ಲದ ಮೋಜಿನ ದೈಹಿಕ ಸವಾಲುಗಳನ್ನು ಆಯೋಜಿಸಬಹುದು.

ಮನೆಯ ಒಳಗೆ ತಂಪಾಗಿಡಲು, ನೇರವಾಗಿ ಬಿಸಿಲು ಮನೆಯನ್ನು ಪ್ರವೇಶಿಸದಂತೆ ಕಿಟಕಿಗಳಿಗೆ ಪರದೆಗಳನ್ನು ಬಳಸಬಹುದು. ಹೊರಾಂಗಣದ ಆಟಗಳ ನಡುವೆ, ನೆರಳಿನಲ್ಲಿ ವಿಶ್ರಾಂತಿ ತೆಗೆದುಕೊಳ್ಳುವಂತೆ ಸೂಚಿಸಬೇಕು.

ಬಿಸಿಲಿನ ಸಮಯದಲ್ಲಿ ಹೊರಗೆ ಹೋಗಲೇಬೇಕಾದಾಗ ತೆಳುವಾದ ಹತ್ತಿ ಬಟ್ಟೆಗಳನ್ನು, ಆದಷ್ಟು ಬಿಳಿ/ ತಿಳಿಬಣ್ಣದ, ಸಡಿಲವಾದ ಉಡುಪುಗಳನ್ನು ಧರಿಸುವುದು ಸೂಕ್ತ. ತಲೆಗೆ ಧರಿಸುವ ಟೊಪ್ಪಿ ಅಗಲವಾಗಿದ್ದರೆ, ಮುಖ ಕಣ್ಣು ಕೆನ್ನೆಗಳನ್ನು ಕಾಪಾಡುತ್ತವೆ. ಸನ್‌ಸ್ಕ್ರೀನ್ ಲೋಷನ್, ಮಾಯಿಶ್ಚರೈಸರ್‌ಗಳನ್ನು ಬಳಸಬಹುದು.

ಹೀಟ್ ಸ್ಟ್ರೋಕ್ ಲಕ್ಷಣಗಳು ಕಾಣಿಸಿಕೊಂಡಾಗ:

- ತಕ್ಷಣವೇ ನೆರಳು ಅಥವಾ ತಂಪಾದ ಸ್ಥಳಕ್ಕೆ ಕರೆದುಕೊಂಡು ಹೋಗಬೇಕು.
- ದೇಹವನ್ನು ತಂಪಾಗಿಸಲು ತಣ್ಣೀರಿನ ಪಟ್ಟಿ, ಐಸ್ ಪ್ಯಾಕ್‌ಗಳನ್ನು ಕುತ್ತಿಗೆ, ಕಂಕುಳ ಕೆಳಗೆ, ತೊಡೆ ಸಂಧಿಗಳಲ್ಲಿ ಇರಿಸಬೇಕು.
- ಅನಗತ್ಯ ಅಥವಾ ಬಿಗಿಯಾದ ಬಟ್ಟೆಗಳನ್ನು ಸಡಿಲಿಸಬೇಕು/ ತೆಗೆಯಬೇಕು.
- ಎಚ್ಚರದಲ್ಲಿ ಇದ್ದರೆ, ಸಾಕಷ್ಟು ನೀರು, ಎಳನೀರು ಅಥವಾ ಒಆರ್‌ಎಸ್‌ಗಳನ್ನು ಕುಡಿಸಬಹುದು.
- ಪ್ರಜ್ಞೆ ತಪ್ಪಿದ್ದೇ ಆಗಿದ್ದಲ್ಲಿ ತಕ್ಷಣವೇ ತುರ್ತು ಚಿಕಿತ್ಸೆಯ ವ್ಯವಸ್ಥೆಯನ್ನು ಮಾಡಬೇಕು.

ಆಹಾರ ಹೇಗಿರಬೇಕು?

ಹೆಚ್ಚಿನ ನೀರಿನ ಅಂಶವಿರುವ, ಸುಲಭವಾಗಿ ಜೀರ್ಣವಾಗುವ, ಕಡಿಮೆ ಕ್ಯಾಲೊರಿ ಒದಗಿಸುವ, ಖನಿಜ ಹಾಗೂ ಪೋಷಕಾಂಶಗಳನ್ನು ಹೊಂದಿರುವ ಹೆಚ್ಚು ಸಿಹಿಯೂ ಅಲ್ಲದ, ಖಾರವಲ್ಲದ, ಮಸಾಲೆ ಇಲ್ಲದ ಆಹಾರಗಳನ್ನು ಸೇವಿಸಬೇಕು. ಮಕ್ಕಳನ್ನು ಆಗಾಗ ನೀರು ಕುಡಿಯಲು ಪ್ರೋತ್ಸಾಹಿಸಬೇಕು. ಜೊತೆಗೆ ಎಳನೀರು, ತಾಜಾ ಹಣ್ಣಿನ ರಸಗಳನ್ನು ಕುಡಿಯಲು ಕೊಡಬಹುದು. ದೇಹದಲ್ಲಿ ಜೀರ್ಣಕ್ರಿಯೆ ಸುಲಭವಾಗುವಂತೆ ಪೌಷ್ಟಿಕ ಆಹಾರ, ತಂಪಾದ ಆಹಾರ ಹಣ್ಣುಗಳನ್ನು ನೀಡಬಹುದು.

ಅಕ್ಕಿ ಗಂಜಿ, ರಾಗಿ ಗಂಜಿ ಸಲಾಡ್ ಗಳು, ಈರುಳ್ಳಿ, ಸೌತೇಕಾಯಿ, ಮೊಸರು, ಮಜ್ಜಿಗೆ, ತರಕಾರಿ ಸೂಪ್‌ಗಳು, ನಿಂಬೆಹಣ್ಣಿನ ಪಾನಕ, ಪುದೀನಾ ಸೊಪ್ಪುಗಳನ್ನು ಹೆಚ್ಚು ಬಳಸಬಹುದು.

ಕಿತ್ತಳೆಹಣ್ಣು, ಕಲ್ಲಂಗಡಿ, ಪಪ್ಪಾಯ, ಪೇರಳೆ, ಟೊಮೆಟೊಗಳು ದಿನನಿತ್ಯದ ಆಹಾರದಲ್ಲಿ ಇರುವಂತೆ ನೋಡಿಕೊಳ್ಳಬೇಕು.

ಮನೆಯಿಂದ ಹೊರಗೆ ಹೋದಾಗ, ಹೊರಗಡೆಯ ಪಾನೀಯಗಳನ್ನು ಕುಡಿಯುವುದನ್ನು ತಪ್ಪಿಸಲು ನೀರನ್ನು ಜೊತೆಗೆ ತೆಗೆದುಕೊಂಡು ಹೋಗಲು ಮರೆಯಬೇಡಿ. ದಿನಕ್ಕೆ ಎರಡು ಹೊತ್ತು ತಣ್ಣನೆ ನೀರಿನಲ್ಲಿ ಸ್ನಾನ ಮಾಡುವುದರ ಜೊತೆಗೆ, ಆಟವಾಡಿ ಬಂದಾಗ ಮಗುವಿನ ದೇಹ ಬೆಚ್ಚಗಾಗಿದ್ದರೆ, ಬೆವರಿದ್ದರೆ ತಣ್ಣನೆಯ ನೀರಿನಲ್ಲಿ ಮತ್ತೊಮ್ಮೆ ಸ್ನಾನವನ್ನು ಮಾಡಿಸಿ. ಬಿಸಿಲಿನಲ್ಲಿ ಮಕ್ಕಳನ್ನು ಹೊರಗಡೆ ಕರೆದುಕೊಂಡು ಹೋದಾಗ ಎಂದೂ ಮಗುವನ್ನು ಒಂಟಿಯಾಗಿ ಕಾರಿನ ಒಳಗಡೆ ಬಿಟ್ಟು ಹೋಗಬೇಡಿ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್‌ಎಸ್‌ಎಲ್‌ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

24) $f(x)= 2x^2-3x+k$ ಬಹುಪದೋಕ್ತಿಯ ಶೂನ್ಯತೆಗಳ ಗುಣಲಬ್ಧವು 3 ಆದರೆ k ಯ ಬೆಲೆಯನ್ನು ಕಂಡುಹಿಡಿಯಿರಿ

ಉತ್ತರ:–


$a=2,\ b=-3,\ c=k$

$\alpha\beta=\frac{c}{a}$


$3=\frac{k}{2}$

$\boxed{k=6}$

25) ಚಿತ್ರದಲ್ಲಿ 'r' ತ್ರಿಜ್ಯವಿರುವ ತ್ರಿಜ್ಯಾಂತರ ಖಂಡ AOBPA ಯ ವಿಸ್ತೀರ್ಣವು $231\ cm^2$ ಹಾಗೂ APB ಕಂಸದ ಉದ್ದವು 22 cm ಗಳಾಗಿವೆ. ತ್ರಿಜ್ಯಾಂತರ ಖಂಡದ ತ್ರಿಜ್ಯ ಮತ್ತು ಕೋನ 'θ' ದ ಬೆಲೆಗಳನ್ನು ಕಂಡುಹಿಡಿಯಿರಿ.



ಉತ್ತರ:–



'θ' ಕೋನವನ್ನು ಹೊಂದಿರುವ ತ್ರಿಜ್ಯಾಂತರ ಖಂಡದ ಕಂಸದ ಉದ್ದ

$= \frac{\theta}{360^\circ}\times 2\pi r$

$\therefore \frac{\theta}{360^\circ}\times 2\pi r = 22$

$\frac{\theta}{360^\circ}\times \pi r = 11$ .... (1)

θ ಕೋನವಿರುವ ತ್ರಿಜ್ಯಾಂತರ ಖಂಡದ ವಿಸ್ತೀರ್ಣ

$= \frac{\theta}{360^\circ}\times 2\pi r^2$

$\therefore \frac{\theta}{360^\circ}\times \pi r\times r = 231$ [(1) ರಿಂದ]

$\therefore 11r = 231$

$r=\frac{231}{11}=21$

$\boxed{r = 21\ cm}$

$\frac{\theta}{360^\circ}\times 2\pi r = 22$


$\frac{\theta}{360^\circ}\times 2\times \frac{22}{7}\times 21 = 22$

$6\theta = 360$

$\theta = \frac{360}{6} = 60^\circ$

$\boxed{\theta = 60^\circ}$

26) ಚಿತ್ರದಲ್ಲಿ ROQP ಆಯತವು ವೃತ್ತ ಚತುರ್ಥಕದಲ್ಲಿ ಅಂತಸ್ಥವಾಗಿದೆ. ಆಯತದ ಉದ್ದ ಮತ್ತು ಅಗಲಗಳು ಕ್ರಮವಾಗಿ 16 cm ಮತ್ತು 12 cm ಗಳಾದರೆ ಛಾಯೀಕೃತ ಭಾಗದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.



ಉತ್ತರ:–

ಚಿತ್ರದಲ್ಲಿ, ROQP ಒಂದು ಆಯತ.

$\therefore$ OQP ಯು ಒಂದು ಲಂಬಕೋನ ತ್ರಿಭುಜ, $\angle OQP = 90^\circ$

$\therefore OP^2 = OQ^2 + PQ^2$ (ಪೈಥಾಗೋರಸ್ ಪ್ರಮೇಯ)

$= 12^2 + 16^2$

$= 144 + 256$

$= 400$

$\therefore OP = \sqrt{400} = 20\ cm$

$r = 20\ cm$

ಛಾಯೆಗೊಳಿಸಿದ ಭಾಗದ ವಿಸ್ತೀರ್ಣ =

ವೃತ್ತ ಚತುರ್ಥಕ ವಿಸ್ತೀರ್ಣ – ಆಯತದ ವಿಸ್ತೀರ್ಣ

$= \frac{1}{4}\times \pi r^2 -$ (ಉದ್ದ × ಅಗಲ)

$= \frac{1}{4}\times \pi\times 20^2 - (16\times 12)$

$= \frac{1}{4}\times \pi \times 400 - 192$

$= 100\pi - 192$

$= 100\times\frac{22}{7} - 192$

$= \frac{2200}{7} - 192$


$= 314.28 - 192$

$= 122.28$ ಚದರ ಸೆಂ.ಮೀ.

27) ಒಂದು ಶಾಲೆಯ 10ನೇ ತರಗತಿಯ 35 ವಿದ್ಯಾರ್ಥಿಗಳ ಎತ್ತರಗಳ ವಿತರಣೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಿದೆ, ಈ ದತ್ತಾಂಶಗಳಿಗೆ ಕಡಿಮೆ ವಿಧಾನದ ಓಜಿವ್ ಎಳೆಯಿರಿ

ವಯಸ್ಸು (ವರ್ಷಗಳಲ್ಲಿ)	ರೋಗಿಗಳ ಸಂಖ್ಯೆ (ಸಂಚಿತ ಆವೃತ್ತಿ)
10 ಕ್ಕಿಂತ ಕಡಿಮೆ	6
20 ಕ್ಕಿಂತ ಕಡಿಮೆ	15
30 ಕ್ಕಿಂತ ಕಡಿಮೆ	38
40 ಕ್ಕಿಂತ ಕಡಿಮೆ	46
50 ಕ್ಕಿಂತ ಕಡಿಮೆ	65
60 ಕ್ಕಿಂತ ಕಡಿಮೆ	84
70 ಕ್ಕಿಂತ ಕಡಿಮೆ	100

ಉತ್ತರ



28) nದ ಯಾವುದೇ ಬೆಲೆಗೆ 6^n ಇದು ಸೊನ್ನೆಯಿಂದ ಕೊನೆಗೊಳ್ಳಬಹುದೇ ಪರೀಕ್ಷಿಸಿ. ಇಲ್ಲಿ n ಒಂದು ಸ್ವಾಭಾವಿಕ ಸಂಖ್ಯೆಯಾಗಿದೆ.

ಉತ್ತರ:–ಸೊನ್ನೆಯಿಂದ ಕೊನೆಗೊಳ್ಳುವ ಸಂಖ್ಯೆಗಳಿಗೆ ಉದಾ ಎಂದರೆ (ಅ) 10 (ಆ)100 ಮೊದಲಾದವು

10ರ ಅವಿಭಾಜ್ಯ ಅಪವರ್ತನ= 2 x 5

100ರ ಅವಿಭಾಜ್ಯ ಅಪವರ್ತನ= 2 x 2 x 5 x 5

ಸೊನ್ನೆಯಿಂದ ಕೊನೆಗೊಳ್ಳುವ ಸಂಖ್ಯೆಗಳ ಅವಿಭಾಜ್ಯ ಅಪವರ್ತನ 2 ಮತ್ತು 5 ಆದರೆ 2 x 3ಗಳು 6ರ ಅವಿಭಾಜ್ಯ ಅಪವರ್ತನಗಳಾಗಿವೆ ಆದರೆ ಇಲ್ಲಿ 5 ಇಲ್ಲ ಹೀಗಾಗಿ ಸಾಧ್ಯವಿಲ್ಲ

ಪಿಯುಸಿ/ಸಿಇಟಿ ಪರೀಕ್ಷೆ

PHYSICS

9) A motor-cyclist moving towards a huge cliff with a speed of 18 km/h, blows a horn of source frequency 325 Hz. If the speed of the sound in air is 330 m/s, the number of beats heard by him is:

(A) 5 (B) 4
(C) 7 (D) 6

Ans:- (A) 5

Soln: :- Using the Doppler effect formula, the observed frequency due to motion towards the source is calculated, leading to 5 beats when compared with the original frequency.

10) First overtone frequency of a closed pipe of length 'l_1' is equal to the 2^{nd} harmonic frequency of an open pipe of length 'l_2'. The ratio l_1 / l_2 =

a) 3 / 4 b) 4 / 3
c) 3 / 2 d) 2 / 3


Ans: (a)

Soln::- First overtone frequency for closed Organ pipe $f = 3V / 4L_1$

Frequency for open pipe $f = 2V / 2L_2$

$\Rightarrow L_1 / L_2 = 3 / 4$

11) A block of certain mass is placed on a rough floor. The coefficients of static and kinetic friction between the block and the floor are 0.4 and 0.25 respectively. A constant horizontal force F = 20 N acts on it so that the velocity of the block varies with time according to the following graph. The mass of the block is nearly (Take 2 g $10 ms^{-2}$)



(A) 4.4 kg (B) 1.2 kg
(C) 1.0 kg (D) 2.2 kg

Ans:- D

Soln:

Friction must be kinetic

$a = \frac{v-u}{t} = \frac{20-0}{3} = \frac{20}{3} m/s^2$

$F - f_k = ma$

12) When a voltage measuring device is connected to AC mains, the meter shows the steady input voltage of 220V. This means.......

A) input voltage cannot be AC voltage, but a DC voltage.

B) maximum input voltage is 220V.

C) the meter reads not υ but $<\upsilon^2>$ and is calibrated to read $\sqrt{<\upsilon^2>}$

D) the pointer of the meter is stuck by some mechanical defect.

Ans: -A


13) The torque acting on a magnetic dipole placed in uniform magnetic field is zero, when the angle between the dipole axis and the magnetic field is ....

(A) 60^0 (B) 90°
(C) Zero (D) 45°

Ans. C

Expln: The formula for torque on a magnetic dipole is $\tau = mB \sin(\theta)$, where m is the magnetic moment, B is the magnetic field strength, and θ is the angle between the dipole axis and the magnetic field. When θ is 0 degrees (aligned with the field), the sine function becomes zero, resulting in no torque

14) The electric current flowing through a given conductor varies with time as shown in the graph below. The number of free electrons which flow through a given cross-section of the conductor in the time interval $0 \le t \le 20s$ is



(A) 3.125×10^{19} (B) 1.6×10^{19}
(C) 6.25×10^{18} (D) 1.625×10^{18}

Ans:- A

Expln:-

$Q = ne = \text{area under } I - t \text{ graph}$

$n = \frac{5000\times10^{-3}}{1.6\times10^{-19}} = 3.125\times10^{19}$

15) Which of the following is not a vector quantity?

(A) Momentum (B) Weight
(C) Potential energy (D) nuclear spin

Soln: (c): Among the given quantities potential energy is a scalar quantity whereas all others are vector quantities.

16) A proton and an alpha-particle moving with the same velocity enter a uniform magnetic field with their velocities perpendicular to the magnetic field. The ratio of radii of their circular paths is

(A) 4 :1 (B) 1: 2
(C) 2 :1 (D) 1: 4

Ans. B

17) To reduce the reasonant frequency in an LCR series circuit with a generator

A) the generator frequency should be reduced.

(Contd…)

ಚಿಟಿಕೆ ಸುದ್ದಿ

ಕಾಡಾನೆ ದಾಳಿಗೆ ಮಹಿಳೆ ಸಾವು

ಮಡಿಕೇರಿ: ಜಿಲ್ಲೆಯ ಕುಶಾಲನಗರ ತಾಲ್ಲೂಕಿನ ವಾಲ್ನೂರು ಗ್ರಾಮದಲ್ಲಿ ಜಲಜಾಕ್ಷಿ (55) ಎಂಬವರು ಸೋಮವಾರ ಕಾಡಾನೆ ದಾಳಿಗೆ ಸಿಲುಕಿ ಮೃತಪಟ್ಟರು. ಅವರು ನಂಜರಾಯಪಟ್ಟಣ ಗ್ರಾಮ ಪಂಚಾಯಿತಿ ಮಾಜಿ ಸದಸ್ಯೆ. ಪ್ರಸಕ್ತ ವರ್ಷ ಕಾಡಾನೆ ದಾಳಿಗೆ ಸಿಲುಕಿ ಮೃತಪಟ್ಟವರ ಸಂಖ್ಯೆ ಜಿಲ್ಲೆಯಲ್ಲಿ ನಾಲ್ಕಕ್ಕೇರಿದೆ.

ಕಾಡಂಚಿನಲ್ಲಿ ನಡೆದುಕೊಂಡು ಹೋಗುತ್ತಿರುವ ವೇಳೆ ಕಾಡಾನೆ ದಾಳಿ ನಡೆಸಿತ್ತು. ಜಲಜಾಕ್ಷಿ ಅವರೊಂದಿಗೆ ಇದ್ದವರು ಓಡಿಹೋಗಿ ಪ್ರಾಣ ಉಳಿಸಿಕೊಂಡರು ಎಂದು ಡಿಸಿಎಫ್ ಅಭಿಷೇಕ್ 'ಪ್ರಜಾವಾಣಿ'ಗೆ ತಿಳಿಸಿದರು. ಕಾಡಾನೆ ದಾಳಿ ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ಗ್ರಾಮಸ್ಥರು ಅರಣ್ಯಾಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸಾಕಾನೆ ಅಭಿ ಸಾವು

ಮಡಿಕೇರಿ: ಕೊಡಗು ಜಿಲ್ಲೆಯ ನಾಗರಹೊಳೆಯ ಮತ್ತಿಗೋಡು ಶಿಬಿರದಲ್ಲಿದ್ದ ಅಭಿ (21) ಎಂಬ ಸಾಕಾನೆಯು ಅನಾರೋಗ್ಯದಿಂದ ಸೋಮವಾರ ಮೃತಪಟ್ಟಿತು.

ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲಿ ಹುಟ್ಟಿದ್ದ ಆನೆಯನ್ನು ಶಿಬಿರದಲ್ಲಿರಿಸಿಕೊಳ್ಳಲಾಗಿತ್ತು. ಕಳೆದ ವರ್ಷ ಮೇ ತಿಂಗಳಲ್ಲಿ ಕಾಡಿನೊಳಗೆ ಮೇಯಲು ಬಿಟ್ಟಿದ್ದಾಗ ಎಡಮುಂಗಾಲು ಮುರಿದಿದ್ದರಿಂದ ಚಿಕಿತ್ಸೆ ನೀಡಲಾಗುತ್ತಿತ್ತು ಎಂದು ಮೂಲಗಳು ತಿಳಿಸಿವೆ.

ಭಜನಾ ಸ್ಪರ್ಧೆ 29ರಿಂದ

ಹುಬ್ಬಳ್ಳಿ: 'ಇಲ್ಲಿನ ಸಿದ್ಧಾರೂಢ ಮಠದಲ್ಲಿ ಮಾರ್ಚ್ 29ರಿಂದ ಏಪ್ರಿಲ್ 3ರವರೆಗೆ ರಾಜ್ಯಮಟ್ಟದ 11ನೇ ವರ್ಷದ ಭಜನಾ ಸ್ಪರ್ಧೆ ನಡೆಯಲಿದೆ' ಎಂದು ರಾಜ್ಯಮಟ್ಟದ ಭಜನಾ ಸ್ಪರ್ಧೆ ಸಮಿತಿ ಅಧ್ಯಕ್ಷ ಶಾಮಾನಂದ ಪೂಜೇರಿ ತಿಳಿಸಿದರು.

'ಪ್ರಥಮ ಬಹುಮಾನ ₹1.11 ಲಕ್ಷ, ದ್ವಿತೀಯ ಬಹುಮಾನ ₹90 ಸಾವಿರ, ತೃತೀಯ ಬಹಮಾನ ₹ 80 ಸಾವಿರ ಇದೆ. ಹೆಸರು ನೋಂದಾಯಿಸಲು ಮಾರ್ಚ್ 28 ಕೊನೆಯ ದಿನ' ಎಂದು ಅವರು ಸೋಮವರ ಸುದ್ದಿಗಾರರಿಗೆ ತಿಳಿಸಿದರು.

'ಪ್ರತಿ ತಂಡವು 18 ನಿಮಿಷಗಳಲ್ಲಿ ಮೂರು ಪದಗಳನ್ನು ಹಾಡಬೇಕು. ಅವುಗಳಲ್ಲಿ ಎರಡು ಪದಗಳನ್ನು ಕಡ್ಡಾಯವಾಗಿ ಕೈವಲ್ಯ ಸಾಹಿತ್ಯದ ಮೇಲೆ ಪ್ರಸ್ತುತಪಡಿಸಬೇಕು. ಒಂದು ತಂಡದಲ್ಲಿ ಕನಿಷ್ಠ 6ರಿಂದ ಗರಿಷ್ಠ 10 ಸದಸ್ಯರು ಇರಬೇಕು' ಎಂದರು. ಮಾಹಿತಿ ಮತ್ತು ನೋಂದಣಿಗೆ ದೂರವಾಣಿ ಸಂಖ್ಯೆ: 97386 81660.

ಕರೂರು ಕಾಲ್ತುಳಿತ ವಿಜಯ್‌ಗೆ ಸಮನ್ಸ್

ನವದೆಹಲಿ (ಪಿಟಿಐ): ಕರೂರು ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳವಾರ (ಮಾರ್ಚ್ 10) ವಿಚಾರಣೆಗೆ ಹಾಜರಾಗುವಂತೆ ಟಿವಿಕೆ ಮುಖ್ಯಸ್ಥ, ನಟ ವಿಜಯ್ ಅವರಿಗೆ ಸಿಬಿಐ ಮತ್ತೆ ಸಮನ್ಸ್ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ವಿಜಯ್

ಇದಕ್ಕೂ ಮುನ್ನ ಜನವರಿ 12 ಮತ್ತು 19ರಂದು ಸಹ ವಿಜಯ್ ಅವರನ್ನು ಸಿಬಿಐ ವಿಚಾರಣೆ ನಡೆಸಿತ್ತು.

ಸುಪ್ರೀಂ ಕೋರ್ಟ್ ಆದೇಶದ ಬಳಿಕ ಸಿಬಿಐ ಈ ಪ್ರಕರಣದ ತನಿಖೆ ನಡೆಸುತ್ತಿದೆ. 2025ರ ಸೆಪ್ಟೆಂಬರ್ 27ರಂದು ನಡೆದ ಟಿವಿಕೆ ಪಕ್ಷದ ರ‍್ಯಾಲಿಯಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 41 ಮಂದಿ ಮೃತಪಟ್ಟು, 60ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.

ಪ್ರಚಾರಕ್ಕೆ ಸಿ.ಎಂ ಸ್ಟಾಲಿನ್ ಚಾಲನೆ

ತಿರುಚಿರಾಪಳ್ಳಿ (ಪಿಟಿಐ): ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಪಕ್ಷದ 12ನೇ ರಾಜ್ಯ ಸಮಾವೇಶದಲ್ಲಿ ವಿಧಾನಸಭಾ ಚುನಾವಣಾ ಪ್ರಚಾರ ಕಾರ್ಯಕ್ಕೆ ಸೋಮವಾರ ಚಾಲನೆ ನೀಡಿದರು.


ಎಂ.ಕೆ. ಸ್ಟಾಲಿನ್

ಸಿರುಗನೂರಿನಲ್ಲಿ ಸಮಾವೇಶ ನಡೆದಿದ್ದು 'ಸ್ಟಾಲಿನ್ ಅವರೇ ಮುಂದುವರಿಯಲಿ, ತಮಿಳುನಾಡಿಗೆ ಜಯವಾಗಲಿ' ಧ್ಯೇಯವಾಕ್ಯದಡಿ ಕಾರ್ಯಕ್ರಮ ನಡೆಯಿತು.

'ಸ್ಟಾಲಿನ್ ಅವರು ಸರ್ಕಾರದ ಸಾಧನೆ ಹೇಳುವ ಬದಲಾಗಿ, ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಕೆಲವು ಘೋಷಣೆಗಳನ್ನು ಹೊರಡಿಸುವ ಸಾಧ್ಯತೆ ಇದೆ' ಎಂದು ಪಕ್ಷದ ಹಿರಿಯ ನಾಯಕರೊಬ್ಬರು ತಿಳಿಸಿದರು.

ಕಾರ್ಯಕ್ರಮದಲ್ಲಿ ಸ್ಟಾಲಿನ್ ಅವರು 110 ಅಡಿ ಎತ್ತರದ ಧ್ವಜಸ್ತಂಭದ ಮೇಲೆ ಪಕ್ಷದ ಧ್ವಜವನ್ನು ಹಾರಿಸಿದರು. 2021ರ ಚುನಾವಣೆ ಸಂದರ್ಭದಲ್ಲೂ ಇದೇ ರೀತಿಯ ಸಮಾವೇಶದ ಮೂಲಕ ಪ್ರಚಾರ ಆರಂಭಿಸಿದ್ದರು.

ಹುದ್ದೆ ತಪ್ಪುವ ಭಯ: ತರಬೇತಿಗೆ ಚಕ್ಕರ್

ನಿಯೋಜನೆಗೊಂಡ 26 ಐಎಎಸ್ ಅಧಿಕಾರಿಗಳಲ್ಲಿ ಹಾಜರಾಗಿದ್ದು ಒಬ್ಬರೇ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕರ್ನಾಟಕ ಆಡಳಿತ ಸೇವೆಯಿಂದ (ಕೆಎಎಸ್) ಪದೋನ್ನತಿ ಪಡೆದಿದ್ದ ಐಎಎಸ್ (ಭಾರತೀಯ ಆಡಳಿತ ಸೇವೆ) ಅಧಿಕಾರಿಗಳು ತಾವಿರುವ ಹುದ್ದೆ ಬದಲಾಗಬಹುದು ಎನ್ನುವ ಆತಂಕದಿಂದ, ಉತ್ತರಾಖಂಡದ ಮಸೂರಿಯಲ್ಲಿ ನಡೆಯುತ್ತಿರುವ ತರಬೇತಿಗೆ ಗೈರಾಗಿದ್ದಾರೆ.

ಸೇವಾ ಜ್ಯೇಷ್ಠತೆಯ ಆಧಾರದಲ್ಲಿ ಕೆಎಎಸ್ ಅಧಿಕಾರಿಗಳಿಗೆ ಐಎಎಸ್‌ಗೆ ಪದೋನ್ನತಿ ನೀಡಲು ರಾಜ್ಯ ಸರ್ಕಾರ ಕಾಲಕಾಲಕ್ಕೆ ಶಿಫಾರಸು ಮಾಡುತ್ತದೆ. ಕರ್ನಾಟಕದಲ್ಲಿ ಹೀಗೆ 2016ರಿಂದ 2022ರವರೆಗೆ ಪದೋನ್ನತಿ ಪಡೆದಿದ್ದ 26 ಐಎಎಸ್ ಅಧಿಕಾರಿಗಳನ್ನು ಈ ಬಾರಿ ಮಸೂರಿಯ ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಆಡಳಿತ ಅಕಾಡೆಮಿಯಲ್ಲಿ ನಿಗದಿಯಾಗಿದ್ದ ತರಬೇತಿಗೆ ನಿಯೋಜಿಸಲಾಗಿತ್ತು. ಆದರೆ, ತರಬೇತಿಗೆ ತೆರಳಿದವರು ಒಬ್ಬರು ಮಾತ್ರ.

ಐಎಎಸ್ ಹುದ್ದೆಗಳಿಗೆ ಪ್ರತಿವರ್ಷ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ರಾಷ್ಟ್ರೀಯ ಆಡಳಿತ ಅಕಾಡೆಮಿಯಲ್ಲಿ ತರಬೇತಿ ನೀಡಿದ ನಂತರವೇ ಹಂಚಿಕೆ ಮಾಡಲಾದ ರಾಜ್ಯಗಳಿಗೆ ಅವರನ್ನು ಕಳುಹಿಸಲಾಗುತ್ತದೆ. ಅಲ್ಲಿ ಅವರು ವಿವಿಧ ಹುದ್ದೆಗಳ ಪ್ರಭಾರ ನಿಭಾಯಿಸಿದ ನಂತರ ಕಾಯಂ ನೇಮಕವಾಗುತ್ತಾರೆ. ವಿವಿಧ ರಾಜ್ಯಗಳ ಆಡಳಿತ ಸೇವೆಗಳಲ್ಲಿ ಕೆಲಸ ಮಾಡಿ ಐಎಎಸ್‌ಗೆ ಬಡ್ತಿ ಪಡೆದವರಿಗೆ ಆರು ವಾರಗಳ ತರಬೇತಿ ಕಡ್ಡಾಯ.

ಒಂದು ರಾಜ್ಯದ ಆಡಳಿತ ಸೇವೆಗೆ ಸೀಮಿತವಾಗಿದ್ದ ಅಧಿಕಾರಿಗಳು ಪದೋನ್ನತಿ ನಂತರ ಆಡಳಿತ ಸಂಬಂಧಿತ ವಿಷಯಗಳಲ್ಲಿ ದೇಶ ವ್ಯಾಪಿ ದೃಷ್ಟಿಕೋನ ಬೆಳೆಸಿಕೊಳ್ಳಲು, ಭಾರತೀಯ ಆಡಳಿತ ವ್ಯವಸ್ಥೆಗೆ ಅಗತ್ಯವಾದ ಕೌಶಲ ಮತ್ತು ಮನೋಭಾವಗಳನ್ನು ಅಭಿವೃದ್ಧಿಪಡಿಸಲು ಈ ತರಬೇತಿ ಸಹಕಾರಿಯಾಗಿದೆ. ಅಕಾಡೆಮಿಯು ಇದೇ ವರ್ಷದ ಫೆ.2ರಿಂದ ಮಾರ್ಚ್ 13ರವರೆಗೆ ಹಮ್ಮಿಕೊಂಡಿರುವ 128ನೇ ಪ್ರವೇಶ ತರಬೇತಿ ಕಾರ್ಯಕ್ರಮಕ್ಕೆ (ಐಟಿಪಿ) 547 ಅಧಿಕಾರಿಗಳನ್ನು ನಾಮನಿರ್ದೇಶನ ಮಾಡಲಾಗಿತ್ತು. ನೇರ ನೇಮಕಾತಿಯ ಮೂಲಕ ಆಯ್ಕೆಯಾದ ಐಎಎಸ್ ಅಭ್ಯರ್ಥಿಗಳ ಜತೆಗೆ ಪದೋನ್ನತಿ ಪಡೆದ ಅಧಿಕಾರಿಗಳಿಗೂ ಅವಕಾಶ ನೀಡಲಾಗಿತ್ತು. ಅವರಲ್ಲಿ ಕರ್ನಾಟಕದ 26 ಅಧಿಕಾರಿಗಳು ಸೇರಿದಂತೆ ದೇಶದ 150 ಮಂದಿ ಮೊದಲ ಹಂತದ ತರಬೇತಿಗೆ ನಿಯೋಜನೆಗೊಂಡಿದ್ದರು. ಆರು ವಾರಗಳ ಈ ತರಬೇತಿಯಲ್ಲಿ ನಾಲ್ಕು ವಾರಗಳು ಆಂತರಿಕ ತರಬೇತಿ, ಎರಡು ವಾರ ಅಧ್ಯಯನ ಪ್ರವಾಸ ಒಳಗೊಂಡಿದೆ.

'ರಾಜ್ಯ ಆಡಳಿತ ಸೇವೆಯ ಅಧಿಕಾರಿಗಳು ಆಯಾ ರಾಜ್ಯದವರೇ ಆದ ಕಾರಣ ಐಎಎಸ್‌ಗೆ ಬಡ್ತಿ ಸಿಕ್ಕ ನಂತರ ಜಿಲ್ಲಾಧಿಕಾರಿ ಸ್ಥಾನ ಸೇರಿದಂತೆ ಪ್ರಭಾವಿ ಹುದ್ದೆಗಳನ್ನು ಅಲಂಕರಿಸಿರುತ್ತಾರೆ. ಆರರಿಂದ ಎಂಟು ವಾರ ತರಬೇತಿಗೆ ತೆರಳಬೇಕಿದ್ದು, ಬೇರೆಯವರಿಗೆ ತಮ್ಮ ಕೆಲಸದ ಕಾರ್ಯಭಾರ ವಹಿಸಿ ಹೋಗಬೇಕುದರೂ ಬೆಳವಣಿಗೆಯಾಗಿ ಹುದ್ದೆ ಬದಲಾಗಬಹುದು ಎನ್ನುವ ಕಾರಣಕ್ಕೆ ಬಹುತೇಕರು ತಮ್ಮ ಸ್ಥಾನಬಿಟ್ಟು ಹೋಗಲು ಹಿಂದೇಟು ಹಾಕುತ್ತಾರೆ' ಎನ್ನುತ್ತಾರೆ ನಿವೃತ್ತ ಐಎಎಸ್ ಅಧಿಕಾರಿಯೊಬ್ಬರು.

> **ತರಬೇತಿಗೆ ನಿಯೋಜನೆಗೊಂಡವರಲ್ಲಿ ಒಬ್ಬರಷ್ಟೇ ಭಾಗವಹಿಸಲು ಅನುಮತಿ ಪಡೆದಿದ್ದಾರೆ. ಉಳಿದವರು ಅನುಮತಿ ಕೋರಿ ಏಕೆ ಅರ್ಜಿ ಸಲ್ಲಿಸಲಿಲ್ಲ ಎನ್ನುವ ಕುರಿತು ಮಾಹಿತಿ ಪಡೆಯಲಾಗುತ್ತಿದೆ**
> **ಕೆ.ಜಿ. ಜಗದೀಶ್**, ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

ತರಬೇತಿ ಪಡೆಯದೇ ದೃಢೀಕರಣ ಇಲ್ಲ

ಅಖಿಲ ಭಾರತ ಸೇವೆಯ ನಿಯಮಗಳ ಪ್ರಕಾರ ರಾಜ್ಯ ಸೇವೆಯಿಂದ ಪದೋನ್ನತಿ ಪಡೆದ ಐಎಎಸ್ ಅಧಿಕಾರಿಗಳಿಗೆ ತರಬೇತಿ ಕಡ್ಡಾಯ. ಒಂದು ವೇಳೆ ತರಬೇತಿ ಪಡೆಯದಿದ್ದರೆ ಅವರ ಪದೋನ್ನತಿ ದೃಢೀಕೃತವಾಗುವುದಿಲ್ಲ. ಕರ್ನಾಟಕದ ಇತಿಹಾಸದಲ್ಲಿ ಹೀಗೆ ಬಡ್ತಿ ಪಡೆದ ಕೆಲ ಐಎಎಸ್ ಅಧಿಕಾರಿಗಳು ಮಸೂರಿಯ ಅಕಾಡೆಮಿಯಲ್ಲಿ ತರಬೇತಿ ಪಡೆಯದೇ ನಿವೃತ್ತರಾಗಿದ್ದಾರೆ. ಕೆಲವರಿಗೆ ನಿವೃತ್ತಿಯ ಅಂಚಿನಲ್ಲಿ ಪದೋನ್ನತಿ ಸಿಕ್ಕಿ ತರಬೇತಿಗೆ ನಿಯೋಜನೆಗೊಳ್ಳುವ ಮೊದಲೇ ಅವರ ಸೇವಾವಧಿ ಮುಕ್ತಾಯವಾದ ಉದಾಹರಣೆಗಳೂ ಇವೆ.

ಪದೋನ್ನತಿ ವರ್ಷ	ತರಬೇತಿಗೆ ನಿಯೋಜನೆ ಆದವರ ಸಂಖ್ಯೆ
2016	7
2018	2
2019	4
2020	8
2021	3
2022	2
ಒಟ್ಟು	26

ಶೂನ್ಯವೇಳೆಯಲ್ಲಿ ಪ್ರಸ್ತಾಪ


ರಮೇಶ್ ಬಾಬು

ವಿಧಾನ ಪರಿಷತ್ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ರಮೇಶ್ ಬಾಬು, ಮಸೂರಿಯಲ್ಲಿ ನಡೆಯುತ್ತಿರುವ ತರಬೇತಿಗೆ ಗೈರಾದ ಐಎಎಸ್ ಅಧಿಕಾರಿಗಳ ವಿರುದ್ಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪದೋನ್ನತಿ ಪಡೆದ ಎಲ್ಲ ಐಎಎಸ್ ಅಧಿಕಾರಿಗಳನ್ನೂ ತರಬೇತಿಗೆ ಕಳುಹಿಸಬೇಕು. ಬೇರೆ ಬೇರೆ ನೆಪ ಹೇಳಿ ತಪ್ಪಿಸಿಕೊಳ್ಳುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದರು.

ಬೆಳಗಾವಿಯಲ್ಲೇ 2,900 ಮ್ಯೂಲ್ ಅಕೌಂಟ್ ಪತ್ತೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ನಗರದಲ್ಲೇ 2,900 ಮ್ಯೂಲ್ ಅಕೌಂಟ್‌ಗಳು (ಅಮಾಯಕರ ಬ್ಯಾಂಕ್ ಖಾತೆಗಳನ್ನು ಅಕ್ರಮವಾಗಿ ಬಳಸಿಕೊಳ್ಳುವುದು) ಕ್ರಿಯಾಶೀಲವಾಗಿವೆ. ಇವೆಲ್ಲವನ್ನೂ ಸೈಬರ್ ಅಪರಾಧ ಕೃತ್ಯಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಹಲವು ಅಮಾಯಕರು ಗೊತ್ತಿಲ್ಲದೆಯೇ ಈ ಸುಳಿಯಲ್ಲಿ ಸಿಕ್ಕಿಕೊಳ್ಳುವ ಆತಂಕ ಇದೆ' ಎಂದು ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ ತಿಳಿಸಿದರು.


ಭೂಷಣ ಬೊರಸೆ

'ನಗರದ ಯುವಕನೊಬ್ಬ ಕಮಿಷನ್ ಆಸೆಗಾಗಿ 9 ಬ್ಯಾಂಕ್ ಖಾತೆಗಳನ್ನು ಸೃಷ್ಟಿಸಿ, ಆ ಖಾತೆಗಳ ವಿವರವನ್ನು ಸೈಬರ್ ವಂಚಕರಿಗೆ ಕೊಟ್ಟಿದ್ದಾನೆ. ಸೈಬರ್ ವಂಚಕರು ಕನ್ನ ಹಾಕಿದ್ದ ₹80 ಲಕ್ಷ ಹಣವನ್ನು ಈ 9 ಖಾತೆಗಳಿಗೆ ಹಾಕಿದ್ದಾರೆ. ಈ ಖಾತೆಗಳಿಗೆ ಹಣ ಬಂದ ಮೇಲೆ ಅದನ್ನು ತಮ್ಮ ಸ್ವಂತಕ್ಕೆ ವರ್ಗಾವಣೆ ಮಾಡಿಕೊಂಡಿದ್ದಾರೆ. ಸಿಇಎನ್ ಪೊಲೀಸರು ಕೈಗೊಂಡ ತನಿಖೆಯಲ್ಲಿ ಇದು ಹೊರಬಿದ್ದಿದೆ' ಎಂದು ವಿವರಿಸಿದರು.

'ಹಲವು ಯುವಜನರು ಕಮಿಷನ್ ಸಿಗುತ್ತದೆ ಎಂಬ ಆಸೆಗೆ ಬಿದ್ದು ತಮ್ಮ ಹೆಸರಿನಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆದು ಅಪರಾಧಿಗಳಿಗೆ ಕೊಡುತ್ತಿದ್ದಾರೆ. ಇದು ಕೂಡ ಅಪರಾಧವೇ ಆಗುತ್ತದೆ. ಅವರು ಖಾತೆಗಳನ್ನು ಯಾವ ಉದ್ದೇಶಕ್ಕೆ ಬಳಸುತ್ತಾರೆ ಎಂಬುದು ಗೊತ್ತಿಲ್ಲದೆಯೂ ಕೆಲವರು ಸಿಕ್ಕಿಕೊಂಡಿದ್ದಾರೆ. ಇಂಥವರ ಬಗ್ಗೆ ಜಾಗ್ರತರಾಗಿ ಇರಬೇಕು' ಎಂದು ಹೇಳಿದರು.

'ದುಬೈನಲ್ಲಿರುವ ಯುವಕನೊಬ್ಬ ತನ್ನ ತಾಯಿ ಮೂಲಕ ಸ್ನೇಹಿತರ ಸಂಪರ್ಕ ಹೆಸರಿನಲ್ಲಿ ಬೆಳಗಾವಿಯಲ್ಲಿ ಬ್ಯಾಂಕ್ ಖಾತೆ ತೆರೆದಿದ್ದಾನೆ. ಅದಕ್ಕೆ ವಂಚನೆಯ ಹಣ ವರ್ಗಾಯಿಸಿಕೊಂಡು ತನಿಖೆಯಿಂದ ಗೊತ್ತಾಗಿದೆ. ಮತ್ತೆ ಕೆಲವರಿಗೆ ಮನೆಯಲ್ಲೇ ಕೆಲಸ ಕೊಡುತ್ತೇವೆ ಎಂದು ನಂಬಿಸಿ, ಕಮಿಷನ್ ಆಸೆ ತೋರಿಸಿ ವಂಚನೆ ಮಾಡಿದ್ದಾರೆ' ಎಂದರು.

14ನೇ ಕ್ರೆಸ್ಟ್‌ಗೇಟ್ ಅಳವಡಿಕೆ ಪೂರ್ಣ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಯಲ್ಲಿ ಹೊಸ ಕ್ರೆಸ್ಟ್‌ಗೇಟ್ ಅಳವಡಿಕೆ ಚುರುಕಿನಿಂದ ಸಾಗಿದ್ದು, ಒಟ್ಟು 14 ಹೊಸ ಕ್ರೆಸ್ಟ್‌ಗೇಟ್ ಅಳವಡಿಕೆ ಪೂರ್ಣಗೊಂಡಿದೆ ಎಂದು ತುಂಗಭದ್ರಾ ಮಂಡಳಿ ಅಧಿಕಾರಿಗಳು ತಿಳಿಸಿದ್ದಾರೆ.

ಹೈಕಮಾಂಡ್ ಭೇಟಿಗೆ ಡಿಕೆಶಿ ಯತ್ನ

ದೆಹಲಿಯ ಕಲ್ಕಾಜಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದ ಉಪಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಮುಖ್ಯಮಂತ್ರಿ ಆಗಲು ಕಳೆದ ನಾಲ್ಕೈದು ತಿಂಗಳಿಂದ ನಿರಂತರ ಪ್ರಯತ್ನ ನಡೆಸುತ್ತಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲು ಮತ್ತೆ ಪ್ರಯತ್ನಿಸಿದರು.

ಸ್ನೇಹಿತರೊಬ್ಬರ ಕುಟುಂಬದ ಮದುವೆ ಕಾರ್ಯಕ್ರಮದ ನಿಮಿತ್ತ ಭಾನುವಾರ ಸಂಜೆ ನವದೆಹಲಿಗೆ ಬಂದಿದ್ದ ಶಿವಕುಮಾರ್ ಅವರು ಸೋಮವಾರ ಬೆಳಿಗ್ಗೆ ನಿರ್ಗಮಿಸಬೇಕಿತ್ತು. ಆದರೆ, ಸಂಜೆವರೆಗೆ ರಾಷ್ಟ್ರ ರಾಜಧಾನಿಯಲ್ಲಿ ಉಳಿದ ಅವರು ರಾಷ್ಟ್ರ ನಾಯಕರ ಭೇಟಿಗೆ ಕಸರತ್ತು ನಡೆಸಿದರು.

ಬೆಳಿಗ್ಗೆ ಕಲ್ಕಾಜಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಆ ಬಳಿಕ ಕರ್ನಾಟಕ ಭವನಕ್ಕೆ ಬಂದ ಅವರು ಕಾಂಗ್ರೆಸ್ ಅಸ್ಸಾಂ ರಾಜ್ಯ ಘಟಕದ ಅಧ್ಯಕ್ಷ ಗೌರವ್ ಗೊಗೊಯ್ ಅವರೊಂದಿಗೆ ಸಮಾಲೋಚಿಸಿದರು. ನಂತರ ಎಐಸಿಸಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಭಾಗಿಯಾದರು.


ಕಲ್ಕಾಜಿ ದೇಗುಲದಲ್ಲಿ ಡಿ.ಕೆ. ಶಿವಕುಮಾರ್ ಪೂಜೆ ಸಲ್ಲಿಸಿದರು

ಈ ನಡುವೆ ಸುದ್ದಿಗಾರರ ಜತೆಗೆ ಮಾತನಾಡಿದ ಡಿ.ಕೆ. ಶಿವಕುಮಾರ್, 'ದೆಹಲಿಯಲ್ಲಿ ನಾನು ಯಾರನ್ನು ಭೇಟಿ ಮಾಡಿದ್ದೇನೆ ಎಂಬುದನ್ನು ಬಹಿರಂಗವಾಗಿ ಹೇಳಲು ಆಗುವುದಿಲ್ಲ' ಎಂದರು.

'ನವದೆಹಲಿಗೆ ಬಂದ ಮೇಲೆ ನಾನು ಎಲ್ಲರನ್ನು ಭೇಟಿ ಮಾಡುತ್ತೇನೆ. ನೀವುಗಳು (ಮಾಧ್ಯಮಗಳು), ಡಿ.ಕೆ ದೆಹಲಿಗೆ ಹೋದರೂ ನಾಯಕರು ಸಮಯ ನೀಡಿಲ್ಲ, ಕಾಯುತ್ತಾ ಕೂತಿದ್ದಾರೆ ಎಂದು ವರದಿ ಮಾಡುತ್ತೀರಲ್ಲಾ, ಹಾಗೇ ಕಾಯುತ್ತಾ ಕೂತಿರುವೆ' ಎಂದು ವ್ಯಂಗ್ಯವಾಗಿ ಹೇಳಿದರು.

ನಾನು ಕೆಪಿಸಿಸಿ ಅಧ್ಯಕ್ಷನಾಗಿ ಮಂಗಳವಾರ 6 ವರ್ಷ ಪೂರ್ಣಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಎಲ್ಲ ಶಾಸಕರು, ವಿಧಾನ ಪರಿಷತ್ ಸದಸ್ಯರಿಗೆ ಭೋಜನಕೂಟ ಹಮ್ಮಿಕೊಂಡಿದ್ದೇನೆ. ಮತ್ತೊಂದು ದಿನ ಪಕ್ಷದ ಪರಾಜಿತ ಅಭ್ಯರ್ಥಿಗಳು ಮತ್ತು ಜಿಲ್ಲಾ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಿಗೆ ಭೋಜನಕೂಟ ಹಮ್ಮಿಕೊಳ್ಳಲಾಗುವುದು' ಎಂದರು.

ಹೊಸೂರು: ರೈತರ ಬಂಧನ

ಪ್ರಜಾವಾಣಿ ವಾರ್ತೆ

ಚೆನ್ನೈ: ಹೊಸೂರಿನಲ್ಲಿ ವಿಮಾನ ನಿಲ್ದಾಣ ನಿರ್ಮಿಸಲು ಮತ್ತು ಮೂಲಸೌಕರ್ಯಗಳಿಗಾಗಿ ಸಾವಿರಾರು ಎಕರೆ ಕೃಷಿ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳಲು ತಮಿಳು ನಾಡು ಸರ್ಕಾರ ಮುಂದಾಗಿರುವುದನ್ನು ವಿರೋಧಿಸಿ ಪ್ರತಿಭಟನಾ ಮೆರವಣಿಗೆ ನಡೆಸಿದ ನೂರಾರು ರೈತರನ್ನು ಪೊಲೀಸರು ಸೋಮವಾರ ಬಂಧಿಸಿದರು.



'ನಮಧು ನೀಲಂ ನಮಧೆ' ರೈತ ಕಲ್ಯಾಣ ಸಂಘದ ಸದಸ್ಯರು ವಿವಿಧ ರಾಜಕೀಯ ಪಕ್ಷಗಳ ಮುಖಂಡರನ್ನು ಭೇಟಿಯಾಗಿ ತಮ್ಮ ಹೋರಾಟಕ್ಕೆ ಬೆಂಬಲ ನೀಡುವಂತೆ ಒತ್ತಾಯಿಸಿದರು.

'ಕೃಷ್ಣಗಿರಿ ಜಿಲ್ಲೆಯಲ್ಲಿನ ಕೈಗಾರಿಕಾ ಪಾರ್ಕ್ ಸೇರಿದಂತೆ ವಿವಿಧ ಯೋಜನೆಗಳಿಗಾಗಿ 39 ಸಾವಿರ ಎಕರೆ ಕೃಷಿ ಜಮೀನು ಮತ್ತು ಹೊಸೂರಿನಲ್ಲಿ ವಿಮಾನ ನಿಲ್ದಾಣ ಹಾಗೂ ಕಾರಿಡಾರ್ ನಿರ್ಮಾಣಕ್ಕಾಗಿ 29 ಸಾವಿರ ಎಕರೆ ಕೃಷಿ ಜಮೀನು ಸ್ವಾಧೀನಕ್ಕೆ ಪಡೆಯಲು ಸರ್ಕಾರ ಮುಂದಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲು ಸಿದ್ಧತೆ ನಡೆಸಿದೆ' ಎಂದು ರೈತರು ಆರೋಪಿಸಿದ್ದಾರೆ.

'ನಮ್ಮ ಜೀವ ಹೋದರೂ, ನಮ್ಮ ಕೃಷಿ ಜಮೀನುಗಳನ್ನು ನೀಡುವುದಿಲ್ಲ. ಭೂಮಿಯ ರಕ್ಷಣೆಗಾಗಿ ಒಗ್ಗಟ್ಟಾಗಿದ್ದೇವೆ. ರೈತರ ಬದುಕನ್ನು ಕಸಿದುಕೊಳ್ಳದೇ ಅಭಿವೃದ್ಧಿ ನಡೆಸುವ ಸಮತೋಲಿತ ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳಲಿದೆ ಎಂಬ ಭರವಸೆ ಇದೆ' ಎಂದು ಸಂಘದ ಅಧ್ಯಕ್ಷ ಕುಮಾರ ರವಿಶಂಕರ್ ಅವರು ತಿಳಿಸಿದ್ದಾರೆ.

ಭೂಸ್ವಾಧೀನ ಪ್ರಕ್ರಿಯೆಯಿಂದ 50 ಸಾವಿರಕ್ಕೂ ಅಧಿಕ ರೈತ ಕುಟುಂಬಗಳಿಗೆ ಜೀವನಕ್ಕೆ ತೊಂದರೆಯಾಗುವ ಸಾಧ್ಯತೆ ಇದೆ.

ಕೃಷ್ಣಗಿರಿ ಜಿಲ್ಲೆಯಲ್ಲಿ ಕಾರ್ಖಾನೆ ಸ್ಥಾಪನೆಗೆ ಹಲವು ಕಂಪನಿಗಳು ಆಸಕ್ತಿ ತೋರಿರುವುದರಿಂದ ಕೈಗಾರಿಕಾ ಪಾರ್ಕ್ ನಿರ್ಮಿಸುವ ಅಗತ್ಯ ಇದೆ ಎಂದು ತಮಿಳುನಾಡು ಸರ್ಕಾರ ಹೇಳಿದೆ. ವಿಮಾನ ನಿಲ್ದಾಣ ನಿರ್ಮಾಣಕ್ಕೆ ಅದೇ ಜಿಲ್ಲೆಯಲ್ಲಿನ ಎರಡು ಸ್ಥಳಗಳನ್ನು ವಿಮಾನ ನಿಲ್ದಾಣ ಪ್ರಾಧಿಕಾರ ಅಂತಿಮಗೊಳಿಸಿದೆ.

ಪಕ್ಷ ಸ್ಥಾಪಿಸಿ ಸಿ.ಎಂ ಆಗುವೆ: ಯತ್ನಾಳ

ಪ್ರಜಾವಾಣಿ ವಾರ್ತೆ

ನವದೆಹಲಿ: 'ನಾನೇ ಜೆಸಿಬಿ ಎಂಬ ಪ್ರಾದೇಶಿಕ ಪಕ್ಷ ಸ್ಥಾಪಿಸುತ್ತೇನೆ. ಬೇರೆಯವರ ಆಹ್ವಾನಕ್ಕಾಗಿ ಕಾದು ಕೂರಲು ನಾನು ಹುಚ್ಚನಲ್ಲ. 2028ರಲ್ಲಿ ನನ್ನ ಪಕ್ಷವೇ ಅಧಿಕಾರಕ್ಕೆ ಬರಲಿದ್ದು, ಮುಖ್ಯಮಂತ್ರಿ ಆಗುತ್ತೇನೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಸೋಮವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ನಾನು ಸ್ವಾಭಿಮಾನದಿಂದ ಬದುಕಿದವನು. ಬಿಜೆಪಿ ಪ್ರಮುಖರ ಬಳಿಗೆ ಹೋಗಿ ಕೈ ಕಾಲು ಹಿಡಿದು ಪಕ್ಷಕ್ಕೆ ಸೇರಿಸಿಕೊಳ್ಳಿ ಎಂದು ಬೇಡುವ ಅವಶ್ಯಕತೆ ನನಗಿಲ್ಲ. ಆ ಉದ್ದೇಶದಿಂದ ಬಂದಿಲ್ಲ. ಬಿಜೆಪಿಗೆ ಸೇರಿಸಿಕೊಳ್ಳಿ ಎಂದು ಯಾರ ಬಳಿಯೂ ದುಂಬಾಲು ಬೀಳುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ಬಿ.ಎಸ್. ಯಡಿಯೂರಪ್ಪ, ಬಿ.ವೈ. ವಿಜಯೇಂದ್ರ ಹಾಗೂ ಬಿ.ವೈ. ರಾಘವೇಂದ್ರ ಕುಟುಂಬದ ಹಿಡಿತದಲ್ಲಿ ಪಕ್ಷ ಇರುವ ತನಕ ನಾನು ಬಿಜೆಪಿಗೆ ಸೇರುವುದಿಲ್ಲ. ಭ್ರಷ್ಟ ಕುಟುಂಬದ ನೇತೃತ್ವವನ್ನು ಒಪ್ಪುವುದಿಲ್ಲ' ಎಂದರು.

ದೂರಿನ ಅರ್ಜಿಗೆ ಸಿಗದ ಸ್ಪಂದನೆ ಲೋಕಾಯುಕ್ತರಿಗೆ ಗಂಧದ ಕಡ್ಡಿ ರವಾನೆ


ಪ್ರಜಾವಾಣಿ ವಾರ್ತೆ

ಕೆ.ಆರ್. ಪೇಟೆ (ಮಂಡ್ಯ ಜಿಲ್ಲೆ): ದೂರು ಸಲ್ಲಿಸಿ ಎರಡು ವರ್ಷಗಳಾದರೂ ಲೋಕಾಯುಕ್ತ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆಂದು ದೂರಿರುವ ಪಟ್ಟಣದ ಸಾಮಾಜಿಕ ಕಾರ್ಯಕರ್ತ ಎಚ್.ಬಿ. ಮಂಜುನಾಥ್ ಎಂಬವರು, 'ಕಡತಕ್ಕೆ ಪ್ರತಿದಿನ ಪೂಜೆ ಮಾಡಿ' ಎಂದು ಹೇಳಿ ಗಂಧದ ಕಡ್ಡಿಯ ಪ್ಯಾಕೆಟ್ ಅನ್ನು ಅಧಿಕಾರಿಗಳಿಗೆ ಕಳಿಸಿದ್ದಾರೆ.

'ಅರ್ಜಿಯನ್ನು ಕಡತದಲ್ಲಿ ಇಟ್ಟುಕೊಂಡಿದ್ದೇವೆ' ಎಂದು ಲೋಕಾಯುಕ್ತ ಅಧಿಕಾರಿಗಳು ಹಿಂಬರಹ ನೀಡಿದ್ದರಿಂದ ಬೇಸತ್ತು ಅವರು ಹೀಗೆ ಮಾಡಿದ್ದಾರೆ.

'ಪಟ್ಟಣದ ಖಾಸಿಂಖಾನ್ ಸಮುದಾಯ ಭವನದ ಆವರಣದಲ್ಲಿ ಹೆಚ್ಚುವರಿ ಹಾಲ್ ನಿರ್ಮಿಸದೆ, ₹50 ಲಕ್ಷವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ' ಎಂದು ಆರೋಪಿಸಿ ಅವರು 2022ರಲ್ಲಿ ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಪಟ್ಟಣ ಮೂಲದವರಾದ ಕೆ.ರೆಹಮಾನ್ ಖಾನ್ ಅವರ ರಾಜ್ಯಸಭಾ ಸದಸ್ಯರ ನಿಧಿಯಿಂದ ಹಣ ಬಿಡುಗಡೆ ಮಾಡಲಾಗಿತ್ತು.

ಈ ಸಂಬಂಧ ತನಿಖೆಗಾಗಿ ಲೋಕಾಯುಕ್ತ ಸಂಸ್ಥೆಯಿಂದ ಬಂದಿದ್ದ ಎಂಜಿನಿಯರ್, 'ಹಳೆಯ ಕಟ್ಟಡವನ್ನು ದುರಸ್ತಿ ಮಾಡಲಾಗಿದೆ' ಎಂದು ವರದಿ ನೀಡಿದ್ದರು. ನಂತರ ಸೂಕ್ತ ದಾಖಲೆಗಳೊಂದಿಗೆ ಲೋಕಾಯುಕ್ತ ಕಚೇರಿಗೆ ಮತ್ತೊಂದು ದೂರನ್ನು ಮಂಜುನಾಥ್ ನೀಡಿದ್ದರು.


ಗಂಧದ ಕಡ್ಡಿ ಪ್ಯಾಕೆಟ್ ಕಳುಹಿಸಿದ ಎಚ್.ಬಿ. ಮಂಜುನಾಥ್

ತನಿಖೆ ವಿವರ ಕೋರಿ ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಸಿದ್ದ ಮನವಿಗೆ ಅಧಿಕಾರಿಗಳು 'ಅರ್ಜಿ ಕಡತದಲ್ಲಿ ಇಟ್ಟುಕೊಂಡಿದ್ದೇವೆ' ಎಂದು ಹಿಂಬರಹ ನೀಡಿದ್ದರು. ಅದರಿಂದ ಬೇಸರಗೊಂಡ ಮಂಜುನಾಥ್, 'ಈ ವಿಳಂಬ ಧೋರಣೆ ಸರಿಯೇ' ಎಂದು ಪ್ರಶ್ನಿಸಿ ಲೋಕಾಯುಕ್ತ ಕಚೇರಿಗೆ ಗಂಧದ ಕಡ್ಡಿ ರವಾನಿಸಿ ಆಕ್ರೋಶ ಹೊರಹಾಕಿದ್ದಾರೆ.

ಪಶ್ಚಿಮ ಬಂಗಾಳ: ಚುನಾವಣಾ ಆಯೋಗಕ್ಕೆ ವಿವಿಧ ಪಕ್ಷಗಳ ಮನವಿ

'ಚುನಾವಣೆ: ಮೂರಕ್ಕಿಂತ ಕಡಿಮೆ ಹಂತಗಳಿರಲಿ'

ಕೋಲ್ಕತ್ತ/ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ಕುರಿತು ಕೇಂದ್ರ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಸೇರಿದಂತೆ ರಾಜ್ಯ ಚುನಾವಣಾ ಆಯೋಗದ ಅಧಿಕಾರಿಗಳು ವಿವಿಧ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸೋಮವಾರ ಮಾತುಕತೆ ನಡೆಸಿದರು. ಮೂರಕ್ಕಿಂತ ಹೆಚ್ಚಿನ ಹಂತಗಳಲ್ಲಿ ಚುನಾವಣೆ ನಡೆಸಬಾರದು ಎಂದು ಹೆಚ್ಚಿನ ಪಕ್ಷಗಳು ಮನವಿ ಮಾಡಿದವು.

ಟಿಎಂಸಿ, ಬಿಜೆಪಿ, ಸಿಪಿಎಂ, ಕಾಂಗ್ರೆಸ್, ಎಎಪಿ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳು ಆಯೋಗದ ಅಧಿಕಾರಿಗಳನ್ನು ಭೇಟಿ ಮಾಡಿದವು. 'ಒಂದೇ ಹಂತದಲ್ಲಿ ಚುನಾವಣೆ ನಡೆಸಿ. ಇಲ್ಲವಾದಲ್ಲಿ ಎರಡು ಹಂತಗಳನ್ನು ಮೀರಬೇಡಿ' ಎಂದು ಸಿಪಿಎಂ ಕೋರಿಕೊಂಡಿತು.

ವಿಚಾರಣೆಗೆ ಒಪ್ಪಿಗೆ: ಎಸ್‌ಐಆರ್ ಪ್ರಕ್ರಿಯೆ ವೇಳೆ ಮತದಾರರ ಪಟ್ಟಿಯಿಂದ ತಮ್ಮ ಹೆಸರನ್ನು ಅಳಿಸಿ ಹಾಕಿದ್ದನ್ನು ಪ್ರಶ್ನಿಸಿ ಕೆಲವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಯ ವಿಚಾರಣೆಯನ್ನು ಕೈಗೆತ್ತಿಕೊಳ್ಳುವುದಾಗಿ ಸಿಜೆಐ ಅವರ ನೇತೃತ್ವದ ಪೀಠವು ಮಂಗಳವಾರ ಹೇಳಿತು.

'ನಮ್ಮ ಕಳವಳವನ್ನು ಕೇಳಲೇ ಇಲ್ಲ'



ಕೋಲ್ಕತ್ತದ ಕಾಳಿಘಾಟ್ ದೇವಸ್ಥಾನಕ್ಕೆ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಸೋಮವಾರ ಭೇಟಿ ನೀಡಿದ್ದ ವೇಳೆ ಅವರಿಗೆ ಸಾರ್ವಜನಿಕರು ಕಪ್ಪು ಪಟ್ಟಿ ಪ್ರದರ್ಶಿಸಿ, 'ಗೋ ಬ್ಯಾಕ್' ಎಂದು ಘೋಷಣೆಗಳನ್ನು ಕೂಗಿದರು ಪಿಟಿಐ ಚಿತ್ರ

'ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಕುರಿತು ನಾವು ವ್ಯಕ್ತಪಡಿಸಿದ ಕಳವಳಗಳ ಕುರಿತು ಆಯೋಗವು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. 'ಈ ಕುರಿತು ನೀವು ಸುಪ್ರೀಂ ಕೋರ್ಟ್‌ಗೆ ಹೋಗಿದ್ದೀರಿ, ಅಲ್ಲಿ ವಿಚಾರಣೆ ನಡೆಯುತ್ತಿದೆ. ಎಲ್ಲವೂ ಅಲ್ಲಿಯೇ ನಿರ್ಧಾರವಾಗುತ್ತದೆ. ನಮಗೂ ಅದಕ್ಕೂ ಯಾವುದೇ ಸಂಬಂಧವಿಲ್ಲ' ಎಂದು ಆಯೋಗ ಹೇಳಿತು' ಎಂದು ಟಿಎಂಸಿ ದೂರಿದೆ.

ಸಭೆ ಬಳಿಕ, ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವೆ ಚಂದ್ರಿಮಾ ಭಟ್ಟಾಚಾರ್ಯ, 'ನಾನೊಬ್ಬ ಮಹಿಳೆ. 'ನೀವು ಕೂಗಬೇಡಿ' ಎಂದು ನನಗೆ ಹೇಳಲಾಯಿತು. ಜನರ ಹಕ್ಕಿನ ಕುರಿತು ನಾನೇಕೆ ಧ್ವನಿ ಎತ್ತಬಾರದು? ನಾವು ಎಸ್‌ಐಆರ್ ಕುರಿತು ಮಾತನಾಡಲು ಎಷ್ಟೇ ಯತ್ನಿಸಿದರೂ ಆಯೋಗವು ನಮ್ಮ ಮಾತುಗಳನ್ನು ಕೇಳಿಸಿಕೊಳ್ಳಲೇ ಇಲ್ಲ. ಇಷ್ಟೇ ಆಗಿದ್ದರೆ, ಸಭೆಗೆ ನಮ್ಮನ್ನು ಯಾಕೆ ಕರೆಯಬೇಕಿತ್ತು?' ಎಂದರು.

'ಹಾಗಾದರೆ, ನಾವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದು ತಪ್ಪೇ? ಖಂಡಿತ ಇಲ್ಲ. ನಾವು ಸರಿಯಾಗಿದ್ದನ್ನೇ ಮಾಡಿದ್ದೇವೆ. ಕಳೆದ ಎರಡು ತಿಂಗಳಲ್ಲಿ ರೋಹಿಂಗ್ಯಾ ಸಮುದಾಯದ ಒಬ್ಬರನ್ನೂ ಗುರುತಿಸಲಾಗಿಲ್ಲ. ಆದರೆ, ಸಾಮಾನ್ಯ ಭಾರತೀಯನಿಗೆ ಹಿಂಸೆ ನೀಡಲಾಗುತ್ತಿದೆ, ಅವರ ರಾಷ್ಟ್ರೀಯತೆಯನ್ನು, ಪೌರತ್ವ ಸಾಬೀತು ಮಾಡುವಂತೆ ಹೇಳಲಾಗುತ್ತಿದೆ' ಎಂದು ದೂರಿದರು.

ಕಪ್ಪು ಬಾವುಟ ಪ್ರದರ್ಶನ

ಕೋಲ್ಕತ್ತದ ಕಾಳಿ ಘಾಟ್ ದೇವಸ್ಥಾನಕ್ಕೆ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಸೋಮವಾರ ಭೇಟಿ ನೀಡಿದ್ದ ವೇಳೆ ಅವರಿಗೆ ಕಪ್ಪು ಬಾವುಟ ಪ್ರದರ್ಶಿಸಲಾಗಿದ್ದು, 'ಗೋ ಬ್ಯಾಕ್ ಜ್ಞಾನೇಶ್ ಕುಮಾರ್' ಎಂಬ ಘೋಷಣೆಗಳನ್ನು ಕೂಗಲಾಗಿದೆ.

ವಿಧಾನಸಭೆ ಚುನಾವಣೆ ಕಾರಣ ವಿವಿಧ ಪಕ್ಷಗಳೊಂದಿಗೆ ಸಭೆ ನಡೆಸಲು ಅವರು ಮೂರು ದಿನಗಳ ಪಶ್ಚಿಮ ಬಂಗಾಳ ಪ್ರವಾಸದಲ್ಲಿದ್ದಾರೆ. ಭಾನುವಾರ ಅವರು ವಿಮಾನ ನಿಲ್ದಾಣಕ್ಕೆ ಬಂದಿಳಿದ ವೇಳೆ ಟಿಎಂಸಿ ಹಾಗೂ ಎಡಪಕ್ಷಗಳ ಕಾರ್ಯಕರ್ತರು ಇಂಥದ್ದೇ ಪ್ರದರ್ಶನ ಮಾಡಿ, ಪ್ರತಿಭಟನೆ ನಡೆಸಿದ್ದರು.

'ಪರಿಸ್ಥಿತಿ ನಿಯಂತ್ರಣದಲ್ಲಿದೆ. ಜ್ಞಾನೇಶ್ ಕುಮಾರ್ ಅವರ ಮೂರು ದಿನಗಳ ಭೇಟಿ ವೇಳೆ ಅವರಿಗೆ ಬಿಗಿ ಭದ್ರತೆ ಒದಗಿಸಲಾಗುವುದು' ಎಂದು ಪೊಲೀಸರು ತಿಳಿಸಿದರು.

ಐದು ಮರಿಗಳಿಗೆ ಜನ್ಮನೀಡಿದ 'ಜ್ವಾಲಾ'

ನವದೆಹಲಿ (ಪಿಟಿಐ): ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ನಮೀಬಿಯಾದಿಂದ ತರಲಾದ 'ಜ್ವಾಲಾ' ಹೆಸರಿನ ಚೀತಾ ಐದು ಮರಿಗಳಿಗೆ ಸೋಮವಾರ ಜನ್ಮ ನೀಡಿದೆ.

ಈ ಮರಿಗಳ ಜನನದಿಂದ ದೇಶದಲ್ಲಿ ಚೀತಾಗಳ ಸಂಖ್ಯೆ 53ಕ್ಕೆ ಏರಿಕೆ ಆಗಿದೆ ಎಂದು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ತಿಳಿಸಿದ್ದಾರೆ. 'ಗಾಮಿನಿ' ಹೆಸರಿನ ಚೀತಾ ನಾಲ್ಕು ಮರಿಗಳಿಗೆ ಜನ್ಮ ನೀಡಿದ ಕೆಲವು ದಿನಗಳ ನಂತರ ಈ ಬೆಳವಣಿಗೆ ನಡೆದಿದೆ.

'ನಮೀಬಿಯಾದ ಜ್ವಾಲಾ ಚೀತಾ ಮೂರನೇ ಬಾರಿಗೆ ಮರಿಗಳಿಗೆ ಜನ್ಮ ನೀಡಿದ್ದು, ದೇಶದ ಚೀತಾ ಯೋಜನೆಗೆ ಇದು ಹೆಮ್ಮೆಯ ಕ್ಷಣ. ಭಾರತದ ನೆಲದಲ್ಲಿ ಜನಿಸಿ, ಬೆಳೆಯುತ್ತಿರುವ ಮರಿಗಳ ಸಂಖ್ಯೆ ಪ್ರಸ್ತುತ 33ಕ್ಕೆ ಏರಿದೆ' ಎಂದು ಯಾದವ್ 'ಎಕ್ಸ್'ನಲ್ಲಿ ಉಲ್ಲೇಖಿಸಿದ್ದಾರೆ.

ಮರಿಯಾನಾ ಅಮೆರಿಕದ ಕಾನ್ಸುಲ್ ಜನರಲ್

ಚೆನ್ನೈ: ಚೆನ್ನೈನಲ್ಲಿರುವ ಅಮೆರಿಕ ಕಾನ್ಸುಲೇಟ್ ಕಚೇರಿಯ ಕಾನ್ಸುಲ್ ಜನರಲ್ ಆಗಿ ಮರಿಯಾನಾ ಎಲ್. ನೇಸ್ಪುಲರ್ ಅಧಿಕಾರ ವಹಿಸಿಕೊಂಡರು.

ಅಧಿಕಾರ ಸ್ವೀಕರಿಸಿದ ಬಳಿಕ ಮಾತನಾಡಿದ ಮರಿಯಾನಾ ಅವರು, 'ದಕ್ಷಿಣ ಭಾರತದಲ್ಲಿ ಅಮೆರಿಕಾವನ್ನು ಪ್ರತಿನಿಧಿಸುತ್ತಿರುವುದು ನನಗೆ ಸಂದ ಗೌರವ ಎಂದೇ ಭಾವಿಸುತ್ತೇನೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಕಾರ್ಯದರ್ಶಿ ರುಬಿಯೊ ಹಾಗೂ ಭಾರತದಲ್ಲಿನ ಅಮೆರಿಕದ ರಾಯಭಾರಿ ಸರ್ಗಿಯೊ ಗೋರ್ ಅವರ ನಾಯಕತ್ವದಲ್ಲಿ ಉಭಯ ದೇಶಗಳ ನಡುವಿನ ಸಂಬಂಧವನ್ನು ಬಲಪಡಿಸುವತ್ತ ಗಮನ ಹರಿಸುತ್ತೇವೆ. ವ್ಯಾಪಾರ ಸೇರಿದಂತೆ ಇತರ ಸಂಬಂಧ ವೃದ್ಧಿಪಡಿಸುವುದನ್ನು ನಾನು ಎದುರು ನೋಡುತ್ತಿದ್ದೇನೆ' ಎಂದರು.


ಮರಿಯಾನಾ

ಚೆನ್ನೈನಲ್ಲಿರುವ ಅಮೆರಿಕ ಕಾನ್ಸುಲೇಟ್ ಕಚೇರಿಯು ತಮಿಳುನಾಡು, ಕರ್ನಾಟಕ, ಕೇರಳ, ಪುದುಚೇರಿ, ಅಂಡಮಾನ್–ನಿಕೋಬಾರ್ ದ್ವೀಪಗಳು ಹಾಗೂ ಲಕ್ಷದ್ವೀಪಗಳ ವ್ಯಾಪ್ತಿ ಹೊಂದಿದೆ.

ಈ ಮೊದಲು ಮರಿಯಾನಾ ಅವರು ಜೆರುಸಲೇಂ, ಆಮ್ಮನ್, ತಾಷ್ಕೆಂಟ್‌ನಲ್ಲಿ-ಕಾರ್ಯನಿರ್ವಹಿಸಿದ್ದಾರೆ.

ಇತಿಹಾಸಕಾರ ಕೆ.ಎನ್.ಪಣಿಕ್ಕರ್ ನಿಧನ

ಒಂದನೇ ಪುಟದಿಂದ...

ವಸಾಹತುಶಾಹಿ ಕಾಲದ ಭಾರತದಲ್ಲಿ ನಡೆದ ಜನಪ್ರಿಯ ಚಳವಳಿಗಳು ಮತ್ತು ನಿರ್ಲಕ್ಷಿತ ಸಮುದಾಯಗಳನ್ನು ಇವರ ಬರಹಗಳು ಕೇಂದ್ರೀಕರಿಸಿದ್ದವು.

ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಹಲವು ವರ್ಷ ಬೋಧಿಸಿದ್ದ ಅವರು, ಅಲ್ಲಿ ಇತಿಹಾಸ ವಿಭಾಗದ ಮುಖ್ಯಸ್ಥರಾಗಿ, ಸಮಾಜ ವಿಜ್ಞಾನ ನಿಕಾಯದ ಡೀನ್ ಆಗಿ ಕಾರ್ಯನಿರ್ವಹಿಸಿದ್ದರು. ಪಣಿಕ್ಕರ್ ಅವರು ಕೇರಳದಲ್ಲಿನ ಶ್ರೀ ಶಂಕರಾಚಾರ್ಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಯಾಗಿ, ಕೇರಳದ ಇತಿಹಾಸ ಸಂಶೋಧನಾ ಮಂಡಳಿಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಜಾತ್ಯತೀತ ವ್ಯವಸ್ಥೆಯ ಪ್ರತಿಪಾದಕರಾಗಿದ್ದ ಅವರು ದಾಖಲೆ ಆಧಾರಿತ ಇತಿಹಾಸ ರಚನೆಗೆ ಹೆಸರುವಾಸಿಯಾಗಿದ್ದರು.

ದೆಹಲಿ ಅಬಕಾರಿ ನೀತಿ ಪ್ರಕರಣ: ಕೇಜ್ರಿವಾಲ್ ಪ್ರತಿಕ್ರಿಯೆ ಕೇಳಿದ ದೆಹಲಿ ಹೈಕೋರ್ಟ್

ನವದೆಹಲಿ (ಪಿಟಿಐ): ಅಬಕಾರಿ ನೀತಿ ಪ್ರಕರಣದಲ್ಲಿ ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಮತ್ತು ಇತರ 21 ಮಂದಿಯನ್ನು ಖುಲಾಸೆಗೊಳಿಸಿದ ವಿಚಾರಣಾ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಸಿಬಿಐ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ದೆಹಲಿ ಹೈಕೋರ್ಟ್ ಅವರೆಲ್ಲರಿಂದ ಪ್ರತಿಕ್ರಿಯೆ ಕೇಳಿದೆ.


ಕೇಜ್ರಿವಾಲ್

ನ್ಯಾಯಮೂರ್ತಿ ಸ್ವರ್ಣ ಕಾಂತ ಶರ್ಮಾ ಅವರು ಪ್ರಕರಣ ವಿಚಾರಣೆಯನ್ನು ಮಾರ್ಚ್ 16ಕ್ಕೆ ಪಟ್ಟಿ ಮಾಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ತನಿಖೆ ನಡೆಸುತ್ತಿರುವ ಅಕ್ರಮ ಹಣ ವರ್ಗಾವಣೆ ಕುರಿತ ವಿಚಾರಣೆಯನ್ನು ಮುಂದೂಡುವಂತೆ ವಿಚಾರಣಾ ನ್ಯಾಯಾಲಯಕ್ಕೆ ಸೂಚಿಸುವುದಾಗಿ ನ್ಯಾಯಪೀಠ ತಿಳಿಸಿದೆ.

'ವಿಚಾರಣಾ ನ್ಯಾಯಾಲಯದ ತೀರ್ಪು ಸಂಪೂರ್ಣವಾಗಿ ಅಸಂಬದ್ಧವಾಗಿದೆ, ಸಾಕ್ಷ್ಯಗಳಿಗೆ ಮತ್ತು ನ್ಯಾಯದ ತತ್ವಗಳಿಗೆ ವಿರುದ್ಧವಾಗಿದೆ' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ನ್ಯಾಯಾಲಯಕ್ಕೆ ತಿಳಿಸಿದರು. ಪ್ರಕರಣವು ಅತಿದೊಡ್ಡ ಹಗರಣ, ಇದೊಂದು ಭ್ರಷ್ಟಾಚಾರ ಪ್ರಕರಣ ಎಂದು ಆರೋಪಿಸಿದರು.

ಫೆಬ್ರುವರಿ 27ರಂದು ವಿಚಾರಣಾ ನ್ಯಾಯಾಲಯವು ಕೇಜ್ರಿವಾಲ್ ಸೇರಿದಂತೆ 23 ಮಂದಿಯನ್ನು ಖುಲಾಸೆಗೊಳಿಸಿತ್ತು.

'ಹೋಟೆಲ್ ಬಂದ್'

ಒಂದನೇ ಪುಟದಿಂದ...

'ಸಿಲಿಂಡರ್‌ಗಳ ಸರಬರಾಜು ಸಹಜ ಸ್ಥಿತಿಗೆ ಬರುವವರೆಗೆ ಹೋಟೆಲ್ ಉದ್ಯಮ ಸಂಕಷ್ಟ ಎದುರಿಸಲಿದೆ. 70 ದಿನಗಳವರೆಗೆ ಅಡುಗೆ ಅನಿಲ ಸಿಲಿಂಡರ್‌ಗಳ ಸರಬರಾಜಿನಲ್ಲಿ ಯಾವುದೇ ಅಡಚಣೆ ಉಂಟಾಗುವುದಿಲ್ಲವೆಂದು ಕೇಂದ್ರ ಸರ್ಕಾರ ತಿಳಿಸಿತ್ತು. ಈಗ ಏಕಾಏಕಿ ನಿಲ್ಲಿಸಿರುವುದರಿಂದ ಹೋಟೆಲ್ ಉದ್ಯಮಕ್ಕೆ ದೊಡ್ಡ ಹೊಡೆತವಾಗಿದೆ. ಅಡುಗೆ ಅನಿಲ ಸಿಲಿಂಡರ್‌ಗಳ ಸರಬರಾಜು ಮತ್ತೆ ಪ್ರಾರಂಭಿಸುವಂತೆ ಸಂಬಂಧಪಟ್ಟ ಕೇಂದ್ರ ಸಚಿವರಿಗೆ ಮನವಿ ಸಲ್ಲಿಸಲಾಗಿದೆ' ಎಂದು ಅವರು ಹೇಳಿದರು.

ದೇಗುಲ ಪ್ರವೇಶ: ದಲಿತರಿಗೆ ಅಡ್ಡಿ

ಒಂದನೇ ಪುಟದಿಂದ...

ಸಭೆಯಲ್ಲಿ ಅಧಿಕಾರಿಗಳ ಸಮ್ಮುಖದಲ್ಲಿ ಪರಿಶಿಷ್ಟ ಜಾತಿ ಹಾಗೂ ಗ್ರಾಮದ ಇತರ ಸಮುದಾಯದವರ ನಡುವೆ ತೀವ್ರ ವಾಗ್ವಾದ ನಡೆಯಿತು. 'ಈ ಹಿಂದಿನಿಂದಲೂ ಇದೇ ಪದ್ಧತಿ ನಡೆದುಕೊಂಡು ಬಂದಿದೆ' ಎಂದು ಕೆಲವರು ಪ್ರತಿಪಾದಿಸಿದರು. ಆಗ ಪರಿಶಿಷ್ಟ ಜಾತಿ ಮುಖಂಡರು, 'ಯಾವ ಕಾಲದಲ್ಲಿ ಇದ್ದೀರಿ. ಸಂವಿಧಾನ ಎಲ್ಲರಿಗೂ ಒಂದೇ ಅವಕಾಶ ನೀಡಿದೆ' ಎಂದರು. ಮಾತಿಗೆ ಮಾತು ಬೆಳೆದು ಪರಿಸ್ಥಿತಿ ಪ್ರಕ್ಷುಬ್ಧಗೊಂಡಿತು.

'ತಾಂತ್ರಿಕವಾಗಿ ಮುಂದುವರಿಯುತ್ತಿದ್ದೇವೆ. ಆದರೆ ನಮ್ಮ ಮನಸ್ಸುಗಳು ಮುಂದುವರಿದಿಲ್ಲ. ನಾವು ಮಾಡಿಕೊಂಡಿರುವ ಕಟ್ಟುಪಾಡುಗಳು ನಮಗೆ ಇತಿ ಮಿತಿ ಹೇರಿವೆ. ಸಂಪ್ರದಾಯದ ಹೆಸರಿನಲ್ಲಿ ಕಾನೂನು ಉಲ್ಲಂಘನೆ ಸಲ್ಲದು' ಎಂದು ಡಿವೈಎಸ್‌ಪಿ ಪ್ರಕಾಶ್ ಕಿವಿಮಾತು ಹೇಳಿದರು.


ಆಗ ಗ್ರಾಮದ ಇತರ ಸಮುದಾಯದವರು, 'ನಾವು ಅಡ್ಡಿ ಮಾಡುವುದಿಲ್ಲ. 40 ದಿನ ಪೂಜೆ ನಂತರ ಅವರು (ಪರಿಶಿಷ್ಟ ಜಾತಿ) ದೇಗುಲ ಪ್ರವೇಶಿಸಲಿ ಎಂದುಕೊಂಡಿದ್ದೆವು. ಆದರೆ ಗರ್ಭಗುಡಿ ಪ್ರವೇಶಿಸಿ ದೇವರಿಗೆ ಪೂಜೆ ಸಲ್ಲಿಸಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಎಲ್ಲರಿಂದಲೂ ದೇಣಿಗೆ ಸಂಗ್ರಹಿಸಿದ್ದಾರೆ. ಪೂಜೆ ಮಾಡಲು ಅವಕಾಶ ಕೇಳಿದಾಗ 40 ದಿನದ ನಂತರ ಪೂಜೆ ಮಾಡಿ ಎನ್ನುತ್ತಿದ್ದಾರೆ. ಗ್ರಾಮದ ದೇವರಿಗೆ ಪೂಜೆ ಮಾಡಲು ಯಾರ ಅಪ್ಪಣೆ ಬೇಕು. ಸಂವಿಧಾನ ಎಲ್ಲರಿಗೂ ಒಂದೇ' ಎಂದು ಪರಿಶಿಷ್ಟ ಜಾತಿಯ ನಾರಾಯಣ ಸ್ವಾಮಿ ತಿಳಿಸಿದರು.

ಗ್ರಾಮಸ್ಥರ ಜೊತೆ ಅಧಿಕಾರಿಗಳು ಮಾತುಕತೆ ನಡೆಸಿ ಪರಿಸ್ಥಿತಿ ತಿಳಿಗೊಳಿಸಿದರು. ಪರಿಶಿಷ್ಟ ಜಾತಿಯ ಜನರು ದೇಗುಲ ಪ್ರವೇಶಿಸಿದರು. ಗ್ರಾಮದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ವಿರೋಧ ಎಲ್ಲಿರುವುದಿಲ್ಲವೋ ಅಲ್ಲಿ ಜಯವೆಂಬುದೂ ಇರುವುದಿಲ್ಲ.

–ಬರ್ನಾಡ್ ಷಾ

ಸಂಪಾದಕೀಯ

‘ಟಿ20 ವಿಶ್ವಕಪ್’ ಅಪೂರ್ವ ಗೆಲುವು ಸಾಂಘಿಕ ಶಕ್ತಿಗೆ ಒಲಿದ ಯಶಸ್ಸು

ಸಾಬರಮತಿ ನದಿ ದಂಡೆಯಲ್ಲಿರುವ ಅಹಮದಾಬಾದ್ ನಗರದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ‘ಐಸಿಸಿ ಟಿ20 ವಿಶ್ವಕಪ್’ ಪಂದ್ಯದ ಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಭಾರತ ಗೆಲುವು ಸಾಧಿಸುವುದರೊಂದಿಗೆ, ಕ್ರಿಕೆಟ್ ಜಗತ್ತಿನಲ್ಲಿ ಹೊಸ ದಾಖಲೆಗಳು ಸೃಷ್ಟಿಯಾಗಿವೆ. ಚುಟುಕು ಕ್ರಿಕೆಟ್‌ನಲ್ಲಿ ಭಾರತದ ಯುವ ಕ್ರಿಕೆಟಿಗರು ಸಾಧಿಸಿರುವ ಪಾರಮ್ಯವನ್ನು ಈ ಗೆಲುವು ಸಂಕೇತಿಸುವಂತಿದೆ. ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತ ತಂಡದ ಅಧಿಕಾರಯುತ ಗೆಲುವಿನೊಂದಿಗೆ, ಸುಮಾರು ಎರಡು ದಶಕಗಳ ಟಿ20 ವಿಶ್ವಕಪ್ ಟೂರ್ನಿಯ ಇತಿಹಾಸದಲ್ಲಿ ಪ್ರಶಸ್ತಿ ಗೆದ್ದ ಮೊದಲ ಆತಿಥೇಯ ತಂಡ, ಮೂರನೇ ಬಾರಿ ಪ್ರಶಸ್ತಿ ಗಳಿಸಿದ ಏಕೈಕ ದೇಶ ಮತ್ತು ಸತತ ಎರಡು ವರ್ಷ ಚಾಂಪಿಯನ್ ಪಟ್ಟ ಅಲಂಕರಿಸಿದ ಹಿರಿಮೆಯ ದಾಖಲೆಗಳು ಸೃಷ್ಟಿಯಾಗಿವೆ. 2023ರಲ್ಲಿ ಆಸ್ಟ್ರೇಲಿಯಾ ಎದುರಿನ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ಸೋತ ಕ್ರೀಡಾಂಗಣದಲ್ಲಿಯೇ ಈ ಸಾಧನೆ ಮೂಡಿಬಂದಿರುವುದು ಗಮನಾರ್ಹ. ಒಂದು ಲಕ್ಷಕ್ಕೂ ಹೆಚ್ಚು ಪ್ರೇಕ್ಷಕರ ಸಮ್ಮುಖದಲ್ಲಿ ಕ್ರೀಡಾಂಗಣವನ್ನು ಸ್ತಬ್ಧಗೊಳಿಸುವುದಾಗಿ ಹೇಳಿದ್ದ ಕಿವೀಸ್ ಬಳಗದ ನಾಯಕ ಮಿಚೆಲ್ ಸ್ಯಾಂಟನರ್ ಮತ್ತು ಅವರ ಬಳಗಕ್ಕೆ ಚೊಚ್ಚಿಲ ಪ್ರಶಸ್ತಿಗೆ ಭಾಜನರಾಗುವುದು ಸಾಧ್ಯವಾಗಿಲ್ಲ. ಭಾರತ ತಂಡದ ಆಡಳಿತ ತನ್ನ ಆಟಗಾರರ ಮೇಲೆ ಇಟ್ಟ ವಿಶ್ವಾಸ ಮತ್ತು ನೀಡಿದ ಪ್ರೋತ್ಸಾಹ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದೆ. ಅಸ್ಥಿರ ಪ್ರದರ್ಶನದಿಂದ ಟೀಕೆಗೊಳಗಾಗಿದ್ದ ಬ್ಯಾಟರ್‌ಗಳಾದ ಅಭಿಷೇಕ್ ಶರ್ಮಾ ಮತ್ತು ಸಂಜು ಸ್ಯಾಮ್ಸನ್ ಹಾಗೂ ಹೆಚ್ಚು ರನ್‌ಗಳನ್ನು ಕೊಟ್ಟು ದುಬಾರಿಯಾಗಿದ್ದ ಸ್ಪಿನ್ನರ್ ವರುಣ್ ಚಕ್ರವರ್ತಿ ಅವರಿಗೆ ಸಾಕಷ್ಟು ಅವಕಾಶಗಳನ್ನು ಕೊಡಲಾಯಿತು. ತಮ್ಮ ಮೇಲಿನ ನಂಬಿಕೆ ಹುಸಿಗೊಳಿಸದ ಸಂಜು ಅವರಂತೂ, ನಿರ್ಣಾಯಕ ಎಂಟರ ಘಟ್ಟದ ಪಂದ್ಯದಿಂದ ಫೈನಲ್‌ವರೆಗೆ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶಿಸಿದರು. ಅಭಿಷೇಕ್ ಫೈನಲ್‌ನಲ್ಲಿ ತಮ್ಮ ಸಾಮರ್ಥ್ಯ ಮೆರೆದರು. ತಂಡದ ಪರ ಹೆಚ್ಚು ವಿಕೆಟ್ ಗಳಿಸಿದ ಹಿರಿಮೆಯನ್ನು ಬೂಮ್ರಾ ಜೊತೆ ವರುಣ್ ಹಂಚಿಕೊಂಡರು.



ಚುಟುಕು ಮಾದರಿ ಕ್ರಿಕೆಟ್‌ನಲ್ಲಿ ಭಾರತ ತಂಡ ಸತತ ಎರಡನೇ ಬಾರಿಗೆ ಚಾಂಪಿಯನ್ ಆಗಿದೆ. ಈ ಗೆಲುವು ವಿಶ್ವಕ್ರಿಕೆಟ್‌ನ ಪ್ರಮುಖ ಶಕ್ತಿಯಾಗಿ ಭಾರತ ಹೊರಹೊಮ್ಮಿರುವುದರ ಸಂಕೇತ.

ಭಾರತ ತಂಡದ ಯಶಸ್ಸು ಒಬ್ಬಿಬ್ಬರು ಆಟಗಾರರ ಮೇಲೆ ಅವಲಂಬಿತ ಆಗಿರಲಿಲ್ಲ. ಟೂರ್ನಿಯುದ್ದಕ್ಕೂ ಎಲ್ಲ ಪಂದ್ಯಗಳಲ್ಲಿಯೂ ಸಂದರ್ಭಕ್ಕನುಗುಣವಾಗಿ ಪ್ರತಿಯೊಬ್ಬರೂ ತಮ್ಮ ಕಾಣಿಕೆ ನೀಡಿದ್ದಾರೆ. ಸೂರ್ಯಕುಮಾರ್, ಶಿವಂ ದುಬೆ, ಹಾರ್ದಿಕ್ ಪಾಂಡ್ಯ, ಇಶಾನ್ ಕಿಶನ್, ಅಕ್ಷರ್ ಪಟೇಲ್ ಅವರ ಆಟ ಕ್ರೀಡಾಪ್ರಿಯರ ನೆನಪಿನಲ್ಲಿ ದೀರ್ಘಕಾಲ ಉಳಿಯುವಂತಹದ್ದು. ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರಂತೂ ನಿರ್ಣಾಯಕ ಹಂತದಲ್ಲಿ ಭಾರತದ ಗೆಲುವಿಗೆ ದಿಕ್ಸೂಚಿಯಾದರು. ಮುಖ್ಯ ಕೋಚ್ ಗೌತಮ್ ಗಂಭೀರ್ ಮಾರ್ಗದರ್ಶನದಲ್ಲಿ ಸೂರ್ಯಕುಮಾರ್ ಅವರು ತಮ್ಮ ತಂಡದ ಪ್ರತಿಭಾನ್ವಿತರನ್ನು ದುಡಿಸಿಕೊಂಡ ರೀತಿ ಗಮನಸೆಳೆಯುವಂತಿತ್ತು. 2024ರಿಂದ ಇಲ್ಲಿಯವರೆಗೆ ಪುರುಷರ ವಿಭಾಗದಲ್ಲಿ ಎರಡು ಟಿ20 ವಿಶ್ವಕಪ್, ಚಾಂಪಿಯನ್ಸ್ ಟ್ರೋಫಿ, 19 ವರ್ಷದೊಳಗಿನವರ ವಿಶ್ವಕಪ್ ಹಾಗೂ ಮಹಿಳೆಯರ ವಿಭಾಗದಲ್ಲಿ ಏಕದಿನ ಚಾಂಪಿಯನ್‌ಷಿಪ್ ಮತ್ತು 19 ವರ್ಷದೊಳಗಿನವರ ವಿಶ್ವಕಪ್ ಕಿರೀಟಗಳನ್ನು ಭಾರತ ಜಯಿಸಿದೆ. ಈ ಮೂಲಕ ಜಾಗತಿಕ ಕ್ರಿಕೆಟ್‌ನ ಶಕ್ತಿಕೇಂದ್ರವಾಗಿ ಹೊರಹೊಮ್ಮಿದೆ.

ಟೂರ್ನಿಯ ಆರಂಭದಿಂದಲೂ ಭಾರತ ಪ್ರಶಸ್ತಿ ಗಳಿಸುವ ನೆಚ್ಚಿನ ತಂಡವಾಗಿತ್ತು. ಆದರೆ, ದಕ್ಷಿಣ ಆಫ್ರಿಕಾ, ವೆಸ್ಟ್ ಇಂಡೀಸ್, ನ್ಯೂಜಿಲೆಂಡ್ ತಂಡಗಳ ಪ್ರದರ್ಶನವೂ ಗಮನಾರ್ಹವಾಗಿತ್ತು. ವೆಸ್ಟ್ ಇಂಡೀಸ್ ತಂಡವಂತೂ ತನ್ನ ಗತವೈಭವವನ್ನು ನೆನಪಿಸುವಂತೆ ಪ್ರದರ್ಶನ ನೀಡಿದೆ. ಜಿಂಬಾಬ್ವೆ ತಂಡ ನೀಡಿದ ಪೈಪೋಟಿಯೂ ಗಮನಾರ್ಹ. ಅಫ್ಗಾನಿಸ್ತಾನವೂ ಎದುರಾಳಿಗಳಿಗೆ ಉತ್ತಮ ಪೈಪೋಟಿಯೊಡ್ಡಿತು. ಆಸ್ಟ್ರೇಲಿಯಾದಂತಹ ಬಲಾಢ್ಯ ತಂಡ ಗುಂಪು ಹಂತದಲ್ಲಿಯೇ ನಿರ್ಗಮಿಸಿದ್ದು ಅಚ್ಚರಿ ಮೂಡಿಸಿತು. ಉದಯೋನ್ಮುಖ ತಂಡಗಳಾದ ನೇಪಾಳ, ಇಟಲಿ, ನಮೀಬಿಯಾ, ಅಮೆರಿಕ, ನೆದರ್ಲೆಂಡ್ಸ್ ತಂಡಗಳು ತಮ್ಮ ಹೆಜ್ಜೆಗುರುತು ಮೂಡಿಸಿರುವುದು ಜಾಗತಿಕವಾಗಿ ಕ್ರಿಕೆಟ್ ಬೆಳವಣಿಗೆಗೆ ಆಶಾದಾಯಕ ಬೆಳವಣಿಗೆಯಾಗಿದೆ. ಆದರೆ, ಈ ಟೂರ್ನಿಯೂ ರಾಜಕೀಯ ಹಸ್ತಕ್ಷೇಪದಿಂದ ಮುಕ್ತವಾಗಿರಲಿಲ್ಲ. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಿಂದ ಬಾಂಗ್ಲಾದ ಆಟಗಾರ ಮುಸ್ತಫಿಜುರ್ ರೆಹಮಾನ್ ಅವರನ್ನು ಹೊರಹಾಕಿದ್ದನ್ನು ವಿರೋಧಿಸಿ ಆ ದೇಶವು ವಿಶ್ವಕಪ್ ಟೂರ್ನಿಯನ್ನು ಬಹಿಷ್ಕರಿಸಿತು. ಬಾಂಗ್ಲಾ ಬೆಂಬಲಕ್ಕೆ ನಿಂತ ಪಾಕಿಸ್ತಾನವು ಭಾರತದ ಎದುರಿನ ಪಂದ್ಯ ಆಡುವುದಿಲ್ಲವೆಂದು ಘೋಷಿಸಿತು. ನಂತರ ನಿಲುವು ಬದಲಿಸಿ ಆಡಿದರೂ, ಗಮನಾರ್ಹ ಸಾಧನೆಯನ್ನು ಮಾಡುವುದು ಪಾಕ್ ತಂಡಕ್ಕೆ ಸಾಧ್ಯವಾಗಲಿಲ್ಲ. ಈ ಬಾರಿಯೂ ಭಾರತ–ಪಾಕಿಸ್ತಾನ ತಂಡಗಳ ಆಟಗಾರರು ಹಸ್ತಲಾಘವ ಮಾಡದಿರುವ ಮೂಲಕ ಕ್ರೀಡಾಸ್ಫೂರ್ತಿಗೆ ವಿರುದ್ಧವಾಗಿ ಮತ್ತೊಮ್ಮೆ ನಡೆದುಕೊಂಡರು. ಕಳೆದ ವರ್ಷ ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತ ಅನುಭವಿಸಿದ್ದ ವೈಫಲ್ಯದಿಂದಾಗಿ ಅಪಾರ ಟೀಕೆಗೆ ಒಳಗಾಗಿದ್ದ ಕೋಚ್ ಗೌತಮ್ ಗಂಭೀರ್ ಅವರಿಗೆ ಪ್ರಸಕ್ತ ಗೆಲುವು ಹುಮ್ಮಸ್ಸು ತುಂಬುವಂತಿದೆ. ವಿಶ್ವಕಪ್ ಜಯವನ್ನು ಅವರು ನಿಕಟಪೂರ್ವ ಕೋಚ್ ರಾಹುಲ್ ದ್ರಾವಿಡ್ ಮತ್ತು ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ಅವರಿಗೆ ಅರ್ಪಿಸಿರುವುದು ಅರ್ಥಪೂರ್ಣವಾಗಿದೆ.

ಜಾಲಡಾ

ಮುಗಿಸುವುದು ಏಕೆ?



ಆರ್‌ಎಸ್‌ಎಸ್ ಮುಗಿಸುವ ಶಕ್ತಿ ಯಾರಿಗೂ ಇಲ್ಲ ಎಂದು ಅನಂತಕುಮಾರ ಹೆಗಡೆ ಹೇಳಿದ್ದಾರೆ. ದೇಶವನ್ನು ಕಾಂಗ್ರೆಸ್ ಮುಕ್ತ ಮಾಡುತ್ತೇವೆ ಎಂದು ಅವರದೇ ಪಕ್ಷದವರು ಹೇಳುತ್ತಾರೆ! ಯಾರು ಯಾರನ್ನು ಯಾಕೆ ಮುಗಿಸಬೇಕು?

ಈ. ಬಸವರಾಜು, ಶೈಕ್ಷಣಿಕ ಕಾರ್ಯಕರ್ತ, ‘ಫೇಸ್‌ಬುಕ್’ನಿಂದ

ಕಿಡಿನುಡಿ



ದಶಕಗಳಿಂದ ಅಧಿಕಾರ ಅನುಭವಿಸುತ್ತಾ ಕಲ್ಯಾಣ ಕರ್ನಾಟಕ ಭಾಗದ ಜನರ ಹೊಟ್ಟೆಯ ಮೇಲೆ ಹೊಡೆಯುತ್ತಿರುವ ‘ಅಸಲಿ ಸರ್ವಾಧಿಕಾರಿಗಳು’ ಯಾರು? ರಾಜ್ಯ ಸರ್ಕಾರ ಇದಕ್ಕೆ ಉತ್ತರಿಸುವುದೆ?

ಆರ್. ಅಶೋಕ, ವಿಧಾನಸಭಾ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 10-3-2001

• ಒಂದು ಲಕ್ಷ ಟನ್ ಮೆಕ್ಕೆಜೋಳ ರಫ್ತಿಗೆ ಅನುಮತಿ ಸಾಧ್ಯ

ಬೆಂಗಳೂರು, ಮಾರ್ಚ್ 9– ರಾಜ್ಯದಲ್ಲಿ ಅಗಾಧ ಪ್ರಮಾಣದಲ್ಲಿ ಬೆಳೆಯಲಾಗಿರುವ ಮೆಕ್ಕೆಜೋಳದ ಪೈಕಿ ಒಂದು ಲಕ್ಷ ಟನ್ ಮೆಕ್ಕೆಜೋಳ ರಫ್ತಿಗೆ ಅನುಮತಿ ನೀಡುವಂತೆ ಕೇಂದ್ರ ವಾಣಿಜ್ಯ ಸಚಿವರಿಗೆ ಮನವಿ ಮಾಡಿದ್ದು, ಕೆಲವೇ ದಿನದಲ್ಲಿ ಅನುಮತಿ ದೊರಕುವ ಸಾಧ್ಯತೆಗಳಿವೆ.

ಈ ವಿಷಯವನ್ನು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

• ಸಾಲದ ಬಡ್ಡಿ ಮನ್ನಾಕ್ಕೆ ಆಗ್ರಹ

ಬೆಂಗಳೂರು, ಮಾರ್ಚ್ 9– ಕೃಷಿ ಉತ್ಪನ್ನಗಳ ಬೆಲೆ ಕುಸಿತದ ಹಿನ್ನೆಲೆಯಲ್ಲಿ ರೈತರ ಸಹಕಾರಿ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಬೇಕೆಂಬ ಬೇಡಿಕೆಗೆ ಸರ್ಕಾರದಿಂದ ಸೂಕ್ತ ಪ್ರತಿಕ್ರಿಯೆ ಬಾರದೆ ಇದ್ದುದನ್ನು ಪ್ರತಿಭಟಿಸಿ ಬಿಜೆಪಿ ಮತ್ತು ಜನತಾದಳ (ಯು) ವಿಧಾನಸಭೆಯಲ್ಲಿ ಇಂದು ಪ್ರತ್ಯೇಕವಾಗಿ ಸಭಾತ್ಯಾಗ ಮಾಡಿದವು. ಬೆಲೆ ಕುಸಿತ ಕುರಿತ ಚರ್ಚೆಗೆ ಉತ್ತರ ನೀಡುವ ಸಮಯದಲ್ಲಿ ವಿಪಕ್ಷಗಳು ಪಟ್ಟು ಹಿಡಿದರೂ ಸರ್ಕಾರ ಮಣಿಯಲಿಲ್ಲ.

75 ವರ್ಷಗಳ ಹಿಂದೆ

ಶನಿವಾರ, 10-3-1951

• ಪಾಕಿಸ್ತಾನ್ ಸರ್ಕಾರದ ವಿರುದ್ಧ ಪಿತೂರಿ ಪ್ರಯತ್ನ

ಲಾಹೋರ್, ಮಾರ್ಚ್ 9– ‘ಹಿಂಸಾತ್ಮಕ ಮಾರ್ಗಗಳಿಂದ ದೇಶದಲ್ಲಿ ಗಲಭೆ ಎಬ್ಬಿಸಲು ಮತ್ತು ಪಾಕಿಸ್ತಾನ್ ರಕ್ಷಣಾ ಬಲದ ನಿಷ್ಠೆಯನ್ನು ಕೆಡಿಸಲು ಪಿತೂರಿ ನಡೆಸಿದರೆಂದು ಪಾಕಿಸ್ತಾನದ ದಂಡನಾಯಕ ಮೇಜರ್ ಜನರಲ್ ಅಕ್ಬರ್ ಖಾನ್‌ರವರನ್ನು ಮತ್ತು ಬ್ರಿಗೇಡಿಯರ್ ಎಂ.ಎ. ಲತೀಫ್‌ರವರನ್ನು ಕೆಲಸದಿಂದ ವಜಾ ಮಾಡಲಾಗಿದೆ ಎಂಬುವುದಾಗಿ ಪಾಕಿಸ್ತಾನ್ ಪ್ರಧಾನಿ ಲಿಯಾಕತ್ ಅಲಿಖಾನ್‌ರವರು ಇಂದು ತಿಳಿಸಿದರು.

ಈ ಪಿತೂರಿಗೆ ಕಾರಣರಾದ ಪಾಕಿಸ್ತಾನ್ ಟೈಂಸ್ ಪತ್ರಿಕೆ ಸಂಪಾದಕ ಫೈಜ್ ಅಹಮದ್ ಫೈಜ್, ಬ್ರಿಗೇಡಿಯರ್ ಲತೀಫ್ ಖಾನ್, ಮೇಜರ್ ಜನರಲ್ ಅಫ್ಜರ್ ಖಾನ್ ಮತ್ತು ಅವರ ಹೆಂಡತಿಯನ್ನು ಬಂಧಿಸಲಾಗಿದೆ.

ರಾಕ್ಷಸದಾಹದ ‘ಡೇಟಾ ಸೆಂಟರ್’



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

‘ಎಐ’ ತಂತ್ರಜ್ಞಾನದ ಬಾಯಾರಿಕೆ ಬಕಾಸುರನ ಹಸಿವೆಯನ್ನು ನೆನಪಿಸುವಂತಿದೆ. ಅದು ದೊಡ್ಡ ಸಂಖ್ಯೆಯ ಉದ್ಯೋಗಗಳನ್ನು ನುಂಗುವುದರ ಜೊತೆಗೆ, ಗಣನೀಯ ಪ್ರಮಾಣದ ಶುದ್ಧ ನೀರನ್ನೂ ಆಪೋಶನ ತೆಗೆದುಕೊಳ್ಳುತ್ತಿದೆ. ‘ಎಐ’ನ ರಕ್ಕಸದಾಹಕ್ಕೆ ಕಡಿವಾಣ ಹಾಕುವ ಪ್ರಯತ್ನಗಳು ತೀವ್ರಗೊಳ್ಳದೆ ಹೋದರೆ ಅಪಾಯ ಖಚಿತ.

ಕೃತಕ ಬುದ್ಧಿಮತ್ತೆ ಕ್ಷೇತ್ರವು ಅತಿ ವೇಗದಲ್ಲಿ ವಿಸ್ತರಣೆಗೊಳ್ಳುತ್ತಿದೆ. ಜನರು ಮೊಬೈಲ್ ಸೇವೆಗಳನ್ನು ಬಳಸುವಷ್ಟು ಸಲೀಸಾಗಿ ಎಐ ಬಳಸಲು ಶುರುಮಾಡಿದ್ದಾರೆ. ಎಐ ಪ್ರವೇಶದಿಂದಾಗಿ ಬೃಹತ್ ಪ್ರಮಾಣದ ಉದ್ಯೋಗ ನಷ್ಟವಾಗುತ್ತದೆ ಎಂಬ ಭಯ ಎಲ್ಲೆಡೆ ವ್ಯಾಪಿಸಿದೆ. ಆದರೂ, ಎಐನಿಂದ ಕೆಲಸ ಮಾಡಿಸಲು ಬೇಕಾದ ಅಗಾಧ ವಿದ್ಯುತ್ ಶಕ್ತಿ ಮತ್ತು ಡೇಟಾ ಸೆಂಟರ್‌ಗಳನ್ನು ತಂಪಾಗಿರಿಸಲು ಬಳಸುವ ಶುದ್ಧ ನೀರಿನ ಮೂಲಗಳ ಮೇಲೆ ಬೀಳುತ್ತಿರುವ ಒತ್ತಡದ ಬಗ್ಗೆ ಹೆಚ್ಚಿನ ಚರ್ಚೆ ನಡೆಯುತ್ತಿಲ್ಲ.

ನಾವು ಬಳಸುವ ಇ-ಮೇಲ್, ಸೋಷಿಯಲ್ ಮೀಡಿಯಾ ಪೋಸ್ಟ್ ಮತ್ತು ಎಐ ಆಧಾರಿತ ಕೆಲಸಗಳ ಸಂಭಾಷಣೆಗಳು ಡೇಟಾ ಸೆಂಟರ್‌ಗಳ ಸರ್ವರ್ ಮೂಲಕ ಹಾದುಹೋಗುತ್ತವೆ. ಲೆಕ್ಕಾಚಾರದ ಪ್ರಕಾರ, ಸರಾಸರಿ 100 ಮೆಗಾವಾಟ್ ಸಾಮರ್ಥ್ಯದ ಡೇಟಾ ಸೆಂಟರ್ ನಿರ್ವಹಣೆಗೆ ಸುಮಾರು 30 ಲಕ್ಷ ಲೀಟರ್ ನೀರು ಬೇಕು. ಇಷ್ಟು ನೀರನ್ನು ಬೆಂಗಳೂರಿನ 15,000 ಕುಟುಂಬಗಳು ಪ್ರತಿನಿತ್ಯ ಬಳಸುತ್ತವೆ. ಇದೇ ನೀರು ಗಂಗಾವತಿ ನಗರದ 40,000 ಜನರಿಗೆ ಸಾಕಾಗುತ್ತದೆ. ಇದೇ ಡೇಟಾ ಸೆಂಟರ್ ವರ್ಷಕ್ಕೆ ಬಳಸುವ ನೀರು ಸಾಧಾರಣ ನಗರದ ಒಂದು ಲಕ್ಷ ಜನರ ವಾರ್ಷಿಕ ಅಗತ್ಯವನ್ನು ಪೂರೈಸಬಲ್ಲದು. ಜಾಗತಿಕವಾಗಿ, ಡೇಟಾ ಸೆಂಟರ್‌ಗಳು ಒಂದು ವರ್ಷದ ಅವಧಿಯಲ್ಲಿ ಬಳಸುವ (560 ಶತಕೋಟಿ ಲೀಟರ್) ನೀರಿನಿಂದ 200 ಎಕರೆ ಜಮೀನಿನಲ್ಲಿ ಭರಪೂರ ಭತ್ತದ ಬೆಳೆ ತೆಗೆಯಬಹುದು! ಎಐ ಬಳಕೆಯಿಂದ ನಿಮಿಷಕ್ಕೆ ಸುಮಾರು 10 ಲಕ್ಷ ಲೀಟರ್ ನೀರು ಆವಿಯಾಗುತ್ತಿದೆ. ‘ಡಿಜಿಟಲ್ ಬಾಯಾರಿಕೆ’ ನಮ್ಮ ಕೃಷಿ ಭೂಮಿಯ ಪಾಲಿನ ನೀರನ್ನು ಕಸಿದುಕೊಳ್ಳುತ್ತಿದೆ. ಡೇಟಾ ಸೆಂಟರ್‌ಗಳ ನೀರಿನ ದಾಹ ನದಿಗಳನ್ನೇ ಒಣಗಿಸಬಲ್ಲದು!

ದಾವಣಗೆರೆಯಂಥ ನಗರವು ಒಂದು ವರ್ಷವಿಡೀ ಬಳಸುವ ವಿದ್ಯುತ್ತನ್ನು 100 ಮೆಗಾವಾಟ್ ಸಾಮರ್ಥ್ಯದ ಡೇಟಾ ಸೆಂಟರ್ ಬರೀ ಎರಡೂವರೆ ತಾಸುಗಳಲ್ಲಿ ಖಾಲಿ ಮಾಡುತ್ತದೆ. ವಿಶ್ವದ ಒಟ್ಟು ವಿದ್ಯುತ್ ಬಳಕೆಯಲ್ಲಿ ಶೇ 2ರಿಂದ 3ರಷ್ಟನ್ನು ಡೇಟಾ ಸೆಂಟರ್‌ಗಳೇ ಬಳಸುತ್ತಿವೆ. 2030ರ ವೇಳೆಗೆ ಇದರ ಪ್ರಮಾಣ ಶೇ 10ಕ್ಕೆ ತಲಪುವ ಅಂದಾಜಿದೆ. ಇದರ ಪೂರೈಕೆಗೆ ಅಣುವಿದ್ಯುತ್ ಸ್ಥಾವರಗಳೇ ಬೇಕು! ಸದ್ಯಕ್ಕೆ ಬಹುತೇಕ ದೇಶಗಳು ಉಷ್ಣ ಸ್ಥಾವರಗಳನ್ನು ಅವಲಂಬಿಸಿರುವುದರಿಂದ, ಟನ್‌ಗಟ್ಟಲೆ ಇಂಗಾಲದ ಡೈ ಆಕ್ಸೈಡ್ ವಾತಾವರಣಕ್ಕೆ ಸೇರುತ್ತಿದೆ. ಇದು ಜಾಗತಿಕ ತಾಪಮಾನ ಏರಿಕೆಗೆ ಕಾರಣವಾಗುತ್ತಿದೆ.

ಸರ್ವರ್‌ಗಳಿಂದ ಹೊರಬರುವ ಬಿಸಿ ಗಾಳಿಯು ಸ್ಥಳೀಯ ವಾತಾವರಣದ ತಾಪಮಾನವನ್ನು ಹೆಚ್ಚಿಸುತ್ತದೆ. ಸರ್ವರ್‌ಗಳನ್ನು ತಂಪಾಗಿಡಲು ಶುದ್ಧ ನೀರೇ ಬೇಕು. ಸಮುದ್ರದ ನೀರನ್ನಾಗಲೀ, ಸಂಸ್ಕರಿಸಿದ ನೀರನ್ನಾಗಲೀ ಬಳಸಲು ಬರುವುದಿಲ್ಲ. ಅಶುದ್ಧ ನೀರನ್ನು ಬಳಸಿದರೆ ಡೇಟಾ ಸೆಂಟರ್‌ನಲ್ಲಿನ ಕೊಳವೆಗಳು ಸೋರಿ, ಅಲ್ಲಿರುವ ಬೆಲೆ ಬಾಳುವ ಸೆಮಿಕಂಡಕ್ಟರ್ ಚಿಪ್‌ಗಳಿಗೆ ಬೆಂಕಿ ಹೊತ್ತಿಕೊಳ್ಳುತ್ತದೆ.

2022ರಿಂದ ಜಾಗತಿಕವಾಗಿ ನಿರ್ಮಿಸಲಾದ ಹೊಸ ಡೇಟಾ ಸೆಂಟರ್‌ಗಳಲ್ಲಿ ಮೂರನೇ ಎರಡರಷ್ಟು ಭಾಗ ಈಗಾಗಲೇ ನೀರಿನ ಅಭಾವವಿರುವ ಪ್ರದೇಶಗಳಲ್ಲಿವೆ. ಓಪನ್ ಎಐ ಕಂಪನಿಯ ಚಾಟ್ ಜಿಪಿಟಿ ಪ್ರಾರಂಭವಾಗುವ ಮೊದಲೇ, ನಗರಗಳ ಅಲ್ಪ ಪ್ರಮಾಣದ ನೀರಿನ ಸಂಪನ್ಮೂಲವನ್ನು ಈ ಕೇಂದ್ರಗಳು ನುಂಗಿ ಹಾಕುತ್ತಿವೆ ಎಂದು ಸಮುದಾಯಗಳು ದೂರುತ್ತಿದ್ದವು.

ಎಐ ಡೇಟಾ ಸೆಂಟರ್‌ಗಳಿಗೆ ಸಾಮಾನ್ಯ ಡೇಟಾ ಸೆಂಟರ್‌ಗಳಿಗಿಂತ ಹೆಚ್ಚಿನ ಮೂಲಸೌಕರ್ಯ ಬೇಕಾಗುತ್ತದೆ. ಎಐ ಕೆಲಸಗಳಿಗೆ ತರಬೇತಿ ನೀಡಲು ಮತ್ತು ಅವುಗಳನ್ನು ನಿರ್ವಹಿಸಲು ಸುಧಾರಿತ ಸ್ಟೋರೇಜ್, ಹೆಚ್ಚಿನ ಕಂಪ್ಯೂಟಿಂಗ್ ಶಕ್ತಿ ಮತ್ತು ಶಕ್ತಿಯುತ ಕೂಲಿಂಗ್ ವ್ಯವಸ್ಥೆಯ ಜೊತೆಗೆ ಹೆಚ್ಚಿನ ಸ್ಥಳಾವಕಾಶವೂ ಬೇಕಾಗುತ್ತದೆ.

ಅಮೆರಿಕದ ಅರಿಜೋನಾದಲ್ಲಿ ಮ್ಯಾರಿಕೋಪಾ ಕೌಂಟಿ ತೀವ್ರ ಬರಗಾಲ ಎದುರಿಸುತ್ತಿದ್ದರೂ, ಅಲ್ಲಿ ಮೆಟಾ ಮತ್ತು ಗೂಗಲ್‌ನಂತಹ ಕಂಪನಿಗಳು ಬೃಹತ್ ಡೇಟಾ ಸೆಂಟರ್‌ಗಳನ್ನು ತೆರೆಯುತ್ತಿವೆ. ಸ್ಪೇನ್‌ನ ಶೇ 75ರಷ್ಟು ಭಾಗ ಮರುಭೂಮಿಯಾಗುವ ಅಪಾಯದಲ್ಲಿದ್ದರೂ, ಅಮೆಜಾನ್ ಅಲ್ಲಿ ಬೃಹತ್ ಕೇಂದ್ರಗಳನ್ನು ಸ್ಥಾಪಿಸುತ್ತಿದೆ. ಒರೆಗಾನ್‌ನಲ್ಲಿರುವ ಒಂದು ಡೇಟಾ ಸೆಂಟರ್‌ನ ಶಾಖ ತಣಿಸಲು ವರ್ಷಕ್ಕೆ 50 ಕೋಟಿ ಲೀಟರ್ ಕುಡಿಯುವ ನೀರು ಬೇಕು. ಆದರೆ, ಚಿಲಿ ದೇಶ ಮಾತ್ರ ಜಗತ್ತಿಗೇ ಮಾದರಿ ಎನಿಸುವ ಕೆಲಸ ಮಾಡಿದೆ. 2024ರಲ್ಲಿ, ಗೂಗಲ್ ತನ್ನ 200 ದಶಲಕ್ಷ ಡಾಲರ್ ವೆಚ್ಚದ ಡೇಟಾ ಸೆಂಟರ್ ಅನ್ನು ಚಿಲಿಯಲ್ಲಿ ಸ್ಥಾಪಿಸಲು ಯೋಜನೆ ರೂಪಿಸಿತ್ತು. ಆದರೆ, ಚಿಲಿಯ ನ್ಯಾಯಾಲಯವು ನೀರಿನ ಅಭಾವ ಮತ್ತು ಹವಾಮಾನ ಬದಲಾವಣೆಯ ಅಡ್ಡಪರಿಣಾಮ ಪರಿಗಣಿಸಿ ಯೋಜನೆಯನ್ನು ಸ್ಥಗಿತಗೊಳಿಸಿತು.

ವಿಶ್ವದಾದ್ಯಂತ ಹತ್ತು ಸಾವಿರಕ್ಕೂ ಹೆಚ್ಚು ಸಕ್ರಿಯ ಡೇಟಾ ಸೆಂಟರ್‌ಗಳಿವೆ. ಅದರಲ್ಲಿ ಅರ್ಧದಷ್ಟು (5,429) ಅಮೆರಿಕದಲ್ಲಿವೆ. ಜರ್ಮನಿ (529), ಯುನೈಟೆಡ್ ಕಿಂಗ್‌ಡಮ್ (523), ಚೀನಾ (449), ಕೆನಡಾ (337) ಮತ್ತು ಆಸ್ಟ್ರೇಲಿಯಾದಲ್ಲಿ 300ಕ್ಕೂ ಹೆಚ್ಚು ಡೇಟಾ ಸೆಂಟರ್ ಸ್ಥಾಪಿಸಲಾಗಿದ್ದು, ನೆದರ್ಲೆಂಡ್ಸ್, ಸಿಂಗಪುರ, ಉರುಗ್ವೆ, ಮೆಕ್ಸಿಕೊ, ಸ್ಪೇನ್, ಐರ್ಲೆಂಡ್ ಮತ್ತು ಬ್ರೆಜಿಲ್ ಕೂಡ ಪ್ರಮುಖ ಡೇಟಾ ಕೇಂದ್ರಗಳಾಗಿ ಹೊರಹೊಮ್ಮಿವೆ.

ಪ್ರಸ್ತುತ 150ಕ್ಕೂ ಹೆಚ್ಚು ದೊಡ್ಡ ಡೇಟಾ ಸೆಂಟರ್‌ಗಳಿರುವ ಭಾರತವು ಏಷ್ಯಾದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಡೇಟಾ ಸೆಂಟರ್ ಮಾರುಕಟ್ಟೆ ಆಗಿದೆ. ಮುಂಬೈ, ದೆಹಲಿ, ಪುಣೆ, ಬೆಂಗಳೂರಿನ ಪೈಕಿ ಒಟ್ಟು ಡೇಟಾ ಸೆಂಟರ್ ಸಾಮರ್ಥ್ಯದ ಅರ್ಧದಷ್ಟು ಮುಂಬೈನಲ್ಲೇ ಇವೆ. ಪಕ್ಕದ ಪುಣೆಯಲ್ಲೂ ಗಣನೀಯ ಸಂಖ್ಯೆಯ ಕೇಂದ್ರಗಳಿವೆ. ಸಮುದ್ರದ ಅಡಿಯ ಕೇಬಲ್ ಸಂಪರ್ಕ ಇರುವುದರಿಂದ ಚೆನ್ನೈ ಎರಡನೇ ದೊಡ್ಡ ಹಬ್ ಆಗಿ ಬೆಳೆಯುತ್ತಿದೆ. ಐಟಿ ರಾಜಧಾನಿ ಎನಿಸಿರುವ ಬೆಂಗಳೂರಿನಲ್ಲಿ ಹೆಚ್ಚಿನ ಸಂಖ್ಯೆಯ ಎಂಟರ್‌ಪ್ರೈಸ್ ಡೇಟಾ ಸೆಂಟರ್‌ಗಳಿವೆ. ನೋಯ್ಡಾ ಉತ್ತರ ಭಾರತದ ಪ್ರಮುಖ ಕೇಂದ್ರವಾಗಿ ಬೆಳೆಯುತ್ತಿದೆ. ಅಮೆಜಾನ್ ಮತ್ತು ಮೈಕ್ರೊಸಾಫ್ಟ್ ಹೈದರಾಬಾದ್‌ನಲ್ಲಿ ಬೃಹತ್ ಹೂಡಿಕೆ ಮಾಡಿವೆ.

ಹೆಚ್ಚಿನ ಡೇಟಾ ಸೆಂಟರ್‌ಗಳು ‘ಇವಾಪೊರೇಟಿವ್ ಕೂಲಿಂಗ್’ ವಿಧಾನವನ್ನು ಬಳಸುವುದರಿಂದ ಶೇ 80ರಷ್ಟು ನೀರು ಆವಿಯಾಗಿ, ಭೂಮಿಯಿಂದ ಶಾಶ್ವತವಾಗಿ ಹೊರಹೋಗುತ್ತದೆ. ನೀರಿನ ಉಳಿತಾಯಕ್ಕಾಗಿ ಲಿಕ್ವಿಡ್ ಇಮ್ಮರ್ಶನ್ ಕೂಲಿಂಗ್, ಡೈರೆಕ್ಟ್–ಟು–ಚಿಪ್ ಕೂಲಿಂಗ್ ಮತ್ತು ನೈಸರ್ಗಿಕ ಶೀತಲ ಬಳಕೆಯಂಥ ಸುಧಾರಿತ ಕೂಲಿಂಗ್ ತಂತ್ರಜ್ಞಾನಗಳಿವೆ. ಲಿಕ್ವಿಡ್ ಇಮ್ಮರ್ಶನ್ ಕೂಲಿಂಗ್ ವಿಧಾನದಲ್ಲಿ ಸರ್ವರ್‌ಗಳನ್ನು ವಿದ್ಯುತ್ ಪ್ರವಹಿಸದ ವಿಶೇಷ ದ್ರವದಲ್ಲಿ ಪೂರ್ಣವಾಗಿ ಮುಳುಗಿಸಲಾಗುತ್ತದೆ. ಈ ದ್ರವಕ್ಕೆ ಗಾಳಿಗಿಂತ ಸಾವಿರದ ಇನ್ನೂರು ಪಟ್ಟು ಹೆಚ್ಚು ಶಾಖ ಹೀರಿಕೊಳ್ಳುವ ಸಾಮರ್ಥ್ಯವಿರುತ್ತದೆ. ಇದು ಸಂಪೂರ್ಣವಾಗಿ ‘ಕ್ಲೋಸ್ಡ್–ಲೂಪ್’ ವ್ಯವಸ್ಥೆಯಾದ್ದರಿಂದ ನೀರಿನ ಅಗತ್ಯವೇ ಇರುವುದಿಲ್ಲ. ಡೈರೆಕ್ಟ್–ಟು–ಚಿಪ್ ಕೂಲಿಂಗ್ ವಿಧಾನದಲ್ಲಿ ಶಾಖ ಉತ್ಪಾದಿಸುವ ಕಂಪ್ಯೂಟರ್ ಚಿಪ್‌ಗಳ ಮೇಲೆ ನೇರವಾಗಿ ಸಣ್ಣ ಪೈಪ್‌ಗಳ ಮೂಲಕ ದ್ರವವನ್ನು ಹರಿಸಲಾಗುತ್ತದೆ. ಇದು ಇಡೀ ಕೊಠಡಿಯನ್ನು ತಣ್ಣಗಾಗಿಸುವ ಬದಲು, ಎಲ್ಲಿ ಶಾಖವಿದೆಯೋ ಅಲ್ಲಷ್ಟೇ ತಂಪು ಮಾಡುತ್ತದೆ. ಇದರಿಂದ ನೀರು ಮತ್ತು ವಿದ್ಯುತ್ ಎರಡೂ ಉಳಿತಾಯವಾಗುತ್ತವೆ. ಎಐ ಸರ್ವರ್‌ಗಳಿಗೆ ಇದು ಹೆಚ್ಚು ಸೂಕ್ತವಾದರೂ, ಇವುಗಳನ್ನು ಸ್ಥಾಪಿಸಲು ಭಾರೀ ಬಂಡವಾಳ ಬೇಕು.

ಮನೆಯ ‘ಎಸಿ’ಯಂತೆ ಕೆಲಸ ಮಾಡುವ ಸಾಂಪ್ರದಾಯಿಕ ಏರ್ ಕೂಲಿಂಗ್ ಮತ್ತು ಡ್ರೈ ಕೂಲಿಂಗ್ ವಿಧಾನಗಳನ್ನು ಬಳಸಿದರೆ ನೀರಿನ ಅವಶ್ಯಕತೆಯೇ ಇರುವುದಿಲ್ಲ. ಇದಕ್ಕೆ ಅಪಾರ ಪ್ರಮಾಣದ ವಿದ್ಯುತ್ ಬೇಕು. ಡೇಟಾ ಸೆಂಟರ್‌ಗಳನ್ನು ಸಮುದ್ರದ ಹಾಸಿನ ಮೇಲಿರಿಸಿ, ಅಲ್ಲಿರುವ ನೀರಿನ ತಂಪನ್ನೇ ಬಳಸಿಕೊಳ್ಳುವ ನೈಸರ್ಗಿಕ ಶೀತಲ ಬಳಕೆ ವಿಧಾನವೂ ಲಭ್ಯವಿದೆ. ಮೈಕ್ರೊಸಾಫ್ಟ್ ಈಗಾಗಲೇ ‘ಪ್ರಾಜೆಕ್ಟ್ ನೇಟಿಕ್’ ಹೆಸರಿನಲ್ಲಿ ಸಮುದ್ರದ ಅಡಿಯಲ್ಲಿ ಡೇಟಾ ಸೆಂಟರ್ ನಿರ್ಮಿಸುವ ಪ್ರಯೋಗ ಮಾಡಿದೆ. ಆದರೆ, ರಿಪೇರಿ ಮತ್ತು ಸರ್ವೀಸಿಂಗ್ ಅಷ್ಟು ಸುಲಭವಲ್ಲ. ತಣ್ಣಗಿನ ಹವಾಮಾನವಿರುವ ನಾರ್ವೆ, ಸ್ವೀಡನ್‌ನಲ್ಲಿ ಡೇಟಾ ಸೆಂಟರ್ ನಿರ್ಮಿಸುವ ಅವಕಾಶಗಳಿವೆ. ಬಾಹ್ಯಾಕಾಶದಲ್ಲಿ ಡೇಟಾ ಸೆಂಟರ್ ಕಟ್ಟುವ ಚಿಂತನೆ ಶುರುವಾಗಿದೆ. ಅದರ ವೆಚ್ಚವೂ ಅಷ್ಟೇ ಎತ್ತರದ್ದು. ಅಮೆಜಾನ್ ಮತ್ತು ಗೂಗಲ್‌ನಂತಹ ಕಂಪನಿಗಳು 2030ರ ವೇಳೆಗೆ ತಾವು ಬಳಸುವ ನೀರಿಗಿಂತ ಹೆಚ್ಚು ನೀರನ್ನು ಜಲಮೂಲಗಳಿಗೆ ಮರುಪೂರಣ ಮಾಡಿ ‘ವಾಟರ್ ಪಾಸಿಟಿವ್’ ಆಗುವುದಾಗಿ ಪಣತೊಟ್ಟಿವೆ.

ಇನ್ನೈದು ವರ್ಷಗಳಲ್ಲಿ ಸೆಮಿಕಂಡಕ್ಟರ್ ಚಿಪ್‌ಗಳ ಸಾಂದ್ರತೆ ಹೆಚ್ಚಾಗುವುದರಿಂದ ‘ಏರ್ ಕೂಲಿಂಗ್’ ಸಂಪೂರ್ಣವಾಗಿ ಅಪ್ರಸ್ತುತವಾಗಲಿದೆ. ಹೆಚ್ಚಿನ ಕಂಪನಿಗಳು ಲಿಕ್ವಿಡ್ ಕೂಲಿಂಗ್ ವಿಧಾನವನ್ನು ಅನಿವಾರ್ಯವಾಗಿ ಅಳವಡಿಸಿಕೊಳ್ಳಲಿವೆ. ಇದು ನೀರಿನ ಮೇಲಿನ ಒತ್ತಡವನ್ನು ಕಡಿಮೆ ಮಾಡಲಿದೆಯಾದರೂ, ಇವುಗಳನ್ನು ನಿರ್ಮಿಸಲು ಭಾರೀ ಬಂಡವಾಳ ಬೇಕು.

ಡೇಟಾ ಸೆಂಟರ್‌ಗಳು ಸಂಪೂರ್ಣವಾಗಿ ನವೀಕರಿಸಬಲ್ಲ ಇಂಧನಗಳನ್ನಷ್ಟೇ ಬಳಸುವಂತೆ ಕಡ್ಡಾಯಗೊಳಿಸಬೇಕು. ಪ್ರತಿ ಡೇಟಾ ಸೆಂಟರ್ ಎಷ್ಟು ನೀರು ಬಳಸುತ್ತಿದೆ ಎಂಬುದರ ಆಡಿಟ್ ನಡೆಯಬೇಕು. ಡೇಟಾ ಸೆಂಟರ್‌ಗಳನ್ನು ನೀರಿನ ಕೊರತೆಯಿರುವ ಪ್ರದೇಶಗಳ ಬದಲು, ನೈಸರ್ಗಿಕವಾಗಿ ತಂಪಾಗಿರುವ ದೇಶಗಳಲ್ಲಿ ಅಥವಾ ಸಮುದ್ರದಾಳದಲ್ಲಿ ನಿರ್ಮಿಸುವುದು ಉತ್ತಮ. ಡೇಟಾ ಸೆಂಟರ್‌ಗಳು ನಮ್ಮ ಡಿಜಿಟಲ್ ಬದುಕಿಗೆ ಅನಿವಾರ್ಯ. ಆದರೆ, ಅವುಗಳಿಗೆ ಭೂಮಿಯ ನೀರಿನ ಮೂಲಗಳನ್ನು ಆಪೋಶನ ತೆಗೆದುಕೊಳ್ಳುವ ಅವಕಾಶ ನೀಡಬಾರದು.



ವಾಚಕರ ವಾಣಿ

‘ಹಿಂದುಳಿದ’ ಹಣೆಪಟ್ಟಿ ಮತ್ತು ರಾಜಕೀಯ

ಪಕ್ಷಭೇದ ಮರೆತು ಸದನದೊಳಗೆ ಮತ್ತು ಹೊರಗೆ ಪರಿಶಿಷ್ಟ ಜಾತಿಯ ಶಾಸಕರು ಒಳಮೀಸಲಾತಿಗೆ ಸಂಬಂಧಿಸಿದಂತೆ ತಮ್ಮ ಸಮುದಾಯದ ಪರ ಧ್ವನಿ ಎತ್ತುತ್ತಿರುವುದು ಸರಿಯಾಗಿದೆ. ಆದರೆ, ಇತರೆ ಶೋಷಿತ ವರ್ಗಗಳ ಶಾಸಕರು ಮೌನ ತಳೆದಿರುವುದು ಸೋಜಿಗ. ರಾಜ್ಯದ ಜನಸಂಖ್ಯೆಯಲ್ಲಿ ಶೇ 40ರಷ್ಟಿರುವ ಹಿಂದುಳಿದ ವರ್ಗಗಳ ಶೋಚನೀಯ ಸ್ಥಿತಿಗತಿ ಬಗ್ಗೆ ಆ ಸಮುದಾಯಗಳನ್ನು ಪ್ರತಿನಿಧಿಸುವವರು ತುಟಿ ಬಿಚ್ಚುತ್ತಿಲ್ಲ. ಚುನಾವಣೆಯಲ್ಲಿ ಟಿಕೆಟ್ ಪಡೆಯಲು, ಸಚಿವರಾಗಲಷ್ಟೇ ಹಿಂದುಳಿದ ವರ್ಗದವರೆಂಬ ಹಣೆಪಟ್ಟಿ ಧರಿಸುವ ಜನಪ್ರತಿನಿಧಿಗಳ ವಿರುದ್ಧ ಸಮುದಾಯದ ಜನರು ಕಠಿಣ ನಿಲುವು ತಳೆಯುವ ದಿನಗಳು ದೂರದಲ್ಲಿಲ್ಲ. ಇಂಥವರಿಂದ ಸಾಮಾಜಿಕ ನ್ಯಾಯ ದಕ್ಕಲಿದೆಯೆಂದು ನಿರೀಕ್ಷಿಸುವುದು ಭ್ರಮೆಯೇ ಸರಿ.

ವೈ. ಯಮುನೇಶ್, ಹೊಸಪೇಟೆ

ಸಮರ್ಪಕ ಪಠ್ಯ: ಎನ್‌ಸಿಇಆರ್‌ಟಿ ಹೊಣೆ

ಕಿರಿಯ ವಿದ್ಯಾರ್ಥಿಗಳಲ್ಲಿ ನ್ಯಾಯಾಲಯಗಳ ಮೇಲಿನ ಸಾರ್ವಜನಿಕ ವಿಶ್ವಾಸ ಉಳಿಯುವುದು ಅಗತ್ಯ. ಭ್ರಷ್ಟಾಚಾರ ಅಥವಾ ವ್ಯವಸ್ಥೆಯ ದೌರ್ಬಲ್ಯದ ಉಲ್ಲೇಖಗಳನ್ನು ಸಮರ್ಪಕ ನಿದರ್ಶನವಿಲ್ಲದೆ ಕೊಟ್ಟಾಗ, ಅವು ವಿದ್ಯಾರ್ಥಿಗಳಲ್ಲಿ ಪಕ್ಷಪಾತದ ಅಭಿಪ್ರಾಯ ರೂಪಿಸುವ ಅಪಾಯವಿದೆ. ನ್ಯಾಯಾಂಗದಲ್ಲಿನ ವಿಳಂಬ, ಬಾಕಿ ಪ್ರಕರಣ, ಸಮಗ್ರತೆಯ ಬಗ್ಗೆ ಇರುವ ತೊಂದರೆಗಳು ಸಾರ್ವಜನಿಕ ವೇದಿಕೆಗಳಲ್ಲಿ, ಕೆಲವೊಮ್ಮೆ ನ್ಯಾಯಮೂರ್ತಿಗಳಿಂದಲೂ ಚರ್ಚೆಗೊಳಗಾಗಿವೆ. ಇಂತಹ ವಿಷಯಗಳು ಸಾರ್ವಜನಿಕ ದಾಖಲೆಗಳಲ್ಲಿ ಇದ್ದಾಗ, ಶಿಕ್ಷಣದಲ್ಲಿ ಅವುಗಳನ್ನು ಜವಾಬ್ದಾರಿಯಿಂದ ಉಲ್ಲೇಖಿಸಲು ಅವಕಾಶ ಇರಬೇಕು.

ಎನ್‌ಸಿಇಆರ್‌ಟಿಯ ವಿವಾದಿತ 8ನೇ ತರಗತಿಯ ಸಮಾಜವಿಜ್ಞಾನ ಪಠ್ಯವನ್ನು ಹಿಂತೆಗೆದುಕೊಳ್ಳದೆ, ಅದನ್ನು ಸಮತೋಲನದಿಂದ ಮಂಡಿಸುವ ಪರಿಹಾರ ಕಾಣಬೇಕಿತ್ತು. ನ್ಯಾಯಾಂಗದ ಶಕ್ತಿಗಳ ಜೊತೆಗೆ ಅಗತ್ಯ ಸುಧಾರಣೆಗಳನ್ನೂ ಪ್ರಸ್ತಾಪಿಸುವಂತೆ ರೂಪಿತವಾಗಿದ್ದಲ್ಲಿ, ವಿದ್ಯಾರ್ಥಿಗಳು ಸಾಂವಿಧಾನಿಕ ಸಂಸ್ಥೆಗಳ ಬಗೆಗಿನ ಗೌರವದ ಜೊತೆಗೆ ಹೊಣೆಗಾರಿಕೆಯ ಮಹತ್ವ ಅರಿಯಲೂ ಸಹಕಾರಿಯಾಗುತ್ತಿತ್ತು.

ಕಲ್ಯಾಣ ರಾಮನ್ ಚಂದ್ರಶೇಖರನ್, ಬೆಂಗಳೂರು

ಸತ್ಯ ತಿಳಿಸುವ ಜವಾಬ್ದಾರಿ ಯಾರದು?

ರಷ್ಯಾದಿಂದ ಈಗ ಹೊಸದಾಗಿ ಅಮೆರಿಕದ ಒಪ್ಪಿಗೆ ಮೇರೆಗೆ ಖರೀದಿಸುವ ತೈಲಕ್ಕೆ ಮೊದಲಿನ ರಿಯಾಯಿತಿ ಇಲ್ಲ ಎಂಬುದು ‘ಜಾಲದನಿ’ಯಿಂದ (ಲೇ: ವಿಕಾಸ್ ಆರ್. ಮೌರ್ಯ) ತಿಳಿಯಿತು. ಅದು ‘ಪ್ರಜಾವಾಣಿ’ಯಲ್ಲಿ ಪ್ರಕಟವಾದುದೂ ಸರಿಯೆ. ಆದರೆ, ಅದು ಎಷ್ಟು ಕೋಟಿ ರೂಪಾಯಿಗಳ ನಷ್ಟ ಎಂಬುದನ್ನು ಜನರಿಗೆ ತಿಳಿಸುವ ಜವಾಬ್ದಾರಿ ಯಾರದು? ಇಂಗ್ಲಿಷ್, ಕನ್ನಡ ಮಾಧ್ಯಮಗಳು ಮತ್ತು ಸುದ್ದಿ ವಾಹಿನಿಗಳು ಅದರ ಬಗ್ಗೆ ಚಕಾರ ಎತ್ತುತ್ತಿಲ್ಲ. ಆ ಸತ್ಯ ತಿಳಿಯಬೇಕಾದರೆ, ಸತ್ಯ ಯಾವುದು, ಸುಳ್ಳು ಯಾವುದು ಎಂಬ ವಿಂಗಡನೆಯೇ ಕಷ್ಟವಾಗಿರುವ ಸಾಮಾಜಿಕ ಜಾಲತಾಣಗಳ ಮೊರೆ ಹೊಗುವುದೊಂದೇ ಓದುಗರಾದ ನಮಗೆ ಉಳಿದಿರುವ ದಾರಿಯೆ?

ಎಸ್.ಆರ್. ವಿಜಯಶಂಕರ, ಬೆಂಗಳೂರು

ಕ್ರಿಕೆಟ್ ಸಂಭ್ರಮಿಸಿ ಸಂತೃಪ್ತರಾದರೆ ಸಾಕೆ?

ಭಾರತದ ಕ್ರಿಕೆಟ್ ತಂಡವು ಪ್ರಮುಖ ಪಂದ್ಯಗಳನ್ನು ಗೆದ್ದಾಗಲೆಲ್ಲ ಯುವಜನತೆ ಹುಚ್ಚೆದ್ದು ಕುಣಿದಾಡುತ್ತದೆ. ಇದೇ ವೇಳೆ ದೇಶದಲ್ಲಿ ಉದ್ಯೋಗಕ್ಕಾಗಿ ಸಾಮೂಹಿಕ ಆಗ್ರಹಗಳು ಹೆಚ್ಚುತ್ತಿವೆ. ಪಶ್ಚಿಮ ಏಷ್ಯಾ ಕದನದಿಂದಾಗಿ ಅಡುಗೆ ಅನಿಲ ಮತ್ತು ಅಗತ್ಯವಸ್ತುಗಳ ಬೆಲೆ ಏರಿಕೆಯಾಗಿದೆ. ಅಮೆರಿಕದ ಕುಟಿಲನಡೆಗೆ ನಾವು ಬಲಿ ಆದುದರಿಂದಾಗಿ, ತೈಲ ಖರೀದಿಯಲ್ಲಿ ರಷ್ಯಾದಿಂದ ದೊರೆಯುತ್ತಿದ್ದ ರಿಯಾಯಿತಿ ಕೈತಪ್ಪಿಹೋಗಿದೆ. ಇತ್ತ ಸಂಡೂರಿನ ದೋಣಿಮಲೈನಲ್ಲಿ ಅದಿರು ಶೋಧಕ್ಕೆ ಕೇಂದ್ರದ ಅನುಮತಿ ದೊರೆತಿದೆ. ಅಭಿವೃದ್ಧಿ ಹೆಸರಿನಲ್ಲಿ ಪಶ್ಚಿಮಘಟ್ಟಗಳನ್ನು ನಾಶಮಾಡುವ ಯೋಚನೆಗಳು–ಯೋಜನೆಗಳು ವಿವಿಧ ಹಂತದಲ್ಲಿವೆ. ಇಂಥ ಗಂಭೀರ ವಿಷಯಗಳ ಕಡೆಗೂ ನಾವು ಗಮನಹರಿಸಬೇಕಲ್ಲವೇ? ಕ್ರಿಕೆಟ್ ಗೆಲುವಿಗೆ ಕುಣಿದು ತೃಪ್ತಿಪಟ್ಟುಕೊಂಡರೆ ಸಾಕೆ?

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಹಿಂದಿ ಕೃಪಾಂಕ: ರಾಜ್ಯ ಸರ್ಕಾರ ಚಿಂತಿಸಲಿ

2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಹಿಂದಿ ವಿಷಯದಲ್ಲಿ 1.42 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಇದರಿಂದ ಅವರ ಭವಿಷ್ಯ ಅಸ್ಥಿರವಾಗಿದೆ. ಕಡ್ಡಾಯವಾಗಿ ಹಿಂದಿ ಕಲಿಯಬೇಕಾದ ಪರಿಸ್ಥಿತಿ ಇರುವುದರಿಂದ ಬಹಳಷ್ಟು ವಿದ್ಯಾರ್ಥಿಗಳಿಗೆ ಕಷ್ಟವಾಗಿದೆ. ಇಷ್ಟಪಟ್ಟು ಕಲಿಯುವವರು ಕಲಿಯಲಿ; ಬೇಡದವರಿಗೆ ಬಲವಂತವೇಕೆ? ಸರ್ಕಾರ ಇಂತಹ ವಿದ್ಯಾರ್ಥಿಗಳ ಪರಿಸ್ಥಿತಿ ಗಮನಿಸಿ, ಅವರಿಗೆ ಉತ್ತೀರ್ಣರಾಗಲು ಅಗತ್ಯವಿರುವಷ್ಟು ‘ಕೃಪಾಂಕ’ ನೀಡಬೇಕಿದೆ. ಇದರಿಂದ ಅವರ ಮುಂದಿನ ಶಿಕ್ಷಣದ ಹಾದಿ ಸುಗಮವಾಗಲಿದೆ. ಶಿಕ್ಷಣ ವ್ಯವಸ್ಥೆಯ ಉದ್ದೇಶ ವಿದ್ಯಾರ್ಥಿಗಳ ಪ್ರತಿಭೆಯನ್ನು ಪ್ರೋತ್ಸಾಹಿಸುವುದಾಗಿದೆ. ಅಗತ್ಯವಿಲ್ಲದ ಭಾಷಾ ಒತ್ತಡದಿಂದ ವಿದ್ಯಾರ್ಥಿಗಳ ಭವಿಷ್ಯಕ್ಕೆ ಹಾನಿಯಾಗಬಾರದು.

ಎಂ.ಎಸ್. ಅಲ್ಲಮ ಪ್ರಭು, ಬೆಂಗಳೂರು

ಅಡುಗೆಮನೆಗೂ ತಟ್ಟಿದ ಯುದ್ಧದ ಬಿಸಿ

ಗೃಹಬಳಕೆಯ ಸಿಲಿಂಡರ್ ದರವನ್ನು ₹60 ಮತ್ತು ವಾಣಿಜ್ಯ ಸಿಲಿಂಡರ್ ಬೆಲೆ ₹115 ಏರಿಕೆಯಾಗಿರುವುದು ಕಳವಳಕಾರಿ. ಪಶ್ಚಿಮ ಏಷ್ಯಾದ ಯುದ್ಧದ ಭೀತಿಯಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಶೇ 11ರಷ್ಟು ಜಿಗಿದಿದೆ. ಇದು ದೇಶದ ಅಡುಗೆ ಮನೆಯ ಮೇಲೆ ನೇರ ಪರಿಣಾಮ ಬೀರಿದೆ. ರಾಜ್ಯದಲ್ಲಿ ಸಿಲಿಂಡರ್ ಬೆಲೆ ₹916 ತಲಪಿದ್ದು, ಕಳೆದ 11 ತಿಂಗಳಲ್ಲಿ ಇದು ಎರಡನೇ ದೊಡ್ಡ ಏರಿಕೆಯಾಗಿದೆ. ಅಗತ್ಯವಸ್ತುಗಳ ಬೆಲೆ ಏರಿಕೆಯಿಂದ ಈಗಾಗಲೇ ತತ್ತರಿಸಿರುವ ಮಧ್ಯಮವರ್ಗದವರಿಗೆ ಇದು ಗಾಯದ ಮೇಲೆ ಬರೆ ಎಳೆದಂತಾಗಿದೆ.

ವಿಜಯಕುಮಾರ ಎಚ್.ಕೆ., ರಾಯಚೂರು

ಚುರುಮುರಿ



ವಿಧಿವಿಲಾಸವೆನೆ...

• ಡಿ.ಎಸ್. ಲಿಂಗರಾಜು

‘ಯಾರೋ ಏನೋ ಅಂದ್ರೆ ನನಗೇನು? ಹೈಕಮಾಂಡ್ ಬುಡು ಅಂದ್ರೆ ಬುಡ್ತೀನಿ, ಅವಕಾಶ ಕೊಟ್ಟರೆ ಸಾಲ ಮಾಡ್ಯಾದ್ರೂ ಸರಿ ಇಂಥವೇ ಇನ್ನೆರಡು ಬಜೆಟ್ ಮಾಡದೇಯ ಅಂದವ್ರೆ ಹುಲಿಯಣ್ಣಾರು’ ಎಂದು ಪತ್ರಕರ್ತರು ನಾಯಕರನ್ನ ಕೆಣಕಿದರು.

‘ಇದಿಯಮ್ಮ ನನ್ನ ಹಣೇಬರಾವಲ್ಲಿ ಸಿಂಹಾಸನ ಅಂತ ಬರೆದಿದ್ರೆ ಅದೇ ಆತದೆ’ ಅಂತ ನಾಯಕರು ಅಂದಾಗ ಪತ್ರಕರ್ತರು, ‘ಅಂದ್ರೆ ನೀವು ಶಸ್ತ್ರತ್ಯಾಗ ಮಾಡಿದ್ದೀರಾ?’ ಅಂತಂದ್ರು.

‘ಶಸ್ತ್ರವೇ ಇಲ್ಲಾ ಕನಾ. ಇನ್ನು ತ್ಯಾಗ ಎಲ್ಲಿ ಬತ್ತು’ ಎಂದು ನಾಯಕರು ತಲೆಯಾಡಿಸಿದರು.

‘ಮಂತೆ ನಾನು ಸ್ಟ್ರೀಟ್ ಫೈಟರ್ ಅಂದ್ರಲ್ಲಾ, ನಿಮ್ಮ ಸ್ಟ್ರಾಟಜಿ ಏನು?’ ಮತ್ತೆ ಕೆಣಕಿದರು ಸುದ್ದಿಗಾರರು.

‘ನಾವು ಎಐ ಕಾಲದಗದೀವಿ ಕನ್ರೀ. ನಮ್ಮ ತಾವೂ ಕಮ್ಯೂನಿಟಿ ಇಂಟೆಲಿಜೆನ್ಸ್ ಅದೆ, ಮೋಸದ್ ಬೇಹುಗಾರಿಕೆ ಅದೆ, ಸ್ಲೀಪರ್ ಸೆಲ್ ಅದೆ. ಅಂಡರ್ ಕವರ್ ಏಜೆಂಟುಗಳು ಅವ್ರೆ’.

‘ಇರಬೋದು. ಆದರೆ, ಸಿಂಹಾಸನ ಸಂಪಾದನೆಗೆ ಪ್ರತಿರೋಧವೋ ಅಥವಾ ಆಕ್ರಮಣವೋ, ಏನು ಮಾಡ್ತೀರ?’ ಪರ್ತಕರ್ತರು ತಿವಿದರು.

‘ನೋಡ್ರೀ, ಸಿಎಂ ಸೇರಿ ನಮ್ಮ ಜೊತೆಗೆ 139 ಜನರ ಸೈನ್ಯ ಅದೆ. ಈಗ ನಾವೆಲ್ಲಾ ಹಾಲುಜೇನು ಇದ್ದಂಗದೀವಿ. ನಮ್ಮ ಮಧ್ಯೆ ತಂದಾಕಬ್ಯಾಡಿ’ ನಾಯಕರು ವಿನಂತಿಸಿದರು.

‘ಅಯ್ಯೋ ಶಿವನೇ, ನಾವ್ಯಾಕೆ ತಂದಾಕನ ಸಾ. ಈಗ ಕೊನೇದಾಗಿ ನಿಮ್ಮ ನಿಲುವು ಏನೆಂದು ಹೇಳಿಬುಡಿ, ನಾವು ಹೋಂಟೋಯ್ತಿವಿ’ ಎಂದು ಪತ್ರಕರ್ತರು ಜುಲುಮೆ ಮಾಡಿದರು.

‘ನೋಡ್ರೀ ನನಗೂ ಸಿಂಹಾಸನ ಬೇಕಾಗ್ಯದೆ. ಅದು ಮಿಂಚಿನ ಥರ ಹೊಳೆದು ಮಾಯವಾಯ್ತಾ ಇರತದೆ. ಆದರೆ, ಸಿಂಹಾಸನದ ಆಸೆ ಅದಲ್ಲಾ, ಅದು ತಿಗಣೆ ಥರ ದಿನವೆಲ್ಲಾ ಕಚ್ಚುತಾ ಇರುತ್ತೆ. ನಾವು ಅದನ್ನ ಹೊಸಕಿ ಹಾಕ್ತಲೇ ಇರತೀವಿ. ಇದುನ್ನೆ ಅಲ್ಲುವರಾ ವಿಧಿವಿಲಾಸ ಅನ್ನದು?’ ನಾಯಕರು ವಡಪು ಹಾಕಿ ಹೊಂಟೋದರು.

ಪತ್ರಕರ್ತರು ತಮಗೆ ಸಿಕ್ಕಿದ್ದು ಪ್ರಶ್ನೆಯೋ ಇಲ್ಲ ಉತ್ತರವೋ ಗೊತ್ತಾಗದೆ ಗೊಂದಲಕ್ಕೆ ಒಳಗಾದರು.

ಸಂಗತ

ಎಪ್‌ಸ್ಟೈನ್ ಫೈಲ್ಸ್: ಅಗೆದಷ್ಟೂ ಪ್ರಶ್ನೆಗಳು!

ಸಾರ್ವಜನಿಕ ಸಂಸ್ಥೆಗಳ ಮೇಲಿನ ಜನಸಾಮಾನ್ಯರ ವಿಶ್ವಾಸಾರ್ಹತೆ ಕುಸಿಯುತ್ತಿದೆ. ನೈತಿಕತೆಯ ಆ ಸವಕಳಿಯು ಎಪ್‌ಸ್ಟೈನ್‌ನ ಪಾತಕಕಥನವನ್ನು ಸಂಕೇತಿಸುವಂತಿದೆ.

• ಶಿವಲಿಂಗಸ್ವಾಮಿ ಎಚ್.ಕೆ.

ನ್ಯಾಯಾಲಯದ ದಾಖಲೆಗಳಲ್ಲಷ್ಟೇ ನಮೂದು ಆಗಬೇಕಾದ ಕುಖ್ಯಾತ ಹೆಸರುಗಳು ಜನಸಾಮಾನ್ಯರ ದಿನನಿತ್ಯದ ಸಂಭಾಷಣೆಗೆ ಬಹಳ ವೇಗವಾಗಿ ಪ್ರವೇಶಿಸಿದ ಸನ್ನಿವೇಶಗಳು ವಿರಳ. ಅಂತಹ ಹೆಸರುಗಳಲ್ಲಿ ಇತ್ತೀಚಿನದು, ಜೆಫ್ರಿ ಎಪ್‌ಸ್ಟೈನ್. ಅಮೆರಿಕದಲ್ಲಿ ಜನಿಸಿ, ಶಿಕ್ಷಕ ವೃತ್ತಿ ಮಾಡಿದ ನಂತರ ಬಹಳಷ್ಟು ಕಾಲ ಉನ್ನತಮಟ್ಟದ ಆರ್ಥಿಕ ಮತ್ತು ಸಾಮಾಜಿಕ ವಲಯಗಳಲ್ಲಿ ಪರಿಚಿತನಾಗಿದ್ದ ಎಪ್‌ಸ್ಟೈನ್, ಇಂದು ಮನೆಮಾತಿನ ಚರ್ಚೆಗಳಲ್ಲಿ, ವಿದ್ಯುನ್ಮಾನ ಮಾಧ್ಯಮಗಳ ವಾದ–ವಿವಾದಗಳಲ್ಲಿ, ಪಾಡ್‌ಕಾಸ್ಟ್‌ಗಳಲ್ಲಿ ಮತ್ತು ಸಾಮಾಜಿಕ ಜಾಲತಾಣಗಳ ಸಂಭಾಷಣೆಯಲ್ಲಿ ಅಪ್ರಾಪ್ತ ಹೆಣ್ಣುಮಕ್ಕಳ ಮೇಲೆ ನಡೆಸಿರುವ ಲೈಂಗಿಕ ದೌರ್ಜನ್ಯಗಳ ಕಾರಣದಿಂದಾಗಿ ಉಲ್ಲೇಖಗೊಳ್ಳುತ್ತಿದ್ದಾನೆ. ಎಪ್‌ಸ್ಟೈನ್ ಹೆಸರಿನ ವ್ಯಾಪ್ತಿಯು ‘ವಾಲ್ ಸ್ಟ್ರೀಟ್’ನ ವೈಭವದಿಂದ ಹಿಡಿದು ಫೆಡರಲ್ ಅಪರಾಧ ಆರೋಪಗಳವರೆಗೆ ಹರಡುವಂತಿದೆ.

‘ಎಪ್‌ಸ್ಟೈನ್ ಫೈಲ್‌ಗಳು’ ಎಂಬ ಪದಪ್ರಯೋಗ ಈಗ ಬರೀ ನ್ಯಾಯಾಂಗ ದಾಖಲೆಗಳ ಸೂಚಕವಲ್ಲ; ಅದು ಅಧಿಕಾರ, ಬಹಿರಂಗವಾಗಿ ಉತ್ತರಿಸಲಾಗದ ಪ್ರಶ್ನೆಗಳು ಮತ್ತು ಸಂಪತ್ತಿನ ಪ್ರಭಾವಗಳು ನ್ಯಾಯವ್ಯವಸ್ಥೆಯನ್ನು ಹೇಗೆ ಸಂಪೂರ್ಣವಾಗಿ ವಕ್ರಗೊಳಿಸಬಹುದೆಂದು ಅರ್ಥಮಾಡಿಕೊಳ್ಳಲು ರೂಪಕಗಳಾಗಿವೆ. ಎಲ್ಲ ಮಾನವ ನಿರ್ಮಿತ ಸಂಸ್ಥೆಗಳ ಮೇಲಿನ ವಿಶ್ವಾಸ ಕುಸಿಯುತ್ತಿರುವ ಈ ಯುಗದಲ್ಲಿ ಅವನ ಹೆಸರು ಸಾರ್ವಜನಿಕ ವಲಯದಲ್ಲಿ ನಿರಂತರವಾಗಿ ಕೇಳಿಬರುತ್ತಿರುವುದು ನಮ್ಮ ಕಾಲದ ಆತಂಕ ಹಾಗೂ ಮೌಲ್ಯಗಳ ಪಲ್ಲಟಗಳನ್ನು ಪ್ರತಿಬಿಂಬಿಸುತ್ತದೆ.

ಎಪ್‌ಸ್ಟೈನ್ ಅಪಕೀರ್ತಿಯನ್ನು ಗಳಿಸುವ ಮುನ್ನ ತನ್ನ ವೃತ್ತಿಜೀವನವನ್ನು ಶಾಲೆಯೊಂದರಲ್ಲಿ ಪ್ರಾರಂಭಿಸಿದ್ದ. 1970ರ ದಶಕದ ಮಧ್ಯಭಾಗದಲ್ಲಿ, ಪೂರ್ಣಪ್ರಮಾಣದ ಪದವಿ ಇಲ್ಲದಿದ್ದರೂ ಮ್ಯಾನ್‌ಹಟನ್‌ನ ಪ್ರತಿಷ್ಠಿತ ಡಾಲ್ಟನ್ ಸ್ಕೂಲಿನಲ್ಲಿ ಗಣಿತ ಶಿಕ್ಷಕನಾಗಿ ಆತ ನೇಮಕಗೊಂಡಿದ್ದು ಹೇಗೆ ಎನ್ನುವುದು ಇಂದಿಗೂ ಯಕ್ಷಪ್ರಶ್ನೆ. ಆ ಶಾಲೆ ನ್ಯೂಯಾರ್ಕ್‌ನ ಶ್ರೀಮಂತ ಕುಟುಂಬಗಳ ಮಕ್ಕಳಿಗೆ ಶಿಕ್ಷಣ ನೀಡುವ ಪ್ರಸಿದ್ಧ ಸಂಸ್ಥೆಯಾಗಿದೆ. ಆ ಕಾಲದ ವಿವರಗಳ ಪ್ರಕಾರ, ಎಪ್‌ಸ್ಟೈನ್ ಬಹಳ ಬುದ್ಧಿವಂತ ಮತ್ತು ಆತ್ಮವಿಶ್ವಾಸಿ ಎಂದು ಶಾಲಾಡಳಿತ ಗುರ್ತಿಸಿತ್ತು ಮತ್ತು ಆತ ಪೋಷಕರ ಮೇಲೆ ಗಾಢ ಪ್ರಭಾವ ಬೀರಿದ್ದ. ಉನ್ನತ ಸಾಮಾಜಿಕ ವಲಯದಲ್ಲಿನ ಶೈಕ್ಷಣಿಕ ವಾತಾವರಣದಲ್ಲಿ ಕೆಲಸ ಮಾಡುವ ಅವಕಾಶ ದೊರೆತ ಕಾರಣದಿಂದಾಗಿ ಆತನಿಗೆ ಪ್ರಭಾವಿ ಸಂಪರ್ಕ ಜಾಲಗಳನ್ನು ನಿರ್ಮಿಸಿಕೊಳ್ಳಲು ಆರಂಭಿಕ ದಾರಿ ದೊರೆಯಿತು. ಆಕರ್ಷಕ ಮತ್ತು ರಹಸ್ಯಮಯ ವ್ಯಕ್ತಿತ್ವದ ಮೂಲಕ ಪ್ರತಿಷ್ಠಿತ ಸಂಸ್ಥೆಗಳನ್ನು ಮೆಟ್ಟಿಲಾಗಿ ಬಳಸಿಕೊಂಡು ಅತ್ಯಂತ ವೇಗವಾಗಿ ಮೇಲೇರತೊಡಗಿದ.



ಹಣಕಾಸು ಕ್ಷೇತ್ರಕ್ಕೆ ಪ್ರವೇಶಿಸಿದ ನಂತರ, ಎಪ್‌ಸ್ಟೈನ್ ಅಸಾಮಾನ್ಯ ವೇಗದಲ್ಲಿ ಬೆಳೆದ. 1980ರ ದಶಕದೊಳಗೆ ಕೋಟ್ಯಧಿಪತಿಗಳ ರಹಸ್ಯ ಹಣಕಾಸು ಸಲಹೆಗಾರನಾಗಿ ತನ್ನನ್ನು ಸ್ಥಾಪಿಸಿಕೊಂಡು, ಕ್ರಮೇಣ ಉದ್ಯಮ ಕ್ಷೇತ್ರದ ಮಹಾಮೇಧಾವಿಗಳೊಂದಿಗೆ ಸಂಬಂಧ ಬೆಳೆಸಿದ. ಮ್ಯಾನ್‌ಹಟನ್‌ನಲ್ಲಿ ಅರಮನೆಯಂತಹ ಭವನ, ಪಾಮ್ ಬೀಚ್‌ನ ಆಸ್ತಿ, ಮತ್ತು ಅಮೆರಿಕದ ವರ್ಜಿನ್ ದ್ವೀಪಗಳಲ್ಲಿ ಖಾಸಗಿ ದ್ವೀಪಗಳಿಗೆ ಒಡೆಯನಾದ.

ಎಪ್‌ಸ್ಟೈನ್‌ನ ಈ ಬೆಳವಣಿಗೆ, ಅಧಿಕಾರದ ಸಾಮೀಪ್ಯದ ಪ್ರಭಾವದಿಂದ ಒಬ್ಬ ವ್ಯಕ್ತಿಗೆ ಸಾಮಾಜಿಕ ಮಾನ್ಯತೆ ಹೇಗೆ ದೊರೆಯುತ್ತದೆ ಎಂಬುದಕ್ಕೆ ನಿದರ್ಶನದಂತಿದೆ. ಪ್ರಭಾವಶಾಲಿ ವ್ಯಕ್ತಿಗಳು ಮತ್ತು ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಗಾಢ ಸಂಪರ್ಕವಿದ್ದರೆ, ಎಂತಹ ಪಾತಕವನ್ನು ಎಸಗಿದ್ದರೂ ಆ ವ್ಯಕ್ತಿಗೆ ಸುರಕ್ಷಿತ ವಲಯಗಳು ಹೇಗೆ ಸೃಷ್ಟಿಯಾಗುತ್ತವೆ ಎಂದು ಸಾಬೀತುಮಾಡುವ ಎಪ್‌ಸ್ಟೈನ್‌ನ ಜೀವನಕಥೆ ಸಾಂಸ್ಥಿಕ ದೌರ್ಬಲ್ಯಗಳನ್ನೂ ಬಯಲಿಗೆಳೆಯುತ್ತದೆ. ಆತ ತನ್ನ ಸಂಪರ್ಕ ಜಾಲಗಳನ್ನು ಹೆಚ್ಚು ತೀವ್ರಗೊಳಿಸಿಕೊಂಡಿದ್ದು ‘ಲಿಟಲ್ ಸೇಂಟ್ ಜೇಮ್ಸ್’ ಎಂದು ಕರೆಯಲಾಗುವ ದ್ವೀಪದಲ್ಲಿ ಮತ್ತು ವಿಶೇಷವಾಗಿ ಪಾಮ್ ಬೀಚ್‌ನ ಎಸ್ಟೇಟ್‌ನಲ್ಲಿ. ಆ ಜಾಗಗಳಲ್ಲಿ ಅಪ್ರಾಪ್ತ ಹುಡುಗಿಯರ ಮೇಲೆ ಅವ್ಯಾಹತವಾಗಿ ಲೈಂಗಿಕ ದೌರ್ಜನ್ಯಗಳು ನಡೆದವು. ತನ್ನಲ್ಲಿಗೆ ಬರುವ ಅತಿಥಿಗಳಿಗೆ ಮಸಾಜ್ ಮಾಡಲು ಎಳೆ ಹುಡುಗಿಯರನ್ನು ನೇಮಕಾತಿ ಮಾಡಿಕೊಂಡು, ಆ ಹುಡುಗಿಯರನ್ನು ವಿವಿಧ ರೀತಿಯ ಆಮಿಷ, ಪ್ರಲೋಭನೆ ಹಾಗೂ ಬಲವಂತದ ಚಕ್ರದಲ್ಲಿ ಬಂಧಿಸಿ ಇಡಲಾಗುತ್ತಿತ್ತು ಎಂದು ವರದಿಗಳು ತಿಳಿಸಿವೆ.

ಇಡೀ ಪ್ರಕರಣದ ಅತ್ಯಂತ ಕಳವಳಕಾರಿ ಅಂಶವೆಂದರೆ, ಒಬ್ಬ ವ್ಯಕ್ತಿಯ ಸಾರ್ವಜನಿಕ ಪ್ರಭಾವ ಮತ್ತು ಅದೇ ವ್ಯಕ್ತಿಯ ಕಾರಣದಿಂದ ನಡೆಯುತ್ತಿದ್ದ ಅಪರಾಧಗಳ ನಡುವೆ ಕಂಡುಬರುವ ಭೀಕರ ವಿರೋಧಾಭಾಸ. ಸಮಾಜದ ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳು ಅವನ ಸಾಂಘಿಕ ವಲಯದಲ್ಲಿ ಕಂಡುಬರುತ್ತಿದ್ದರು ಎಂಬುದು ಅಂದು ಪ್ರತಿಷ್ಠೆಯ ಸಂಕೇತವಾಗಿತ್ತು. ಆದರೆ, ಆ ವಲಯಗಳಲ್ಲಿ ಅಸಹಾಯಕ ಅಪ್ರಾಪ್ತರನ್ನು ಅಮಾನುಷವಾಗಿ ಶೋಷಿಸಲಾಗುತ್ತಿತ್ತು ಎಂಬ ಆರೋಪಗಳು ಕೇಳಿಬಂದೊಡನೆ ಅದೇ ಪ್ರತಿಷ್ಠಿತ ವ್ಯಕ್ತಿಗಳು ‘ಎಪ್‌ಸ್ಟೈನ್ ಫೈಲ್ಸ್’ನಿಂದ ತಪ್ಪಿಸಿಕೊಳ್ಳಲು ವಿವಿಧ ರೀತಿಯ ರಕ್ಷಣಾ ಕೋಟೆಗಳನ್ನು ರಚಿಸಿಕೊಳ್ಳತೊಡಗಿದ್ದಾರೆ.

ನ್ಯಾಯಾಲಯಗಳು ಮತ್ತು ಸಾಕ್ಷ್ಯಗಳು ಎಪ್‌ಸ್ಟೈನ್‌ನ ವಿಕೃತ ಕಾಮದ ಕುರಿತು ಸ್ಪಷ್ಟೀಕರಣ ನೀಡಿವೆ. ಅವನು ಅತ್ಯಂತ ವಿಶಾಲವಾದ ಅಧಿಕಾರದ ವಲಯದೊಳಗೆ ಒಬ್ಬ ದಲ್ಲಾಳಿಯಾಗಿ ಮಾತ್ರ ಕಾರ್ಯ ನಿರ್ವಹಿಸಿದ್ದು, ಪ್ರಮುಖ ಆರೋಪಿಗಳು ತಪ್ಪಿಸಿಕೊಂಡಿದ್ದಾರೆಯೆ ಎಂಬುದು ಇತ್ತೀಚೆಗೆ ಉದ್ಭವವಾಗಿರುವ ಪ್ರಶ್ನೆ. ಅಂದರೆ, ತನ್ನ ಅಪರಾಧಗಳ ಪ್ರಧಾನ ಶಿಲ್ಪಿ ಅವನು ಮಾತ್ರವಾ ಅಥವಾ ಐಶ್ವರ್ಯ ಮತ್ತು ಅಧಿಕಾರದ ಕಾರಣದಿಂದ ಅವನ ಹಿಂದೆ ಇರಬಹುದಾದ ದೊಡ್ಡ ವ್ಯಕ್ತಿಗಳು ಮರೆಯಾಗಿದ್ದಾರೆಯೆ?

ಎಪ್‌ಸ್ಟೈನ್ ಎಲ್ಲ ದೌರ್ಜನ್ಯಗಳ ಪ್ರಧಾನ ಸೂತ್ರಧಾರನಾಗಿರಲಿ ಅಥವಾ ಮಧ್ಯವರ್ತಿಯಾಗಿರಲಿ, ಶೋಷಣೆ ಮತ್ತು ಪ್ರತಿಷ್ಠೆ ಒಬ್ಬನೇ ವ್ಯಕ್ತಿಯಲ್ಲಿ ಕಂಡು ಬಂದಾಗ ನಮ್ಮ ಸಮಾಜಗಳ ರಚನೆಯು ಹೇಗೆ ದುರ್ಬಲಗೊಳ್ಳುತ್ತದೆ ಎಂಬುದು ಇಲ್ಲಿ ಅರ್ಥವಾಗುತ್ತದೆ. ಎಪ್‌ಸ್ಟೈನ್ ವರ್ತಮಾನದಲ್ಲಿ ಸಮಾಜದ ನೈತಿಕತೆಗೆ ಸವಾಲಾಗಿದ್ದಾನೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ವಿಶ್ವಕಪ್ ಗೆಲುವು ತಂದಿತ್ತವರು



ಪ್ರಜಾವಾಣಿ ವಾರ್ತೆ

ಸತತ ಎರಡನೇ ಬಾರಿ ಟಿ20 ವಿಶ್ವಕಪ್ ಗೆದ್ದುಕೊಂಡು ಭಾರತ ತಂಡ ಚಾರಿತ್ರಿಕ ಸಾಧನೆಗೆ ಪಾತ್ರವಾಗಿದ್ದು ಈಗ ಇತಿಹಾಸ. ಆದರೆ ತವರಿನಲ್ಲಿ ನಡೆದ ಅಭಿಯಾನದ ಲೀಗ್ ಹಂತದಲ್ಲಿ ಭಾರತ ತಂಡ ಪಡೆದ ಗೆಲುವುಗಳು ಪ್ರಯಾಸದ ನಂತರ ಸಿಕ್ಕಿದ್ದವು. ಕೆಲವು ಪಂದ್ಯಗಳಲ್ಲಿ ದುರ್ಬಲ ಎದುರಾಳಿಗಳನ್ನು ಆಲೌಟ್ ಮಾಡಲೂ ಸಾಧ್ಯವಾಗಲಿಲ್ಲ. ದಕ್ಷಿಣ ಆಫ್ರಿಕಾ ಎದುರು ಟೂರ್ನಿಯ ಏಕೈಕ ಸೋಲು ಸಹ ದಾಖಲಾಯಿತು.

ಆದರೆ, ಒಂದೊಂದು ಪಂದ್ಯದಲ್ಲಿ ಒಬ್ಬೊಬ್ಬ ಆಟಗಾರ 'ಸಾಹಸ' ಮೆರೆದು ತಂಡ ಉಳಿದೆಲ್ಲಾ ಹಣಾಹಣಿಗಳಲ್ಲಿ ಸೋಲದಂತೆ ನೋಡಿಕೊಂಡರು. ಬೌಲರ್‌ಗಳಲ್ಲಿ ಜಸ್‌ಪ್ರೀತ್ ಬೂಮ್ರಾ ಎಂದಿನಂತೆ ಕೈಹಿಡಿದರು. ಅಂತಿಮವಾಗಿ ಈ ಅಭಿಯಾನಕ್ಕೆ ಕಳಶವಿಟ್ಟಂತೆ ಭಾರತ ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡದ ವಿರುದ್ಧ ಏಕಪಕ್ಷೀಯವಾದ ಗೆಲುವು ಸಾಧಿಸಲು ಕಾರಣವಾಗಿದ್ದು ಟೂರ್ನಿಯಲ್ಲಿ ಮೊದಲ ಬಾರಿ ಕಂಡ ಸಾಂಘಿಕ ಪ್ರದರ್ಶನ.

ಕಳೆದ ಆವೃತ್ತಿಯಲ್ಲಿ (2024) ದಕ್ಷಿಣ ಆಫ್ರಿಕಾ ವಿರುದ್ಧ ಫೈನಲ್‌ನಲ್ಲಿ ಭಾರತ ಏಳು ರನ್‌ಗಳಿಂದ ಜಯಗಳಿಸಿತ್ತು. ಈ ಬಾರಿ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಗಳಿಸಿದ ಏಳು ರನ್‌ಗಳ ಜಯ ಮಾತ್ರ ರೋಚಕ ಕ್ಷಣಗಳಲ್ಲಿ ಒಂದೆನಿಸಿತು.

ಈ ವಿಶ್ವಕಪ್‌ನ ವಿವಿಧ ಹಂತಗಳಲ್ಲಿ ಭಾರತ ತಂಡದ ಗೆಲುವಿಗೆ ಕಾರಣರಾದ ಕೆಲವು ಆಟಗಾರರ ಪ್ರದರ್ಶನದ ಮೇಲೊಂದು ನೋಟ ಇಲ್ಲಿದೆ.



ಸಂಜು ಸ್ಯಾಮ್ಸನ್

ಲೀಗ್ ಹಂತದಲ್ಲಿ ಒಂದು ಪಂದ್ಯ ಮಾತ್ರ ಆಡಿದ್ದ ಸಂಜು ಸ್ಯಾಮ್ಸನ್ ಅವರ ಸ್ಥಾನ ತಂಡದಲ್ಲಿ ಗಟ್ಟಿಯಾಗಿರಲಿಲ್ಲ. ಆದರೆ, ಟೂರ್ನಿ ಮುಗಿಯುವ ಹೊತ್ತಿಗೆ ಅವರು ಮೂರು ಬಾರಿ ಪಂದ್ಯದ ಆಟಗಾರನಾದರಷ್ಟೇ ಅಲ್ಲ, ಟೂರ್ನಿಯ ಆಟಗಾರ ಹಿರಿಮೆಗೂ ಪಾತ್ರರಾದರು. ಸ್ಫೋಟಕ ಇನಿಂಗ್ಸ್ ಆಡುವ ಅಭಿಷೇಕ್ ಶರ್ಮಾ ಅವರ ವೈಫಲ್ಯ ಕೂಡ ಮರೆಮಾಚಿದರು. ಕೇವಲ 5 ಪಂದ್ಯಗಳಿಂದ ಅವರು ಪೇರಿಸಿದ್ದು 321 ರನ್. ಭಾರತದ ಪರ ಗರಿಷ್ಠ ರನ್ ಗಳಿಕೆದಾರರಲ್ಲಿ ಕೇರಳದ ಈ ಬ್ಯಾಟರ್‌ಗೆ ಅಗ್ರಸ್ಥಾನ.

ಅಭಿಷೇಕ್ ಶರ್ಮಾ ಅಲಭ್ಯರಾಗಿದ್ದ ಕಾರಣ ನಮೀಬಿಯಾ ವಿರುದ್ಧ ಆಡುವ ಅವಕಾಶ ಪಡೆದ ಅವರು ಆ ಪಂದ್ಯದಲ್ಲಿ 8 ಎಸೆತಗಳಲ್ಲಿ 22 ರನ್ ಗಳಿಸಿದ್ದರು. ಆದರೆ ಸೂಪರ್ ಎಂಟರ ಕೊನೆಯ ಎರಡು ಪಂದ್ಯಗಳಲ್ಲಿ ಮರಳಿ ಸ್ಥಾನ ಪಡೆದರು. ಜಿಂಬಾಬ್ವೆ ವಿರುದ್ಧ 24 ರನ್. ಆದರೆ, ವೆಸ್ಟ್ ಇಂಡೀಸ್ ವಿರುದ್ಧ 'ಕ್ವಾರ್ಟರ್‌ಫೈನಲ್' ಎಂಬಂತಿದ್ದ ಸೂಪರ್ ಎಂಟರ ಪಂದ್ಯದಲ್ಲಿ 50 ಎಸೆತಗಳಲ್ಲಿ ಅಜೇಯ 97 ರನ್ ಗಳಿಸಿ ತಂಡದ ಗೆಲುವಿಗೆ ಕಾರಣರಾದರು. ಅದು ಬಹುತೇಕ ಏಕಾಂಗಿ ಸಾಹಸವಾಗಿತ್ತು. ಇಂಗ್ಲೆಂಡ್ ವಿರುದ್ಧ ಸೆಮಿಫೈನಲ್‌ನಲ್ಲಿ ಮತ್ತೆ 42 ಎಸೆತಗಳಲ್ಲಿ 89 ರನ್ ಗಳಿಸಿದರು. ಫೈನಲ್‌ನಲ್ಲಿ 46 ಎಸೆತಗಳಲ್ಲಿ ಗಳಿಸಿದ್ದು 89 ರನ್. ಎಲ್ಲವೂ ಭಾರತ ತಂಡಕ್ಕೆ ಭದ್ರ ಬುನಾದಿ ಹಾಕಿಕೊಟ್ಟಿದ್ದ ಸ್ಕೋರ್‌ಗಳು.

ಸೂರ್ಯಕುಮಾರ್ ಯಾದವ್

ಅಂಥ ಅನುಭವ ಹೊಂದಿಲ್ಲದ ಅಮೆರಿಕ ತಂಡದ ವಿರುದ್ಧ ಮೊದಲ ಪಂದ್ಯದಲ್ಲಿ ಭಾರತ 77 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡು ದಯನೀಯ ಸ್ಥಿತಿಯಲ್ಲಿದ್ದಾಗ ನಾಯಕ ಸೂರ್ಯಕುಮಾರ್ ಯಾದವ್ ಅವರು ಆಡಿದ ಆಟ ಮರೆಯುವಂತಿರಲಿಲ್ಲ. 49 ಎಸೆತಗಳಲ್ಲಿ ಅಜೇಯ 84 ರನ್ ಗಳಿಸಿದ್ದರಿಂದ ತಂಡ 161 ರನ್‌ಗಳ ಸವಾಲಿನ ಮೊತ್ತ ಗಳಿಸಿತು. 10 ಬೌಂಡರಿ, 4 ಸಿಕ್ಸರ್‌ಗಳು ಆ ಆಟದಲ್ಲಿದ್ದವು. ನಾಯಕತ್ವದಲ್ಲೂ ಅವರು ಗಮನಸೆಳೆದರು. ಒತ್ತಡದ ಸ್ಥಿತಿಯಲ್ಲೂ ಸಂಯಮದಿಂದ ತಂಡವನ್ನು ಮುನ್ನಡೆಸಿದರು. ಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಪವರ್‌ಪ್ಲೇ ಅವಧಿಯಲ್ಲಿ ಬೌಲರ್‌ಗಳನ್ನು ಚಾಣಾಕ್ಷತೆಯಿಂದ ಬಳಸಿದ್ದು ಅವರ ತಂತ್ರಗಾರಿಕೆಗೆ ನಿದರ್ಶನ. ಮುಖ್ಯ ಕೋಚ್ ಗೌತಮ್ ಗಂಭೀರ್ ಅವರೊಂದಿಗೆ ತಂಡದ ಆಯ್ಕೆಯಲ್ಲೂ ಅವರು ಎಚ್ಚರಿಕೆ ವಹಿಸಿದ್ದು ಫಲ ನೀಡಿತು.



ಅಕ್ಷರ್ ಪಟೇಲ್

ಬೌಲರ್ ಆಗಿ ವಿಕೆಟ್ ಪಡೆಯುವಲ್ಲಿ ಸ್ವಲ್ಪ ಹಿಂದೆ ಬಿದ್ದರೂ, 'ಟೀಮ್ ಮ್ಯಾನ್' ಆಗಿ ಅಕ್ಷರ್ ಪಟೇಲ್ ನಿರಾಸೆಗೊಳಿಸಲಿಲ್ಲ. ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್‌ನ ಅಪಾಯಕಾರಿ ಆಟಗಾರ ಫಿನ್ ಅಲೆನ್ ಮತ್ತು ಗ್ಲೆನ್ ಫಿಲಿಪ್ಸ್ ಅವರ ವಿಕೆಟ್‌ಗಳನ್ನು ಪವರ್‌ಪ್ಲೇ ಅವಧಿಯೊಳಗೆ ಪಡೆದು ಭಾರತಕ್ಕೆ ನಿರ್ಣಾಯಕ ಮೇಲುಗೈ ಒದಗಿಸಿದರು.

ಆದರೆ, ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಅವರು ಫೀಲ್ಡಿಂಗ್‌ನಲ್ಲಿ ಮಿಂಚಿದರು. ಕಿಕ್ಕಿರಿದ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಆ ಪಂದ್ಯದಲ್ಲಿ ಪಾಯಿಂಟ್‌ನಿಂದ ಹಿಮ್ಮುಖವಾಗಿ ಓಡಿ ಇಂಗ್ಲೆಂಡ್ ನಾಯಕ ಹ್ಯಾರಿ ಬ್ರೂಕ್ ಅವರ ಕ್ಯಾಚನ್ನು ಪಡೆದಿದ್ದು ಗಮನ ಸೆಳೆದಿತ್ತು. ಇನ್ನೊಬ್ಬ ಅಪಾಯಕಾರಿ ಆಟಗಾರ ವಿಲ್ ಜ್ಯಾಕ್ಸ್ ಅವರ ವಿಕೆಟ್ ಪಡೆಯುವಲ್ಲೂ ಅಕ್ಷರ್ ಅವರ ಪಾತ್ರವಿತ್ತು. ಬೌಂಡರಿಲೈನ್ ಬಳಿ ಓಡುತ್ತ ಕ್ಯಾಚ್ ಹಿಡಿದ ಅವರು ಆಯತಪ್ಪಿ ಬೌಂಡರಿ ಲೈನ್ ದಾಟುವ ಹಂತದಲ್ಲಿರುವಾಗ ಅದನ್ನು ಶಿವಂ ದುಬೆ ಅವರಿಗೆ 'ಹಸ್ತಾಂತರಿಸಿದ' ರೀತಿ ದೀರ್ಘಕಾಲ ನೆನಪಿನಲ್ಲಿ ಉಳಿಯುವಂಥದ್ದು.



ಜಸ್‌ಪ್ರೀತ್ ಬೂಮ್ರಾ

ಬೂಮ್ರಾ 2024ರ ವಿಶ್ವಕಪ್‌ನಲ್ಲೂ ಭಾರತದ ಗೆಲುವಿಗೆ ಪ್ರಮುಖ ಕಾಣಿಕೆ ನೀಡಿದ್ದರು. ಆರಂಭದಲ್ಲೇ ಆಗಲಿ, ಡೆತ್ ಓವರ್‌ಗಳಲ್ಲೇ ಆಗಲಿ ತಮ್ಮ ಕರಾರುವಾಕ್ ಯಾರ್ಕರ್, ಲೆಂಗ್ತ್‌ಗಳಿಂದ ಎದುರಾಳಿ ಬ್ಯಾಟರ್‌ಗಳನ್ನು ತಬ್ಬಿಬ್ಬುಗೊಳಿಸುವ ಬೂಮ್ರಾ ಭಾರತದ ಪಾಲಿಗೆ ಟ್ರಂಪ್‌ಕಾರ್ಡ್.

ಎಂಟು ಪಂದ್ಯಗಳಲ್ಲಿ 14 ವಿಕೆಟ್ ಪಡೆದ 32 ವರ್ಷ ವಯಸ್ಸಿನ ಈ ವೇಗಿ ಯಶಸ್ವಿ ಬೌಲರ್‌ಗಳ ಪಟ್ಟಿಯಲ್ಲಿ ಅರ್ಹವಾಗಿ ಅಗ್ರಸ್ಥಾನ ಪಡೆದರು. 2024ರ ಫೈನಲ್‌ನಲ್ಲಿ ಅವರು 4 ಓವರುಗಳಲ್ಲಿ 14 ರನ್ನಿತ್ತು 2 ವಿಕೆಟ್ ಪಡೆದಿದ್ದರು. ಅಂಥದ್ದೇ ಲಯವನ್ನು ಕಾಪಾಡಿಕೊಂಡಿದ್ದು ಅವರ ಹೆಚ್ಚುಗಾರಿಕೆ. ಇಂಗ್ಲೆಂಡ್ ವಿರುದ್ಧ ಅವರು ಮಾಡಿದ ಕೊನೆಯ ಎರಡು ಓವರ್‌ಗಳು ಭಾರತ ತಂಡದ ಗೆಲುವಿಗೆ ಕಾರಣವಾದವು.



ಇಶಾನ್ ಕಿಶನ್

ವಿಶ್ವಕಪ್‌ಗೆ ಮೊದಲು ದೇಶೀಯ ಟೂರ್ನಿಗಳಲ್ಲಿ ತೋರಿದ ಉತ್ತಮ ಪ್ರದರ್ಶನ ಇಶಾನ್ ಕಿಶನ್ ಅವರಿಗೆ ತಂಡದಲ್ಲಿ ಸ್ಥಾನ ದೊರಕಿಸಿಕೊಟ್ಟಿತು. ಪದೇ ಪದೇ ವಿಫಲರಾಗಿದ್ದ ಉಪನಾಯಕ ಶುಭಮನ್ ಗಿಲ್ ಅವರನ್ನು ಕೈಬಿಟ್ಟು ವಿಶ್ವಕಪ್ ತಂಡಕ್ಕೆ ಇಶಾನ್ ಅವರಿಗೆ ಮಣೆಹಾಕಿದ್ದು ವ್ಯರ್ಥವಾಗಲಿಲ್ಲ. ಪಾಕಿಸ್ತಾನ ವಿರುದ್ಧ ಅವರ ಸ್ಫೋಟಕ ಆಟ (40 ಎಸೆತಗಳಲ್ಲಿ 77) ತಂಡ ಸವಾಲಿನ ಮೊತ್ತ ಗಳಿಸಲು ವೇದಿಕೆ ಒದಗಿಸಿತು.

ಫೈನಲ್ ಪಂದ್ಯದಲ್ಲೂ 25 ಎಸೆತಗಳಲ್ಲಿ ಅರ್ಧ ಶತಕಗಳಿಸಿ ಭಾರತ ತಂಡ ಬೃಹತ್ ಮೊತ್ತ ಕಲೆಹಾಕಲು ತಮ್ಮ ಕಾಣಿಕೆಯನ್ನೂ ನೀಡಿದರು. ಮೂರು ಅಮೋಘ ಕ್ಯಾಚ್‌ಗಳನ್ನು ಪಡೆದರು. ಸೆಮಿಫೈನಲ್‌ನಲ್ಲಿ 4 ಸಿಕ್ಸರ್, ಎರಡು ಬೌಂಡರಿಗಳಿದ್ದ 18 ಎಸೆತಗಳಲ್ಲಿ 34 ರನ್ ಕೂಡ ಗಮನಾರ್ಹವೇ.

ಹಾರ್ದಿಕ್ ಪಾಂಡ್ಯ

ತಂಡದ ಪ್ರಮುಖ ಆಲ್‌ರೌಂಡರ್ ಆಗಿ ಗುರುತಿಸಿಕೊಂಡಿರುವ ಹಾರ್ದಿಕ್ ಪಾಂಡ್ಯ ಅವರ ಕೊಡುಗೆಯನ್ನೂ ಈ ವಿಶ್ವಕಪ್‌ನಲ್ಲಿ ಮರೆಯುವಂತಿಲ್ಲ. ಮಧ್ಯಮ ಕ್ರಮಾಂಕದಲ್ಲಿ ರನ್ ವೇಗ ಹೆಚ್ಚಿಸಲು ನೆರವಾಗುವ ಅವರು ಎರಡು ಅರ್ಧಶತಕಗಳನ್ನು ಗಳಿಸಿದರು. ಹೆಚ್ಚಿನ ಪಂದ್ಯಗಳಲ್ಲಿ ಆರಂಭದಲ್ಲೇ ದಾಳಿಗಿಳಿದು ಒಟ್ಟು 9 ವಿಕೆಟ್‌ಗಳನ್ನು ಪಡೆದರು. ಜಿಂಬಾಬ್ವೆ ವಿರುದ್ಧ ಅಜೇಯ 50 ರನ್ ಗಳಿಸಿದ್ದ ಅವರು, ನಮೀಬಿಯಾ ವಿರುದ್ಧ 21 ರನ್ನಿಗೆ 2 ವಿಕೆಟ್ ಪಡೆದರು. ಆ ಪಂದ್ಯದಲ್ಲಿ 28 ಎಸೆತಗಳಲ್ಲಿ 52 ರನ್ ಹೊಡೆದು ಪಂದ್ಯದ ಆಟಗಾರ ಗೌರವಕ್ಕೂ ಪಾತ್ರರಾಗಿದ್ದರು.



ರಾಷ್ಟ್ರೀಯ

ಉನ್ನಾವೊ: ಕಕ್ಷಿದಾರೆ ಆಗಲು ಸಂತ್ರಸ್ತೆಗೆ ಅನುಮತಿ

ನವದೆಹಲಿ (ಪಿಟಿಐ): ಉನ್ನಾವೊ ಅತ್ಯಾಚಾರ ಪ್ರಕರಣದಲ್ಲಿ, ಬಿಜೆಪಿಯ ಮಾಜಿ ಶಾಸಕ ಕುಲದೀಪ್ ಸಿಂಗ್ ಸೆಂಗರ್‌ಗೆ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಅಮಾನತುಗೊಳಿಸಿರುವುದನ್ನು ಪ್ರಶ್ನಿಸಿ ಕೇಂದ್ರೀಯ ತನಿಖಾ ದಳ (ಸಿಬಿಐ) ಸಲ್ಲಿಸಿರುವ ಅರ್ಜಿಯಲ್ಲಿ ಸಂತ್ರಸ್ತೆಯೂ ಕಕ್ಷಿದಾರ-ಳಾಗಲು ಸುಪ್ರೀಂ ಕೋರ್ಟ್ ಸೋಮವಾರ ಅನುಮತಿ ನೀಡಿದೆ.



ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್‌ಮಾಲ್ಯಾ ಬಾಗ್ಚಿ ಅವರಿದ್ದ ಪೀಠವು, 'ವಿಚಾರಣೆಯಲ್ಲಿ ತನ್ನ ಹೇಳಿಕೆ ನೀಡುವ ಹಕ್ಕು ಸಂತ್ರಸ್ತೆಗಿದೆ' ಎಂದು ಹೇಳಿತು. ಅಪರಾಧಿಯ ಜೀವಾವಧಿ ಶಿಕ್ಷೆಯನ್ನು ರದ್ದುಗೊಳಿಸು-ವುದರ ವಿರುದ್ಧ ಪ್ರಮಾಣಪತ್ರ ಸಲ್ಲಿಸಲು ಸಂತ್ರಸ್ತೆಗೆ ಎರಡು ವಾರ ಕಾಲಾವಕಾಶ ನೀಡಿತು.

ಸಿಬಿಐ ಪರ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಗೈರಾಗಿದ್ದ ಕಾರಣ ಪೀಠವು ಪ್ರಕರಣವನ್ನು ಕೈಗೆತ್ತಿಕೊಳ್ಳಲಿಲ್ಲ.

ಸೆಂಗರ್ ಪರ ವಕೀಲರಾದ ಎನ್. ಹರಿಹರನ್ ಅವರು 'ದೆಹಲಿ ಹೈಕೋರ್ಟ್ ನನ್ನ ಕಕ್ಷಿದಾರರಿಗೆ ನೀಡಿರುವ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲಾಗುತ್ತಿದೆ. ಪ್ರಕರಣವನ್ನು ಶೀಘ್ರವೇ ವಿಚಾರಣೆಗೆ ಪಟ್ಟಿ ಮಾಡಬೇಕು' ಎಂದು ಪೀಠವನ್ನು ಕೇಳಿಕೊಂಡರು.

ಪ್ರಕರಣದ ಮುಂದಿನ ವಿಚಾರಣೆಯ ದಿನಾಂಕವನ್ನು ಶೀಘ್ರವೇ ಪ್ರಕಟಿಸಲಾಗುವುದು ಎಂದು ಸಿಜೆಐ ಹೇಳಿದರು.

ತಮ್ಮ ಜೀವಕ್ಕೆ ಬೆದರಿಕೆ ಇದೆ ಎಂದು ಆರೋಪಿಸಿ ಸಂತ್ರಸ್ತೆಯ ಸಂಬಂಧಿಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ಪೀಠವು ತಿರಸ್ಕರಿಸಿತು.

2017ರಲ್ಲಿ ನಡೆದ ಅತ್ಯಾಚಾರ ಪ್ರಕರಣದಲ್ಲಿ, ಸೆಂಗರ್‌ಗೆ ಜೀವಾವಧಿ ಶಿಕ್ಷೆ ವಿಧಿಸಿ ವಿಚಾರಣಾ ನ್ಯಾಯಾಲಯವು 2019ರಲ್ಲಿ ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಸೆಂಗರ್ ಹೈಕೋರ್ಟ್ ಮೊರೆಹೋಗಿದ್ದರು. ಶಿಕ್ಷೆಯನ್ನು ಹೈಕೋರ್ಟ್ ಅಮಾನತು ಮಾಡಿತ್ತು. ಈ ಆದೇಶಕ್ಕೆ 2025ರ ಡಿಸೆಂಬರ್ 29ರಂದು ಸುಪ್ರೀಂ ಕೋರ್ಟ್ ತಡೆ ನೀಡಿತ್ತು.

ಐಟಿ ಕಾಯ್ದೆಯಡಿ ಶೋಧ, ಜಪ್ತಿ ಪ್ರಶ್ನಿಸಿದ್ದ ಅರ್ಜಿ ವಿಚಾರಣೆಗೆ ನಕಾರ

ನವದೆಹಲಿ (ಪಿಟಿಐ): ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 132ರ ಅಡಿಯ ಶೋಧ ಮತ್ತು ಜಪ್ತಿಯ ಅಧಿಕಾರವನ್ನು ಪ್ರಶ್ನಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ.


ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯಾ ಬಾಗ್ಚಿ ಅವರನ್ನು ಒಳಗೊಂಡ ನ್ಯಾಯಪೀಠವು, 'ತೆರಿಗೆ ಪಾವತಿಯಿಂದ ತಪ್ಪಿಸಿಕೊಳ್ಳುವವರ ಪತ್ತೆಗಾಗಿ ಇಂಥ ನಿಬಂಧನೆಗಳ ಅಗತ್ಯವಿದೆ' ಎಂದು ಹೇಳಿದೆ.

'ಪ್ರಾರಂಭದಲ್ಲಿ ಈ ನಿಬಂಧನೆಯು ಅಸಮಂಜಸ ಎನಿಸಬಹುದು. ಅದರ ದುರುಪಯೋಗ ಆಗಬಹುದು ಎಂದೂ ಎನಿಸಬಹುದು. ಆದರೆ ದೊಡ್ಡ ದೊಡ್ಡ ತೆರಿಗೆ ಕಳ್ಳರ ಪತ್ತೆಗಾಗಿ ಅದನ್ನು ರೂಪಿಸಲಾಗಿದೆ' ಎಂದು ತಿಳಿಸಿದೆ.

'ಈ ನಿಬಂಧನೆಯು ಅಸಾಂವಿಧಾನಿಕ' ಎಂಬ ಹಿರಿಯ ವಕೀಲ ಸಂಜಯ್ ಹೆಗ್ಡೆ ಅವರ ವಾದವನ್ನು ನ್ಯಾಯಪೀಠವು ತಳ್ಳಿಹಾಕಿದೆ.

ಡಿಜಿಟಲ್ ಅರೆಸ್ಟ್: ಕೋಟಿ ರೂಪಾಯಿ ಕಳೆದುಕೊಂಡ ನಿವೃತ್ತ ನ್ಯಾಯಾಧೀಶ

ಹೈದರಾಬಾದ್ (ಪಿಟಿಐ): 'ಡಿಜಿಟಲ್ ಅರೆಸ್ಟ್' ಹೆಸರಿನ ಬೆದರಿಕೆಯ ವಂಚನೆ ಜಾಲಕ್ಕೆ ಸಿಲುಕಿದ ನಿವೃತ್ತ ಜಿಲ್ಲಾ ನ್ಯಾಯಾಧೀಶರೊಬ್ಬರು ₹1 ಕೋಟಿಗೂ ಹೆಚ್ಚು ಮೊತ್ತವನ್ನು ಕಳೆದುಕೊಂಡಿದ್ದಾರೆ.



'ಮಹಿಳೆಯರ ಕಳ್ಳಸಾಗಣೆ ಸೇರಿದಂತೆ ಇತರ ಅಪರಾಧಗಳಲ್ಲಿ ನಿಮ್ಮ ಮೊಬೈಲ್ ಸಂಖ್ಯೆ ಬಳಕೆಯಾಗಿದೆ' ಎಂದು ಸೈಬರ್ ವಂಚಕರು ಆರೋಪಿಸಿ, 69 ವರ್ಷದ ನಿವೃತ್ತ ನ್ಯಾಯಾಧೀಶರನ್ನು ವಾರದ ಹಿಂದೆ ಬೆದರಿಸಿದ್ದಾರೆ.

ನಿವೃತ್ತ ನ್ಯಾಯಾಧೀಶರು ಸೈಬರ್ ವಂಚಕರು ಹೇಳಿದಂತೆ ₹1 ಕೋಟಿಗೂ ಹೆಚ್ಚು ಮೊತ್ತವನ್ನು ಆರೋಪಿಗಳು ಸೂಚಿಸಿದ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿದ್ದಾರೆ.

ವಂಚನೆಗೊಳಗಾಗಿದ್ದು ಗೊತ್ತಾದ ಬಳಿಕ ಮೂರು ದಿನದ ಹಿಂದೆ ದೂರು ದಾಖಲಿಸಿದ್ದು, ತನಿಖೆ ನಡೆದಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಎಕ್ಸ್' ಬಳಕೆದಾರ ಸೋಬನ್ ಮಹರೂಫ್ (@SobanM90) ಎಂಬವರು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮಾತನಾಡುತ್ತಿರುವ ವಿಡಿಯೊ ತುಣುಕೊಂದನ್ನು ಪೋಸ್ಟ್ ಮಾಡಿದ್ದು, ಸಿಂಗ್ ಅವರು ಇರಾನ್ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಯನ್ನು ಬೆಂಬಲಿಸಿದ್ದಾರೆ ಎಂದು ಪ್ರತಿಪಾದಿಸಿದ್ದಾರೆ. 'ಭಾರತವು ಮುಸ್ಲಿಮರ ಹತ್ಯೆಯ ಪರವಾಗಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ' ಎಂದು ಅವರು ಪೋಸ್ಟ್‌ನಲ್ಲಿ ಹೇಳಿದ್ದಾರೆ. ಆದರೆ, ಇದು ಸುಳ್ಳು.

ರಾಜನಾಥ್ ಸಿಂಗ್ ಅವರು ಇಸ್ರೇಲ್ ಬೆಂಬಲಿಸಿ ಹೇಳಿಕೆ ನೀಡಿದ್ದಾರೆಯೇ ಎಂಬ ವಿಷಯವನ್ನು ದೃಢಪಡಿಸುವುದಕ್ಕಾಗಿ ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಾಟ ನಡೆಸಲಾಯಿತು. ಆದರೆ, ನಂಬಿಕೆಗೆ ಅರ್ಹವಾದ ಯಾವ ವರದಿಯೂ ಸಿಗಲಿಲ್ಲ. ಇನ್‌ವಿಡ್ ಟೂಲ್ ಮೂಲಕ ವಿಡಿಯೊ ತುಣುಕಿನಿಂದ ಕೀ ಫ್ರೇಮ್‌ಗಳನ್ನು ಪ್ರತ್ಯೇಕಿಸಿ ಒಂದು ಕೀಫ್ರೇಮ್ ಅನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ ರಾಜನಾಥ್ ಸಿಂಗ್ ಅವರ ಯುಟ್ಯೂಬ್ ಚಾನೆಲ್‌ನಲ್ಲಿ ಅಪ್‌ಲೋಡ್ ಮಾಡಲಾದ ಮೂಲ ವಿಡಿಯೊ ಸಿಕ್ಕಿತು. ಇಡೀ ಭಾಷಣವನ್ನು ಕೇಳಿದಾಗ, ಅವರೆಲ್ಲೂ ಆ ರೀತಿಯ ಹೇಳಿಕೆ ನೀಡಿರಲಿಲ್ಲ. ಅದು 2025ರ ನವೆಂಬರ್‌ನಲ್ಲಿ ನವದೆಹಲಿಯಲ್ಲಿ ನಡೆದ 'ಸಿಂಧಿ ಸಮ್ಮೇಳನ'ದ ವಿಡಿಯೊ ಆಗಿತ್ತು. ಅನುಮಾನ ಬಂದು ಟ್ರುತ್ ಸ್ಕ್ಯಾನ್ ಎಂಬ ಎಐ ಧ್ವನಿ ಪತ್ತೆ ಟೂಲ್ ಮೂಲಕ ಪರಿಶೀಲಿಸಿದಾಗ, ಸಿಂಗ್ ಅವರ ಧ್ವನಿಯನ್ನು ತಿರುಚಿರುವುದು ದೃಢಪಟ್ಟಿತು. ರಕ್ಷಣಾ ಸಚಿವರ ಧ್ವನಿಯನ್ನು ಎಐ ಮೂಲಕ ತಿರುಚಿ, ವಿಡಿಯೊದೊಂದಿಗೆ ಎಡಿಟ್ ಮಾಡಿ ಜಾಲತಾಣದಲ್ಲಿ ಪೋಸ್ಟ್ ಮಾಡಲಾಗಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪದಬಂಧ 6339


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಈತ ಬಲು ಶೌರ್ಯವುಳ್ಳವನು (4)
3.ಒಳ್ಳೆಯ ಮಾತಿದು (4)
5.ನೃತ್ಯವನ್ನು ಹೀಗೂ ಹೇಳುತ್ತಾರೆ (3)
6.ತತ್ಪರದಲ್ಲಿ ರೀತಿ ಬಂದಿದೆ! (2)
8.ತಪ್ಪು ಪದ ವಿರುದ್ಧ ಪದ (2)
9.ಬಣವೆ ಹಾಕುತ್ತಿರುವ ಗುಂಪು (2)
10.ಕ್ರಿಮಿ ಇಲ್ಲಿ ಉಲ್ಟಾ ಕಾಣುತ್ತಿದೆ (2)
12.ಕೊನೆಗೆ ರಸವಿರುವ ವೈಮನಸ್ಯ (3)
14.ಕ್ಷುದ್ರ ಲೋಹಗಳನ್ನು ಚಿನ್ನವನ್ನಾಗಿ ಮಾರ್ಪಡಿಸುವುದು (4)
15.ನಡುವಿನ ದಾರ ಉಲ್ಟಾ ಆದಾಗಿನ ಪೇಚಾಟ (4)

ಮೇಲಿಂದ ಕೆಳಕ್ಕೆ

1.ಮಿತಿಗೆ ಒಳಪಟ್ಟಿದ್ದು (4)
2.ಜ್ಯೋತಿಷ್ಯ ರಾಶಿಯಲ್ಲಿನ ಜೋಡಿ (3)
3.ಸುಮ್ಮನಿದ್ದಾಗ ಹಿಗ್ಗು ಬಂದಿದೆಯಲ್ಲಾ! (3)
4.ತರ ತರದ ಕಾಯಿಪಲ್ಲೆ (4)
7.ಮಣ ಭಾರ ಹೊತ್ತಿರುವ ನಲ್ಲ (3)
8.ಕಬ್ಬಿಣದ ಸಲಾಕೆ (3)
9.ಬರದೊಳಗೆ ತೋರಿದ ಡೌಲು (4)
11.ಬಾಲ್ಯದ ಚೇಷ್ಟೆಯಿದು (4)
12.ಹಾಸ್ಯ ಹೀಗೆ ಬಂದಿದೆ (3)
13.ಸರಸದ ಮಾತುಕತೆ (3)



6338ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಪಜಯ 3.ಭವಿ
5.ಮಧುಮಗಳು 7.ಕಾಲ್ದಳ
8.ಪ್ರತಿಷ್ಠಾಪನೆ 11.ಸಮ್ಮತಿ
12.ಅವಿನಾಭಾವ 14.ಕುಕ್ಕೆ
15.ಸಂಕಲನ

ಮೇಲಿಂದ ಕೆಳಕ್ಕೆ:
1.ಅರಮನೆ 2.ಜನುಮ
4.ವಿರಳ 6.ಗರತಿ
7.ಕಾಮನೆ 8.ಪ್ರಗತಿ
9.ಪದವಿ 10.ಅವಧಾನ
11.ಸರಕು 13.ನಾವಿಕ

ಸುಡೊಕು 6723

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	6		8	7			9	3
		2						4
	8		5	2		1	6	
1		5					8	9
4			2	9	5			1
	9						2	
		9	3		2		4	
7			9		8	5		2
	5			4			3	

6722 ಸುಡೊಕು

4	6	5	3	9	8	7	1	2
2	7	1	4	6	5	3	8	9
9	8	3	7	1	2	5	4	6
7	1	9	5	8	3	2	6	4
5	2	6	9	4	7	1	3	8
3	4	8	6	2	1	9	7	5
6	3	4	1	5	9	8	2	7
8	5	7	2	3	4	6	9	1
1	9	2	8	7	6	4	5	3

ಇಲ್ಲಿ ಯಾವುದೂ ಅಮುಖ್ಯವಲ್ಲ

ನುಡಿ ಬೆಳಗು



ದೀಪಾ ಹಿರೇಗುತ್ತಿ

ಒಂದು ನಗರದ ನಟ್ಟನಡುವಿನ ಪಾರ್ಕ್ ಒಂದರಲ್ಲಿ ಹಳೆಯ ಮರದ ಬೆಂಚೊಂದಿತ್ತು. ಅದು ಬಹಳ ವರ್ಷಗಳಿಂದ ಒಂದೇ ಜಾಗದಲ್ಲಿತ್ತು. ಆ ಬೆಂಚಿನ ಹತ್ತಿರವೇ ಒಂದು ಲೈಟುಕಂಬವಿತ್ತು. ಅಲ್ಲಿಯೇ ಕಲ್ಲಿನ ಕಿರುದಾರಿಯೊಂದಿತ್ತು. ಸ್ವಲ್ಪ ದೂರದಲ್ಲಿ ವಯಸ್ಸಾದ ಆಲದ ಮರವೂ ಇತ್ತು.

ಪ್ರತೀ ರಾತ್ರಿ ಪಾರ್ಕ್ ಶಾಂತವಾಗುತ್ತಿತ್ತು. ಹೊಳೆವ ನಕ್ಷತ್ರಗಳ ಬೆಳಕಿನಲ್ಲಿ ಬೆಂಚು, ಲೈಟು ಕಂಬ ಮತ್ತಿತರ ವಸ್ತುಗಳು ಬೇಸರ ಕಳೆಯಲು ಮಾತಾಡುತ್ತಿದ್ದವು. ಹೀಗೆಯೇ ಒಂದು ರಾತ್ರಿ ಮಾತಾಡುವಾಗ ಬೆಂಚು ದೀರ್ಘವಾಗಿ ನಿಟ್ಟುಸಿರೆಳೆದು ಹೇಳಿತು: 'ನನಗಂತೂ ಸಾಕಾಗಿಹೋಗಿದೆ. ದಿನವೂ ಯಾರ್‍ಯಾರೋ ಬಂದು ನನ್ನ ಮೇಲೆ ಕೂರುತ್ತಾರೆ. ಕೆಲವರು ಭಾರಿ ಭಾರ, ಮತ್ತೆ ಕೆಲವರು ಹಾರಿ ಹಾರಿ ಕುಣಿಯುತ್ತಾರೆ, ಇನ್ನು ಕೆಲವರು ನನ್ನನ್ನು ಉಗುರಿನಿಂದ ಕೆರೆಯುತ್ತಾರೆ, ಪಿನ್ನಿನಿಂದ ಕೊರೆಯುತ್ತಾರೆ. ನನಗಂತೂ ಇಲ್ಲಿರುವುದೇ ಸಾಕು ಅನ್ನಿಸುತ್ತಿದೆ'.

ಆಗ ಲೈಟುಕಂಬ ಮಂದ ಬೆಳಕು ಚೆಲ್ಲುತ್ತ ಹೇಳಿತು: 'ಆದರೂ ನಿನ್ನನ್ನು ಜನ ಗುರ್ತಿಸುತ್ತಾರೆ, ನಿನ್ನ ಜತೆ ತಮ್ಮ ಸಂತೋಷ ದುಃಖ ಹಂಚಿಕೊಳ್ಳುತ್ತಾರೆ. ನಾನು ಇಲ್ಲಿ ದೆವ್ವದಂತೆ ನಿಂತೇ ಇದ್ದರೂ ನನ್ನ ಕಡೆ ಕಣ್ಣೆತ್ತಿ ನೋಡುವವರೇ ಇಲ್ಲ'.

ಇವೆರಡರ ಮಾತು ಕೇಳುತ್ತಿದ್ದ ಕಲ್ಲುಹಾಸಿನ ಕಿರುದಾರಿ ಸ್ವಲ್ಪ ಒರಟಾಗಿಯೇ ಹೇಳಿತು: 'ನಿಮ್ಮಿಬ್ಬರ ಮಾತು ಜಾಸ್ತಿಯಾಯಿತು. ಜನರು ಇಡೀ ದಿನ ನನ್ನನ್ನು ತುಳಿದುಕೊಂಡೇ ಓಡಾಡುತ್ತಾರೆ, ಚಪ್ಪಲಿ, ಕೊಳಕು ಶೂ, ಸೈಕಲ್ಲು. ಆದರೂ ನಾನು ಸುಮ್ಮನಿರುವುದಿಲ್ಲವಾ?'

ಇವುಗಳ ಸಂಭಾಷಣೆ ಮುಗಿಯುತ್ತಿದ್ದಂತೆ ಆಲದ ಮರ ನಸುನಕ್ಕು ಕೇಳಿತು: 'ಗೆಳೆಯರೇ, ನಾವು ಇಲ್ಲಿ ಏಕಿದ್ದೇವೆ ಎಂದು ಗೊತ್ತಿದೆಯೇ ನಿಮಗೆ?'

ಎಲ್ಲವೂ ಸುಮ್ಮನಾದವು.

'ನಾವಿರುವುದು ಜನರಿಗೆ ಸಹಾಯ ಮಾಡಲು. ಬೆಂಚಿನ ಮೇಲೆ ಕುಳಿತು ಜನ ವಿಶ್ರಾಂತಿ ಪಡೆಯುತ್ತಾರೆ. ಲೈಟು ಕಂಬ ಅವರಿಗೆ ದಾರಿ ತೋರುತ್ತದೆ. ಪಾರ್ಕಿನಲ್ಲಿ ಹುಷಾರಾಗಿ ಓಡಾಡಲು ಕಲ್ಲಿನ ಹಾದಿ ಸಹಾಯ ಮಾಡುತ್ತದೆ. ನಮಗೆಲ್ಲರಿಗೂ ಒಂದೊಂದು ಗುರಿ ಇದೆ' ಎಂದಿತು ಮರ.

ಅಷ್ಟು ಹೊತ್ತಿಗೆ ಓರ್ವ ವಯಸ್ಸಾದ ವ್ಯಕ್ತಿ ನಿಧಾನವಾಗಿ ನಡೆದುಕೊಂಡು ಬಂದರು. ದಣಿದವರಂತೆ ಕಾಣುತ್ತಿದ್ದ ಅವರು ಊರುಗೋಲನ್ನು ಇಟ್ಟು ಉಸ್ಸೆಂದು ಬೆಂಚಿನ ಮೇಲೆ ಕುಳಿತರು. 'ಅಬ್ಬ ಈ ಬೆಂಚೊಂದು ಇಲ್ಲದಿದ್ದರೆ ನನ್ನ ಕತೆ ಮುಗಿಯುತ್ತಿತ್ತು' ಅಂದರು. ಲೈಟುಕಂಬ ಪ್ರಖರವಾಗಿ ಬೆಳಗಿ ಅವರಿಗೆ ದಾರಿ ತೋರಿತು. ಕಿರುದಾರಿ ಅವರನ್ನು ಮನೆಯೆಡೆ ಕಳಿಸಿತು.

ಬೆಂಚಿಗೆ ಒಳಗೊಳಗೇ ಖುಷಿಯಾಯಿತು. ಆಲದ ಮರದ ಮಾತು ಅದಕ್ಕೆ ಅರ್ಥವಾಗಿತ್ತು. ಬೇರೆಯವರಿಗೆ ಸಹಾಯ ಮಾಡುವುದು ನಮ್ಮ ಕೆಲಸವನ್ನು ಅರ್ಥಪೂರ್ಣವಾಗಿಸುತ್ತದೆ ಅಂದುಕೊಂಡಿತದು. ಲೈಟುಕಂಬ ಮತ್ತೊಮ್ಮೆ ಬೆಳಗಿ ತನ್ನ ಸಹಮತ ವ್ಯಕ್ತಪಡಿಸಿತು. ಕಲ್ಲುಹಾಸಿನ ದಾರಿ ಕೂಡ ಮೌನವಾಗಿ ಸಮ್ಮತಿ ಸೂಚಿಸಿತು. ಇವುಗಳನ್ನು ನೋಡಿ ಆಲದ ಮರ ಮೆಲ್ಲಗೆ ಮುಗುಳ್ನಕ್ಕು ತಂಗಾಳಿಯಲ್ಲಿ ತಲೆದೂಗಿತು.

ಅವತ್ತಿನಿಂದ ಅವು ಯಾವುವೂ ದೂರು ಹೇಳಲಿಲ್ಲ. ಜಗತ್ತು ಒಂದು ಉತ್ತಮ ಸ್ಥಳವಾಗುವ ನಿಟ್ಟಿನಲ್ಲಿ ತಮ್ಮ ಪುಟ್ಟ ಪುಟ್ಟ ಕೆಲಸಗಳ ಅವಶ್ಯಕತೆ ಇದೆ ಎಂದವುಗಳಿಗೆ ಅರ್ಥವಾಗಿತ್ತು. ಬದುಕಿನಲ್ಲಿ ನಾವು ನಿರ್ವಹಿಸುವ ಪಾತ್ರ ಎಷ್ಟೇ ಚಿಕ್ಕದಿರಬಹುದು; ಒಟ್ಟಾರೆಯಾಗಿ ನೋಡಿದರೆ ಅದು ಕೂಡ ಮುಖ್ಯವೇ ಆಗಿರುತ್ತದೆ. ಇಲ್ಲಿ ಯಾವುದೂ ಅಮುಖ್ಯವಲ್ಲ ಎಂದು ಕುವೆಂಪು ಹೇಳಿರುವುದು ಅದೆಷ್ಟು ಸೂಕ್ತವಾಗಿದೆ ಅಲ್ಲವೇ?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

10 ಮಾರ್ಚ್ 2026 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಸಪ್ತಮಿ ಗಂ. 25-55 ನಕ್ಷತ್ರ: ಅನುರಾಧ ಗಂ. 19-05 ಯೋಗ: ಹರ್ಷಣ ಗಂ. 8-21 ಕರಣ: ವಿಷ್ಟಿ ಗಂ, 12-41 ಕುಂಭ ಮಾಸದ 26 ನೇ ದಿನ. ಮಳೆ ನಕ್ಷತ್ರ : ಪೂರ್ವಾಭಾದ್ರ 2 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30, ಸೂರ್ಯೋದಯ : 06-44 ಸೂರ್ಯಾಸ್ತ : 06-37, ಮುಸ್ಲಿಂ ದಿನಾಂಕ : 20 ರಂಜಾನ್, ಅದೃಷ್ಟ ಸಂಖ್ಯೆ : 8, 3

ಮೇಷ: ಸದ್ಗುಣಗಳ ವ್ಯಕ್ತಿತ್ವದ ಮತ್ತು ಪರೋಪಕಾರಿ ಬದುಕಿನಿಂದ ಜನಪ್ರಿಯತೆ ಹೆಚ್ಚಾಗುವ ಯೋಗವಿದೆ. ಸಹೋದ್ಯೋಗಿಗಳ ಮಾತಿನಂತೆ ನಡೆದುಕೊಳ್ಳುವುದು ಉತ್ತಮ. ಹೊಂದಾಣಿಕೆ ಅಗತ್ಯ.

ವೃಷಭ: ವ್ಯಾಪಾರದ ವಿಚಾರದಲ್ಲಿ ಕೈಗೊಂಡಿರುವ ಕಾರ್ಯಗಳನ್ನು ದೇವರ ಪ್ರಾರ್ಥನೆಯ ಮೂಲಕ ಮುಂದುವರಿಸಿರಿ. ಆಸೆ ಆಕಾಂಕ್ಷೆಗೂ ಪ್ರಚಲಿತ ವಿದ್ಯಮಾನಕ್ಕೂ ಇರುವ ವ್ಯತ್ಯಾಸಗಳ ಬಗ್ಗೆ ಚರ್ಚಿಸಿ.

ಮಿಥುನ: ವಿದ್ಯಾರ್ಥಿಗಳು ಓದಿನ ವಿಷಯಗಳ ಬಗ್ಗೆ ಸ್ನೇಹಿತರೊಡನೆ ಚರ್ಚೆ ನಡೆಸುವುದರಿಂದ ವಿಚಾರ ಸಂಪೂರ್ಣವಾಗಿ ಅರ್ಥವಾಗಲಿದೆ. ವಂಶ ಪಾರಂಪರ್ಯವಾಗಿ ಬಂದ ಉದ್ಯೋಗದಲ್ಲಿ ಏಳಿಗೆ ಕಾಣುವಿರಿ.

ಕರ್ಕಾಟಕ: ಅಪ್ಪ ಮಗನ ಮಧ್ಯದಲ್ಲಿರುವ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುವುದರಿಂದ ನೆಮ್ಮದಿ ಮೂಡುವುದು. ಆಫೀಸಿನಲ್ಲಿಂದು ಕೆಲಸದ ವೇಗವನ್ನು ಹೆಚ್ಚಿಸಿಕೊಳ್ಳಿ. ನಿರ್ಧರಿಸಿದ ನಿಲುವಿನಿಂದ ಹಿಂದೆ ಸರಿಯಬೇಡಿ.

ಸಿಂಹ: ಒಪ್ಪಿಕೊಂಡಿರುವ ಒಪ್ಪಂದವೊಂದು ಮುರಿದು ಬೀಳದಂತೆ ಎಚ್ಚರ-ವಹಿಸುವುದರಿಂದ ಗೌರವ ಉಳಿಯುವುದು. ಸಮೀಪವರ್ತಿಗಳ ಆಶ್ವಾಸನೆ ದೊರೆತು ಶುಭ ಕಾರ್ಯಗಳತ್ತ ಗಮನ ಹರಿಸುವಿರಿ.

ಕನ್ಯಾ: ಕಾರ್ಖಾನೆ ಮತ್ತು ಭೂ ಸಂಬಂಧಿತ ವ್ಯವಹಾರ ನಡೆಸುವವರಿಗೆ ಕಾರ್ಯಗಳು ಚುರುಕುಗತಿಯಲ್ಲಿ ಸಾಗಲಿವೆ. ಬದುಕಿನ ಕವಲುದಾರಿಯಲ್ಲಿರುವ ಸರಿಯಾದ ಮಾರ್ಗದರ್ಶನದ ಕೊರತೆ ಇದೆ.

ತುಲಾ: ಕಳೆದುಹೋದ ದಿನಗಳ ಕುರಿತು ಆತ್ಮಾವಲೋಕನ ಮಾಡಿಕೊಳ್ಳುವು-ದರಿಂದ ಅನೇಕ ಪ್ರಶ್ನೆಗಳಿಗೆ ಉತ್ತರ ದೊರಕಲಿದೆ. ಉತ್ತಮ ದೈವಾನುಗ್ರಹ-ದಿಂದ ಕೆಲಸಗಳೆಲ್ಲವೂ ನಿರಾತಂಕವಾಗಿ ನೆರವೇರುವುದು.

ವೃಶ್ಚಿಕ: ತೋಟ ಮತ್ತು ಎಸ್ಟೇಟ್ ಕೆಲಸಗಾರರಿಗೆ ಉದ್ಯೋಗದಲ್ಲಿ ಭಯ ಹುಟ್ಟುವಂಥ ಘಟನೆ ನಡೆಯಬಹುದು. ವಿವಾಹ ಸಂಬಂಧ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸುವುದು ಸರಿಯಲ್ಲ. ಸಂತಸದ ಕ್ಷಣಗಳನ್ನು ಹಂಚಿಕೊಳ್ಳುವಿರಿ.

ಧನು: ಪಶುಸಂಗೋಪನೆ ಮಾಡುವವರಿಗೆ ಅಥವಾ ಸಾಕು ಪ್ರಾಣಿಗಳಿಂದಲೇ ಸಣ್ಣಪುಟ್ಟ ಹಾನಿ ಉಂಟಾಗಬಹುದು. ಜಾಗ್ರತೆ ಇರಲಿ. ಕೆಲಸದಲ್ಲಿನ ನಿಮಗಿರುವ ದಕ್ಷತೆಯಿಂದ ಮೇಲಧಿಕಾರಿಗಳ ಮೆಚ್ಚುಗೆ ಗಳಿಸುವಿರಿ.

ಮಕರ: ಕೆಲವೊಂದು ಸಮಸ್ಯೆ ಇತರರಲ್ಲಿ ಹೇಳಿಕೊಳ್ಳಲೂ ಆಗದೆ, ಬಿಡಲೂ ಆಗದೆ ತೊಳಲಾಡುವ ಪರಿಸ್ಥಿತಿ ಬರುವುದು. ಸ್ನೇಹಿತರೊಂದಿಗೆ ಪ್ರವಾಸ ಹೊರಡುವ ಬಗ್ಗೆ ಯೋಜನೆಯನ್ನು ಮಾಡುವಿರಿ.


ಕುಂಭ: ನಿಶ್ಚಿತ ವರ-ವಧುಗಳ ಮಧ್ಯದಲ್ಲಿ ಸಣ್ಣ-ಪುಟ್ಟ ವಿಚಾರಗಳಿಗೆ, ಸೋಲೊಪ್ಪದ ಮನಸ್ಥಿತಿಯಿಂದ ಭಿನ್ನಾಭಿಪ್ರಾಯ ಬರುವ ಸಂಭವವಿದೆ. ಸಹೋದರರ ಕಾರ್ಯಗಳಿಗೋಸ್ಕರ ಸುತ್ತಾಟವಾದರೂ ನೆಮ್ಮದಿ ಸಿಗಲಿದೆ.

ಮೀನ: ಸಹೋದರರ ಕೋಪವನ್ನು ಉಪಶಮನಗೊಳಿಸುವ ಕೆಲಸದಿಂದ ಕೌಟುಂಬಿಕ ಸೌಖ್ಯ ಹೆಚ್ಚುವುದು. ವೈಯಕ್ತಿಕ ವಿಚಾರಗಳಿಗೆ ಪ್ರಭಾವಿ ವ್ಯಕ್ತಿಗಳ ಭೇಟಿ ಮಾಡಲಿದ್ದೀರಿ. ವಾಹನ ರಿಪೇರಿಯಿಂದ ಖರ್ಚು ಸಂಭವಿಸಲಿದೆ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	24,450
ಇಂದಿನ ಅಂತ್ಯ:	24,028
ದಿನದ ಕನಿಷ್ಠ:	23,697
	422

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹460
12 ಕ್ಕೆ	₹72
ಮೈಸೂರು: 100 ಕ್ಕೆ	₹460

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹211.50
ಆರ್‌ಎಸ್‌ಎಸ್-5	₹205
ಗುಡ್ ಲಾಟ್	₹190

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹500-785
ದ್ವಿತಳಿ (ಬಿ.ವಿ)	₹400-900

ಮುದ್ರೆಮನೆ ಕಾಫಿ	
ಎಪಿ	₹23100
ಎಸಿ	₹13175
ಆರ್‌ಪಿ	₹18400
ಆರ್‌ಸಿ	₹9975

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1710 (1655)
ಸೋಯಾ (ರಿಫೈನ್ಡ್)	₹1410 (1375)
ಸೂರ್ಯಕಾಂತಿ (ರಿಫೈನ್ಡ್)	₹1750 (1625)
ಪಾಮೋಲಿನ್	₹1400 (1350)

ಸಂಘರ್ಷ ತೀವ್ರ, ನಿಲ್ಲದ ಕುಸಿತ

ದೇಶದ ಷೇರುಪೇಟೆಗಳ ಮೇಲೆ ಇನ್ನಷ್ಟು ಬಲಗೊಂಡ ‘ಕರಡಿ’ ಹಿಡಿತ

ಮುಂಬೈ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಭಾರಿ ಪ್ರಮಾಣದಲ್ಲಿ ಏರಿಕೆ ಕಂಡಿದ್ದರಿಂದ ದೇಶದ ಷೇರುಪೇಟೆಗಳಲ್ಲಿ ಸೋಮವಾರ ಭೀತಿ ಸೃಷ್ಟಿಯಾಯಿತು. ಈ ಭೀತಿಯು ‘ಕರಡಿ ಕುಣಿತ’ಕ್ಕೆ ಅನುವು ಮಾಡಿಕೊಟ್ಟಿತು.

ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಹೆಚ್ಚು ಗಮನ ನೀಡಿದ ಕಾರಣದಿಂದಾಗಿ ಸೆನ್ಸೆಕ್ಸ್ ಮತ್ತು ನಿಫ್ಟಿ ಶೇ 1.7ರಷ್ಟು ಕುಸಿದವು. ಅಮೆರಿಕದ ಡಾಲರ್ ಎದುರು ರೂಪಾಯಿ ತೀವ್ರವಾಗಿ ಕುಸಿದಿದ್ದು, ವಿದೇಶಿ ಹೂಡಿಕೆದಾರರು ಭಾರತದ ಷೇರುಪೇಟೆಗಳಿಂದ ಬಂಡವಾಳವನ್ನು ಮತ್ತಷ್ಟು ಹಿಂಪಡೆದಿದ್ದು ಕೂಡ ಸೂಚ್ಯಂಕಗಳ ಕುಸಿತಕ್ಕೆ ಕಾರಣವಾದವು ಎಂದು ವರ್ತಕರು ತಿಳಿಸಿದ್ದಾರೆ.

ಇರಾನ್ ವಿರುದ್ಧ ಅಮೆರಿಕ ಮತ್ತು ಇಸ್ರೇಲ್ ಸಮರ ಸಾರಿದ ನಂತರದಲ್ಲಿ ಹೂಡಿಕೆದಾರರ ಸಂಪತ್ತಿನ ಮೊತ್ತವು ಒಟ್ಟು ₹22.40 ಲಕ್ಷ ಕೋಟಿಯಷ್ಟು ಕಡಿಮೆ ಆಗಿದೆ. ಫೆಬ್ರುವರಿ 27ರ ನಂತರದಲ್ಲಿ ಸೆನ್ಸೆಕ್ಸ್ ಒಟ್ಟು 3,721 ಅಂಶದಷ್ಟು ಕುಸಿತ ಕಂಡಿದೆ.

ಮುಖ್ಯಾಂಶಗಳು

- ಸಂಘರ್ಷದಿಂದ ಇದುವರೆಗೆ ₹22 ಲಕ್ಷ ಕೋಟಿ ನಷ್ಟ
- ಫೆ.27ರ ನಂತರ 3,721 ಅಂಶ ಕುಸಿದ ಸೆನ್ಸೆಕ್ಸ್
- ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದ ದೇಶದ ಮಾರುಕಟ್ಟೆ ಭಾರಿ ಇಳಿಕೆ

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಸೋಮವಾರ ಒಟ್ಟು 1,352 ಅಂಶ ಕುಸಿಯಿತು. ವಹಿವಾಟಿನಲ್ಲಿ ನಡುವಿನಲ್ಲಿ ಸೂಚ್ಯಂಕವು 2,494 ಅಂಶದವರೆಗೆ ಕುಸಿದಿತ್ತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 422 ಅಂಶ ಕುಸಿದಿದೆ. ವಹಿವಾಟಿನ ನಡುವಿನಲ್ಲಿ ಇದು 752 ಅಂಶದವರೆಗೆ ಕುಸಿದಿತ್ತು.



ಸೆನ್ಸೆಕ್ಸ್‌ನ ಭಾಗವಾಗಿರುವ ಷೇರುಗಳ ಪೈಕಿ ಅಲ್ಟ್ರಾ ಟೆಕ್ ಸಿಮೆಂಟ್ ಶೇ 5.23ರಷ್ಟು ಕುಸಿದಿದೆ. ಮಾರುತಿ ಸುಜುಕಿ, ಮಹೀಂದ್ರ ಆ್ಯಂಡ್ ಮಹೀಂದ್ರ, ಎಸ್‌ಬಿಐ, ಇಂಟರ್‌ಗ್ಲೋಬ್ ಏವಿಯೇಷನ್, ಅದಾನಿ ಪೋರ್ಟ್ಸ್ ಕೂಡ ಕುಸಿದಿವೆ.

ರಿಲಯನ್ಸ್ ಇಂಡಸ್ಟ್ರೀಸ್, ಸನ್ ಫಾರ್ಮಾ, ಇನ್ಫೊಸಿಸ್, ಟೆಕ್ ಮಹೀಂದ್ರ ಮತ್ತು ಎಚ್‌ಸಿಎಲ್ ಟೆಕ್ ಷೇರುಗಳು ಏರಿಕೆ ದಾಖಲಿಸಿವೆ.

‘ಪಶ್ಚಿಮ ಏಷ್ಯಾದಲ್ಲಿನ ಸಮರವು ತೀವ್ರಗೊಳ್ಳುತ್ತಿರುವುದು ಹೂಡಿಕೆದಾರರ ಮೇಲೆ ಪರಿಣಾಮ ಬೀರಿದೆ. ಇದರಿಂದಾಗಿ ಸೂಚ್ಯಂಕಗಳು ಕುಸಿದಿವೆ’ ಎಂದು ಎನ್‌ರಿಚ್ ಮನಿ ಸಂಸ್ಥೆಯ ಸಿಇಒ ಪೊನ್ಮುಡಿ ಆರ್.ಹೇಳಿದ್ದಾರೆ.

‘ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು ಕಡಿಮೆ ಆಗುವ ಲಕ್ಷಣ ಕಾಣಿಸುತ್ತಿಲ್ಲ. ಯುದ್ಧವು ಎರಡನೆಯ ವಾರ ಪ್ರವೇಶಿಸಿದೆ. ಇದರಿಂದಾಗಿ ಮಾರುಕಟ್ಟೆಗಳಲ್ಲಿ ಷೇರುಗಳ ಮಾರಾಟವು ತೀವ್ರವಾಗಿತ್ತು’ ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

‘ಕರಡಿ’ ಹಿಡಿತದಲ್ಲಿ ಏಷ್ಯಾ ಮಾರುಕಟ್ಟೆಗಳು: ಯುದ್ಧದ ಪರಿಣಾಮವಾಗಿ ಏಷ್ಯಾದ ಇತರ ಪ್ರಮುಖ ಷೇರುಪೇಟೆಗಳಲ್ಲಿಯೂ ಭಾರಿ ಪ್ರಮಾಣದಲ್ಲಿ ಕುಸಿತ ಆಗಿದೆ. ದಕ್ಷಿಣ ಕೊರಿಯಾದ ಕೊಸ್ಪಿ ಶೇ 5.96ರಷ್ಟು, ಜಪಾನ್‌ನ ನಿಕ್ಕೈ ಶೇ 5.20ರಷ್ಟು ಕುಸಿದಿವೆ. ಶಾಂಘೈ ಮತ್ತು ಹಾಂಗ್‌ಕಾಂಗ್‌ನ ಷೇರುಪೇಟೆಗಳೂ ನಕಾರಾತ್ಮಕ ವಹಿವಾಟು ಕಂಡಿವೆ.

ರೂಪಾಯಿ ಮೌಲ್ಯ ಕುಸಿತ: ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಸೋಮವಾರದ ವಹಿವಾಟಿನಲ್ಲಿ 52 ಪೈಸೆಯಷ್ಟು ಕಡಿಮೆ ಆಗಿದೆ. ಕಚ್ಚಾ ತೈಲದ ಬೆಲೆ ಏರಿಕೆ, ಡಾಲರ್ ಬಲವರ್ಧನೆ ಮತ್ತು ಸಮರವು ಮೌಲ್ಯ ಇಳಿಕೆಗೆ ಕಾರಣವಾಗಿವೆ.

ಬೆಳ್ಳಿ ದರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಬೆಳ್ಳಿ ದರವು ಇಳಿಕೆಯಾಗಿದ್ದರೆ, ಚಿನ್ನದ ಧಾರಣೆ ಸ್ವಲ್ಪ ಏರಿಕೆಯಾಗಿದೆ.

ಕೆ.ಜಿ ಬೆಳ್ಳಿ ಧಾರಣೆ ₹3,400 ಇಳಿಕೆಯಾಗಿ, ₹2,68,300ರಂತೆ ಮಾರಾಟವಾಗಿದೆ. ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹200 ಏರಿಕೆಯಾಗಿ, ₹1,64,300 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

‘ಬೆಲೆ ಏರಿಕೆ: ಸದ್ಯಕ್ಕೆ ಪರಿಣಾಮ ಇಲ್ಲ’

ನವದೆಹಲಿ (ಪಿಟಿಐ): ‘ದೇಶದ ಚಿಲ್ಲರೆ ಹಣದುಬ್ಬರ ಪ್ರಮಾಣವು ಕನಿಷ್ಠ ಮಟ್ಟಕ್ಕೆ ಸನಿಹದಲ್ಲಿ ಇರುವ ಕಾರಣದಿಂದಾಗಿ, ಕಚ್ಚಾ ತೈಲದ ಬೆಲೆ ಏರಿಕೆಯು ದೇಶದ ಹಣದುಬ್ಬರದ ಮೇಲೆ ಈ ಹಂತದಲ್ಲಿ ಹೆಚ್ಚಿನ ಪರಿಣಾಮ ಬೀರದು’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ಅವರು ಈ ಮಾತು ಹೇಳಿದ್ದಾರೆ. ಕಳೆದ ಒಂದು ವರ್ಷದಿಂದ ಕಚ್ಚಾ ತೈಲದ ಬೆಲೆ ಹಾಗೂ ಭಾರತದಲ್ಲಿನ ಹಣದುಬ್ಬರದ ಪ್ರಮಾಣವು ಇಳಿಕೆಯ ಹಾದಿಯಲ್ಲಿತ್ತು. ಆದರೆ, ಫೆಬ್ರುವರಿ 28ರಿಂದ ಆರಂಭವಾದ ಪಶ್ಚಿಮ ಏಷ್ಯಾದ ಸಂಘರ್ಷದಿಂದ ಪ್ರತೀ ಬ್ಯಾರಲ್ ಕಚ್ಚಾ ತೈಲದ ಬೆಲೆಯು ಹೆಚ್ಚಳವಾಗಿದೆ ಎಂದಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಯಲ್ಲಿನ ಏರಿಕೆಯಿಂದ ದೇಶದ ಹಣದುಬ್ಬರದ ಮೇಲೆ ಆಗುತ್ತಿರುವ ಪರಿಣಾಮದ ಬಗ್ಗೆ ಸರ್ಕಾರ ಪರಿಶೀಲನೆ ನಡೆಸುತ್ತಿದೆಯೇ ಎಂಬ ಪ್ರಶ್ನೆಗೆ ಸಚಿವರು ಉತ್ತರಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ)	
09-03-2026	
ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ (ಹೊಸ)	8300-8400
ದಪ್ಪ ಗುಜರಾತ್ (ಹೊಸ)	9600-9700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1720 (1665)
ಒಂದು ವಾರದ ಡೆಲಿವರಿ	1715 (1660)
ಪಾಮ್ ವಾರದ ಡೆಲಿವರಿ	1398 (1348)
ಸೂರ್ಯಕಾಂತಿ ಎಣ್ಣೆ ಕಚ್ಚಾ	1610 (1565)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,57,400 (1,60,300)
ಬೆಳ್ಳಿ ಕೆ.ಜಿಗೆ	2,60,000 (2,65,300)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಟ್ರಂಪ್ ಜೊತೆ ಬ್ರಿಟನ್ ಪ್ರಧಾನಿ ಮಾತುಕತೆ

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಮಾತನಾಡಿ, ಪಶ್ಚಿಮ ಏಷ್ಯಾದ ಪರಿಸ್ಥಿತಿಯ ಬಗ್ಗೆ ಚರ್ಚಿಸಿದ್ದಾರೆ. ಇರಾನ್ ಮೇಲಿನ ದಾಳಿಗೆ ಬ್ರಿಟನ್ ನೀಡಿದ ಪ್ರತಿಕ್ರಿಯೆಯನ್ನು ಟ್ರಂಪ್ ತೀವ್ರವಾಗಿ ಟೀಕಿಸಿದ ಬೆನ್ನಲ್ಲೆ ಈ ಮಾತುಕತೆ ನಡೆದಿದೆ.

ಬ್ರಿಟನ್ ಮತ್ತು ಅಮೆರಿಕ ನಡುವಿನ ‘ವಿಶೇಷ ಸಂಬಂಧವನ್ನು’ ಸರಿಪಡಿಸುವ ಪ್ರಯತ್ನದ ಭಾಗವಾಗಿ ಬ್ರಿಟನ್ ಪ್ರಧಾನಿ ಕಚೇರಿ ಭಾನುವಾರ ಈ ಫೋನ್ ಕರೆಯ ವಿವರಗಳನ್ನು ಬಿಡುಗಡೆ ಮಾಡಿದೆ.

‘ಉಭಯ ನಾಯಕರು ಪಶ್ಚಿಮ ಏಷ್ಯಾದ ಇತ್ತೀಚಿನ ಪರಿಸ್ಥಿತಿ ಮತ್ತು ಆ ಭಾಗದ ಮಿತ್ರ ರಾಷ್ಟ್ರಗಳ ರಕ್ಷಣೆಗಾಗಿ ಬ್ರಿಟನ್‌ನ ರಾಯಲ್ ಏರ್ ಫೋರ್ಸ್ (ಆರ್‌ಎಎಫ್) ವಾಯುನೆಲೆಗಳನ್ನು ಬಳಸಿಕೊಳ್ಳುವ ಮೂಲಕ ಉಭಯ ದೇಶಗಳ ನಡುವಿನ ಸೇನಾ ಸಹಕಾರದ ಬಗ್ಗೆ ಚರ್ಚಿಸಿದರು. ಜೊತೆಗೆ ಯುದ್ಧದಲ್ಲಿ ಮೃತಪಟ್ಟ ಅಮೆರಿಕದ ಆರು ಸೈನಿಕರಿಗೆ ಪ್ರಧಾನಮಂತ್ರಿ ಸಂತಾಪ ಸಲ್ಲಿಸಿದರು’ ಎಂದು ವಕ್ತಾರರು ತಿಳಿಸಿದ್ದಾರೆ.

ಬ್ರಿಟನ್‌ನ ಎರಡು ಯುದ್ಧನೌಕೆಗಳಲ್ಲಿ ಒಂದಾದ ‘ಎಚ್‌ಎಂಎಸ್ ಪ್ರಿನ್ಸ್ ಆಫ್ ವೇಲ್ಸ್’ ಅನ್ನು ಸನ್ನದ್ಧ ಸ್ಥಿತಿಯಲ್ಲಿ ಇಡಲಾಗಿದೆ ಎಂದು ಅಲ್ಲಿನ ರಕ್ಷಣಾ ಸಚಿವಾಲಯ ಖಚಿತಪಡಿಸಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ

ಯುದ್ಧ ಶುರುವಾದಾಗಿನಿಂದ ವಾಣಿಜ್ಯ ಬಂದರಿಗೆ ಬಾರದ ಹಡಗು

ಸಂಘರ್ಷ: ಬಿಟುಮಿನ್ ಪೂರೈಕೆ ಸ್ಥಗಿತ

• ಗಣಪತಿ ಹೆಗಡೆ

ಕಾರವಾರ: ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದಿಂದ ಇಲ್ಲಿನ ವಾಣಿಜ್ಯ ಬಂದರಿಗೆ ಬಿಟುಮಿನ್ ಹೊತ್ತು ತರುತ್ತಿದ್ದ ಹಡಗುಗಳ ಸಂಚಾರ ಸ್ಥಗಿತಗೊಂಡಿದೆ. ಇದರಿಂದ ಬಂದರು ವರಮಾನದ ಮೇಲೆ ಪರಿಣಾಮ ಬೀರಿದೆ. ನೂರಾರು ಕಾರ್ಮಿಕರ ದುಡಿಮೆಗೆ ತೊಂದರೆ ಆಗಿದೆ.

ಬಂದರು ಸಮೀಪದಲ್ಲಿ ನಾಲ್ಕೈದು ಬಿಟುಮಿನ್ ಸಂಗ್ರಹಾಗಾರ ಕಂಪನಿಗಳಿವೆ. ಅವು ಇರಾಕ್, ಇರಾನ್ ದೇಶಗಳಿಂದ ಸಾವಿರಾರು ಟನ್ ಬಿಟುಮಿನ್ ಆಮದು ಮಾಡಿಕೊಳ್ಳುತ್ತವೆ. ಇಲ್ಲಿಂದ ಟ್ಯಾಂಕರ್‌ಗಳ ಮೂಲಕ ಉತ್ತರ ಕರ್ನಾಟಕ, ಬೆಂಗಳೂರು, ಚೆನ್ನೈ ಸೇರಿ ದಕ್ಷಿಣ ಭಾರತದ ವಿವಿಧೆಡೆ ಪೂರೈಸಲಾಗುತ್ತದೆ.

ಯುದ್ಧ ಶುರುವಾದಾಗಿನಿಂದ ಬಿಟುಮಿನ್ ಪೂರೈಸುವ ಹಡಗುಗಳ ಸಂಚಾರ ಸ್ಥಗಿತಗೊಂಡಿದೆ. ಹಡಗುಗಳು ಬಾರದ ಕಾರಣ ವಾಣಿಜ್ಯ ಬಂದರಿನಲ್ಲಿ ಚಟುವಟಿಕೆ ಸ್ಥಗಿತಗೊಂಡಿದೆ. ನಿತ್ಯವೂ ಇಲ್ಲಿಂದ ಬಿಟುಮಿನ್ ಹೊತ್ತು ಸಾಗುತ್ತಿದ್ದ ಟ್ಯಾಂಕರ್‌ಗಳು ಕೆಲಸ ಸಿಗದೆ ಬಂದರಿನ ಹೊರವಲಯದಲ್ಲಿ ಖಾಲಿ ನಿಂತಿವೆ.



ಕಾರವಾರ ವಾಣಿಜ್ಯ ಬಂದರಿನ ಹೊರಗೆ ಬಿಟುಮಿನ್ ಸಾಗಾಟದ ಟ್ಯಾಂಕರ್‌ಗಳು ನಿಂತಿವೆ

‘ವಾಣಿಜ್ಯ ಬಂದರಿಗೆ ವಿದೇಶಗಳಿಂದ ರಾಕ್ ಫಾಸ್ಫೇಟ್, ಹೈ ಸ್ಪೀಡ್ ಡೀಸೆಲ್ ಆಮದು ಆಗುತ್ತವೆ. ಆದರೆ, ಅವೆಲ್ಲವುಗಳಿಗಿಂತ ಬಿಟುಮಿನ್ ಆಮದು ಚಟುವಟಿಕೆಯಿಂದಲೇ ಹೆಚ್ಚು ಆದಾಯ ಸಂಗ್ರಹವಾಗುತ್ತದೆ. ವಾರ್ಷಿಕ 100 ಕಾರ್ಗೊ ಹಡಗುಗಳು ಬಿಟುಮಿನ್‌ನ್ನು ಹೊತ್ತು ತರುತ್ತವೆ. ವಾರಕ್ಕೆ ಕನಿಷ್ಠ ನಾಲ್ಕರಿಂದ ಐದು ಹಡಗುಗಳು ಬರಬೇಕಿತ್ತು. ಯುದ್ಧದ ಪರಿಣಾಮ ಹಡಗುಗಳ ಸಂಚಾರ ಸ್ಥಗಿತಗೊಂಡಿದೆ’ ಎಂದು ಬಂದರು ಅಧಿಕಾರಿ ನಿತೇಶ ಸಾರಂಗ ತಿಳಿಸಿದರು.

> **ಅರಬ್ ರಾಷ್ಟ್ರಗಳಿಂದ ಬರಬೇಕಿದ್ದ, ಬಿಟುಮಿನ್ ಪೂರೈಕೆ ನಿಂತಿದೆ. ಇದರಿಂದ ಬಂದರಿಗೆ ಶುಲ್ಕದ ಮೂಲಕ ಸಂಗ್ರಹವಾಗುತ್ತಿದ್ದ ಕನಿಷ್ಠ ₹60 ಲಕ್ಷದಿಂದ 70 ಲಕ್ಷ ಆದಾಯ ತಪ್ಪಿದೆ**
> **ಟಿ.ಎಸ್.ರಾಠೋಡ್,** ನಿರ್ದೇಶಕ, ಬಂದರು ಜಲಸಾರಿಗೆ ಮಂಡಳಿ

‘ಡಾಂಬರು ಉತ್ಪಾದನೆ, ಪೇಂಟ್ ತಯಾರಿಕೆ ಸೇರಿದಂತೆ ವಿವಿಧ ಉದ್ಯಮಗಳಿಗೆ ಬಿಟುಮಿನ್ ಕಚ್ಚಾವಸ್ತುವಾಗಿ ಪೂರೈಕೆಯಾಗುತ್ತದೆ. ಕಂಪನಿಗಳ ಬೇಡಿಕೆ ಹೆಚ್ಚಿದ್ದರೂ ಅದಕ್ಕೆ ತಕ್ಕಷ್ಟು ಪೂರೈಕೆ ಮಾಡಲಾಗುತ್ತಿಲ್ಲ. ಬಿಟುಮಿನ್ ಪೂರೈಕೆ ಸದ್ಯ ಸಂಪೂರ್ಣ ಸ್ಥಗಿತಗೊಂಡಿದ್ದು, ಯಾವಾಗ ಹಡಗುಗಳು ಬರಲಿವೆ ಎಂಬುದನ್ನು ಈಗಲೇ ಹೇಳಲಾಗದು’ ಎಂದು ಆಮದು ವಹಿವಾಟು ನಡೆಸುವ ಕಂಪನಿ ಅಧಿಕಾರಿಯೊಬ್ಬರು ತಿಳಿಸಿದರು.

ಎಲ್‌ಪಿಜಿ ಸಿಲಿಂಡರ್ ನಿಯಮ ಬದಲು

ನವದೆಹಲಿ (ಪಿಟಿಐ): ಅಡುಗೆ ಅನಿಲ ಸಿಲಿಂಡರ್‌ನ (ಎಲ್‌ಪಿಜಿ) ಅಕ್ರಮ ದಾಸ್ತಾನು ತಡೆಯುವ ಹಾಗೂ ಎಲ್‌ಪಿಜಿ ಸಿಲಿಂಡರ್‌ಗಳ ಲಭ್ಯತೆಯು ನ್ಯಾಯಸಮ್ಮತವಾಗಿ ಇರುವಂತೆ ನೋಡಿಕೊಳ್ಳುವ ಉದ್ದೇಶದಿಂದ ಕೇಂದ್ರ ಸರ್ಕಾರವು ನಿಯಮಗಳಲ್ಲಿ ತುಸು ಬದಲಾವಣೆ ತಂದಿದೆ.

ಒಬ್ಬ ಗ್ರಾಹಕರು ಒಂದು ಬಾರಿ ಎಲ್‌ಪಿಜಿ ಖರೀದಿ ಮಾಡಿದ ನಂತರ, ಇನ್ನೊಂದು ಎಲ್‌ಪಿಜಿ ಸಿಲಿಂಡರ್ ಖರೀದಿ ಮಾಡಲು 25 ದಿನ ಕಾಯಬೇಕು ಎಂಬ ನಿಯಮ ಜಾರಿಗೆ ಬಂದಿದೆ ಎಂದು ಮೂಲಗಳು ಹೇಳಿವೆ.

ಈ ಮೊದಲು, ಒಂದು ಸಿಲಿಂಡರ್ ಖರೀದಿಸಿದ 21 ದಿನಗಳ ನಂತರ ಮತ್ತೊಂದು ಎಲ್‌ಪಿಜಿ ಸಿಲಿಂಡರ್ ಪಡೆಯಲು ಅವಕಾಶ ಇತ್ತು.



ದೇಶದಲ್ಲಿ ಕುಟುಂಬವೊಂದು ವರ್ಷಕ್ಕೆ ಸರಾಸರಿ ಎಂಟು ಸಿಲಿಂಡರ್ ಎಲ್‌ಪಿಜಿ ಬಳಸುತ್ತಿದೆ. ಒಂದು ಸಿಲಿಂಡರ್ ಸಾಮಾನ್ಯವಾಗಿ ಆರು ವಾರಗಳಿಗೆ ಸಾಕಾಗುತ್ತದೆ. ಎಲ್‌ಪಿಜಿ ಸಿಲಿಂಡರ್ ದಾಸ್ತಾನು ಅಗತ್ಯ ಪ್ರಮಾಣದಲ್ಲಿ ಇದೆ ಎಂದು ಮೂಲಗಳು ಸ್ಪಷ್ಟಪಡಿಸಿವೆ.

‘ದೇಶದ ಪ್ರತಿಯೊಂದು ಪೆಟ್ರೋಲ್ ಬಂಕ್ ಕೂಡ ಕಾರ್ಯಾಚರಣೆ ಮಾಡುತ್ತಿದೆ, ಮನೆಗಳಿಗೆ ಕೊಳವೆ ಮೂಲಕ ಅಡುಗೆ ಅನಿಲ ಪೂರೈಕೆ ಎಲ್ಲಿಯೂ ಸ್ಥಗಿತಗೊಂಡಿಲ್ಲ, ಸಿಎನ್‌ಜಿ ಕೇಂದ್ರಗಳೆಲ್ಲವೂ ಕಾರ್ಯ ನಿರ್ವಹಿಸುತ್ತಿವೆ. ಭೀತಿಗೆ ಒಳಗಾಗುವ ಅಗತ್ಯ ಇಲ್ಲ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಚ್ಚಾ ತೈಲದ ಬೆಲೆಯು ಬ್ಯಾರಲ್ ಒಂದಕ್ಕೆ 100 ಡಾಲರ್ ದಾಟಿದ್ದರೂ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಸದ್ಯಕ್ಕೆ ಹೆಚ್ಚಳ ಮಾಡುವುದಿಲ್ಲ ಎಂದು ಕೇಂದ್ರ ಸರ್ಕಾರದ ಮೂಲಗಳು ಹೇಳಿವೆ.

ಸರ್ಕಾರವು ಕಚ್ಚಾ ತೈಲ ಮಾರುಕಟ್ಟೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ ಎಂದು ಮೂಲಗಳು ತಿಳಿಸಿವೆ. ದೇಶದಲ್ಲಿ ಮುಂದಿನ ಗರಿಷ್ಠ ಎಂಟು ವಾರಗಳಿಗೆ ಸಾಕಾಗುವಷ್ಟು ಕಚ್ಚಾ ತೈಲ ಹಾಗೂ ಸಂಸ್ಕರಿತ ತೈಲೋತ್ಪನ್ನಗಳು ಇವೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ತೈಲ ಮಾರುಕಟ್ಟೆಯಲ್ಲಿ ತಲ್ಲಣ

ಒಂದನೇ ಪುಟದಿಂದ...

ಕಚ್ಚಾ ತೈಲದ ಬೆಲೆಯು ಬ್ಯಾರಲ್‌ಗೆ 100 ಡಾಲರ್‌ಗಿಂತ ಹೆಚ್ಚಿನ ಮಟ್ಟದಲ್ಲಿ ಬಹುಕಾಲ ಉಳಿದರೆ ಜಾಗತಿಕ ಅರ್ಥವ್ಯವಸ್ಥೆಯು ಅದನ್ನು ತಾಳಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ ಎಂದು ಹಲವು ಮಂದಿ ಹೂಡಿಕೆದಾರರು, ತಜ್ಞರು ಹೇಳಿದ್ದಾರೆ.

ಜಿ7 ಮಧ್ಯಪ್ರವೇಶ: ಕಚ್ಚಾ ತೈಲದ ಬೆಲೆಯು ಭಾರಿ ಪ್ರಮಾಣದಲ್ಲಿ ಜಿಗಿದಿದ್ದ ಸಂದರ್ಭದಲ್ಲಿ ಜಿ–7 ದೇಶಗಳ ಗುಂಪಿನ ಅಧ್ಯಕ್ಷತೆ ಹೊಂದಿರುವ ಫ್ರಾನ್ಸ್‌ನ ಮೂಲವೊಂದರಿಂದ ಬಂದ ಹೇಳಿಕೆಯು, ತೈಲದ ಬೆಲೆ ತಗ್ಗಲು ಕಾರಣವಾಯಿತು. ವರದಿ ಸಿದ್ಧಪಡಿಸುವ ಸಂದರ್ಭದಲ್ಲಿ ಕಚ್ಚಾ ತೈಲದ ಬೆಲೆಯು ಬ್ಯಾರಲ್‌ಗೆ 100.62 ಡಾಲರ್ ಆಗಿತ್ತು.

ಇಂಧನ ಮಾರುಕಟ್ಟೆಯಲ್ಲಿ ಸ್ಥಿರತೆ ತರುವ ಉದ್ದೇಶದಿಂದ, ಮೀಸಲು ಸಂಗ್ರಹದಲ್ಲಿ ಇರುವ ಕಚ್ಚಾ ತೈಲವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಬಗ್ಗೆ ಸೋಮವಾರ ನಡೆಯಲಿರುವ ಜಿ–7 ದೇಶಗಳ ಹಣಕಾಸು ಸಚಿವರ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಮೂಲಗಳು ಹೇಳಿದವು. ಕೆನಡಾ, ಜರ್ಮನಿ, ಇಟಲಿ, ಜಪಾನ್, ಅಮೆರಿಕ ಮತ್ತು ಬ್ರಿಟನ್ ಈ ಗುಂಪಿನ ಇತರ ಸದಸ್ಯ ರಾಷ್ಟ್ರಗಳು.

ಮೀಸಲು ಕಚ್ಚಾ ತೈಲ ಸಂಗ್ರಹವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಆಲೋಚನೆಗೆ ಅಮೆರಿಕ ಸೇರಿದಂತೆ ಜಿ–7 ಗುಂಪಿನ ಮೂರು ಸದಸ್ಯ ರಾಷ್ಟ್ರಗಳು ಸಹಮತ ಸೂಚಿಸಿವೆ ಎಂಬುದಾಗಿ ಫೈನಾನ್ಶಿಯಲ್ ಟೈಮ್ಸ್ ವರದಿ ಪ್ರಕಟವಾದ ನಂತರ, ಕಚ್ಚಾ ತೈಲ ಬೆಲೆ ಏರಿಕೆ ಪ್ರಮಾಣ ತುಸು ತಗ್ಗಿತು.

‘ಇದು ಅತಿದೊಡ್ಡ ಆಘಾತ’

ಹೊರ್ಮುಜ್ ಜಲಸಂಧಿಯ ಮೂಲಕ ಕಚ್ಚಾ ತೈಲದ ರವಾನೆ ಆಗುತ್ತಿಲ್ಲದಿರುವುದರ ವಿಚಾರವಾಗಿ ಅಮೆರಿಕ ಮೂಲದ ‘ದಿ ಕೊಬೇಸಿ ನ್ಯೂಸ್‌ಲೆಟರ್’ ಸಂಸ್ಥೆಯು ‘ಇದು ಇತಿಹಾಸದಲ್ಲಿ ತೈಲ ಪೂರೈಕೆ ವಿಚಾರವಾಗಿ ಎದುರಾಗಿರುವ ಅತಿದೊಡ್ಡ ಆಘಾತ’ ಎಂದು ಹೇಳಿದೆ. ಈ ಸಂಸ್ಥೆಯು ಜಾಗತಿಕ ಬಂಡವಾಳ ಮಾರುಕಟ್ಟೆಗಳ ಬಗ್ಗೆ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಿರುತ್ತದೆ.

ಹೊರ್ಮುಜ್ ಜಲಸಂಧಿ ಬಂದ್ ಆಗಿರುವುದರಿಂದಾಗಿ ಪ್ರತಿದಿನ ಅಂದಾಜು 2 ಕೋಟಿ ಬ್ಯಾರೆಲ್‌ನಷ್ಟು ಕಚ್ಚಾ ತೈಲದ ಪೂರೈಕೆಗೆ ತಡೆ ಉಂಟಾಗಿದೆ ಎಂದು ಅದು ಅಂದಾಜು ಮಾಡಿದೆ. ಅಲ್ಲದೆ, ಹಿಂದೆ ಪ್ರಮುಖ ಸಂಘರ್ಷಗಳ ಸಂದರ್ಭದಲ್ಲಿ ಕಚ್ಚಾ ತೈಲದ ಪೂರೈಕೆಗೆ ಆಗಿದ್ದ ಅಡ್ಡಿಗಳನ್ನು, ಆಗ ಎಷ್ಟು ಪ್ರಮಾಣದ ತೈಲ ರವಾನೆಗೆ ಅಡ್ಡಿ ಆಗಿತ್ತು ಎಂಬುದರ ವಿವರವನ್ನು ಅದು ನೀಡಿದೆ.

1978ರ ಇರಾನ್ ಕ್ರಾಂತಿಯ ಸಂದರ್ಭದಲ್ಲಿ ಪ್ರತಿನಿತ್ಯ 55 ಲಕ್ಷ ಬ್ಯಾರೆಲ್ ಕಚ್ಚಾ ತೈಲ ಸಾಗಾಟಕ್ಕೆ ಅಡ್ಡಿ ಆಗಿತ್ತು. 1973ರ ಯೊಮ್ ಕಿಪ್ಪುರ್ ಯುದ್ಧದ ಹೊತ್ತಿನಲ್ಲಿ ನಿತ್ಯ 45 ಲಕ್ಷ ಬ್ಯಾರೆಲ್ ಕಚ್ಚಾ ತೈಲ ಪೂರೈಕೆಗೆ ಸಮಸ್ಯೆ ಆಗಿತ್ತು. 1990ರ ಇರಾಕ್–ಕುವೈತ್ ಯುದ್ಧದ ವೇಳೆಗೆ 43 ಲಕ್ಷ ಬ್ಯಾರೆಲ್ ತೈಲ ಸಾಗಾಟಕ್ಕೆ, 1980ರ ಇರಾನ್–ಇರಾಕ್ ಯುದ್ಧದ ವೇಳೆ ನಿತ್ಯ 40 ಲಕ್ಷ ಬ್ಯಾರೆಲ್ ತೈಲ ಸಾಗಣೆಗೆ ತೊಂದರೆ ಆಗಿತ್ತು.

ತೀರಾ ಈಚೆಗೆ, ಅಂದರೆ 2022ರಲ್ಲಿ ಉಕ್ರೇನ್–ರಷ್ಯಾ ಯುದ್ಧ ಆರಂಭವಾದಾಗ ನಿತ್ಯ 20 ಲಕ್ಷ ಬ್ಯಾರೆಲ್ ಕಚ್ಚಾ ತೈಲ ಪೂರೈಕೆಗೆ ತೊಂದರೆ ಆಗಿತ್ತು ಎಂದು ‘ದಿ ಕೊಬೇಸಿ ನ್ಯೂಸ್‌ಲೆಟರ್’ ವಿವರಿಸಿದೆ.

ಶಾಂತಿಗಾಗಿ ತೆರಬೇಕಿರುವ ಸಣ್ಣ ಬೆಲೆ: ಟ್ರಂಪ್

‘ಕಚ್ಚಾ ತೈಲದ ಅಲ್ಪಾವಧಿಯ ಬೆಲೆಗಳು ಇರಾನ್‌ನ ಅಣುಶಕ್ತಿ ಬೆದರಿಕೆಯನ್ನು ನಾಶಮಾಡಿದ ನಂತರದಲ್ಲಿ ತಗ್ಗುತ್ತವೆ. ತೈಲದ ಈ ಬೆಲೆಯು ಅಮೆರಿಕ ಮತ್ತು ವಿಶ್ವದ ಸುರಕ್ಷತೆ ಹಾಗೂ ಶಾಂತಿಗಾಗಿ ಪಾವತಿಸಬೇಕಿರುವ ಬಹಳ ಸಣ್ಣ ಬೆಲೆ. ಮೂರ್ಖರು ಮಾತ್ರ ಬೇರೆ ಬಗೆಯಲ್ಲಿ ಆಲೋಚಿಸುತ್ತಾರೆ’ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಕಚ್ಚಾ ತೈಲ ಬೆಲೆ ಏರಿಕೆ ವಿಚಾರವಾಗಿ ಪ್ರತಿಕ್ರಿಯಿಸಿದ್ದಾರೆ.

ದಾಸ್ತಾನು ಇರುವ ತೈಲ ಮಾರುಕಟ್ಟೆಗೆ: ಮೂಡದ ಒಮ್ಮತ

ಪ್ಯಾರಿಸ್ (ಎಎಫ್‌ಪಿ):ಯುದ್ಧದಿಂದಾಗಿ ಕಚ್ಚಾ ತೈಲದ ಬೆಲೆ ಏರಿಕೆಯಾಗಿದ್ದು, ಜಾಗತಿಕ ಇಂಧನ ಪೂರೈಕೆಯನ್ನು ಬೆಂಬಲಿಸಲು ಅಗತ್ಯ ಕ್ರಮ ಕೈಗೊಳ್ಳಲು ಸಿದ್ಧ ಎಂದು ಜಿ7 ರಾಷ್ಟ್ರಗಳು ಸೋಮವಾರ ಘೋಷಿಸಿವೆ. ಆದರೆ, ತುರ್ತು ಸಂದರ್ಭದಲ್ಲಿ ಬಳಕೆಗಾಗಿ ದಾಸ್ತಾನು ಮಾಡಿರುವ ತೈಲವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಬಗ್ಗೆ ಈ ದೇಶಗಳ ನಡುವೆ ಒಮ್ಮತ ಮೂಡಿಲ್ಲ.

ಸುದ್ದಿ 2 ನಿಮಿಷ

‘ತೇಲುವ ಸೌರ ವಿದ್ಯುತ್ ಘಟಕ: ಬಿಎಚ್‌ಇಎಲ್ ವರದಿ’

ಬೆಂಗಳೂರು: ಕೆರೆಗಳ ಮೇಲೆ ‘ತೇಲುವ ಸೌರ ವಿದ್ಯುತ್ ಘಟಕ’ ಅಳವಡಿಸುವ ಕುರಿತು ಬಿಎಚ್‌ಇಎಲ್ ಸಲ್ಲಿಸಿರುವ ಕಾರ್ಯಸಾಧ್ಯತಾ ವರದಿಯನ್ನು ಪರಿಶೀಲಿಸಿ ಅಂತಿಮ ತೀರ್ಮಾನ ಹಾಗೂ ಶಿಫಾರಸು ಮಾಡುವಂತೆ ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಕುರಿತಂತೆ ಸಣ್ಣ ನೀರಾವರಿ ಇಲಾಖೆಯ ಕಾರ್ಯದರ್ಶಿ, ಬೆಸ್ಕಾಂ ಮತ್ತು ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಹಾಗೂ ಇತರೆ ಅಧಿಕಾರಿಗಳ ಜೊತೆ ಸಚಿವರು ಸೋಮವಾರ ಚರ್ಚೆ ನಡೆಸಿದರು.

‘ಏತ ನೀರಾವರಿ ಯೋಜನೆಗಳಿಗೆ ತಗಲುತ್ತಿರುವ ವಿದ್ಯುತ್ ವೆಚ್ಚದ ಹೊರೆ ಇಳಿಸಲು ಹಾಗೂ ಹಸಿರು ಇಂಧನ ಬಳಕೆಯನ್ನು ಉತ್ತೇಜಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಇದರ ಭಾಗವಾಗಿ ಕೆರೆಗಳ ಮೇಲೆ ‘ತೇಲುವ ಸೌರ ವಿದ್ಯುತ್ ಘಟಕ'ಗಳನ್ನು ಸ್ಥಾಪಿಸುವ ಕುರಿತು ಕಾರ್ಯಸಾಧ್ಯತಾ ವರದಿ ನೀಡುವಂತೆ ಬಿಎಚ್‌ಇಎಲ್‌ಗೆ ಸೂಚನೆ ನೀಡಲಾಗಿತ್ತು’ ಎಂದರು.

‘ಬಿಎಚ್‌ಇಎಲ್ ಅಧಿಕಾರಿಗಳು ಆರು ತಿಂಗಳು ಅಧ್ಯಯನ ನಡೆಸಿ, ಕೋಲಾರ ಜಿಲ್ಲೆಯ ಸೋಮಾಂಬುಧಿ ಅಗ್ರಹಾರ ಕೆರೆಯಲ್ಲಿ ಪ್ರಾಯೋಗಿಕವಾಗಿ ತೇಲುವ ಸೌರ ವಿದ್ಯುತ್ ಘಟಕ ಸ್ಥಾಪಿಸಿ 100 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಇರುವ ಸಾಧ್ಯತೆಗಳ ಕುರಿತು ವರದಿ ಸಲ್ಲಿಸಿದ್ದಾರೆ’ ಎಂದರು.

ಯೋಜನೆ ಅನುಷ್ಠಾನದ ವಿವಿಧ ಮಾದರಿಗಳ ಬಗ್ಗೆ ಚರ್ಚೆ ನಡೆಸಿದ ಸಚಿವರು, ಬಿಎಚ್‌ಇಎಲ್ ನೀಡಿರುವ ವರದಿಯನ್ನು ತಾಂತ್ರಿಕವಾಗಿ ಮರು ಪರಿಶೀಲಿಸುವಂತೆ ಸೂಚಿಸಿದರು.



ಸಣ್ಣ ನೀರಾವರಿ ಇಲಾಖೆಯ ಕಾರ್ಯದರ್ಶಿ ಬಿ.ಕೆ. ಪವಿತ್ರ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಶಿವಶಂಕರ್, ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ರುದ್ರಪ್ಪಯ್ಯ ಇದ್ದರು.

124 ಕ್ಷೇತ್ರ: ಆರ್‌ಎಸ್‌ಪಿಗೆ ಜಯ

ಕಾಠ್ಮಂಡು (ಪಿಟಿಐ): ನೇಪಾಳದಲ್ಲಿ ನಡೆದ ಸಂಸತ್ ಚುನಾವಣೆಯಲ್ಲಿ ರಾಷ್ಟ್ರೀಯ ಸ್ವತಂತ್ರ ಪಕ್ಷವು (ಆರ್‌ಎಸ್‌ಪಿ) ಮೂರನೇ ಎರಡರಷ್ಟು ಬಹುಮತ ಪಡೆಯುವುದು ಬಹುತೇಕ ಖಾತ್ರಿಯಾಗಿದೆ. ಸೋಮವಾರದ ವೇಳೆಗೆ ಆರ್‌ಎಸ್‌ಪಿ 124 ಕ್ಷೇತ್ರಗಳಲ್ಲಿ ಮತ್ತು ನೇಪಾಳಿ ಕಾಂಗ್ರೆಸ್ (ಎನ್‌ಸಿ) 17 ಕ್ಷೇತ್ರಗಳಲ್ಲಿ ಜಯ ಸಾಧಿಸಿದೆ.

ಸಿಪಿಎಂ–ಯುಎಂಎಲ್ ಎಂಟು ಕ್ಷೇತ್ರಗಳಲ್ಲಿ, ನೇಪಾಳ ಕಮ್ಯುನಿಸ್ಟ್ ಪಕ್ಷ ಮತ್ತು ಶ್ರಮ ಸಂಸ್ಕೃತಿ ಪಕ್ಷವು ಕ್ರಮವಾಗಿ 7 ಹಾಗೂ ಮೂರು ಸ್ಥಾನಗಳಲ್ಲಿ, ರಾಷ್ಟ್ರೀಯ ಪ್ರಜಾತಂತ್ರ ಪಕ್ಷವು ಒಂದು ಸ್ಥಾನದಲ್ಲಿ ಗೆದ್ದಿದೆ. ಪಕ್ಷೇತರ ಅಭ್ಯರ್ಥಿಯೊಬ್ಬರು ಒಂದು ಕ್ಷೇತ್ರದಲ್ಲಿ ವಿಜಯ ಸಾಧಿಸಿದ್ದಾರೆ. 165 ಕ್ಷೇತ್ರಗಳ ಪೈಕಿ 161 ಕ್ಷೇತ್ರಗಳ ಫಲಿತಾಂಶವನ್ನು ಘೋಷಿಸಲಾಗಿದೆ. 275 ಸದಸ್ಯ ಬಲದ ಸಂಸತ್ತಿನಲ್ಲಿ ಬಹುಮತಕ್ಕೆ 138 ಕ್ಷೇತ್ರಗಳ ಅಗತ್ಯವಿದೆ.

ಆರ್‌ಎಸ್‌ಪಿ ನಾಯಕ, ಬಾಲೇಂದ್ರ ಶಾ ಅಲಿಯಾಸ್ ಬಾಲನ್ ಶಾ ಅವರು ಪ್ರಧಾನಿ ಹುದ್ದೆಗೆ ಏರುವುದು ಖಚಿತವಾಗಿದೆ.

ನೇಪಾಳದ ರಾಷ್ಟ್ರೀಯ ಸಭೆಗೆ ನೂತನವಾಗಿ ಚುನಾಯಿತರಾದ ಸದಸ್ಯರು ಸೋಮವಾರ ಪ್ರಮಾಣವಚನ ಸ್ವೀಕರಿಸಿದರು.

ಗಲ್ಫ್: ಇಂಧನ ಮೂಲಸೌಕರ್ಯ ಗುರಿ

ದುಬೈ/ ಮನಾಮ (ಎಪಿ/ ಎಎಫ್‌ಪಿ): ಬಹರೇನ್‌ನ ಪೆಟ್ರೋಲಿಯಂ ಕಾಂಪ್ಲೆಕ್ಸ್ ಒಳಗೊಂಡಂತೆ ಗಲ್ಫ್ ದೇಶಗಳ ಇಂಧನ ಮೂಲಸೌಕರ್ಯಗಳನ್ನು ಗುರಿಯಾಗಿಸಿ ಇರಾನ್ ಸೋಮವಾರ ದಾಳಿ ನಡೆಸಿದೆ. ಮೊಜ್ತಬಾ ಖಮೇನಿ ಅವರು ಪರಮೋಚ್ಚ ನಾಯಕರಾಗಿ ನೇಮಕಗೊಂಡ ಬೆನ್ನಲ್ಲೇ ಇರಾನ್, ದಾಳಿಯನ್ನು ಇನ್ನಷ್ಟು ತೀವ್ರಗೊಳಿಸಿದೆ.

ಇಸ್ರೇಲ್ ಸೇನೆಯು ಟೆಹರಾನ್‌ನ ತೈಲ ಸಂಗ್ರಹಾಗಾರಗಳನ್ನು ಗುರಿಯಾಗಿಸಿ ದಾಳಿ ನಡೆಸಿದ್ದಕ್ಕೆ ಪ್ರತಿಯಾಗಿ ಇರಾನ್, ಗಲ್ಫ್ ದೇಶಗಳ ಇಂಧನ ಮೂಲ ಸೌಕರ್ಯಗಳನ್ನು ಗುರಿಯಾಗಿಸುತ್ತಿದೆ.

ಮತ್ತೊಂದೆಡೆ ಇಸ್ರೇಲ್–ಅಮೆರಿಕ ಸೇನೆಗಳು ಇರಾನ್ ಮೇಲಿನ ದಾಳಿಯನ್ನು ಮುಂದುವರಿಸಿವೆ. ಟೆಹರಾನ್, ಇಸ್ಫಹಾನ್ ಮತ್ತು ದಕ್ಷಿಣ ಇರಾನ್‌ನ ವಿವಿಧ ಗುರಿಗಳ ಮೇಲೆ ದಾಳಿ ನಡೆಸಿರುವುದಾಗಿ ಇಸ್ರೇಲ್ ಸೇನೆ ಹೇಳಿದೆ. ಸೋಮವಾರ ಬೆಳಗಿನ ಜಾವ ಟೆಹರಾನ್‌ನಲ್ಲಿ ಭಾರಿ ಸ್ಫೋಟದ ಸದ್ದು ಕೇಳಿಬಂದಿದೆ.

ಬಹರೇನ್‌ನ ಅತಿದೊಡ್ಡ ‘ಅಲ್ ಮಾಮೀರ್’ ತೈಲ ಸಂಸ್ಕರಣಾ ಘಟಕದಲ್ಲಿ ಕ್ಷಿಪಣಿ ದಾಳಿಯಿಂದ ಬೆಂಕಿ ಕಾಣಿಸಿಕೊಂಡಿದ್ದು, ಹಾನಿ ಉಂಟಾಗಿದೆ.

ದೇಶದ ನೈರುತ್ಯ ಭಾಗದಲ್ಲಿರುವ ಶೈಬಾ ತೈಲ ಉತ್ಪಾದನಾ ಘಟಕವನ್ನು ಗುರಿಯಾಗಿಸಿ ಇರಾನ್ ನಡೆಸಿದ ಡ್ರೋನ್ ದಾಳಿಯನ್ನು ವಿಫಲಗೊಳಿಸಲಾಗಿದೆ ಎಂದು ಸೌದಿ ಅರೇಬಿಯಾದ ರಕ್ಷಣಾ ಸಚಿವಾಲಯ ತಿಳಿಸಿದೆ. ದೋಹಾ ಹಾಗೂ ಮನಾಮದಲ್ಲೂ ಸ್ಫೋಟದ ಸದ್ದು ಕೇಳಿಬಂದಿವೆ.

ಇಸ್ರೇಲ್‌ನಲ್ಲಿ ಒಬ್ಬ ಬಲಿ: ಇರಾನ್ ಸೇನೆಯು ಇಸ್ರೇಲ್ ಮೇಲಿನ ಪ್ರತಿದಾಳಿಯನ್ನು ಮುಂದುವರಿಸಿದೆ. ಮಧ್ಯ ಇಸ್ರೇಲ್‌ನ ಹಲವು ತಾಣಗಳನ್ನು ಗುರಿಯಾಗಿಸಿ ಕ್ಷಿಪಣಿಗಳನ್ನು ಹಾರಿಸಿದೆ. ಯೆಹೂದ್ ಪಟ್ಟಣದಲ್ಲಿ ಕಟ್ಟಡವೊಂದರ ಮೇಲೆ ಕ್ಷಿಪಣಿ ಅಪ್ಪಳಿಸಿ ಒಬ್ಬ ಮೃತಪಟ್ಟಿದ್ದು, ಇನ್ನೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ರಕ್ಷಣಾ ಕಾರ್ಯಕರ್ತರು ತಿಳಿಸಿದ್ದಾರೆ.

ಅಡಿಕೆ ಧಾರಣೆ

ಕುಮಟಾ	
ಚಾಲಿ	46089-49699
ಚಿಪ್ಪು	30099-36699
ಕೋಕ	15089-32569
ಫ್ಯಾಕ್ಟರಿ	10009-28701
ಹೊಸಚಾಲಿ	40099-47509
ಪುತ್ತೂರು	
ಕೋಕ	20000-35000
ಹೊಸತು	26000-46500
ಹಳತು	50000-53000
ಸಾಗರ	
ಬಿಳಿಗೋಟು	12599-35299
ಚಾಲಿ	23809-43800
ಕೋಕ	14989-33199
ಕೆಂಪುಗೋಟು	20999-40399
ರಾಶಿ	43899-58999
ಸಿಪ್ಪೆಗೋಟು	7869-22789
ಶಿವಮೊಗ್ಗ	
ಬೆಟ್ಟೆ	48100-62300
ಗೊರಬಲು	19001-38399
ರಾಶಿ	42199-55899
ಸರಕು	56399-91896
ಸಿದ್ದಾಪುರ	
ಬಿಳಿಗೋಟು	27899-38800
ಚಾಲಿ	40000-48099
ಕೋಕ	23899-33899
ಕೆಂಪುಗೋಟು	25119-33399
ರಾಶಿ	50099-53299
ತಟ್ಟಿಬೆಟ್ಟೆ	36689-42099
ಶಿರಸಿ	
ಬೆಟ್ಟೆ	40005-51099
ಬಿಳಿಗೋಟು	25699-39681
ಚಾಲಿ	43099-47599
ಕೆಂಪುಗೋಟು	22118-38618
ರಾಶಿ	49210-53811
ಯಲ್ಲಾಪುರ	
ಆಪಿ	60509-63599
ಬಿಳಿಗೋಟು	18012-41009
ಕೋಕ	13000-32699
ಹಳೆಚಾಲಿ	49211-49878
ಹೊಸಚಾಲಿ	39109-47599
ಕೆಂಪುಗೋಟು	16099-37415
ರಾಶಿ	40016-58799
ತಟ್ಟಿಬೆಟ್ಟೆ	36429-52119

ಮೊಜ್ತಬಾ ಪರಮೋಚ್ಚ ನಾಯಕ

ಒಂದನೇ ಪುಟದಿಂದ...

ಇರಾನ್‌ನ ಮುಂದಿನ ನಾಯಕನ ಆಯ್ಕೆಯಲ್ಲಿ ತನ್ನ ಪಾತ್ರವೂ ಇರಲಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈಚೆಗೆ ಹೇಳಿದ್ದರು. ‘ನಮ್ಮ ಅನುಮೋದನೆ ಪಡೆಯದೆ ನೇಮಕವಾಗುವ ನಾಯಕ ಹೆಚ್ಚು ಕಾಲ ಉಳಿಯುವುದಿಲ್ಲ’ ಎಂದೂ ಎಚ್ಚರಿಸಿದ್ದರು.

‘ಆಯತೊಲ್ಲಾ ಅಲಿ ಖಮೇನಿ ಅವರ ಉತ್ತರಾಧಿಕಾರಿಯಾಗಿ ಯಾರೇ ನೇಮಕಗೊಂಡರೂ ಅವರನ್ನು ಹತ್ಯೆ ಮಾಡುತ್ತೇವೆ’ ಎಂದು ಇಸ್ರೇಲ್ ರಕ್ಷಣಾ ಸಚಿವರು ಕಳೆದ ವಾರ ಹೇಳಿದ್ದರು.

> **ಮೊಜ್ತಬಾ ಖಮೇನಿ ಅವರನ್ನು ಇರಾನ್‌ನ ಪರಮೋಚ್ಚ ನಾಯಕನನ್ನಾಗಿ ನೇಮಕ ಮಾಡುವ ಮೂಲಕ ದೊಡ್ಡ ತಪ್ಪು ಮಾಡಲಾಗಿದೆ**
> **ಡೊನಾಲ್ಡ್ ಟ್ರಂಪ್,** ಅಮೆರಿಕ ಅಧ್ಯಕ್ಷ

ಪುಟಿನ್ ಅಭಿನಂದನೆ

ಮಾಸ್ಕೊ/ ಬೀಜಿಂಗ್: ಇರಾನ್‌ನ ನೂತನ ನಾಯಕರಾಗಿ ನೇಮಕಗೊಂಡ ಮೊಜ್ತಬಾ ಖಮೇನಿ ಅವರನ್ನು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಸೋಮವಾರ ಅಭಿನಂದಿಸಿದ್ದಾರೆ.

‘ಮೊಜ್ತಬಾ ಅವರು ತಮ್ಮ ತಂದೆಯ ಕೆಲಸವನ್ನು ‘ಘನತೆಯಿಂದ’ ಮುಂದುವರಿಸುತ್ತಾರೆ ಮತ್ತು ಇದೀಗ ಎದುರಾಗಿರುವ ಸಂದಿಗ್ಧ ಪರಿಸ್ಥಿತಿಯ ನಡುವೆಯೂ ಇರಾನಿನ ಜನರನ್ನು ಒಂದುಗೂಡಿಸುತ್ತಾರೆ ಎಂಬ ವಿಶ್ವಾಸವಿದೆ’ ಎಂದು ಪುಟಿನ್ ಹೇಳಿದ್ದಾಗಿ ಅವರ ಆಡಳಿತ ಕಚೇರಿಯ ಪ್ರಕಟಣೆ ತಿಳಿಸಿದೆ.

ಆಂತರಿಕ ವಿಷಯ–ಚೀನಾ: ‘ಮೊಜ್ತಬಾ ಅವರನ್ನು ಪರಮೋಚ್ಚ ನಾಯಕರಾಗಿ ನೇಮಕ ಮಾಡಿರುವುದು ಇರಾನ್‌ನ ಆಂತರಿಕ ವಿಷಯವಾಗಿದ್ದು, ಯಾವುದೇ ದೇಶ ಅವರನ್ನು ಗುರಿಯಾಗಿಸುವುದನ್ನು ನಾವು ವಿರೋಧಿಸುತ್ತೇವೆ’ ಎಂದು ಚೀನಾ ಹೇಳಿದೆ.

‘ಇರಾನ್ ತನ್ನ ಸಂವಿಧಾನದ ಪ್ರಕಾರ ಮೊಜ್ತಬಾ ಅವರನ್ನು ನೇಮಿಸಿದೆ. ಇರಾನ್‌ನ ಸಾರ್ವಭೌಮತ್ವ, ಭದ್ರತೆ, ಪ್ರಾದೇಶಿಕ ಸಮಗ್ರತೆಯನ್ನು ಗೌರವಿಸಬೇಕು’ ಎಂದು ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರರು ತಿಳಿಸಿದ್ದಾರೆ.

ಮಾರ್ಚ್ 18ಕ್ಕೇ ಧುರಂಧರ್–2


ಗರಿಷ್ಠ ಟಿಕೆಟ್ ದರ ₹2,400

ರಣ್‌ವೀರ್ ಸಿಂಗ್

ರಣ್‌ವೀರ್ ಸಿಂಗ್ ನಟನೆಯ 'ಧುರಂಧರ್‌–ದಿ ರಿವೇಂಜ್' ಸಿನಿಮಾ ಮಾರ್ಚ್ 19ರಂದು ತೆರೆಕಾಣುತ್ತಿದ್ದು, ಮಾರ್ಚ್ 18ಕ್ಕೆ ಸಿನಿಮಾದ ಪ್ರೀಮಿಯರ್ ಪ್ರದರ್ಶನ ಆರಂಭವಾಗಲಿವೆ.

ಈ ಸಿನಿಮಾದ ಅವಧಿ 3 ಗಂಟೆ 55 ನಿಮಿಷವಿದ್ದು, ಬೆಂಗಳೂರಿನಲ್ಲೇ ಮಾರ್ಚ್ 18ರಂದು 45ಕ್ಕೂ ಅಧಿಕ ಮಲ್ಟಿ-ಪ್ಲೆಕ್ಸ್‌ಗಳಲ್ಲಿ ಸಂಜೆ 5ರಿಂದಲೇ ಶೋಗಳು ಆರಂಭವಾಗಲಿವೆ. ಟಿಕೆಟ್ ದರಗಳು ಕನಿಷ್ಠ ₹500ರಿಂದ ಗರಿಷ್ಠ ₹2,400 ನಿಗದಿಪಡಿಸಲಾಗಿದೆ. ಕಳೆದ ಶನಿವಾರ (ಮಾರ್ಚ್ 7) ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು, ಸೀಕ್ವೆಲ್ ಮೇಲೆ ಸಾಕಷ್ಟು ನಿರೀಕ್ಷೆ ಹುಟ್ಟಿಸಿದೆ.

ಸಿನಿಮಾದಲ್ಲಿ 'ಜಸ್ಕಿರತ್ ಸಿಂಗ್ ರಂಗಿ' ಹಾಗೂ 'ಹಮ್ಜ ಅಲಿ ಮಜಾರಿ' ಎಂಬ ಪಾತ್ರದಲ್ಲಿ ರಣ್‌ವೀರ್ ಕಾಣಿಸಿಕೊಳ್ಳುತ್ತಿದ್ದು, ಲಿಯಾರಿ ಎನ್ನುವ ನಗರದಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸುವಲ್ಲಿಂದ ಕಥೆ ಆರಂಭವಾಗಲಿದೆ. 2025ರ ಡಿಸೆಂಬರ್‌5ರಂದು ತೆರೆಕಂಡ 'ಧುರಂಧರ್'ನ ಮುಂದುವರಿದ ಕಥೆ ಇದಾಗಿದೆ. ಮೊದಲನೇ ಭಾಗ ಬಾಕ್ಸ್ ಆಫೀಸ್‌ನಲ್ಲಿ ₹1000 ಕೋಟಿಗೂ ಅಧಿಕ ಗಳಿಸಿತ್ತು. ಚಿತ್ರದಲ್ಲಿ ಆರ್.ಮಾಧವನ್, ಅರ್ಜುನ್ ರಾಮ್‌ಪಾಲ್, ಸಂಜಯ್ ದತ್ ನಟಿಸಿದ್ದಾರೆ. ಸಿನಿಮಾವನ್ನು ಬಿ62 ಸ್ಟುಡಿಯೊಸ್ ನಿರ್ಮಾಣ ಮಾಡಿದ್ದು, ಹಿಂದಿ, ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ತೆರೆಕಾಣುತ್ತಿದೆ.

ಜೀ5ನಲ್ಲಿ ಲ್ಯಾಂಡ್‌ಲಾರ್ಡ್


ದುನಿಯಾ ವಿಜಯ್

ಕಳೆದ ಜ.23ರಂದು ತೆರೆಕಂಡ ಜಡೇಶ ಕೆ. ಹಂಪಿ ನಿರ್ದೇಶನದ, 'ದುನಿಯಾ' ವಿಜಯ್ ನಟನೆಯ 'ಲ್ಯಾಂಡ್‌ಲಾರ್ಡ್' ಸಿನಿಮಾ ಶೀಘ್ರದಲ್ಲೇ ಜೀ5ನಲ್ಲಿ ಸ್ಟ್ರೀಮ್ ಆಗಲಿದೆ.

ಜಡೇಶ್ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಹಾಗೂ 'ಚೋಮನ ದುಡಿ' ಕೃತಿಗಳ ಸ್ಫೂರ್ತಿಯಿಂದ ಈ ಸಿನಿಮಾ ಕಥೆ ಹೆಣೆದಿದ್ದು, ಮಾಡಿದ ಕೂಲಿಗೆ ಕಾಸು, ಅಸಮಾನತೆ, ದಬ್ಬಾಳಿಕೆ, ಕ್ರಾಂತಿ–ಹೋರಾಟದ ಕಥೆ ಹೊಂದಿದೆ. ಇದು ವಿಜಯ್ ಅವರ 29ನೇ ಸಿನಿಮಾವಾಗಿದ್ದು, ಖಳನಾಯಕನಾಗಿ ರಾಜ್ ಬಿ.ಶೆಟ್ಟಿ ಬಣ್ಣಹಚ್ಚಿದ್ದಾರೆ. ಹಳ್ಳಿ ಹಿನ್ನೆಲೆಯ ಈ ಕಥೆ 80–90ರ ದಶಕದಲ್ಲಿ ಚಿತ್ರೀಕರಣಗೊಂಡಿದ್ದು, ಸಂಭಾಷಣೆಗಳು ಕೋಲಾರ ಭಾಗದ ಕನ್ನಡದಲ್ಲಿವೆ. ನಾಯಕಿಯಾಗಿ ರಚಿತಾ ರಾಮ್ ನಟಿಸಿದ್ದು, ಉಮಾಶ್ರೀ, ರಿತನ್ಯಾ, ಶಿಶಿರ್ ಬೈಕಾಡಿ, ರಾಕೇಶ್ ಅಡಿಗ, ಅಚ್ಯುತ್ ಕುಮಾರ್, ಮಿತ್ರ, ಅಭಿಷೇಕ್ ದಾಸ್ ಹೀಗೆ ದೊಡ್ಡ ತಾರಾಬಳಗವೇ ಸಿನಿಮಾದಲ್ಲಿದೆ. ಸಾರಥಿ ಫಿಲಂಸ್ ಲಾಂಛನದಲ್ಲಿ ಕೆ.ವಿ. ಸತ್ಯಪ್ರಕಾಶ್ ಹಾಗೂ ಹೇಮಂತ್ ಗೌಡ ಕೆ.ಎಸ್ ಈ ಸಿನಿಮಾ ನಿರ್ಮಿಸಿದ್ದಾರೆ.

ಜುಲೈ 10ಕ್ಕೆ 'ಆಲ್ಫಾ' ತೆರೆಗೆ


ಆಲಿಯಾ ಭಟ್

ಯಶ್ ರಾಜ್ ಫಿಲ್ಮ್ಸ್ ಸ್ಪೈ ಯೂನಿವರ್ಸ್‌ನ ಭಾಗವಾದ, ಆಲಿಯಾ ಭಟ್ ಹಾಗೂ ಶಾರ್ವರಿ ಮುಖ್ಯಭೂಮಿಕೆಯಲ್ಲಿರುವ 'ಆಲ್ಫಾ' ಸಿನಿಮಾ ಜುಲೈ 10ರಂದು ಬಿಡುಗಡೆಯಾಗಲಿದೆ.

'ದಿ ರೈಲ್ವೆ ಮೆನ್' ನಿರ್ದೇಶಿಸಿದ್ದ ಶಿವ್ ರವೈಲ್ ಈ ಸಿನಿಮಾವನ್ನು ನಿರ್ದೇಶಿಸಿದ್ದಾರೆ. ಸಿನಿಮಾದಲ್ಲಿ ಬಾಬಿ ಡಿಯೋಲ್, ಅನಿಲ್ ಕಪೂರ್ ಪ್ರಮುಖ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ. 2025ರ ಡಿಸೆಂಬರ್‌ನಲ್ಲೇ ತೆರೆಕಾಣಬೇಕಿದ್ದ ಈ ಸಿನಿಮಾ ಮುಂದೂಡಿಕೆಯಾಗಿ ಏ.17ಕ್ಕೆ ನಿಗದಿಯಾಗಿತ್ತು. ಇದೀಗ ಜುಲೈನಲ್ಲಿ ಸಿನಿಮಾ ಬಿಡುಗಡೆಗೊಳಿಸುವುದಾಗಿ ಚಿತ್ರತಂಡ ತಿಳಿಸಿದೆ.

ಈಗಾಗಲೇ ತನ್ನ ಸ್ಪೈ ಯೂನಿವರ್ಸ್‌ನಲ್ಲಿ ಶಾರುಖ್ ಖಾನ್ ನಟನೆಯ 'ಪಠಾಣ್', ಸಲ್ಮಾನ್ ಖಾನ್ ನಟನೆಯ 'ಟೈಗರ್' ಹಾಗೂ ಹೃತಿಕ್ ರೋಷನ್ ನಟನೆಯ 'ವಾರ್' ಸಿನಿಮಾಗಳನ್ನು ಯಶ್ ರಾಜ್ ಫಿಲ್ಮ್ಸ್ (ವೈಆರ್‌ಎಫ್) ನಿರ್ಮಿಸಿದೆ. 2012ರಲ್ಲಿ 'ಏಕ್ ಥಾ ಟೈಗರ್' ಸಿನಿಮಾ ಮೂಲಕ ಈ ಮಾದರಿಯ ಸಿನಿಮಾಗಳನ್ನು ವೈಆರ್‌ಎಫ್ ಪ್ರಾರಂಭಿಸಿತ್ತು. 'ಆಲ್ಫಾ' ಜೊತೆಗೆ 'ಪಠಾಣ್‌–2' ಹಾಗೂ ಸಲ್ಮಾನ್‌–ಶಾರುಖ್ ಜೊತೆಯಾಗಿರಲಿರುವ 'ಟೈಗರ್ ವರ್ಸಸ್ ಪಠಾಣ್' ಸಿನಿಮಾದ ನಿರ್ಮಾಣಕ್ಕೂ ವೈಆರ್‌ಫ್ ಮುಂದಾಗಿದೆ ಎನ್ನಲಾಗಿದೆ.

ಜೀವನ ಕೊಟ್ಟ 'ಲವ್ ಮಾಕ್ಟೇಲ್'


ಅಮೃತಾ ಅಯ್ಯಂಗಾರ್

'ಲವ್ ಮಾಕ್ಟೇಲ್' ಸಿನಿಮಾದಲ್ಲಿ 'ಜೋ' ಎಂಬ ಪಾತ್ರದ ಮೂಲಕ ಪ್ರೇಕ್ಷಕರನ್ನು ತಲುಪಿದ ಅಮೃತಾ ಅಯ್ಯಂಗಾರ್, ಸದ್ಯ ಚಂದನವನದಲ್ಲಿ ಸಾಲು ಸಾಲು ಸಿನಿಮಾಗಳನ್ನು ಮಾಡುತ್ತಿದ್ದಾರೆ.

ಡಾರ್ಲಿಂಗ್ ಕೃಷ್ಣ ನಿರ್ದೇಶಿಸಿ, ನಾಯಕನಾಗಿ ನಟಿಸಿರುವ 'ಲವ್ ಮಾಕ್ಟೇಲ್‌–3' ಸಿನಿಮಾ ಮಾರ್ಚ್ 19ರಂದು ತೆರೆಕಾಣುತ್ತಿದ್ದು, ಇತ್ತೀಚೆಗೆ ನಡೆದ ಟ್ರೇಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ತಮ್ಮ ಮೊದಲ ಸಿನಿಮಾದ ಅನುಭವವನ್ನು ಅಮೃತಾ ಹಂಚಿಕೊಂಡರು. 'ನನ್ನ ಸಿನಿಮಾ ಜೀವನ ಶುರುವಾಗಿದ್ದೇ 'ಲವ್ ಮಾಕ್ಟೇಲ್'ನಿಂದ. ನನಗೂ ಜೀವನ ಕೊಟ್ಟ ಸಿನಿಮಾವಿದು. ನನ್ನ ಸಿನಿ ಪಯಣದಲ್ಲಿ ಇಲ್ಲಿಯವರೆಗೂ ಹದಿನೇಳು ಸಿನಿಮಾ ಮಾಡಿದ್ದೇನೆ. ಆದರೂ ಜನ ನನ್ನನ್ನು ಇಂದಿಗೂ ಗುರುತಿಸುವುದು ಈ 'ಜೋ' ಎಂಬ ಪಾತ್ರದಿಂದ. ಸಿನಿಮಾದ ಮೂರನೇ ಭಾಗ ಬಹಳ ಭಾವನಾತ್ಮಕವಾಗಿದೆ. ಈ ಸಿನಿಮಾ ಸರಣಿಯೇ ನಮಗೊಂದು ಭಾವನೆ. 'ಲವ್ ಮಾಕ್ಟೇಲ್' ಎಂದಿಗೂ ನನ್ನ ನೆಚ್ಚಿನ ಸಿನಿಮಾವಾಗಿರಲಿದೆ' ಎಂದರು.

'ಲವ್ ಮಾಕ್ಟೇಲ್‌–3' ಬಿಡುಗಡೆಗೆ ಎದುರು ನೋಡುತ್ತಿರುವ ಅಮೃತಾ, ಪ್ರಮೋದ್ ನಟನೆಯ 'ಹಲ್ಕಾ ಡಾನ್' ಹಾಗೂ ಆರ್.ಚಂದ್ರು ನಿರ್ಮಾಣದ, ರಾಜ್‌ಮೋಹನ್ ನಿರ್ದೇಶನದ 'ಫಾದರ್' ಸಿನಿಮಾದಲ್ಲೂ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ.

ಲೋಕಸಭೆಯಲ್ಲಿ ವಿಪಕ್ಷಗಳ ಪ್ರತಿಭಟನೆ

ಪಶ್ಚಿಮ ಏಷ್ಯಾ ಸಂಘರ್ಷ ಕುರಿತ ಚರ್ಚೆಗೆ ಆಗ್ರಹ: ಸದನ ಪದೇ ಪದೇ ಮುಂದೂಡಿಕೆ

ಲೋಕಸಭಾ ಅಧಿವೇಶನ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದ ಸಂಘರ್ಷ ಮತ್ತು ಪರಿಸ್ಥಿತಿಗಳ ಕುರಿತು ವ್ಯಾಪಕ ಚರ್ಚೆಗೆ ಆಗ್ರಹಿಸಿ ವಿರೋಧ ಪಕ್ಷಗಳು ಸೋಮವಾರ ಲೋಕಸಭೆಯಲ್ಲಿ ಪ್ರತಿಭಟಿಸಿದ ಪರಿಣಾಮ ಕಲಾಪ ಪದೇ ಪದೇ ಮುಂದೂಡಿಕೆಯಾಯಿತು.

ಈ ಸಂಘರ್ಷದಿಂದ ಭಾರತದ ಆರ್ಥಿಕತೆ, ಇಂಧನ ಕ್ಷೇತ್ರದ ಮೇಲೆ ಆಗುತ್ತಿರುವ ಪರಿಣಾಮಗಳು ಮತ್ತು ಕೊಲ್ಲಿ ದೇಶಗಳಲ್ಲಿ ಸಿಲುಕಿರುವ ಭಾರತೀಯರ ಸುರಕ್ಷತೆ ಬಗ್ಗೆ ಚರ್ಚೆಯಾಗಬೇಕು ಎಂದು ವಿಪಕ್ಷಗಳ ಸದಸ್ಯರು ಒತ್ತಾಯಿಸಿದರು.

ಈ ಕುರಿತು ಚರ್ಚೆಗೆ ಅವಕಾಶ ನೀಡಬೇಕು ಎಂದು ಆಗ್ರಹಿಸಿದ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ದೇಶದ ವಿದೇಶಾಂಗ ನೀತಿಯ ಬಗ್ಗೆಯೂ ಸರ್ಕಾರ ಸ್ಪಷ್ಟನೆ ನೀಡಬೇಕು ಎಂದು ಆಗ್ರಹಿಸಿದರು.

'ಭಾರತವು ಅಮೆರಿಕದ ಒತ್ತಡಕ್ಕೆ ಸಿಲುಕಿದೆ. ಅಮೆರಿಕವು ಭಾರತಕ್ಕೆ ನಿರ್ದೇಶನಗಳನ್ನು ನೀಡುತ್ತಿದೆ. ಹೀಗಾಗಿ ದೇಶದ ವಿದೇಶಾಂಗ ನೀತಿಯ ಬಗ್ಗೆ ಸರ್ಕಾರ ಸ್ಪಷ್ಟವಾಗಿ ಹೇಳಬೇಕು' ಎಂದರು.

ಅಲ್ಲದೆ ಕೊಲ್ಲಿ ದೇಶಗಳಲ್ಲಿ ಸಿಲುಕಿರುವ ಅಸಂಖ್ಯಾತ ಭಾರತೀಯರನ್ನು ಸುರಕ್ಷಿತವಾಗಿ ಭಾರತಕ್ಕೆ ಕರೆತರಲು ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ ಎಂಬುದರ ಕುರಿತು ವಿವರಿಸಬೇಕು ಎಂದು ಒತ್ತಾಯಿಸಿದರು.

ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಈ ಕುರಿತು ಮಾತನಾಡಲು ಮುಂದಾಗುತ್ತಿದ್ದಂತೆ, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ ವಿಪಕ್ಷಗಳ ಸದಸ್ಯರು ಪಶ್ಚಿಮ ಏಷ್ಯಾದ ಬಿಕ್ಕಟ್ಟಿನ ಕುರಿತು ಪೂರ್ಣ ಪ್ರಮಾಣದ ಚರ್ಚೆಗೆ ಪಟ್ಟುಹಿಡಿದರು.

ಎರಡು ವಿಷಯದ ಚರ್ಚೆ ಹೇಗೆ?: ಸ್ಪೀಕರ್ ಪೀಠದಲ್ಲಿದ್ದ ಜಗದಾಂಬಿಕಾ ಪಾಲ್ ಅವರು, 'ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧದ ಅವಿಶ್ವಾಸ ನಿರ್ಣಯ ಕುರಿತ ವಿಷಯ ಸದನದ ಚರ್ಚೆಯ ಕಾರ್ಯಸೂಚಿಯಲ್ಲಿದೆ. ಇದೀಗ ವಿಪಕ್ಷಗಳು ಪಶ್ಚಿಮ ಏಷ್ಯಾ ಕುರಿತು ಚರ್ಚಿಸಲು ಆಗ್ರಹಿಸುತ್ತಿವೆ. ಒಂದೇ ದಿನದಲ್ಲಿ ಎರಡು ವಿಷಯಗಳ ಬಗ್ಗೆ ಚರ್ಚಿಸಲು ವಿಪಕ್ಷಗಳು ಹೇಗೆ ಬಯಸುತ್ತವೆ' ಎಂದು ಆಶ್ಚರ್ಯ ವ್ಯಕ್ತಪಡಿಸಿದರು.

'ವಿಪಕ್ಷಗಳ ಸದಸ್ಯರು ಕಲಾಪ ನಡೆಯದಂತೆ ಗದ್ದಲ ನಡೆಸುವುದರ ಮೂಲಕ ತೆರಿಗೆದಾರರ ಹಣವನ್ನು ಪೋಲು ಮಾಡುತ್ತಿದ್ದಾರೆ. ಸದನದ ದಿನವೊಂದರ ಕಲಾಪಕ್ಕೆ ಸುಮಾರು ₹9 ಕೋಟಿ ಖರ್ಚಾಗುತ್ತದೆ. ವಿಪಕ್ಷಗಳ ಸದಸ್ಯರದ್ದು ಅಪ್ರಬುದ್ಧ ಮತ್ತು ಬೇಜವಾಬ್ದಾರಿ ನಡೆಯಾಗಿದೆ' ಎಂದು ಪಾಲ್ ಇದೇ ವೇಳೆ ಆಕ್ರೋಶ ವ್ಯಕ್ತಪಡಿಸಿದರು.

ವಿಪಕ್ಷಗಳ ವಿರುದ್ಧ ಹರಿಹಾಯ್ದ ಸರ್ಕಾರ: ಇದೇ ವೇಳೆ ಪ್ರತಿಪಕ್ಷಗಳ ವಿರುದ್ಧ ಹರಿಹಾಯ್ದಿರುವ ಸರ್ಕಾರ, ವಿರೋಧ ಪಕ್ಷದ ಸದಸ್ಯರು ಸದನದ ಮೂಲಭೂತ ನೈತಿಕತೆ ಪಾಲಿಸುತ್ತಿಲ್ಲ ಎಂದು ಆರೋಪಿಸಿದೆ.

ಬಿರ್ಲಾ ಅವರನ್ನು ಸ್ಪೀಕರ್ ಸ್ಥಾನದಿಂದ ಕೆಳಗಿಳಿಸಬೇಕೆಂಬ ವಿಷಯ ಕುರಿತು ಚರ್ಚಿಸಲು ಸರ್ಕಾರ ಸಿದ್ಧವಿದೆ. ಆದರೆ ವಿಪಕ್ಷಗಳು ಕಲಾಪಕ್ಕೆ ಅಡ್ಡಿಪಡಿಸುತ್ತಿವೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಹೇಳಿದರು.

ವಿರೋಧ ಪಕ್ಷಗಳ ಸದಸ್ಯರ ಘೋಷಣೆ, ಪ್ರತಿಭಟನೆ, ಗದ್ದಲಗಳ ಕಾರಣ ಓಂ ಬಿರ್ಲಾ ವಿರುದ್ಧದ ಅವಿಶ್ವಾಸ ನಿರ್ಣಯ ಕುರಿತ ಚರ್ಚೆ ಸೋಮವಾರ ಆರಂಭವಾಗಲಿಲ್ಲ.

ಪ್ರಜೆಗಳ ಸುರಕ್ಷತೆ, ರಾಷ್ಟ್ರೀಯ ಹಿತಾಸಕ್ತಿ ಮುಖ್ಯ: ಜೈಶಂಕರ್

ಪಶ್ಚಿಮ ಏಷ್ಯಾದ ಸಂಘರ್ಷದಲ್ಲಿ ಭಾರತೀಯ ಪ್ರಜೆಗಳ ಸುರಕ್ಷತೆ ಮತ್ತು ಇಂಧನ ಭದ್ರತೆ ಹಾಗೂ ವ್ಯಾಪಾರ ಕ್ಷೇತ್ರದಲ್ಲಿ ರಾಷ್ಟ್ರೀಯ ಹಿತಾಸಕ್ತಿ ಕಾಯ್ದುಕೊಳ್ಳುವುದೇ ಸರ್ಕಾರದ ಆದ್ಯತೆಯಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಸೋಮವಾರ ಪ್ರತಿಪಾದಿಸಿದರು.

ಇರಾನ್ ವಿರುದ್ಧ ಅಮೆರಿಕ ಮತ್ತು ಇಸ್ರೇಲ್ ನಡೆಸುತ್ತಿರುವ ಸೇನಾ ದಾಳಿ ಮತ್ತು ಅದಕ್ಕೆ ಪ್ರತಿಯಾಗಿ ಇರಾನ್ ನಡೆಸುತ್ತಿರುವ ಪ್ರತಿದಾಳಿಯಿಂದ ಉಂಟಾಗಿರುವ ಸಂಘರ್ಷದ ಕುರಿತು ಅವರು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಅವರು ಹೇಳಿಕೆ ನೀಡಿದರು.

ಸಂಘರ್ಷ ಶಮನಗೊಳಿಸಲು ಸಂವಾದ ಮತ್ತು ರಾಜತಾಂತ್ರಿಕ ಮಾರ್ಗ ಅನುಸರಿಸುವುದು ಸೂಕ್ತ ಎಂಬುದು ಭಾರತದ ಪ್ರತಿಪಾದನೆಯಾಗಿದೆ ಎಂದ ಅವರು, ಎಲ್ಲ ದೇಶಗಳ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಗೌರವಿಸಬೇಕು ಎಂದು ಒತ್ತಿ ಹೇಳಿದರು.

ತವರಿಗೆ ಮರಳಿದ 67,000 ಜನ: ಹೆಚ್ಚುವರಿ ವಾಣಿಜ್ಯ ವಿಮಾನಗಳು ಮತ್ತು ಇತರ ಪ್ರಯಾಣ ವ್ಯವಸ್ಥೆಗಳ ಮೂಲಕ ಈ ಪ್ರದೇಶದಿಂದ ಸುಮಾರು 67,000 ಭಾರತೀಯ ಪ್ರಜೆಗಳನ್ನು ತವರಿಗೆ ಮರಳಿದ್ದಾರೆ ಎಂದು ಅವರು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಯುಎಇ, ಕತಾರ್, ಸೌದಿ ಅರೇಬಿಯಾ, ಕುವೈತ್, ಬಹರೇನ್, ಒಮಾನ್, ಜೋರ್ಡಾನ್ ಮತ್ತು ಇಸ್ರೇಲ್ ನಾಯಕರ ಜತೆ ಮಾತನಾಡಿದ್ದಾರೆ. ಭಾರತೀಯ ಸಮುದಾಯವರ ಸುರಕ್ಷತೆಯನ್ನು ಅವರು ಖಚಿತಪಡಿಸಿಕೊಂಡಿದ್ದಾರೆ ಎಂದು ಸಚಿವರು ವಿವರಿಸಿದರು.

'ಭಾರತ ಸೂಕ್ಷ್ಮವಾಗಿ ಗಮನಿಸುತ್ತಿದೆ'

ಪಶ್ಚಿಮ ಏಷ್ಯಾದ ಸಂಘರ್ಷವನ್ನು ಭಾರತ ಸರ್ಕಾರ ಮೊದಲಿನಿಂದಲೂ ಸೂಕ್ಷ್ಮವಾಗಿ ಗಮನಿಸುತ್ತಿದೆ. ಬಿಕ್ಕಟ್ಟು ಕುರಿತು ಆರಂಭದಲ್ಲಿಯೇ ತೀವ್ರ ಕಳವಳ ವ್ಯಕ್ತಪಡಿಸಿದೆ ಎಂದು ಅವರು ತಿಳಿಸಿದರು.

ಕೊಲ್ಲಿ ರಾಷ್ಟ್ರಗಳಲ್ಲಿ ಸುಮಾರು ಒಂದು ಕೋಟಿ ಭಾರತೀಯರು ವಾಸಿಸುತ್ತಿದ್ದಾರೆ. ಇರಾನ್‌ನಲ್ಲಿ ಸಾವಿರಾರು ಭಾರತೀಯರು ಅಧ್ಯಯನ ಮತ್ತು ಉದ್ಯೋಗದಲ್ಲಿದ್ದಾರೆ ಎಂದ ಅವರು, ಕೊಲ್ಲಿ ರಾಷ್ಟ್ರಗಳು ಭಾರತದ ಇಂಧನ ಭದ್ರತೆ ಮತ್ತು ವ್ಯಾಪಾರಕ್ಕೂ ಮಹತ್ವದ ಕೇಂದ್ರಗಳಾಗಿವೆ. ಈ ದೇಶಗಳೊಂದಿಗೆ ಸುಮಾರು ₹18.46 ಲಕ್ಷ ಕೋಟಿ (200 ಬಿಲಿಯನ್ ಡಾಲರ್) ಮೌಲ್ಯದ ವಾಣಿಜ್ಯ ವ್ಯವಹಾರವನ್ನು ಭಾರತ ಹೊಂದಿದೆ ಎಂದು ಅವರು ಮಾಹಿತಿ ನೀಡಿದರು.

ಸರ್ಕಾರ ಹೆದರುತ್ತಿದೆ: ರಾಹುಲ್


ರಾಹುಲ್

'ಪಶ್ಚಿಮ ಏಷ್ಯಾದ ಪರಿಸ್ಥಿತಿ ಕುರಿತು ಚರ್ಚಿಸಲು ಸರ್ಕಾರ ಬಯಸುತ್ತಿಲ್ಲ. ಏಕೆಂದರೆ ಪ್ರಧಾನಿ ನರೇಂದ್ರ ಮೋದಿ ಅವರು ಬ್ಲ್ಯಾಕ್‌ಮೇಲ್‌ಗೆ ಒಳಗಾಗಿದ್ದಾರೆಯೇ ಮತ್ತು ಅವರು ರಾಜಿ ಮಾಡಿಕೊಂಡಿದ್ದಾರೆಯೇ ಎಂಬ ಪ್ರಶ್ನೆಗಳು ಬರುತ್ತವೆ ಎಂಬ ಆತಂಕ ಸರ್ಕಾರಕ್ಕಿದೆ. ಅಲ್ಲದೆ ಪ್ರಧಾನಿ ಅವರ ನಡೆಗಳು ಎಲ್ಲಿ ಬಯಲಾಗುತ್ತವೆಯೋ ಎಂಬ ಹೆದರಿಕೆಯೂ ಅವರಿಗಿದೆ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದರು.

'ಹೀಗಾಗಿಯೇ ಪ್ರಧಾನಿ ಅವರು ಸಂಸತ್ತಿನಿಂದ ಪಲಾಯನ ಮಾಡಿದ್ದಾರೆ' ಎಂದು ಅವರು ಟೀಕಿಸಿದರು.

ಸಂಘರ್ಷವು ಇಂಧನ ಬೆಲೆ ಏರಿಕೆ, ಆರ್ಥಿಕತೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಹೀಗಾಗಿ ಈ ಕುರಿತು ಚರ್ಚಿಸಲು ವಿಪಕ್ಷಗಳು ಬಯಸಿವೆ. ಈ ಚರ್ಚೆಯ ಬಳಿಕ ಸ್ಪೀಕರ್ ಓಂ ಬಿರ್ಲಾ ವಿರುದ್ಧದ ಅವಿಶ್ವಾಸ ನಿರ್ಣಯ ಕುರಿತ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬಹುದು ಎಂದು ಅವರು ಹೇಳಿದರು.

ರಾಜ್ಯಸಭೆಯಲ್ಲಿ ಚರ್ಚೆಗೆ ಮಲ್ಲಿಕಾರ್ಜುನ ಖರ್ಗೆ ಆಗ್ರಹ


ಮಲ್ಲಿಕಾರ್ಜುನ ಖರ್ಗೆ

ಪಶ್ಚಿಮ ಏಷ್ಯಾ ಸಂಘರ್ಷದಿಂದ ಭಾರತದ ಇಂಧನ ಭದ್ರತೆಗೆ ಎದುರಾಗಿರುವ ಸವಾಲುಗಳ ಬಗ್ಗೆ ರಾಜ್ಯಸಭೆಯಲ್ಲಿ ಚರ್ಚಿಸಬೇಕು ಎಂದು ಎಐಸಿಸಿ ಅಧ್ಯಕ್ಷ ಮತ್ತು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಸೋಮವಾರ ಆಗ್ರಹಿಸಿದರು.

ಗೃಹಬಳಕೆಯ ಅಡುಗೆ ಅನಿಲ ಸಿಲಿಂಡರ್‌ಗೆ ₹60 ಮತ್ತು ವಾಣಿಜ್ಯ ಬಳಕೆಯ ಅನಿಲ ದರ ₹115 ಹೆಚ್ಚಳವಾಗಿದೆ. ಅಡುಗೆ ಅನಿಲ ಬೆಲೆ ಏರಿಕೆಯು ಬಡವರ ಮೇಲೆ ಹೊರೆಯಾಗುತ್ತದೆ. ಇದು ಪ್ರಮುಖ ವಿಷಯವಾಗಿದ್ದು, ಅಲ್ಪಾವಧಿಯ ಚರ್ಚೆಗೆ ಅವಕಾಶ ನೀಡುವಂತೆ ಅವರು ಒತ್ತಾಯಿಸಿದರು.

ಈ ಸಂಘರ್ಷವು ದೇಶದ ಆರ್ಥಿಕತೆ ಮೇಲೆ ನೇರವಾಗಿ ಪರಿಣಾಮ ಬೀರುತ್ತಿದೆ. ಭಾರತವು ತನ್ನ ಕಚ್ಚಾ ತೈಲದ ಅಗತ್ಯಗಳಲ್ಲಿ ಶೇ 55ರಷ್ಟನ್ನು ಈ ಪ್ರದೇಶದಿಂದ ಆಮದು ಮಾಡಿಕೊಳ್ಳುತ್ತಿದೆ ಎಂದು ತಿಳಿಸಿದರು.


ಪಶ್ಚಿಮ ಏಷ್ಯಾದ ಪರಿಸ್ಥಿತಿಗಳ ಕುರಿತು ಚರ್ಚೆಗೆ ಆಗ್ರಹಿಸಿ ವಿರೋಧ ಪಕ್ಷಗಳ ಸದಸ್ಯರು ಸೋಮವಾರ ಲೋಕಸಭೆಯಲ್ಲಿ ಪ್ರತಿಭಟಿಸಿದರು – ಪಿಟಿಐ ಚಿತ್ರ

'ಸರ್ಕಾರ ಒಪ್ಪುವ ಸಾಧ್ಯತೆ ಕಡಿಮೆ'

'ಪಶ್ಚಿಮ ಏಷ್ಯಾದ ಸಂಘರ್ಷದ ಕುರಿತು ಸಂಸತ್ತಿನ ಉಭಯ ಸದನಗಳಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಈಗಾಗಲೇ ಮಾಹಿತಿ ನೀಡಿದ್ದಾರೆ. ಹೀಗಾಗಿ ಸಂಘರ್ಷದ ಕುರಿತು ಸಂಸತ್ತಿನಲ್ಲಿ ಚರ್ಚಿಸಬೇಕು ಎಂಬ ವಿರೋಧ ಪಕ್ಷಗಳ ಬೇಡಿಕೆಯನ್ನು ಸರ್ಕಾರ ಒಪ್ಪುವ ಸಾಧ್ಯತೆ ಕಡಿಮೆ' ಎಂದು ಮೂಲಗಳು ತಿಳಿಸಿವೆ.

ಸ್ಪೀಕರ್ ಓಂ ಬಿರ್ಲಾ ವಿರುದ್ಧ ಮಂಡಿಸಲಾಗಿರುವ ಅವಿಶ್ವಾಸ ನಿರ್ಣಯದ ಕುರಿತು ಚರ್ಚಿಸಲು ಸರ್ಕಾರ ಉತ್ಸುಕವಾಗಿದೆ. ಈ ವಿಷಯದ ಚರ್ಚೆಯನ್ನು ಮಂಗಳವಾರ ಕೈಗೆತ್ತಿಕೊಳ್ಳುವ ಸಾಧ್ಯತೆಯಿದೆ ಎಂದು ಗೊತ್ತಾಗಿದೆ.

ಅಮಿತ್ ಶಾ ಉತ್ತರಿಸುವ ಸಾಧ್ಯತೆ: ಸ್ಪೀಕರ್ ವಿರುದ್ಧದ ಅವಿಶ್ವಾಸ ನಿರ್ಣಯ ಕುರಿತ ಚರ್ಚೆಗೆ ಸರ್ಕಾರದ ವತಿಯಿಂದ ಗೃಹ ಸಚಿವ ಅಮಿತ್ ಶಾ ಉತ್ತರಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಚರ್ಚೆಯಲ್ಲಿ ಸರ್ಕಾರದ ಪರವಾಗಿ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಭಾಗವಹಿಸಲಿದ್ದಾರೆ.

ಸಿಇಸಿ ಪದಚ್ಯುತಿ ನಿಲುವಳಿಗೆ ವಿಪಕ್ಷಗಳ ಯತ್ನ

ದೇಶದ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರನ್ನು ಪದಚ್ಯುತಿಗೊಳಿಸುವಂತೆ ಕೋರಿ ನಿಲುವಳಿ ಸೂಚನೆ ಮಂಡಿಸಲು ವಿರೋಧ ಪಕ್ಷಗಳು ಸಜ್ಜಾಗಿವೆ ಎಂದು ಮೂಲಗಳು ಸೋಮವಾರ ತಿಳಿಸಿವೆ.

ಈ ಕುರಿತ ನೋಟಿಸ್‌ನ ಕರಡು ಸಿದ್ಧವಾಗಿದ್ದು, ಈ ವಾರದಲ್ಲಿಯೇ ಸಲ್ಲಿಸುವ ಸಾಧ್ಯತೆಯಿದೆ. ಮುಖ್ಯ ಚುನಾವಣಾ ಆಯುಕ್ತರು ಈ ಹುದ್ದೆಯ ಘನತೆಯನ್ನು ಕುಸಿಯುವಂತೆ ಮಾಡಿದ್ದಾರೆ ಎಂದು ಟಿಎಂಸಿ ನಾಯಕರೊಬ್ಬರು ಟೀಕಿಸಿದರು. ಈ ನೋಟಿಸ್‌ಗೆ ಕಾಂಗ್ರೆಸ್ ಸೇರಿದಂತೆ 'ಇಂಡಿಯಾ' ಬಣದ ಪಕ್ಷಗಳು ಬೆಂಬಲಿಸಲಿವೆ ಎಂದು ಮೂಲಗಳು ಹೇಳಿವೆ.

ಇದಲ್ಲದೆ, ಮತದಾರರ ಮತದಾನದ ಹಕ್ಕಿನ ನಿರಾಕರಣೆ ಕುರಿತು ಸಂಸತ್ತಿನಲ್ಲಿ ಚರ್ಚಿಸಲು ತೃಣಮೂಲ ಕಾಂಗ್ರೆಸ್ ಸಂಸದರು ಎರಡೂ ಸದನಗಳಲ್ಲಿ ನೋಟಿಸ್ ನೀಡಿದ್ದಾರೆ.

ಪಶ್ಚಿಮ ಬಂಗಾಳ ಸೇರಿದಂತೆ ವಿಧಾನಸಭಾ ಚುನಾವಣೆಗಳು ನಡೆಯಲಿರುವ ಐದು ರಾಜ್ಯಗಳಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಬಗ್ಗೆ ಟಿಎಂಸಿ ಸೇರಿದಂತೆ ವಿಪಕ್ಷಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿವೆ. ಈ ಕುರಿತು ಸಂಸತ್ತಿನಲ್ಲಿ ಸಮಗ್ರ ಚರ್ಚೆ ನಡೆಯಬೇಕು ಎಂದು ಟಿಎಂಸಿ ಆಗ್ರಹಿಸಿದೆ.

ತಮಿಳುನಾಡು, ತೆಲಂಗಾಣ ರಾಜ್ಯಸಭೆಗೆ ಅವಿರೋಧ ಆಯ್ಕೆ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಖ್ಯಾಂಶಗಳು
- ಎರಡು ರಾಜ್ಯಗಳಿಂದ ಒಟ್ಟು 8 ಅಭ್ಯರ್ಥಿಗಳ ಆಯ್ಕೆ

ಚೆನ್ನೈ/ಹೈದರಾಬಾದ್: ತಮಿಳುನಾಡು ಹಾಗೂ ತೆಲಂಗಾಣ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆದ ಚುನಾವಣೆಯಲ್ಲಿ ಎಂಟು ಅಭ್ಯರ್ಥಿಗಳು ಸೋಮವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಡಿಎಂಕೆ ಅಭ್ಯರ್ಥಿಗಳಾದ ತಿರುಚ್ಚಿ ಶಿವ, ಜೆ.ಸಿ. ರವೀಂದ್ರನ್ (ಡಿಎಂಕೆ), ಎಂ. ತಂಬಿದೊರೈ (ಎಐಎಡಿಎಂಕೆ), ಕ್ರಿಸ್ಟೋಫರ್ ಮಣಿಕ್ಕಂ (ಕಾಂಗ್ರೆಸ್), ಅನ್ಬುಮಣಿ ರಾಮದಾಸ್ (ಪಿಎಂಕೆ), ಎಲ್.ಕೆ. ಸುದೇಶ್ ಅವರು ತಮಿಳುನಾಡಿನಿಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ ತಿಳಿಸಿದ್ದಾರೆ.

ರಾಜ್ಯಸಭಾ ಸ್ಥಾನಗಳಿಗೆ ಬೇರೆ ಯಾರೊಬ್ಬರೂ ನಾಮಪತ್ರ ಸಲ್ಲಿಸದಿದ್ದರಿಂದ ಅವಿರೋಧ ಆಯ್ಕೆ ನಡೆದಿದೆ ಎಂದಿದ್ದಾರೆ.

ಶಿವ, ತಂಬಿದೊರೈ ಮತ್ತೊಮ್ಮೆ ಆಯ್ಕೆಯಾಗಿದ್ದಾರೆ. 'ರೈಸಿಂಗ್ ಸನ್' ತಮಿಳು ವಾಹಿನಿಯ ಸಂಪಾದಕರಾಗಿರುವ ರವೀಂದ್ರನ್ ಅವರಿಗೆ ಡಿಎಂಕೆ ಅವಕಾಶ ಕೊಟ್ಟಿದೆ.

ರಾಜ್ಯಸಭೆಯಲ್ಲಿ ಡಿಎಂಕೆಯ ಬಲ 10ರಿಂದ 8 ಸ್ಥಾನಕ್ಕೆ ಇಳಿದಿದೆ. ಎಐಎಡಿಎಂಕೆಯ ಬಲ ಐದಕ್ಕೇರಿದೆ. ಕಾಂಗ್ರೆಸ್ ತಮಿಳುನಾಡಿನಿಂದ ತನ್ನ ಸ್ಥಾನವನ್ನು ಎರಡಕ್ಕೆ ಹೆಚ್ಚಿಸಿಕೊಂಡಿದೆ.

ಸಿಂಘ್ವಿ, ರೆಡ್ಡಿ ಅವಿರೋಧ ಆಯ್ಕೆ

ಕಾಂಗ್ರೆಸ್ ಅಭ್ಯರ್ಥಿಗಳಾದ ಅಭಿಷೇಕ್ ಮನು ಸಿಂಘ್ವಿ ಹಾಗೂ ವೆಂ. ನರೇಂದ್ರ ರೆಡ್ಡಿ ಅವರು ತೆಲಂಗಾಣ ವಿಧಾನಸಭೆಯಿಂದ ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾದರು.

ನಾಮಪತ್ರ ಹಿಂಪಡೆಯುವ ಅವಧಿ ಮುಕ್ತಾಯವಾಗುತ್ತಿದ್ದಂತೆ, ಚುನಾವಣಾ ಅಧಿಕಾರಿಯು ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಸಿಂಘ್ವಿ, ರೆಡ್ಡಿ ಅವರು ಮಾರ್ಚ್ 5ರಂದು ತಮ್ಮ ನಾಮಪತ್ರ ಸಲ್ಲಿಸಿದ್ದರು. ಪಕ್ಷೇತರ ಅಭ್ಯರ್ಥಿ ನಾಮಪತ್ರ ಸಲ್ಲಿಸಿದ್ದರೂ, ಪರಿಶೀಲನೆ ವೇಳೆ ಅದನ್ನು ತಿರಸ್ಕರಿಸಲಾಗಿತ್ತು.

ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲರಾಗಿರುವ ಸಿಂಘ್ವಿ ಅವರು ತೆಲಂಗಾಣದಿಂದ ಒಂದೂವರೆ ವರ್ಷದ ಅವಧಿ ಪೂರೈಸಿದ ಬಳಿಕ ಮತ್ತೊಮ್ಮೆ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಮುಖ್ಯಮಂತ್ರಿ ರೇವಂತ ರೆಡ್ಡಿ ಅವರ ಸಲಹೆಗಾರರಾಗಿರುವ ನರೇಂದ್ರ ರೆಡ್ಡಿ ಅವರಿಗೂ ಕಾಂಗ್ರೆಸ್ ರಾಜ್ಯಸಭೆಗೆ ಪ್ರವೇಶಿಸುವ ಅವಕಾಶ ನೀಡಿದೆ. ನರೇಂದ್ರ ಅವರು ಕಾಂಗ್ರೆಸ್ ಸೇರುವುದಕ್ಕೂ ಮುನ್ನ ತೆಲುಗು ದೇಶಂ ಪಕ್ಷದಲ್ಲಿ ಇದ್ದರು.

ಸಂಭ್ರಮಾಚರಣೆ

‘ಕೋಚ್ ಸಾಹೇಬ್ರೇ ನಕ್ಕರೆ ಚೆಂದ ಕಾಣ್ತೀರಿ..’



ವೀಕ್ಷಕ ವಿವರಣೆಗಾರ ಸುನಿಲ್ ಗಾವಸ್ಕರ್ (ಬಲ) ಹಾಗೂ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ನೃತ್ಯ ಚಿತ್ರಗಳು: ಎಎಫ್‌ಪಿ/ಪಿಟಿಐ



ವಿಶ್ವಕಪ್ ಫೈನಲ್ ಗೆಲುವಿನ ಬಳಿಕ ಭಾರತ ತಂಡದ ಅರ್ಷದೀಪ್ ಸಿಂಗ್, ಇಶಾನ್ ಕಿಶನ್ ಹಾಗೂ ಅಭಿಷೇಕ್ ಶರ್ಮಾ ಅವರು ನೃತ್ಯ ಮಾಡಿ ಸಂಭ್ರಮಿಸಿದರು





ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಗೆಳತಿ ಮಹೀಕಾ ಅವರೊಂದಿಗೆ ಸಂಭ್ರಮಿಸಿದರು (ಎಡಚಿತ್ರ). ಪುತ್ರನೊಂದಿಗೆ ವರುಣ್ ಚಕ್ರವರ್ತಿ

ಗೌತಮ್ ಗಂಭೀರ್‌ಗೆ ಇನ್‌ಸ್ಟಾಗ್ರಾಮ್‌ನಲ್ಲಿ ಅಭಿನಂದನೆ ಸಲ್ಲಿಸಿದ ಧೋನಿ

ಅಹಮದಾಬಾದ್ (ಪಿಟಿಐ): ‘ಕೋಚ್ ಸಾಹೇಬರೇ ನಗುವಾಗ ನೀವು ಚೆಂದ ಕಾಣುತ್ತೀರಿ..’

ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮಹೇಂದ್ರಸಿಂಗ್ ಧೋನಿ ಅವರು ಪ್ರಸ್ತುತ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರನ್ನು ಅಭಿನಂದಿಸಿದ್ದು ಹೀಗೆ. ಸುಮಾರು ಎರಡು ವರ್ಷಗಳ ನಂತರ ಧೋನಿ ಅವರು ಇನ್‌ಸ್ಟಾಗ್ರಾಮ್‌ನಲ್ಲಿ ಹಾಕಿರುವ ಪೋಸ್ಟ್‌ನಲ್ಲಿ ಗಂಭೀರ್ ಅವರ ಬಗ್ಗೆ ಬರೆದಿದ್ದಾರೆ. 2024ರಲ್ಲಿ ಕೊನೆಯ ಬಾರಿ ಧೋನಿ ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಹಾಕಿದ್ದರು.

ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಟಿ20 ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯದ ಸಂದರ್ಭದಲ್ಲಿ ಧೋನಿ ಕೂಡ ಹಾಜರಿದ್ದರು. 2007ರಲ್ಲಿ ಚೊಚ್ಚಲ ಟಿ20 ವಿಶ್ವಕಪ್ ಜಯಿಸಿದ್ದ ಭಾರತ ತಂಡದ ನಾಯಕರಾಗಿದ್ದರು.

‘ಅಹಮದಾಬಾದಿನಲ್ಲಿ ಇತಿಹಾಸ ರಚನೆಯಾಯಿತು. ತಂಡ, ನೆರವು ಸಿಬ್ಬಂದಿ ಹಾಗೂ ಅಭಿಮಾನಿಗಳಿಗೆ ಅಭಿನಂದನೆಗಳು. ತಾವೆಲ್ಲರೂ ಆಡುವುದನ್ನು ನೋಡುವ ಅವಕಾಶ ಸಿಕ್ಕಿದ್ದು ಸಂತಸ ತಂದಿದೆ’ ಎಂದು ಧೋನಿ ತಮ್ಮ ಪೋಸ್ಟ್‌ನಲ್ಲಿ ಬರೆದಿದ್ದಾರೆ.

‘ಕೋಚ್ ಸಾಹೇಬರೇ ನೀವು ನಗುತ್ತಿರುವಾಗ ಚೆಂದ ಕಾಣುತ್ತೀರಿ. ತೀಕ್ಷ್ಣತೆ ಮತ್ತು ನಗು ಎರಡೂ ಅಮೋಘ ಸಂಯೋಜನೆಯಾಗಿದೆ. ತುಂಬಾ ಒಳ್ಳೆಯ ಕಾರ್ಯ ಮಾಡಿದ್ದೀರಿ. ಹುಡುಗರೇ ಎಂಜಾಯ್ ಮಾಡಿ. ಬೂಮ್ರಾ ಬಗ್ಗೆ ನಾನು ಏನೂ ಬರೆಯದಿದ್ದರೇ ಒಳ್ಳೆಯದು. ಚಾಂಪಿಯನ್ ಬೌಲರ್ ಎಂದಷ್ಟೇ ಹೇಳಬಲ್ಲೆ..’ ಎಂದು ಉಲ್ಲೇಖಿಸಿದ್ದಾರೆ.

ಧೋನಿ ಅವರ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಗೌತಮ್ ಗಂಭೀರ್, ‘ನಿಮ್ಮನ್ನು ನೋಡುತ್ತಿರುವುದು ಸಂತಸ ತಂದಿದೆ. ನಗು ಅರಳಲು ಇನ್ನೇನು ಕಾರಣ ಬೇಕು’ ಎಂದಿದ್ದಾರೆ.

ಕ್ರೀಡಾಂಗಣದಲ್ಲಿ ಪಂದ್ಯವನ್ನು ವೀಕ್ಷಿಸಿದವರಲ್ಲಿ ತಂಡದ ಮಾಜಿ ನಾಯಕರಾದ ಕಪಿಲ್ ದೇವ್, ರೋಹಿತ್ ಶರ್ಮಾ ಅವರೂ ಇದ್ದರು.

ಐಸಿಸಿ
ಪುರುಷರ ಟಿ20 ವಿಶ್ವಕಪ್ 2026



ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಐಸಿಸಿ ಮುಖ್ಯಸ್ಥ ಜಯ್ ಶಾ

ದ್ರಾವಿಡ್–ಲಕ್ಷ್ಮಣ್‌ಗೆ ಸಮರ್ಪಣೆ: ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ಟಿ20 ವಿಶ್ವಕಪ್ ವಿಜಯವನ್ನು ನಿಕಟಪೂರ್ವ ಕೋಚ್ ರಾಹುಲ್ ದ್ರಾವಿಡ್ ಮತ್ತು ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ಅವರಿಗೆ ಸಮರ್ಪಣೆ ಮಾಡಿದ್ದಾರೆ.

‘ರಾಹುಲ್ ಭಾಯ್ (ದ್ರಾವಿಡ್) ಮತ್ತು ಲಕ್ಷ್ಮಣ್ ಅವರಿಬ್ಬರೂ ಭಾರತದ ಕ್ರಿಕೆಟ್ ಅನ್ನು ಉತ್ತಮವಾಗಿ ರೂಪುಗೊಳಿಸಿದ್ದಾರೆ ಮತ್ತು ನಿರ್ವಹಿಸುತ್ತಲೂ ಇದ್ದಾರೆ. ಆದ್ದರಿಂದ ಅವರಿಬ್ಬರಿಗೂ ಈ ಟ್ರೋಫಿಯನ್ನು ಸಮರ್ಪಿಸುತ್ತಿದ್ದೇನೆ’ ಎಂದು ಗಂಭೀರ್ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ದ್ರಾವಿಡ್ ಅವರಿಗೆ ನಾನು ಕೃತಜ್ಞನಾಗಿರುವೆ. ಅವರು ಕೋಚ್ ಆಗಿದ್ದ ಅವಧಿಯಲ್ಲಿ ಮಾಡಿರುವ ಕಾರ್ಯ ನಿರ್ವಹಣೆ ಅಮೋಘವಾಗಿದೆ. ಲಕ್ಷ್ಮಣ್ ಅವರು ಶ್ರೇಷ್ಠತಾ ಕೇಂದ್ರದ ಮೂಲಕ ನೀಡುತ್ತಿರುವ ಸೇವೆಯು ಮಹತ್ವದ್ದಾಗಿದೆ. ಭಾರತದ ಕ್ರಿಕೆಟ್ ಇಷ್ಟು ಉತ್ತುಂಗ ಸ್ಥಿತಿಯಲ್ಲಿ ಇರುವಂತೆ ನೋಡಿಕೊಂಡಿದ್ದಾರೆ’ ಎಂದು ಶ್ಲಾಘಿಸಿದರು.

‘ತಂಡದ ಆಟಗಾರರು ನನ್ನನ್ನು ಗೆಲ್ಲಿಸಿದರು. ನೀವು ಉತ್ತಮ ಕೋಚ್ ಅಥವಾ ನಾಯಕನೇ ಆಗಿರಬಹುದು. ಆದರೆ ತಂಡದಲ್ಲಿ ಒಳ್ಳೆಯ ಆಟಗಾರರಿದ್ದರೆ ಮಾತ್ರ ಯಶಸ್ಸು ಸಾಧ್ಯ ಎಂದು ಮೊದಲಿನಿಂದಲೂ ಹೇಳುತ್ತೇನೆ. ದ್ವಿಪಕ್ಷೀಯ ಸರಣಿಗಳಲ್ಲಿ ಆಡುವುದಕ್ಕೂ ಐಸಿಸಿ ಟೂರ್ನಿಗಳಲ್ಲಿ ನೀಡುವ ಸಾಮರ್ಥ್ಯ ಪ್ರದರ್ಶನಕ್ಕೂ ಬಹಳ ವ್ಯತ್ಯಾಸವಿದೆ’ ಎಂದು ಹೇಳಿದರು.



ಗೌತಮ್ ಗಂಭೀರ್ ಅವರು ಪತ್ನಿ ನತಾಶಾ ಜೈನ್ ಮತ್ತು ಪುತ್ರಿಯರಾದ ಆರ್ಜೀನ್ ಮತ್ತು ಅನ್ಯೆಜಾ ಅವರೊಂದಿಗೆ ಟ್ರೋಫಿ ಹಿಡಿದು ಸಂಭ್ರಮಿಸಿದರು ಪಿಟಿಐ ಚಿತ್ರ

ಸೂರ್ಯಗೆ ಒಲಿಂಪಿಕ್ ಚಿನ್ನದ ಮೇಲೆ ಚಿತ್ತ

ಭಾರತ ಟಿ20 ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ಈಗ ಒಲಿಂಪಿಕ್ ಕೂಟದ ಚಿನ್ನದ ಪದಕ ಗೆಲ್ಲುವತ್ತ ಚಿತ್ತ ಹರಿಸಿದ್ದಾರೆ.

‘2024ರ ನಂತರ ನಮ್ಮ ತಂಡವು ಬದಲಾಗಿದೆ. ಗೆಲುವುಗಳ ನಂತರವೂ ಹೇಗೆ ಆಟದಲ್ಲಿ ಮುಂದುವರಿಯಬೇಕು ಎಂಬುದನ್ನು ಅರಿತಿದ್ದೇವೆ. ಆದ್ದರಿಂದ 2025 ಮತ್ತು ಈ ವರ್ಷ ಐಸಿಸಿ ಟ್ರೋಫಿಗಳನ್ನು ಜಯಿಸಿದ್ದೇವೆ. 2027, 2028, 2029 ಮತ್ತು ಮುಂದೆಯೂ ಇದೇ ರೀತಿ ಸಾಗುತ್ತೇವೆ. ಮುಖ್ಯವಾಗಿ ಒಲಿಂಪಿಕ್ ಚಿನ್ನ (2028ರಲ್ಲಿ ಲಾಸ್ ಏಂಜಲೀಸ್) ಜಯಿಸುವುದು ನಮ್ಮ ಗುರಿಯಾಗಿದೆ. ಅದೇ ವರ್ಷ ಟಿ20 ವಿಶ್ವಕಪ್ ಟೂರ್ನಿಯೂ ಇದೆ’ ಎಂದು ಸೂರ್ಯಕುಮಾರ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಮೆಚ್ಚುಗೆಯ ಮಹಾಪೂರ

ಅಹಮದಾಬಾದಿನಲ್ಲಿ ಭಾರತ ತಂಡದ ಗೆಲುವು ಅದ್ಭುತ. ಟೂರ್ನಿಯುದ್ದಕ್ಕೂ ಪ್ರದರ್ಶಿಸಿದ ಸ್ಫೋಟಕ ರೀತಿಯ ಕ್ರಿಕೆಟ್‌ಗೆ ಸಾಟಿಯೇ ಇರಲಿಲ್ಲ. ಕಠಿಣ ಸನ್ನಿವೇಶಗಳಲ್ಲಿ ಹೋರಾಟ ತೋರಿ ಹುಡುಗರು ಮತ್ತೆ ವಿಶ್ವ ಚಾಂಪಿಯನ್ ಆದರು. ಈ ಸಾಧನೆಗಾಗಿ ತಂಡದ ಆಟಗಾರರಿಗೆ ಮತ್ತು ಚಿಂತಕರ ಚಾವಡಿ ಸದಸ್ಯರಿಗೆ ಅಭಿನಂದನೆಗಳು...

ವಿರಾಟ್ ಕೊಹ್ಲಿ, ಭಾರತ ತಂಡದ ಮಾಜಿ ನಾಯಕ

ಟಿ20 ವಿಶ್ವಕಪ್ ಗೆದ್ದ ಭಾರತ ತಂಡಕ್ಕೆ ಅಭಿನಂದನೆಗಳು... ಅತಿ ಪ್ರಬಲ ತಂಡ... ಮಹತ್ವದ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿತು. ಭಾರತದ ಕ್ರಿಕೆಟ್ ಅತ್ಯುನ್ನತ ಸ್ಥಾನದಲ್ಲಿದೆ. ಏಕದಿನ ಮಹಿಳಾ ಚಾಂಪಿಯನ್, 19 ವರ್ಷದೊಳಗಿನವರ ಚಾಂಪಿಯನ್. ಈಗ ಪುರುಷರ ಟಿ20 ಚಾಂಪಿಯನ್ಸ್

ಸೌರವ್ ಗಂಗೂಲಿ, ಭಾರತ ತಂಡದ ಮಾಜಿ ನಾಯಕ

ನಾನು ಆರಂಭದಲ್ಲೇ ಹೇಳಿದ್ದೆ. ಐಸಿಸಿ ಟಿ20 ವಿಶ್ವಕಪ್ ಗೆಲ್ಲಬೇಕಾದರೆ, ನೀವು ಭಾರತವನ್ನು ನಾಕೌಟ್ ಪಂದ್ಯದಲ್ಲಿ ಸೋಲಿಸಬೇಕು. ಯಾವ ತಂಡವೂ ಅದನ್ನು ಮಾಡಲಿಲ್ಲ. ಮೂರನೇ ಬಾರಿ ಟಿ20 ವಿಶ್ವಕಪ್ ಗೆದ್ದ ಭಾರತ ತಂಡಕ್ಕೆ ಅಭಿನಂದನೆಗಳು..

ಡ್ಯಾರೆನ್ ಸಮಿ, ವೆಸ್ಟ್ ಇಂಡೀಸ್ ತಂಡದ ಕೋಚ್

ತಂಡದ ಬಗ್ಗೆ ಹೆಮ್ಮೆಯೆನಿಸುತ್ತದೆ. ಭಾರತಕ್ಕೆ ವಿಶ್ವಕಪ್ ಗೆಲ್ಲಿಸುವುದು ಪ್ರತಿಯೊಬ್ಬ ಆಟಗಾರನ ಕನಸು. ಇಡೀ ದೇಶ ಹೆಮ್ಮೆಪಡುವಂತೆ ಮಾಡಿದ್ದೀರಿ. ಅಭಿನಂದನೆಗಳು ಹುಡುಗರೇ...

ಶುಭಮನ್ ಗಿಲ್, ಭಾರತ ಟೆಸ್ಟ್, ಏಕದಿನ ತಂಡದ ನಾಯಕ


ಭಾರತ ಪ್ರಬಲ ತಂಡ. ಕೊನೆಯ ಕೆಲವು ಐಸಿಸಿ ಟೂರ್ನಿಗಳನ್ನು ಗಮನಿಸಿದರೆ ಆ ತಂಡ 32 ಪಂದ್ಯಗಳಲ್ಲಿ 30 ಅನ್ನು ಗೆದ್ದುಕೊಂಡಿದೆ. ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾಕ್ಕೆ ಸೋತಿತ್ತು. ಈ ಟೂರ್ನಿಯಲ್ಲಿ (ಟಿ20 ವಿಶ್ವಕಪ್) ಸೂಪರ್ ಎಂಟರಲ್ಲಿ ದಕ್ಷಿಣ ಆಫ್ರಿಕಾಕ್ಕೆ ಸೋತಿತ್ತು

ಮೈಕಲ್ ಆ್ಯಥರ್ಟನ್, ಇಂಗ್ಲೆಂಡ್ ತಂಡದ ಮಾಜಿ ನಾಯಕ

ಭಾರತದ ಕ್ರಿಕೆಟ್ ಬುನಾದಿಯ ಮೂಲರಚನೆ ಫಲಕೊಡುತ್ತಿದೆ. ಅಲ್ಲಿ ಬ್ಯಾಟರ್‌ಗಳ ಕೊರತೆಯಿಲ್ಲ, ಸ್ಪಿನ್ ಅಥವಾ ವೇಗದ ಬೌಲರ್‌ಗಳ ಕೊರತೆಯಿಲ್ಲ. ಫಲಿತಾಂಶ ಬಯಸುವ ಈ ಯುವ ಆಟಗಾರರಿಗೆ ಆಟದ ಬಗ್ಗೆ ಒಳ್ಳೆಯ ತಿಳಿವಳಿಕೆಯಿದೆ

ಜಾವೆದ್ ಮಿಯಾಂದಾದ್, ಪಾಕ್ ಮಾಜಿ ಕ್ರಿಕೆಟಿಗ

ಐಸಿಸಿ ತಂಡದಲ್ಲಿ ಸಂಜು, ಬೂಮ್ರಾ



ಜಸ್‌ಪ್ರೀತ್ ಬೂಮ್ರಾ

ನವದೆಹಲಿ (ಪಿಟಿಐ): ಭಾರತದ ಜಸ್‌ಪ್ರೀತ್ ಬೂಮ್ರಾ, ಸಂಜು ಸ್ಯಾಮ್ಸನ್, ಇಶಾನ್ ಕಿಶನ್ ಮತ್ತು ಹಾರ್ದಿಕ್ ಪಾಂಡ್ಯ ಅವರಿಗೆ ಐಸಿಸಿ ಟಿ20 ವಿಶ್ವಕಪ್ ತಂಡದಲ್ಲಿ ಸ್ಥಾನ ಲಭಿಸಿದೆ.

ಸೋಮವಾರ ಐಸಿಸಿಯು ಈ ತಂಡವನ್ನು ಪ್ರಕಟಿಸಿದೆ. ಭಾರತದ ನಾಲ್ವರು ಆಟಗಾರರು ಸ್ಥಾನ ಪಡೆದಿದ್ದಾರೆ. ಈ ಸಲದ ಟೂರ್ನಿಯಲ್ಲಿ ಆಡಿದ ಬೇರೆ ಬೇರೆ ತಂಡಗಳ ಪ್ರಮುಖ ಆಟಗಾರರನ್ನೂ ಸೇರ್ಪಡೆ ಮಾಡಲಾಗಿದೆ.

ತಂಡ ಇಂತಿದೆ: ಏಡನ್ ಮರ್ಕರಂ (ನಾಯಕ), ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ, ಜಸ್‌ಪ್ರೀತ್ ಬೂಮ್ರಾ, ಸಾಹೀಬ್‌ಝಾದಾ ಫರ್ಹಾನ್, ವಿಲ್ ಜ್ಯಾಕ್ಸ್, ಜೇಸನ್ ಹೋಲ್ಡರ್, ಲುಂಗಿ ಎನ್‌ಗಿಡಿ, ಆದಿಲ್ ರಶೀದ್, ಬ್ಲೆಸಿಂಗ್ ಮುಝರಬಾನಿ, ಶಾಡ್ಲೆ ವ್ಯಾನ್ ಶಾಲ್ವಿಕ್ (12ನೇ ಆಟಗಾರ).

ಚಿಟಿಕೆ ಸುದ್ದಿ

ಇದೇ 16, 17ರಂದು ಹಾಕಿ ಟ್ರಯಲ್ಸ್

ಬೆಂಗಳೂರು: 16ನೇ ಹಾಕಿ ಇಂಡಿಯಾ ಸಬ್ ಜೂನಿಯರ್ ಬಾಲಕ ಮತ್ತು ಬಾಲಕಿಯರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ರಾಜ್ಯ ತಂಡವನ್ನು ಆಯ್ಕೆ ಮಾಡಲು ‘ಹಾಕಿ ಕರ್ನಾಟಕ’ ಸಂಸ್ಥೆಯು ಟ್ರಯಲ್ಸ್ ಆಯೋಜಿಸಿದೆ.

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಹಾಕಿ ಅರೇನಾದಲ್ಲಿ 16ರಂದು ಬಾಲಕರ ಟ್ರಯಲ್ಸ್ ನಡೆಯ ಲಿದೆ. ಇದೇ ಮೈದಾನದಲ್ಲಿ 17ರಂದು ಬಾಲಕಿಯರ ಟ್ರಯಲ್ಸ್ ನಡೆಸಲಾಗುತ್ತದೆ ಎಂದು ‘ಹಾಕಿ ಕರ್ನಾಟಕ’ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎ.ಬಿ.ಸುಬ್ಬಯ್ಯ ತಿಳಿಸಿದ್ದಾರೆ. 2010ರ ಜ. 1ರ ನಂತರ ಜನಿಸಿದ ಬಾಲಕ ಮತ್ತು ಬಾಲಕಿಯರು ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಬಹುದು.

ಶ್ರೀಲಂಕಾ ತಂಡಕ್ಕೆ ಗ್ಯಾರಿ ಕೋಚ್



ಕೊಲಂಬೊ (ಎಎಫ್‌ಪಿ): ಕ್ರಿಕೆಟ್ ಶ್ರೀಲಂಕಾವು ದಕ್ಷಿಣ ಆಫ್ರಿಕಾದ ಮಾಜಿ ಆಟಗಾರ ಗ್ಯಾರಿ ಕರ್ಸ್ಟನ್ ಅವರನ್ನು ತನ್ನ ತಂಡಕ್ಕೆ ನೂತನ ಕೋಚ್ ಆಗಿ ಸೋಮವಾರ ನೇಮಕ ಮಾಡಿದೆ.

ಟಿ20 ವಿಶ್ವಕಪ್‌ನಲ್ಲಿ ಶ್ರೀಲಂಕಾ ತಂಡ ಬೇಗನೇ ನಿರ್ಗಮಿಸಿದ ಕಾರಣ ಸನತ್ ಜಯಸೂರ್ಯ ಅವರು ಕೋಚ್ ಹುದ್ದೆ ತೊರೆದಿದ್ದರು.

ಕರ್ಸ್ಟನ್ ಅವರ 2 ವರ್ಷಗಳ ಒಪ್ಪಂದದ ಅವಧಿ ಏ. 15ರಂದು ಆರಂಭವಾಗಲಿದೆ. ಜಯಸೂರ್ಯ ಅವರ ಅವಧಿ ಜೂನ್ ಕೊನೆಯವರೆಗೆ ಇತ್ತು. ಕರ್ಸ್ಟನ್ ಅವರು 2008 ರಿಂದ 2011ರವರೆಗೆ ಭಾರತ ತಂಡದ ಕೋಚ್ ಆಗಿದ್ದರು.

ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಇಂದಿನಿಂದ: ಹಿಂದೆ ಸರಿದ ಸಿಂಧು

ಪ್ರಣಯ್, ಶ್ರೀಕಾಂತ್ ಮೇಲೆ ನಿರೀಕ್ಷೆ



ಪಿ.ವಿ. ಸಿಂಧು

ಬಾಸೆಲ್ (ಪಿಟಿಐ): ಅನುಭವಿ ಆಟಗಾರ್ತಿ ಪಿ.ವಿ.ಸಿಂಧು ಅವರು ಮಂಗಳವಾರ ಆರಂಭವಾಗಲಿರುವ ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ಅವರ ಗೈರಿನಲ್ಲಿ ಎಚ್.ಎಸ್.ಪ್ರಣಯ್ ಹಾಗೂ ಕಿದಂಬಿ ಶ್ರೀಕಾಂತ್ ಅವರು ಭಾರತದ ಸವಾಲು ಮುನ್ನಡೆಸಲಿದ್ದಾರೆ.

ಸಿಂಧು ಅವರು ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾಗವಹಿಸಲು ಬರ್ಮಿಂಗ್‌ಹ್ಯಾಮ್‌ಗೆ ತೆರಳುವ ಮಾರ್ಗ ಮಧ್ಯೆ ದುಬೈನಲ್ಲಿ ಸಿಲುಕಿಕೊಂಡಿದ್ದರು. ವಾಯುಮಾರ್ಗ ನಿರ್ಬಂಧದಿಂದಾಗಿ ಇಂಗ್ಲೆಂಡ್‌ಗೆ ತೆರಳಲಾಗದೆ ಬೆಂಗಳೂರಿಗೆ ಮರಳಿದ್ದರು.

ದುಬೈ ವಿಮಾನ ನಿಲ್ದಾಣದಲ್ಲಿನ ಉದ್ವಿಗ್ನ ಪರಿಸ್ಥಿತಿಯಿಂದಾಗಿ ಹಾಗೂ ಅಲ್ಲಿ ಎದುರಾದ ಸಂಕಷ್ಟಗಳಿಂದಾಗಿ ಸಿಂಧು ಅವರು ಭೀತಿಗೊಳಗಾಗಿದ್ದಾರೆ. ಅದರಿಂದ ಹೊರಬರಲು ಸದ್ಯ ಯಾವುದೇ ಟೂರ್ನಿಗಳಲ್ಲಿ ಆಡದಿರಲು ನಿರ್ಧರಿಸಿದ್ದಾರೆ. ಅವರು ಏಪ್ರಿಲ್‌ನಲ್ಲಿ ನಡೆಯಲಿರುವ ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಷಿಪ್ಸ್‌ನಲ್ಲಿ ಕಣಕ್ಕಿಳಿಯ ಬಹುದು ಎನ್ನಲಾಗಿದೆ.

ಶ್ರೀಕಾಂತ್ ಅವರು ಹಾಂಗ್‌ಕಾಂಗ್‌ನ ಜೇಸನ್ ಗುನವನ್ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ. ಪ್ರಣಯ್ ಅವರು ಮೊದಲ ಸುತ್ತಿನಲ್ಲಿ ಜಪಾನ್‌ನ ಕೋಕಿ ವತಾನಬೆ ಎದುರು ಕಣಕ್ಕಿಳಿಯಲಿದ್ದಾರೆ. ತರುಣ್ ಮನ್ನೆಪಲ್ಲಿ ಅವರು ಕೆಂಟಾ ನಿಷಿಮೊಟೊ (ಜಪಾನ್) ವಿರುದ್ಧ ಹಾಗೂ ಕನ್ನಡಿಗ ಆಯುಷ್ ಶೆಟ್ಟಿ ಕೆನಡಾದ ಬ್ರಯಾನ್ ಯಾಂಗ್ ವಿರುದ್ಧ ಸೆಣಸಲಿದ್ದಾರೆ.

ವಿಶ್ವದ ಮಾಜಿ ಅಗ್ರಮಾನ್ಯ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಅವರು ಲಯ ಕಂಡುಕೊಳ್ಳುವ ವಿಶ್ವಾಸದಲ್ಲಿದ್ದಾರೆ.



ಭಾರತದ ಎಚ್.ಎಸ್. ಪ್ರಣಯ್

ಮಹಿಳೆಯರ ಸಿಂಗಲ್ಸ್‌ನಲ್ಲಿ ಉನ್ನತಿ ಹೂಡ ಅವರು ತೈವಾನ್‌ನ ಚಿಯು ಪಿನ್–ಚಿಯಾನ್ ವಿರುದ್ಧ ಹಾಗೂ ಮಾಳವಿಕಾ ಬನ್ಸೋಡ್ ಅವರು ಥಾಯ್ಲೆಂಡ್‌ನ ಪಾರ್ನಪವೀ ಚೊಚುವಾಂಗ್ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ.

ಮಹಿಳೆಯರ ಡಬಲ್ಸ್‌ನಲ್ಲಿ ಟ್ರೀಸಾ ಜೋಳಿ ಹಾಗೂ ಗಾಯತ್ರಿ ಗೋಪಿಚಂದ್ ಮತ್ತು ಮಿಶ್ರ ಡಬಲ್ಸ್‌ನಲ್ಲಿ ಧ್ರುವ್ ಕಪಿಲ ಹಾಗೂ ತನಿಷಾ ಕ್ರ್ಯಾಸ್ಟೊ ಅವರು ಅದೃಷ್ಟ ಪರೀಕ್ಷಿಸಲಿದ್ದಾರೆ.

ಬೀಚ್ ವಾಲಿಬಾಲ್: ಬೆಲ್ಜಿಯಂ ಚಾಂಪಿಯನ್

ಭುವನೇಶ್ವರ: ಬೆಲ್ಜಿಯಂ ಹಾಗೂ ಅಮೆರಿಕ ತಂಡಗಳು ಇಲ್ಲಿನ ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ (ಕೆಐಐಟಿ) ವಿಶ್ವವಿದ್ಯಾಲಯದಲ್ಲಿ ಭಾನುವಾರ ಮುಕ್ತಾಯವಾದ ವಿಶ್ವ ಬೀಚ್ ವಾಲಿಬಾಲ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದವು.

ಕೆಐಐಟಿ ಕ್ಯಾಂಪಸ್‌ನ ದ್ಯುತಿ ಚಂದ್ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ನಡೆದ ಪುರುಷರ ಫೈನಲ್ ಹಣಾಹಣಿಯಲ್ಲಿ ಬೆಲ್ಜಿಯಂ ತಂಡವು ಜೆಕ್ ಗಣರಾಜ್ಯ ತಂಡವನ್ನು ಸೋಲಿಸಿತು. ಇಸ್ರೇಲ್ ತಂಡವು ಕಂಚು ತನ್ನದಾಗಿಸಿಕೊಂಡಿತು.

ಮಹಿಳೆಯರ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ ಅಮೆರಿಕ ತಂಡವು ಜಪಾನ್ ತಂಡದ ವಿರುದ್ಧ ಗೆಲುವು ಸಾಧಿಸಿತು. ಅಮೆರಿಕ ಬಿ ತಂಡವು ಕಂಚು ಜಯಿಸಿತು.

ಐದು ದಿನ ನಡೆದ ಈ ಚಾಂಪಿಯನ್‌ಷಿಪ್‌ನಲ್ಲಿ ವಿಶ್ವದ 52 ದೇಶಗಳ 83 ತಂಡಗಳು ಟೂರ್ನಿಯಲ್ಲಿ ಭಾಗವಹಿಸಿದ್ದವು. ಕೆಐಐಟಿ ಸಂಸ್ಥಾಪಕ ಅಚ್ಯುತ ಸಮಂತ ಅವರು ಪದಕ ವಿಜೇತರನ್ನು ಸನ್ಮಾನಿಸಿದರು. ಕೆಐಐಟಿ ವಿಶ್ವವಿದ್ಯಾಲಯದಲ್ಲಿನ ಕ್ರೀಡಾ ಮೂಲಸೌಕರ್ಯದ ಬಗ್ಗೆ ಆಟಗಾರರು ಮತ್ತು ಅಧಿಕಾರಿಗಳು ಪ್ರಶಂಸಿಸಿದರು.

ಎಫ್‌ಐಎಚ್ ಹಾಕಿ ವಿಶ್ವಕಪ್ ಕ್ವಾಲಿಫೈಯರ್ಸ್: ನವನೀತ್ ಕೌರ್, ಸುನೆಲಿತಾ ಗೋಲು

ಸ್ಕಾಟ್ಲೆಂಡ್ ಜೊತೆ ಡ್ರಾ ಸಾಧಿಸಿದ ಭಾರತ

ಹೈದರಾಬಾದ್ (ಪಿಟಿಐ): ಭಾರತ ಮಹಿಳಾ ಹಾಕಿ ತಂಡವು ಎಫ್‌ಐಎಚ್ ಹಾಕಿ ವಿಶ್ವಕಪ್ ಕ್ವಾಲಿಫೈಯರ್ಸ್ ಪಂದ್ಯದಲ್ಲಿ ಸೋಮವಾರ ಸ್ಕಾಟ್ಲೆಂಡ್ ಜೊತೆ 2–2 ಸಮಬಲ ಸಾಧಿಸಿತು.

ಪಂದ್ಯದ 6ನೇ ನಿಮಿಷದಲ್ಲಿ ಗೋಲು ಗಳಿಸಿದ ಹೀಥರ್ ಮೆಕ್‌ಇವಾನ್ ಸ್ಕಾಟ್ಲೆಂಡ್ ತಂಡಕ್ಕೆ ಆರಂಭಿಕ ಮುನ್ನಡೆ ತಂದುಕೊಟ್ಟರು. ಭಾರತದ ನವನೀತ್ ಕೌರ್ 18ನೇ ನಿಮಿಷದಲ್ಲಿ ಸಿಕ್ಕ ಪೆನಾಲ್ಟಿ ಅವಕಾಶವನ್ನು ಗೋಲನ್ನಾಗಿ ಪರಿವರ್ತಿಸಿ, ಸಮಬಲ ಸಾಧಿಸಿದರು. ಸುನೆಲಿತಾ ಟೊಪ್ಪೊ (29ನೇ ನಿ.) ಗೋಲು ಗಳಿಸಿ, ಆತಿಥೇಯರಿಗೆ ಮುನ್ನಡೆ ತಂದುಕೊಟ್ಟರು. ಆದರೆ, ನಾಲ್ಕೇ ನಿಮಿಷಗಳ ಅಂತರದಲ್ಲಿ ಪ್ರವಾಸಿ ತಂಡದ ಫಿಯೋನಾ ಬರ್ನೆಟ್ (33ನೇ ನಿ.) ಗೋಲು ಹೊಡೆದು 2–2 ಡ್ರಾ ಸಾಧಿಸಿದರು.



ಗೋಲು ಗಳಿಸಿದ ಭಾರತದ ಸುನೆಲಿತಾ ಟೊಪ್ಪೊ ಚಿತ್ರ: ಹಾಕಿ ಇಂಡಿಯಾ

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ.ಸಿಂಧು ಅವರು ಕ್ರೀಡಾಂಗಣದಲ್ಲಿ ಹಾಜರಿದ್ದು ಪಂದ್ಯವನ್ನು ವೀಕ್ಷಿಸಿದರು.

ಮೊದಲ ಪಂದ್ಯದಲ್ಲಿ ಉರುಗ್ವೆ ವಿರುದ್ಧ ಗೆಲುವು ಸಾಧಿಸಿದ್ದ ಸಲೀಮಾ ಟೇಟೆ ಪಡೆಯು ನಾಲ್ಕು ಅಂಕಗಳೊಂದಿಗೆ ಬಿ ಗುಂಪಿನಲ್ಲಿ ಅಗ್ರಸ್ಥಾನವನ್ನು ಕಾಯ್ದುಕೊಂಡಿತು. ಸ್ಕಾಟ್ಲೆಂಡ್ ತಂಡವೂ ಇಷ್ಟೇ ಅಂಕ ಹೊಂದಿದೆಯಾದರೂ, ಗೋಲು ಗಳಿಕೆಯಲ್ಲಿ ಹಿಂದಿರುವ ಕಾರಣ ಎರಡನೇ ಸ್ಥಾನದಲ್ಲಿದೆ.

ಬಿ ಗುಂಪಿನ ಇನ್ನೊಂದು ಪಂದ್ಯದಲ್ಲಿ ಉರುಗ್ವೆ ತಂಡವು 3–2ರಿಂದ ವೇಲ್ಸ್ ತಂಡವನ್ನು ಸೋಲಿಸಿತು. ಎ ಗುಂಪಿನ ಪಂದ್ಯಗಳಲ್ಲಿ ಇಟಲಿ 3–0ಯಿಂದ ಆಸ್ಟ್ರಿಯಾ ವಿರುದ್ಧ ಹಾಗೂ ಇಂಗ್ಲೆಂಡ್ ತಂಡವು ಇಷ್ಟೇ ಅಂತರದಲ್ಲಿ ಜಪಾನ್ ತಂಡದ ವಿರುದ್ಧ ಜಯ ಸಾಧಿಸಿದವು.

ಭಾರತ ತಂಡವು ಬುಧವಾರ ನಡೆಯಲಿರುವ ಮುಂದಿನ ಪಂದ್ಯದಲ್ಲಿ ವೇಲ್ಸ್ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸುದ್ದಿ

ಭಾರತಕ್ಕೆ ಇಂದು ತೈವಾನ್ ಸವಾಲು

ಸಿಡ್ನಿ (ಪಿಟಿಐ): ಭಾರತ ತಂಡವು, ಎಎಫ್‌ಸಿ ಮಹಿಳಾ ಏಷ್ಯನ್ ಕಪ್ ಫುಟ್‌ಬಾಲ್ ಟೂರ್ನಿಯ ಸಿ ಗುಂಪಿನ ಕೊನೆಯ ಪಂದ್ಯದಲ್ಲಿ ಮಂಗಳವಾರ ತೈವಾನ್ ತಂಡವನ್ನು ಎದುರಿಸಲಿದೆ. ಕ್ವಾರ್ಟರ್‌ಫೈನಲ್ ತಲುಪುವ ಅಲ್ಪಸ್ವಲ್ಪ ಅವಕಾಶ ಉಳಿಸಿಕೊಳ್ಳಬೇಕಾದರೆ ಭಾರತ ಈ ಪಂದ್ಯವನ್ನು ಗೆಲ್ಲಲೇಬೇಕಾಗಿದೆ.


ಭಾರತ ತಂಡ ಮೊದಲ ಎರಡು ಪಂದ್ಯಗಳಲ್ಲಿ ಕ್ರಮವಾಗಿ ವಿಯೆಟ್ನಾಂ (1–2) ಮತ್ತು ಜಪಾನ್ (0–11) ಎದುರು ಸೋಲನುಭವಿಸಿದ ನಂತರ ನಾಲ್ಕು ತಂಡಗಳ ಗುಂಪಿನಲ್ಲಿ ಕೊನೆಯ ಸ್ಥಾನದಲ್ಲಿದೆ.

ಎರಡೂ ಪಂದ್ಯಗಳನ್ನು ಗೆದ್ದಿರುವ ಜಪಾನ್ 6 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನದಲ್ಲಿದೆ. ತಲಾ ಮೂರು ಪಾಯಿಂಟ್ಸ್ ಗಳಿಸಿರುವ ತೈವಾನ್ ಮತ್ತು ವಿಯೆಟ್ನಾಂ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.

ತೈವಾನ್ ತಂಡವನ್ನು ಎರಡು ಗೋಲುಗಳಿಂದಗಿಂತ ಹೆಚ್ಚು ಅಂತರದಿಂದ ಸೋಲಿಸಿದರೆ ಮತ್ತು ಅದೇ ದಿನ ನಡೆಯುವ ಇನ್ನೊಂದು ಪಂದ್ಯದಲ್ಲಿ ಜಪಾನ್ ತಂಡ, ವಿಯೆಟ್ನಾಂ ತಂಡವನ್ನು ಸೋಲಿಸಿದರೆ ಭಾರತ ತಂಡಕ್ಕೆ ಎಂಟರ ಘಟ್ಟ ತಲುಪುವ ಅವಕಾಶವಿದೆ.

ಮೂರು ಗುಂಪುಗಳಲ್ಲಿ ಮೊದಲ ಎರಡು ಸ್ಥಾನ ಪಡೆಯುವ ತಂಡಗಳು ಕ್ವಾರ್ಟರ್‌ಫೈನಲ್ ತಲುಪಲಿವೆ.

ಏಕದಿನ ಕ್ರಿಕೆಟ್‌ಗೆ ತಹುಹು ನಿವೃತ್ತಿ



ವೆಲ್ಲಿಂಗ್ಟನ್ (ಪಿಟಿಐ): ನ್ಯೂಜಿಲೆಂಡ್ ಮಹಿಳಾ ತಂಡದ ಅನುಭವಿ ವೇಗಿ ಲಿಯಾ ತಹುಹು ಅವರು ಏಕದಿನ ಕ್ರಿಕೆಟ್‌ಗೆ ಭಾನುವಾರ ನಿವೃತ್ತಿ ಪ್ರಕಟಿಸಿದ್ದಾರೆ. ಏಕದಿನ ಮಾದರಿಯಲ್ಲಿ ನ್ಯೂಜಿಲೆಂಡ್ ಪರ ಅತಿ ಹೆಚ್ಚು ವಿಕೆಟ್ ಪಡೆದ ಆಟಗಾರ್ತಿ ಎಂಬ ಹಿರಿಮೆ ಇವರದ್ದು.

ಲಿಯಾ ಅವರು 2011ರಲ್ಲಿ ನ್ಯೂಜಿಲೆಂಡ್ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ಒಂದೂವರೆ ದಶಕದಲ್ಲಿ 103 ಏಕದಿನ ಪಂದ್ಯಗಳನ್ನು ಆಡಿದ್ದು, 4.54ರ ಎಕಾನಮಿಯಲ್ಲಿ 125 ವಿಕೆಟ್‌ಗಳನ್ನು ಪಡೆದಿದ್ದಾರೆ. ಅವರು 2025ರ ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಕೊನೆಯ ಬಾರಿ ಕಣಕ್ಕಿಳಿದಿದ್ದರು.

35 ವರ್ಷ ವಯಸ್ಸಿನ ಆಟಗಾರ್ತಿ ಟಿ20 ಮಾದರಿಯಲ್ಲಿ ಮುಂದುವರಿಯುವ ಇರಾದೆ ವ್ಯಕ್ತಪಡಿಸಿದ್ದಾರೆ. ‘ಇಂಗ್ಲೆಂಡ್‌ನಲ್ಲಿ ಜೂನ್‌ನಲ್ಲಿ ನಡೆಯಲಿರುವ ಈ ವರ್ಷದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪ್ರಶಸ್ತಿ ಉಳಿಸಿಕೊಳ್ಳಲು ತಂಡಕ್ಕೆ ಕೊಡುಗೆ ನೀಡಲು ಉತ್ಸುಕಳಾಗಿದ್ದೇನೆ’ ಎಂದು ಲಿಯಾ ಅವರು ಹೇಳಿದ್ದಾರೆ.

ನಿಕಿ ಶತಕ: ಕರ್ನಾಟಕಕ್ಕೆ ಭಾರಿ ಜಯ

ಬಿಸಿಸಿಐ 23 ವರ್ಷದೊಳಗಿನವರ ಏಕದಿನ ಕ್ರಿಕೆಟ್ ಟ್ರೋಫಿ

ಬೆಂಗಳೂರು: ನಿಕಿ ಪ್ರಸಾದ್ ಅವರ ಶತಕ, ರಚಿತಾ ಹತ್ವಾರ್ ಅವರ 92 ರನ್ ಮತ್ತು ವಂದಿತಾ ರಾವ್ (17ಕ್ಕೆ4) ಅವರ ಬೌಲಿಂಗ್ ನೆರವಿನಿಂದ ಕರ್ನಾಟಕ ತಂಡ, ಬಿಸಿಸಿಐ ಮಹಿಳೆಯರ 23 ವರ್ಷದೊಳಗಿನವರ ಟ್ರೋಫಿ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಸೋಮವಾರ ಛತ್ತೀಸಗಢ ತಂಡದ ಮೇಲೆ 234 ರನ್‌ಗಳ ನಿರಾಯಸ ಗೆಲುವು ಪಡೆಯಿತು.

ಜೈಪುರದ ಆರ್‌ಸಿಎ ಅಕಾಡೆಮಿ ಮೈದಾನದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಕರ್ನಾಟಕ 50 ಓವರುಗಳಲ್ಲಿ 7 ವಿಕೆಟ್‌ಗೆ 361 ರನ್ ಗಳಿಸಿತು. ನಿಕಿ 91 ಎಸೆತಗಳಲ್ಲಿ 17 ಬೌಂಡರಿ, 3 ಸಿಕ್ಸರ್ ಗಳಿದ್ದ 123 ರನ್ ಗಳಿಸಿದರು. ಆರಂಭ ಆಟಗಾರ್ತಿ ರಚಿತಾ 97 ಎಸೆತಗಳಲ್ಲಿ 92 ರನ್ ಹೊಡೆದರು. ರಚಿತಾ ಹತ್ವಾರ್ ಸಹ ಅರ್ಧ ಶತಕ (53) ಗಳಿಸಿದರು.



ನಿಕಿ ಪ್ರಸಾದ್

ಛತ್ತೀಸಗಢ ತಂಡ ಯಾವ ಹಂತದಲ್ಲೂ ಹೋರಾಟ ತೋರಲಿಲ್ಲ. 35 ಓವರುಗಳಲ್ಲಿ 127 ರನ್‌ಗಳಿಗೆ ಆಲೌಟ್ ಆಯಿತು. ಕರ್ನಾಟಕ ತನ್ನ ಮುಂದಿನ ಪಂದ್ಯವನ್ನು ಬಿಹಾರ ವಿರುದ್ಧ ಇದೇ 11ರಂದು ಆಡಲಿದೆ.

ಸ್ಕೋರುಗಳು: ಕರ್ನಾಟಕ: 50 ಓವರುಗಳಲ್ಲಿ 7ಕ್ಕೆ 361 (ರಚಿತಾ ಹತ್ವಾರ್ 92, ನಿಕಿ ಪ್ರಸಾದ್ 123, ಚಾಂದಸಿ ಕೆ 53, ಶ್ರೇಯಾ ಎಸ್.ಚವಾಣ್ 35; ಸಾಕ್ಷಿ ಶುಕ್ಲಾ 45ಕ್ಕೆ2, ರಿಶಿಕಾ ಶ್ರೀವಾಸ್ತವ 61ಕ್ಕೆ2, ರಾಧಿಕಾ ನೇತಂ 45ಕ್ಕೆ2); ಛತ್ತೀಸಗಢ: 35 ಓವರುಗಳಲ್ಲಿ 127 (ಐಶ್ವರ್ಯಾ ಸಿಂಗ್ 32, ಕುಮುದ್ ಸಾಹು 27; ಪೂಜಾ ಕುಮಾರ್ ಎಂ. 16ಕ್ಕೆ2, ವಂದಿತಾ ಕೆ.ರಾವ್ 17ಕ್ಕೆ4).